" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 20ನೇ ಮಾರ್ಚ್ 2020
ಶುಕ್ರವಾರ

## ವಿಷಯಾನುಕ್ರಮಣಿಕೆ

1. ಸಭೆಯ ಮುಂದಿಡಲಾದ ಕಾಗದ ಪತ್ರಗಳು
2. ಇಂದಿನ ಖಾಸಗಿ ವಿಧೇಯಕಗಳ ಪಟ್ಟಿಯಲ್ಲಿ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2017ನ್ನು ಸೇರಿಸಿಲ್ಲ ಎನ್ನುವ ಬಗ್ಗೆ.
   - ಶ್ರೀ ರಘು ಆಚಾರ್
   - ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
   - ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
   - ಶ್ರೀ ಕೆ.ಟಿ.ಶ್ರೀಕಂಠೇಗೌಡ
   - ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
   - ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

3. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

1629– ಶ್ರೀ ಮಲೈ ಮಹದೇಶ್ವರ ಬೆಟ್ಟಕ್ಕೆ ಐರಾವತ ಬಸ್ ಸೌಲಭ್ಯ ಕಲ್ಪಿಸುವ ಬಗ್ಗೆ.
- ಶ್ರೀ ಮರಿತಿಬ್ಬೇಗೌಡ
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)

1653– ದಮನಿತ ಮಹಿಳೆಯರಿಗಾಗಿ ಘಟಕ ಸ್ಥಾಪನೆ ಕುರಿತು.
- ಡಾ: ಜಯಮಾಲ
- ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

1620 – ಮಾನ್ವಿ ಪಟ್ಟಣದಲ್ಲಿ ನಿರ್ಮಾಣವಾಗಿರುವ "ಕನ್ನಡ ಭವನ" ಬಗ್ಗೆ.
- ಶ್ರೀ ಎನ್.ಎಸ್.ಬೋಸ್‌ರಾಜು
- ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು)

1567 – ಅಭಿವೃದ್ಧಿ ಕಾಮಗಾರಿ ಕಾರ್ಯಕ್ರಮದ ಬಗ್ಗೆ.
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು)

1647 – ಗ್ರಾಮೀಣ ಸಂಪರ್ಕ ರಸ್ತೆಗಳ ಬಗ್ಗೆ.
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

1570 – ಗ್ರಾಮ ಸಭೆಗೆ ಅಧಿಕಾರಿಗಳು ಹಾಜರಾಗದೆ ಇರುವ ಬಗ್ಗೆ.
– ಶ್ರೀ ಆರ್.ಪ್ರಸನ್ನ ಕುಮಾರ್
– ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1637 – ಕೊಡಗು ಜಿಲ್ಲೆಯಲ್ಲಿ 2018ರ ಪ್ರಕೃತಿ ವಿಕೋಪದಲ್ಲಿ ಅತೀ ಹೆಚ್ಚು ಹಾನಿಗೀಡಾದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳ ಕುರಿತು.
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ
– ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1618 – ಗದಗ, ಹಾವೇರಿ, ಧಾರವಾಡ, ಕಾರವಾರ ಜಿಲ್ಲೆಗಳಲ್ಲಿಯ ಪಶು ಆಸ್ಪತ್ರೆಗಳ ಕುರಿತು
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಪ್ರಭು ಬಿ.ಚವ್ಹಾಣ್ (ಪಶು ಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು)

1027 **(ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ)**
– ಬೀದರ್ ಜಿಲ್ಲೆಯ ಕ್ರೀಡಾಂಗಣದ ಬಗ್ಗೆ.
– ಶ್ರೀ ವಿಜಯ ಸಿಂಗ್
– ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು)

903 **(ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ)**
– ಕರ್ನಾಟಕ ರಾಜ್ಯದ ಪಶು ವೈದ್ಯಕೀಯ ಆಸ್ಪತ್ರೆಗಳ ಬಗ್ಗೆ.
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಪ್ರಭು ಬಿ.ಚವ್ಹಾಣ್ (ಪಶು ಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು)

1029 - **(ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ)**
– ಗ್ರಂಥಪಾಲಕರಿಗೆ ಕನಿಷ್ಠ ವೇತನ ಜಾರಿಯಾಗದಿರುವ ಬಗ್ಗೆ.
– ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಶ್ರೀ ಎಂ.ಕೆ.ಪ್ರಾಣೇಶ್ ಪರವಾಗಿ)
– ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1666 – ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ಉಂಟುಮಾಡುವ ಮಾರ್ಗಗಳ ಬಗ್ಗೆ.
– ಶ್ರೀ ಪಿ.ಆರ್.ರಮೇಶ್
– ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಉಪ ಮುಖ್ಯಮಂತ್ರಿ(ಸಾರಿಗೆ ಇಲಾಖೆ)

1635 – ಬೀದರ್ ಜಿಲ್ಲೆಯ ಬಿದ್ರಿ ಕಲೆಯ ಬಗ್ಗೆ.
– ಶ್ರೀ ವಿಜಯ ಸಿಂಗ್
– ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

–

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

1593 – 2019–20ನೇ ಸಾಲಿನಲ್ಲಿ ನೇಕಾರರಿಗೆ ಮಂಜೂರಾಗಿರುವ ಸಾಲದ ಬಗ್ಗೆ.

– ಶ್ರೀ ಹೆಚ್.ಎಂ.ರೇವಣ್ಣ

– ಶ್ರೀ ಶ್ರೀಮಂತ್ ಬಾಳಾ ಸಾಹೇಬ್ ಪಾಟೀಲ್ (ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

1596 – ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಬಗ್ಗೆ.

– ಶ್ರೀ ಬಿ.ಜಿ.ಪಾಟೀಲ್

– ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1578 – ಮಾನ್ಯ ಸದಸ್ಯರಾದ ಶ್ರೀ ಅರವಿಂದಕುಮಾರ್ ಅರಳಿ ಅವರ ಪ್ರಶ್ನೆಯನ್ನು ತಡೆಹಿಡಿಯಲಾಯಿತು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

4. **ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

(ಅ) ಡಿಪ್ಲೋಮಾ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ನೀಡಲಾಗುತ್ತಿರುವ ಸಂಭಾವನೆಯನ್ನು ಪರಿಷ್ಕರಿಸುವ ಕುರಿತು.

– ಶ್ರೀ ಮರಿತಿಬ್ಬೇಗೌಡ

– ಡಾ॥ ಸಿ.ಎನ್.ಅಶ್ವತ್ಥನಾರಾಯಣ, ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖಾ ಸಚಿವರು)

(ಆ) ಮಂಡ್ಯ ಜಿಲ್ಲೆಯಲ್ಲಿನ ಕಂದಾಯ ಇಲಾಖೆ ಬೇಜವಾಬ್ದಾರಿಯಿಂದ ಭದ್ರತಾ ಯೋಜನೆ ಅಡಿ ಹೊಸದಾಗಿ ಸೇರ್ಪಡೆಗೊಂಡ ವೃದ್ಧರು, ವಿಧವೆಯರು ಅಂಗವಿಕಲರುಗಳಿಗೆ ಮಾಸಾಶನ ಸ್ಥಗಿತಗೊಂಡಿರುವ ಬಗ್ಗೆ.

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

(ಇ) ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಚಿಕ್ಕಸಂಗಮ ದೇವಾಲಯದ ನಡುಗಡ್ಡೆ ಪ್ರದೇಶದಲ್ಲಿ ಪಕ್ಷಿಧಾಮ ನಿರ್ಮಾಣ ಮಾಡಿ ಪಕ್ಷಿ ಸಂಕುಲ ರಕ್ಷಿಸುವುದರ ಕುರಿತು.

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

5. **ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರಿಂದ ಉತ್ತರ.**

(ಅ) ಇತ್ತೀಚೆಗೆ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಗರ್ಭಿಣಿ ಮಹಿಳೆಯ ಮೇಲೆ 5 ಜನ ಮಹಿಳೆಯರು ಹಾಗೂ ಪುರುಷನನ್ನೊಳಗೊಂಡ ಗ್ಯಾಂಗ್ ಮಾಡಿದ ಹಲ್ಲೆ ಮತ್ತು ದೌರ್ಜನ್ಯದ ಕುರಿತು.

– ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು)

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಆ) ಗೋವಾದಲ್ಲಿರುವ ಕನ್ನಡಿಗರನ್ನು ಪೋಗೋ ಕಾಯಿದೆಯಿಂದ ರಕ್ಷಿಸುವ ಬಗ್ಗೆ.

– ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು)

6. **ಪ್ರಕಟಣೆ**

7. **ಗೋವಾದಲ್ಲಿರುವ ಕನ್ನಡಿಗರನ್ನು ಪೋಗೋ ಕಾಯಿದೆಯಿಂದ ರಕ್ಷಿಸುವ ಬಗ್ಗೆ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು)
– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

8. **ಶಾಸನ ರಚನೆ**

**ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020**ರ ಮೇಲಿನ ಮುಂದುವರೆದ ಚರ್ಚೆ.

– ಡಾ॥ ಸಿ.ಎನ್.ಅಶ್ವತ್ಥನಾರಾಯಣ, ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖಾ ಸಚಿವರು)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಎಸ್.ಎಸ್.ಭೋಜೇಗೌಡ
– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
– ಶ್ರೀ ಮರಿತಿಬ್ಬೇಗೌಡ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಶರಣಪ್ಪ ಮಟ್ಟೂರು
– ಶ್ರೀ ಹೆಚ್.ಎಂ.ರೇವಣ್ಣ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

9. **ನಿಯಮ 68ರ ಅಡಿಯಲ್ಲಿ ಚರ್ಚೆ**

"ಮಂಡ್ಯ ಜಿಲ್ಲೆಯಲ್ಲಿ ಪರವಾನಗಿ ಪಡೆಯದೆ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿರುವುದಲ್ಲದೆ, ನ್ಯಾಯಸಮ್ಮತವಾಗಿ ಗಣಿಗಾರಿಕೆ ನಡೆಸುತ್ತಿರುವವರಿಗೆ ನೋಟಿಸ್ ಜಾರಿ ಮಾಡಿ ಘಟಕಗಳನ್ನು ಸ್ಥಗಿತಗೊಳಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕುರಿತು."

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು)
ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಟಿ.ಎ.ಶರವಣ
ಶ್ರೀ ಹೆಚ್.ಎಂ.ರೇವಣ್ಣ
ಶ್ರೀ ಹೆಚ್.ಎಂ.ರಮೇಶ್‌ಗೌಡ
ಡಾ॥ ತೇಜಸ್ವಿನಿ ಗೌಡ
ಶ್ರೀ ಎನ್.ಅಪ್ಪಾಜಿಗೌಡ
ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**10. ಪ್ರಕಟಣೆಗಳು**

11. **ನಿಯಮ 68ರ ಅಡಿಯಲ್ಲಿ ಮುಂದುವರೆದ ಚರ್ಚೆ**

"ಮಂಡ್ಯ ಜಿಲ್ಲೆಯಲ್ಲಿ ಪರವಾನಗಿ ಪಡೆಯದೆ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿರುವುದಲ್ಲದೆ, ನ್ಯಾಯಸಮ್ಮತವಾಗಿ ಗಣಿಗಾರಿಕೆ ನಡೆಸುತ್ತಿರುವವರಿಗೆ ನೋಟಿಸ್ ಜಾರಿ ಮಾಡಿ ಘಟಕಗಳನ್ನು ಸ್ಥಗಿತಗೊಳಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕುರಿತು."

ಶ್ರೀ ಮರಿತಿಬ್ಬೇಗೌಡ
ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು)
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
ಶ್ರೀ ಕೆ.ಎ.ತಿಪ್ಪೇಸ್ವಾಮಿ
ಶ್ರೀ ಹೆಚ್.ಎಂ.ರಮೇಶ ಗೌಡ
ಶ್ರೀ ಹೆಚ್.ಎಂ.ರೇವಣ್ಣ
ಶ್ರೀ ಎಸ್.ಎಲ್.ಭೋಜೇಗೌಡ
ಡಾ॥ ತೇಜಸ್ವಿನಿ ಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್ (ಕೃಷಿ ಸಚಿವರು)
ಶ್ರೀ ಎನ್.ರವಿಕುಮಾರ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)

******

(616) 20.03.2020 10.30 ಟಿಸಿಹೆಚ್–ಆರ್‌ಎನ್

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 20ನೇ ಮಾರ್ಚ್ 2020**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಪೂರ್ವಾಹ್ನ 10 ಗಂಟೆ 34 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು**
**ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಜಿ. ರಘು ಆಚಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ನಾನು ಕರ್ನಾಟಕ ಶಿಕ್ಷಣ (ತಿದ್ದುಪಡಿ) ಖಾಸಗಿ ವಿಧೇಯಕ, 2017ನ್ನು ಮಂಡಿಸುತ್ತೇನೆಂದು ತಮ್ಮಲ್ಲಿ ವಿನಂತಿ ಮಾಡಿದ್ದೆ. ಆದರೆ ಇವತ್ತಿನ ಅಜೆಂಡಾವನ್ನು ನೋಡಿದ ನಂತರ, ನನಗೆ ತುಂಬಾ ಬೇಜಾರು ಆಯಿತು. ಆದ್ದರಿಂದ ತಾವು ಯಾವಾಗ . . .

## 1. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

**ಕಾರ್ಯದರ್ಶಿಯವರು, ಕ.ವಿ.ಪ:–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2020
2. ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ.

## 2. <u>ಇಂದಿನ ಖಾಸಗಿ ವಿಧೇಯಕಗಳ ಪಟ್ಟಿಯಲ್ಲಿ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2017ನ್ನು ಸೇರಿಸಿಲ್ಲ ಎನ್ನುವ ಬಗ್ಗೆ.</u>

~~~~~~~

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ತಾವು ತಮ್ಮ ಪೀಠದಿಂದ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2017ನ್ನು ತರಲಾಗುವುದೆಂದು ನನಗೆ ಪ್ರಾಮಿಸ್ ಮಾಡಿದ್ದೀರಿ. ಆದರೆ, ಅದು ಇವತ್ತು ಕೂಡ ಈ ಸದನಕ್ಕೆ ಬಂದಿಲ್ಲ. ನಾನೇನು ಮಾಡುವುದು?

**ಸಭಾಪತಿಯವರು:–** ಮಾನ್ಯ ಜಿ. ರಘು ಆಚಾರ್‌ರವರೇ, ಕರ್ನಾಟಕ ವಿಧಾನ ಪರಿಷತ್ತಿನ ನಿಯಮವನ್ನು ನೋಡಿ. ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯಿಂದ ಇವತ್ತು ಈ ಸದನಕ್ಕೆ ಬರಬೇಕಾಗಿತ್ತು. ಆದರೆ ಅಲ್ಲಿ ಒಂದು ವಿಚಾರ ಚರ್ಚೆಯಲ್ಲಿರತಕ್ಕಂಥ ಸಂದರ್ಭದಲ್ಲಿ ಪುನಃ ಅದನ್ನೇ ಮತ್ತೊಬ್ಬರು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಮಾನ್ಯ ಉಪ ಸಭಾಪತಿಯವರು ಅಧ್ಯಕ್ಷರಾಗಿದ್ದು, ಅದು ಇನ್ನೂ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯಲ್ಲಿ ಪರಿಶೀಲನೆಯಲ್ಲಿದೆ. ಅದು ಇಲ್ಲಿಗೆ ಬಂದ ತಕ್ಷಣವೇ ತೆಗೆದುಕೊಳುತ್ತೇವೆ. ಒಂದು ವೇಳೆ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಆಸಕ್ತಿ ಇದ್ದರೆ, ತಾವು ಯಾವುದೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~

ಒಂದು ನೋಟೀಸ್‌ನ್ನು ಕೊಟ್ಟರೆ, ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಕಾರ್ಯದರ್ಶಿಯವರ ಹತ್ತಿರ ಕೂಡ ಹೇಳಿದ್ದೆನು. ಆದರೆ, ತಾವು ನಿನ್ನೆ ಮಧ್ಯಾಹ್ನದ ನಂತರ ಸದನದಲ್ಲಿ ಇರಲಿಲ್ಲ.

**ಶ್ರೀ ಜಿ. ರಘು ಆಚಾರ್:–** ಮಾನ್ಯ ಸಭಾಪತಿಯವರೇ, ನಾನು 2017ರಲ್ಲಿಯೇ ಖಾಸಗಿ ವಿಧೇಯಕವನ್ನು ಕೊಟ್ಟಿರುತ್ತೇನೆ.

**ಸಭಾಪತಿಯವರು:–** ಹೌದು, ಕೊಟ್ಟಿರುತ್ತೀರಿ.

**ಶ್ರೀ ಜಿ. ರಘು ಆಚಾರ್:–** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ ಮೇಲೆ 8 ದಿನ ವಿಶೇಷ ಚರ್ಚೆ ನಡೆದಿದೆ, ಒಬ್ಬರು ಸದಸ್ಯನಾದವರಿಗೆ ಖಾಸಗಿ ಬಿಲ್ ಬರದೇ ಇದ್ದರೆ, ಇನ್ನೇಕೆ ನಾವು ಅಷ್ಟು ದಿನ ಸಂವಿಧಾನದ ಮೇಲೆ ಚರ್ಚೆ ಮಾಡಿದ್ದು? ಈಗ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನಾನು ಆ ಖಾಸಗಿ ವಿಧೇಯಕದ ಬಿಲ್ ಬಗ್ಗೆ ಮಾತನಾಡಲು ಅವಕಾಶ ಕೊಡುವವರೆಗೂ ಸದನದ ಬಾವಿಯಲ್ಲೇ ಕೂರುತ್ತೇನೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನೀವು procedure ಪ್ರಕಾರ, ಆ ಖಾಸಗಿ ಬಿಲ್‌ನ್ನು ತರಬೇಕು ಎಂದು ತಾವು ಹೇಳುತ್ತಿದ್ದೀರಿ, ಉಪ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಚರ್ಚೆಯಾದ ನಂತರ ಸದನಕ್ಕೆ ತರಲಾಗುವುದು ಎನ್ನುವಂಥದ್ದು ಇದೆ. ನಾವು ತಮ್ಮನ್ನು ಕೇಳುವುದೇನೆಂದರೆ, ಮಾನ್ಯ ಜಿ. ರಘುಆಚಾರ್‌ರವರಿಗೆ ಯಾವುದಾದರೂ ನಿಯಮದ ಅಡಿಯಲ್ಲಿ ಮಾತನಾಡಲು ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ನಿನ್ನೆ ದಿವಸ ಕಾರ್ಯದರ್ಶಿಯವರ ಹತ್ತಿರ ಹೇಳಿದ್ದೆನು.

**ಶ್ರೀ ಎಸ್.ಆರ್.ಪಾಟೀಲ್:–** ಸ್ವಲ್ಪ ಅವಕಾಶ ಮಾಡಿಕೊಡಬೇಕು. Let it come through procedure.

**ಶ್ರೀ ಜಿ. ರಘು ಆಚಾರ್:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಚರ್ಚೆ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬಿಲ್ ಆಗಬೇಕು. ಅದನ್ನು ...

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಯಾರಾದರು ಒಬ್ಬ ಸದಸ್ಯರು ಯಾವುದಾದರೊಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ಅಥವಾ ತನ್ನ ಆಸಕ್ತಿಯನ್ನು ತೋರ್ಪಡಿಸಿಕೊಳ್ಳಬೇಕು ಎನ್ನತಕ್ಕಂಥ ಇಚ್ಛೆ ಇದ್ದರೆ, ಅದನ್ನು ಪ್ರತಿಭಟನೆ ಮಾಡುವುದಕ್ಕೆ ಅವಕಾಶ ಕಾನೂನಿನಲ್ಲಿ ಹೇಗೆ ಅವಕಾಶವಿದೆ, ನಿಯಮದಲ್ಲಿ ಯಾವ ರೀತಿ ಅವಕಾಶವಿದೆ?

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾನು ಮೊದಲು ಶಾಸನ ರಚನಾ ಸಮಿತಿಯ ಸದಸ್ಯನಾಗಿದ್ದಾಗ, ಮಾನ್ಯ ಜಿ.ರಘು ಆಚಾರ್‌ರವರು ತಂದಿದ್ದಂತಹ ಖಾಸಗಿ ಬಿಲ್ ಆ ಸಮಿತಿ ಮುಂದೆ ಬಂದಿತ್ತು. ಅದರ ಬಗ್ಗೆ ಚರ್ಚೆ ಮಾಡಿ, ಅದನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೆವು. ಆದರೆ, ತಾವೇನು procedure ಹೇಳುತ್ತಿದ್ದೀರಿ ಅದನ್ನು ಆದಷ್ಟು ಬೇಗನೆ ಆ procedure ಪ್ರಕಾರ ಮಾಡಿ, ಮಾನ್ಯ ಜಿ.ರಘು ಆಚಾರ್‌ರವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ, ಅದರ ಬಗ್ಗೆ ಚರ್ಚೆ ಮಾಡಲು ಅವಕಾಶವಾಗುತ್ತದೆಂದು ಹೇಳುವುದಕ್ಕೆ ಇಚ್ಛಿಸುತ್ತಿದ್ದೇನೆ.

**ಶ್ರೀ ಜಿ. ರಘು ಆಚಾರ್:–** ಮಾನ್ಯ ಸಭಾಪತಿಯವರೇ, ನನ್ನ ಕ್ಷೇತ್ರದಲ್ಲಿ ನಿಮ್ಮ ಮಾತನ್ನು ಕೇಳಿಕೊಂಡು ನಾನು ಈಗ ... ಒಂದು ನಿಮಿಷ, ...

**ಸಭಾಪತಿಯವರು:–** ಶ್ರೀ ಜಿ. ರಘು ಆಚಾರ್ ರವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 261 ಏನು ಹೇಳುತ್ತದೆಂದು ತಾವು ಹೇಳಿ.

**ಶ್ರೀ ಜಿ. ರಘು ಆಚಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಿನ್ನೆದಿವಸ ತಾವು ಆ ಪೀಠದಿಂದ ಹೇಳಿದ್ದೀರಿ. ತಮ್ಮನ್ನು ನಂಬಿಕೊಂಡು ನಮ್ಮ ಜಿಲ್ಲೆಯವರಿಗೆ ಕರ್ನಾಟಕ ಶಿಕ್ಷಣ (ತಿದ್ದುಪಡಿ) ಖಾಸಗಿ ವಿಧೇಯಕ ಬಿಲ್ ಬರುತ್ತದೆಂದು ಹೇಳಿದ್ದೆನು. ತಾವು ಈಗ ರೂಲ್ ಹೇಳುತ್ತಿದ್ದೀರಿ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನಾನು ಸದನದ ಬಾವಿಗೆ ಕುಳಿತುಕೊಳ್ಳಲು ಹೋಗುತ್ತಿದ್ದೇನೆ. ಅಲ್ಲಿಯೇ ಕೂರುತ್ತೇನೆ.

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ ಅವಧಿಯನ್ನ ಪ್ರಾರಂಭಿಸೋಣ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜಿ.ರಘು ಆಚಾರ್ ರವರು ಸದನದ ಬಾವಿಗೆ ಬಂದು ಧರಣಿ ಕುಳಿತುಕೊಂಡರು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ನಿರಂತರವಾದ ಕಾಳಜಿ ಬಗ್ಗೆ ಏನಾದರೂ ಮಾಡಿ ತಮ್ಮ ಪೀಠದಿಂದ ಸ್ಪಂದಿಸಬೇಕು.

**ಸಭಾಪತಿಯವರು:–** ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರೇ, ತಮಗೆ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ ಬಗ್ಗೆ ಗೊತ್ತಿಲ್ಲವೇ, ನಾನು ಏನು ಮಾಡಬೇಕು ಹೇಳಿ? ಅವರು ಹೇಳುತ್ತಾರೆಂದು ನೀವು ಕೇಳಿದರೆ ಹೇಗೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆ ನಿಯಮದ ಬಗ್ಗೆ ನಮಗೆ ಅರಿವಿದೆ, ನಿಜ. ಅದಾದ ನಂತರ, ಇದಕ್ಕೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರೇ, ಯಾವ ನಿಯಮದಲ್ಲಿ ಅವಕಾಶ ಮಾಡಿಕೊಡಬಹುದೆಂದು ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆಗುವುದಿಲ್ಲ. ನಾನು ಅದನ್ನು ಒಪ್ಪುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಶ್ರೀ ಜಿ. ರಘು ಆಚಾರ್ ರವರೇ, ತಾವು ದಯವಿಟ್ಟು ಸದನದ ಬಾವಿಯಿಂದ ಹೊರಗಡೆ ಬನ್ನಿ, ಸದನ ನಡೆಯಲು ಸಹಕರಿಸಿ. ನಿಯಮಾವಳಿ ಪ್ರಕಾರ. . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಜಿ.ರಘು ಆಚಾರ್ ರವರೇ, ಆದ್ಯತೆ ಮೇಲೆ ಮುಂದಿನವಾರ ಆ ಖಾಸಗಿ ವಿಧೇಯಕವನ್ನು ತೆಗೆದುಕೊಳ್ಳುತ್ತಾರೆ, ಇನ್ನೂ 31ನೇ ತಾರೀಖಿನವರೆಗೆ ಅಧಿವೇಶನ ನಡೆಯುತ್ತದೆ. ನಮಗೂ ಕೂಡ ನಿಮ್ಮ ಭಾವನೆಗಳು ಅರ್ಥವಾಗಿವೆ. ನಿಮ್ಮ ಕಾಳಜಿ ನಮಗೂ ಕೂಡ ಅರ್ಥವಾಗಿದೆ. ನೀವು ಬಾವಿಯಿಂದ ಹೊರಗಡೆ ಬರದಿದ್ದರೆ, ನಮಗೆಲ್ಲಾ ನೋವಾಗುತ್ತದೆ. ನಾವು ಕೂಡ ನಿಮ್ಮ ಜೊತೆ ಇದ್ದೇವೆ. ದಯಮಾಡಿ ಬಾವಿಯಿಂದ ಹೊರಗಡೆ ಬನ್ನಿ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಜಿ.ರಘು ಆಚಾರ್ ರವರೇ, ತಮ್ಮನ್ನು ಸದನದ ಬಾವಿಯಲ್ಲಿ ಕೂರಿಸಿ ನಾವು ಮಾತನಾಡುವುದು ಎಷ್ಟರಮಟ್ಟಿಗೆ ಸರಿ. ನೀವು ಕಿರಿಯ ಸದಸ್ಯರಿದ್ದೀರಿ, ಹಿರಿಯ ಸದಸ್ಯರು ಹೇಳಿದ್ದನ್ನೂ ಸ್ವಲ್ಪ ಕೇಳಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಮ್ಮದು ಏನಾದರು ಸಾಧನೆ ಆಗಬೇಕಲ್ಲವೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಜಿ.ರಘು ಆಚಾರ್ ರವರೇ, ಅದಕ್ಕೆ ಏನಾದರು ಒಂದು ದಾರಿ ಹುಡುಕೋಣ. ದಯಮಾಡಿ ಸದನದ ಬಾವಿಯಿಂದ ಹೊರಗಡೆ ಬನ್ನಿ. ಅದರ ಬಗ್ಗೆ ಮಾತನಾಡಿ ತೀರ್ಮಾನ ಮಾಡೋಣ.

**(ಮುಂದು...)**

**(617)20.3.2020/10.40/ಎಂ.ಎಂ–ಆರ್.ಎನ್**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):–**
ಮಾನ್ಯ ಸಭಾಪತಿಯವರೇ, ಈ ಬಿಲ್ ತರುವುದಕ್ಕೆ ನಿಮಗೇನು ತೊಂದರೆ ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಸದಸ್ಯರ ಬೇಡಿಕೆಗೆ ಸರ್ಕಾರ ಖಂಡಿತ ನಿಮ್ಮ ಜೊತೆ ಇದೆ. ಇದರಲ್ಲಿ ಅನುಮಾನವೇ ಇಲ್ಲ. ಆದರೆ ಇಲ್ಲಿ ಒಂದು ಶಿಸ್ತಿನ ವ್ಯವಸ್ಥೆ ಇದೆ. ನೀವು ಕಾಂಗ್ರೆಸ್ ಪಕ್ಷದ ಸದಸ್ಯರು. ನಿಮ್ಮ ನಾಯಕರು ಶ್ರೀ ಎಸ್.ಆರ್. ಪಾಟೀಲರು ಇದ್ದಾರೆ, ಎಲ್ಲಾ ಸದಸ್ಯರು ಏನೇನು ಬೇಡಿಕೆಗಳನ್ನಿಟ್ಟರೂ ಕೂಡ ನಾನು ಖಂಡಿತ ಅದನ್ನು ಬೇಡವೆಂದು ಹೇಳುವುದಿಲ್ಲ. ಆದರೆ ಆ ಪಕ್ಷದ ಶಿಸ್ತಿನಲ್ಲಿ ನಾವೆಲ್ಲರೂ ಒಳಪಡಲೇಬೇಕು. ಸದಸ್ಯತ್ವ, ನಾಮಪತ್ರ ಕೊಡಬೇಕಾದರೆ, ನಿಮ್ಮನ್ನು ಎಂ.ಎಲ್.ಸಿ. ಮಾಡಬೇಕಾದರೆ ಪಕ್ಷ ತೆಗೆದುಕೊಂಡ ತೀರ್ಮಾನದಿಂದಾಗಿ ತಾವು ವಿಧಾನ ಪರಿಷತ್ತಿಗೆ ಬಂದಿರುವುದು. ಮಾನ್ಯ ರಘು ಆಚಾರ್‌ರವರು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿದರೆ ನನ್ನ ಅಭ್ಯಂತರವಿಲ್ಲ. ಪಕ್ಷವು ನಿಮ್ಮನ್ನು ಎಂ.ಎಲ್.ಸಿ. ಮಾಡಿದ ಮೇಲೆ ಪಕ್ಷದ ನಾಯಕರ ಮಾತನ್ನು ನೀವು ಕೇಳದಿದ್ದರೆ ಪಕ್ಷ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಪಕ್ಷ ತೀರ್ಮಾನ ತೆಗೆದುಕೊಳ್ಳಲಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ರಘು ಆಚಾರ್‌ರವರೇ, ನೀವು ದಯಮಾಡಿ ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ರಘು ಆಚಾರ್‌ರವರೇ, ಹಿರಿಯ ಸಚಿವರು, ಅನುಭವಿಗಳು ಆದ ಶ್ರೀ ಕೆ.ಎಸ್. ಈಶ್ವರಪ್ಪನವರು ಬಹಳ ಅರ್ಥಪೂರ್ಣವಾದ ಮಾತುಗಳನ್ನಾಡಿದರು. ಪ್ರೊಸೀಜರ್, ಕಾನೂನು–ಕಟ್ಟಳೆ, ಈ Rules of Procedure ನಾವೇ ಮಾಡಿಕೊಂಡಿದ್ದೇವೆ, ಇದಕ್ಕೆ ವ್ಯತಿರಿಕ್ತವಾಗಿ ಇವತ್ತು ನಾನು, ಅವರು ಮತ್ತು ಸಭಾನಾಯಕರು ಹೇಳಬಹುದು ವ್ಯತಿರಿಕ್ತವಾಗಿ ನಿರ್ಣಯ ತೆಗೆದುಕೊಳ್ಳಲು ಹೇಳಿದರೆ ಸಭಾಪತಿಯವರು ಹೇಗೆ ತೆಗೆದುಕೊಳ್ಳುತ್ತಾರೆ? ಮಾನ್ಯ ರಘು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಚಾರ್‌ರವರೇ, listen us. ಮಧ್ಯದಲ್ಲಿ ಸಭಾಪತಿಯವರ ಜೊತೆ ಚರ್ಚೆ ಮಾಡೋಣ, ಚರ್ಚೆ ಮಾಡಿ ನಿಮಗೆ ಒಂದು ದಿನಾಂಕವನ್ನು ಫಿಕ್ಸ್ ಮಾಡಿಸಿಕೊಡುತ್ತೇವೆ, ಸಮಯವನ್ನು ನಿಗದಿ ಮಾಡಿಕೊಡುತ್ತೇವೆ. ಈ ಸದನದಲ್ಲಿ; ನೀವು ಬಾವಿಯಲ್ಲಿ ನಿಂತು ಮಾತನಾಡಬಾರದು. ಈ ಸದನ ಶತಮಾನದ ಇತಿಹಾಸ ಹೊಂದಿದೆ, ತನ್ನದೇ ಆದ ಪಾವಿತ್ರ್ಯ ಕಾಪಾಡಿಕೊಂಡು ಬಂದಿದೆ. ಇಲ್ಲಿಯವರೆಗೆ Rules of Procedure ಬಿಟ್ಟು ಹೋಗುವುದಿಲ್ಲ. ನೀವು ಸಭಾಪತಿ ಪೀಠಕ್ಕೂ ಗೌರವ ಕೊಡಬೇಕು, ನಾವು irrespective of parties; ಆಳುವ ಪಕ್ಷದವರು ಕೂಡ ನಿಮ್ಮ ಪರವಾಗಿ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದರು, ನಾವು ಮಾಡಿದೆವು, ಜೆ.ಡಿ(ಎಸ್) ನಾಯಕರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಮಾನ್ಯ ಕೆ.ಟಿ. ಶ್ರೀಕಂಠೇಗೌಡರು, ಮಾನ್ಯ ಮರಿತಿಬ್ಬೇಗೌಡರು ಮತ್ತು ಮಾನ್ಯ ಭೋಜೇಗೌಡರು ಎಲ್ಲರೂ ಮಾಡಿದರು ದಯಮಾಡಿ ನೀವು please come out from the House well. I will take you to the Chair.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ರಘು ಆಚಾರ್‌ರವರೇ, ಒಂದು ಮಾತು ಕೇಳಿ;

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ರಘು ಆಚಾರ್‌ರವರೇ, ನೀವು ಈ ಸದನದ ಪೀಠಕ್ಕೆ ಗೌರವ ಕೊಡಬೇಕೋ ಬೇಡವೋ?

**ಶ್ರೀ ಎಸ್.ಆರ್. ಪಾಟೀಲ್:–** ಅದು ಸದನಕ್ಕೆ ಗೌರವ ಕೊಟ್ಟಹಾಗೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ರಘು ಆಚಾರ್‌ರವರೇ, ಐದು ನಿಮಿಷ ಕೇಳಿ, ಅಲ್ಲಿ ಕುಳಿತು ಮಾತನಾಡಬೇಡಿ.

**ಶ್ರೀ ಎಸ್.ಆರ್. ಪಾಟೀಲ್:–** ಅದು ಸರಿ ಕಾಣುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇನ್ನೂ ಸದನ ಇದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ರಘು ಆಚಾರ್‌ರವರೇ, ನಾವೆಲ್ಲರೂ ನಿಮ್ಮ ಜೊತೆ ಇದ್ದೇವೆ. ಈ ಸದನವು 31ನೇ ತಾರೀಖಿನವರೆಗೆ ನಡೆಯುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ರಘು ಆಚಾರ್‌ರವರೇ, ಒಂದು ನಿಮಿಷ ನನ್ನ ಮಾತನ್ನು ಕೇಳಿ. ಸದನ ಇನ್ನೂ ಇರುತ್ತದೆ, ನಾವು ಕುಳಿತು ಚರ್ಚೆ ಮಾಡಿ ಒಂದು ದಿನಾಂಕವನ್ನು ಫಿಕ್ಸ್ ಮಾಡುತ್ತೇವೆ. ಈಗ ನಿಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಿ. ಒಂದು ನಿಮಿಷ ನನ್ನ ಮಾತು ಕೇಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮುಂದಿನ ಶುಕ್ರವಾರ ಆ ಬಿಲ್ಲನ್ನು ಮುಂದೂಡಿ ಈ ಬಿಲ್ಲನ್ನು ತೆಗೆದುಕೊಳ್ಳಿ.

**ಸಭಾಪತಿಯವರು:–** ಹಾಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಹೇಗೆ ತೆಗೆದುಕೊಳ್ಳುವುದಕ್ಕೆ ಆಗುತ್ತದೆ ಹೇಳಿ. ಒಂದು ವಿಚಾರ ಚರ್ಚೆಯಲ್ಲಿರುವಾಗ ಆ ಚರ್ಚೆ ಮುಕ್ತಾಯವಾಗದ ತನಕ ಮತ್ತೊಂದನ್ನು ತೆಗೆದುಕೊಳ್ಳುವ ಹಾಗೆ ಇಲ್ಲ. ನಾನು ಕಾರ್ಯದರ್ಶಿಯವರನ್ನು ಕರೆದು ಈ ವಿಚಾರ ಕೇಳಿದ್ದೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಿಯಮ 330 ಕೆಳಗೆ ನಿಮ್ಮ ನೆರವು;

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, simultaneously two Bills cannot be taken.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈಗ ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಚಿವರ ಉತ್ತರ ಇಲ್ಲದಿದ್ದರೆ ಏನು ಮಾಡುತ್ತೇವೆ ಅದನ್ನು ನಂತರ ಒಂದು ದಿನ ಬಿಟ್ಟು ತೆಗೆದುಕೊಳ್ಳುತ್ತೇವೆ ಹಾಗೆ ಇದನ್ನು ಕೂಡ ಈ ವಾರ ಬಿಟ್ಟು ಆಮೇಲೆ ತೆಗೆದುಕೊಳ್ಳೋಣ. ಈ ವಾರ ಇದಕ್ಕೆ ಆದ್ಯತೆ ಕೊಡೋಣ. ಏಕೆಂದರೆ ಅದರ ಬಗ್ಗೆ ಈಗಾಗಲೇ ಸ್ವಲ್ಪ ಚರ್ಚೆಯಾಗಿದೆ, ಅದು ಹಿಂದಿನ ಬಿಲ್ ಆಗಿದೆ, ಮಾನ್ಯ ಶರಣಪ್ಪ ಮಟ್ಟೂರುರವರ ಬಿಲ್ ಬಗ್ಗೆ ಇಲ್ಲಿ ಚರ್ಚೆಯಾಗಿದೆ. ಆದ್ದರಿಂದ ಅದನ್ನು ಶುಕ್ರವಾರಕ್ಕೆ ಮುಂದೂಡಿ ಇವರಿಗೆ ಅವಕಾಶ ಕೊಡಿ, ಸಮಸ್ಯೆ ಪರಿಹಾರವಾಗುತ್ತದೆ. ಇದಕ್ಕೆ ಅವಕಾಶ ಕೊಡಬಹುದು.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ರಘು ಆಚಾರ್‌ರವರೇ, ದಯಮಾಡಿ ಬನ್ನಿ, ಮಾನ್ಯ ಸಚಿವರು ಹೇಳಿದ ಹಾಗೆ ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಗಳ ಸದುದ್ದೇಶ ಹೊಂದಿರುವ ಮಾನ್ಯ ರಘು ಆಚಾರ್‌ರವರ ದಾರಿಯಲ್ಲಿ ಹೋಗಿ ಸಮಸ್ಯೆಗಳನ್ನು ಪರಿಹಾರ ಮಾಡೋಣ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾನ್ಯ ರಘು ಆಚಾರ್‌ರವರು ತಂದಿರುವಂತಹ ಖಾಸಗಿ ಬಿಲ್ ಅದು ಬಹಳ ಸದುದ್ದೇಶವನ್ನು ಹೊಂದಿದೆ. ಏಕೆಂದರೆ, ಸರ್ಕಾರಿ ಶಾಲೆಯನ್ನು ಉಳಿಸಿ ಜನಪ್ರತಿನಿಧಿಗಳು ಮತ್ತು ಸರ್ಕಾರಿ ನೌಕರರ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಕಡ್ಡಾಯವಾಗಿ ಓದಬೇಕು ಎನ್ನುವಂತಹ ವಿಚಾರಗಳನ್ನು ಮಂಡನೆ ಮಾಡಿರುವಂತಹ ಸದುದ್ದೇಶ ಹೊಂದಿರುವ ಒಂದು ಬಿಲ್ ಅದಕ್ಕೋಸ್ಕರ ಮಧ್ಯಾಹ್ನ ಊಟದ ಸಮಯದಲ್ಲಿ ಕರೆದು ಅವರ ಜೊತೆ ಮಾತನಾಡಿ ಯಾವುದಾದರೂ ಒಂದು ದಾರಿಯಲ್ಲಿ ಅವರಿಗೆ ಒಂದು ಅವಕಾಶ ಕಲ್ಪಿಸಿದರೆ ಅದಕ್ಕೆ ನಮ್ಮದೆಲ್ಲಾ ಸಹಕಾರ ಇದೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ;

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಪೀಠ ಏನು ಹೇಳುತ್ತದೆ ಅದನ್ನು ಕೇಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಧ್ಯಾಹ್ನ ಊಟಕ್ಕೆ ಬಿಟ್ಟಾಗ ದಯಮಾಡಿ;

**ಸಭಾಪತಿಯವರು:–** ತಾವು ಹೇಳಿ ಯಾವ ಇದರಲ್ಲಿ;

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಇವರು ಎಲ್ಲರೂ ಚರ್ಚೆ ಮಾಡಿ ಒಂದು ಇತ್ಯರ್ಥ ಮಾಡೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ರಘು ಆಚಾರ್‌ರವರೇ, ನಾವು ಸಭಾಪತಿಯವರ ಕೊಠಡಿಯಲ್ಲಿ ಕುಳಿತು ಮಾತನಾಡೋಣ, ದಯಮಾಡಿ ಬನ್ನಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ರಘು ಆಚಾರ್‌ರವರೇ, ನೀವೀಗ ಬನ್ನಿ. ನೋಡಿ ಇದು ಸರಿ ಕಾಣುವುದಿಲ್ಲ. House orderನಲ್ಲಿ ಬರಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಸಭಾ ನಿರ್ಣಯಕ್ಕೆ ಬದ್ಧ ಇಲ್ಲ ಎಂದರೆ, ನೀವು ಸಭೆಯನ್ನು ಕರೆಯುವುದು ಬೇಡ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ರಘು ಆಚಾರ್‌ರವರೇ, ನಾನು ಬರುತ್ತೇನೆ, ಸಭಾನಾಯಕರು, ಜೆ.ಡಿ.ಎಸ್ ನಾಯಕರೂ ಬರುತ್ತಾರೆ, ಸಭಾಪತಿಯವರ ಚೇಂಬರ್‌ನಲ್ಲಿ ಚರ್ಚೆ ಮಾಡೋಣ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ವಿರೋಧಪಕ್ಷದ ನಾಯಕ ಸಲಹೆಗೂ ಅವರು ಗೌರವ ಕೊಡುವುದಿಲ್ಲ ಎಂದರೆ, ಸಭೆ ಕರೆಯುವುದು ಬೇಡ. ಮಾನ್ಯ ರಘು ಆಚಾರ್‌ರವರು ಸ್ವಲ್ಪವಾದರೂ ಅರ್ಥ ಮಾಡಿಕೊಳ್ಳಬೇಕು ದಯವಿಟ್ಟು ನಿಮ್ಮ ಸ್ಥಾನಕ್ಕೆ ಬನ್ನಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 3. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 1629**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳವಾದ ಶ್ರೀ ಮಲೆ ಮಹದೇಶ್ವರ ದೇವಸ್ಥಾನಕ್ಕೆ ಬರುವ ಯಾತ್ರಿಕರು ದಿನೇ ದಿನೇ ಜಾಸ್ತಿಯಾಗುತ್ತಿದ್ದಾರೆ. ಅಲ್ಲಿಗೆ ಹವಾನಿಯಂತ್ರಿತ ವೋಲ್ವೋ ಬಸ್ ಸೌಲಭ್ಯಗಳನ್ನು ಇದುವರೆಗೂ ಕಲ್ಪಿಸಲಾಗಿಲ್ಲ. ಅಲ್ಲಿ ಬಹಳ ಕಿರಿದಾದಂತಹ ರಸ್ತೆಗಳಿವೆ, ಆದ್ದರಿಂದ ಅಲ್ಲಿ ಮಾಡುವುದಕ್ಕಾಗುವುದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ದಯವಿಟ್ಟು ತಮ್ಮ ಇಲಾಖೆಯವರು ಈ ವೋಲ್ವೋ ಬಸ್ ತಿರುವುಗಳಲ್ಲಿ ಹತ್ತುವುದಕ್ಕೆ ಆಗುವುದಿಲ್ಲ ಎಂಬ ಪ್ರಯತ್ನಗಳನ್ನು ಮಾಡಿದ್ದರೆ ಏಕೆಂದರೆ ವೋಲ್ವೋ ಬಸ್‌ನಂತಹ ಬಸ್‌ಗಳೇ ಖಾಸಗಿ ಬಸ್‌ಗಳು ಎಲ್ಲವೂ ಕೂಡ ಹೋಗುತ್ತವೆ. ಅದು ತಮಿಳುನಾಡಿಗೂ connectivity ಇರುವ ರಸ್ತೆಯಾಗಿದೆ. ಪ್ರತಿನಿತ್ಯವೂ 15 ಬಸ್‌ಗಳು ಬೆಂಗಳೂರಿನಿಂದ ಹೊರಡುತ್ತವೆ. ಪ್ರತಿನಿತ್ಯ 20 ಬಸ್;

ಮಾನ್ಯ ರಘು ಆಚಾರ್‌ರವರು ಅಲ್ಲಿಯೇ ನಿಂತುಕೊಳ್ಳಲಿ ಬಿಡಿ ಸ್ವಾಮಿ. ಮಾನ್ಯ ರಘು ಆಚಾರ್‌ರವರೇ, ಮಾತನಾಡಬೇಡಿ ಕುಳಿತುಕೊಳ್ಳಿ. ಈಗ ಮೈಸೂರಿನಿಂದ 20 ಬಸ್ ಹೋಗುತ್ತವೆ. ಸುಮಾರು 73 ಬಸ್ಸುಗಳು ದಿನನಿತ್ಯ ಈ ಸ್ಥಳಗಳಿಗೆ ಮಲೆ ಮಹದೇಶ್ವರ ಬೆಟ್ಟದಿಂದ ಬರುತ್ತಿದೆ. ದಯಮಾಡಿ ಇಲ್ಲಿಗೆ ಹವಾನಿಯಂತ್ರಿತ ಬಸ್‌ಗಳನ್ನು ಹಾಕುವ ಪ್ರಯತ್ನ ಮಾಡಿದರೆ ಒಳ್ಳೆಯದು ಎನ್ನುವುದು ನನ್ನ ಕಳಕಳಿಯಾಗಿದೆ. ಮುಂದಿನ ದಿನಗಳಲ್ಲಾದರೂ ಕೂಡ ತಾವು ಇದರ ಬಗ್ಗೆ ಆಸಕ್ತಿ ತೋರುತ್ತೀರಾ, ಪ್ರಯತ್ನ ಮಾಡುತ್ತೀರಾ ಅಥವಾ ಅಲ್ಲಿ ಅದು ಆಗುವುದೇ ಇಲ್ಲವೆಂದರೆ, ಬದಲಿ ವ್ಯವಸ್ಥೆಯನ್ನೇನಾದರೂ ಮಾಡುತ್ತೀರಾ ಎಂದು ಕೇಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹವಾನಿಯಂತ್ರಿತ ವೋಲ್ವೋ ಬಸ್‌ಗಳನ್ನು ಪ್ರಾರಂಭ ಮಾಡಬೇಕೆಂದು ಕೇಳುತ್ತಿದ್ದಾರೆ. ಅಲ್ಲಿನ ರಸ್ತೆಗಳು ಬಹಳಷ್ಟು ಸುತ್ತು ಇರುವುದರಿಂದ long chassis ಇರುವುದರಿಂದ ಅಲ್ಲಿ ವೋಲ್ವೋ ಬಸ್‌ಗಳನ್ನು ಓಡಿಸುವುದಕ್ಕೆ ಆಗುವುದಿಲ್ಲ ಎಂಬ ಮಾಹಿತಿ ಕೊಟ್ಟಿದ್ದಾರೆ, ನಾನು ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ತಾವು ಪರ್ಯಾಯವಾಗಿ ಬೇರೆ ಎ.ಸಿ. ಬಸ್‌ಗಳನ್ನು ಬಿಡಬೇಕೆಂದು ಅಪೇಕ್ಷೆ ಪಟ್ಟರೆ ತಕ್ಷಣವೇ ಸರ್ವೆ ಮಾಡಿಸಿ ತಕ್ಷಣ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್. ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಇಲ್ಲಿ ಗಮನಿಸಬೇಕು.

**ಸಭಾಪತಿಯವರು:– ನಾನು ಒಂದನ್ನು ಹೇಳುತ್ತೇನೆ ಕೇಳಿ, ಒಂದು ನಿಯಮದ ಅಡಿಯಲ್ಲಿ ಒಂದೇ ಒಂದು 1ನೇ ತಾರೀಖಿನಿಂದ ಇಲ್ಲಿಯತನಕ ಯಾವುದೇ ನೋಟಿಸ್ ಕೊಟ್ಟಿಲ್ಲ, ಪ್ರಶ್ನೆ ಹಾಕಿಲ್ಲ. ಒಂದು ದಿವಸ ಬೆಳಿಗ್ಗೆ ಬಂದು ನನ್ನ ಪ್ರಶ್ನೆಯನ್ನು ತೆಗೆದುಕೊಳ್ಳಿ ಎಂದು ಹೇಳಿದರೆ ಅದನ್ನು ಯಾವುದಾದರೂ ನೀತಿಯಡಿ ಕೇಳಬೇಕು ಅಥವಾ ಹಿರಿಯ ಸದಸ್ಯರಿದ್ದಾರೆ. ಒಂದು ನಿರ್ಣಯ ಖಾಸಗಿ ವಿಧೇಯಕಕ್ಕೆ ಅರ್ಜಿಯನ್ನು ಕೊಟ್ಟ ಮೇಲೆ ಆ ಉಪಸಮಿತಿ ಅಂದರೆ ತಮ್ಮ ಕಮಿಟಿ ಅದನ್ನು ತೀರ್ಮಾನ ತೆಗೆದುಕೊಂಡು ಶಿಫಾರಸ್ಸು ಮಾಡಿದ ಮೇಲೆ ಪ್ರಸ್ತುತ ಇರುವ ಅರ್ಜಿ ಇತ್ಯರ್ಥವಾದ ಮೇಲೆ ಅದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆ ಅರ್ಜಿ ಶಿಫಾರಸ್ಸಾಗಿ ಇನ್ನೂ ಬಂದಿಲ್ಲ ಇದು ಮೊದಲನೆಯದು.**

(ಮುಂದು)

(618) 20–03–2020/ 10–50/ ಕೆಹೆಚ್–ವಿಕೆ
**ಸಭಾಪತಿಯವರು (ಮುಂದು):–**

**ಎರಡನೆಯದಾಗಿ ಈಗ ಚರ್ಚೆಯಲ್ಲಿ ಇರುವಂತಹ ಖಾಸಗಿ ಸದಸ್ಯರ ವಿಧೇಯಕದ ಅರ್ಜಿ ಇನ್ನೂ ಇತ್ಯರ್ಥವಾಗಿಲ್ಲ. ಆದ್ದರಿಂದ, all of a sudden ಬಂದು ನನ್ನ ಅರ್ಜಿಯನ್ನು ತೆಗೆದುಕೊಳ್ಳಿ ಎಂದು ಹೇಳಿದರೆ ಆ ರೀತಿ ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ.**

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ಹೇಳಿದ ಹಾಗೆ ಮೊದಲನೆಯದು House order ನಲ್ಲಿ ಇಲ್ಲದೇ ಇರುವಂತಹ ಸಂದರ್ಭದಲ್ಲಿ; ಎರಡನೆಯದು, ಇಡೀ ಕಾಂಗ್ರೆಸ್ ಪಕ್ಷದ ನಾಯಕರ ಹಾದಿಯಾಗಿ ಎಲ್ಲಾ ಮಾನ್ಯ ಸದಸ್ಯರು ಮತ್ತು ಇಡೀ ಸದನ ಹೇಳುತ್ತಿರುವಂತಹ ಸಂದರ್ಭದಲ್ಲಿ ಈ ರೀತಿ ಒಬ್ಬ ಸದಸ್ಯರು ಬಾವಿಯಲ್ಲಿ ಕುಳಿತುಕೊಳ್ಳುವುದು ಯಾವ ನ್ಯಾಯ ಎಂದು ಹೇಳುತ್ತೇನೆ. ಮೂರನೆಯದಾಗಿ, ಇದು ಮೇಲ್ಮನೆಯ ಇತಿಹಾಸದಲ್ಲಿ ಈ ರೀತಿಯಲ್ಲಿ ಇಡೀ ಪಕ್ಷ, ಇಡೀ ಸದನ ಹೇಳಿದ್ದರೂ ಕೂಡ ಒಬ್ಬ ಸದಸ್ಯರು ಧರಣಿಯಲ್ಲಿ ಕುಳಿತುಕೊಂಡಿರುವಂತಹ ಸಂದರ್ಭದಲ್ಲಿ ಸದನ ಏನಾದರೂ ನಡೆದಿದೆಯೇ? ನಾನು ಹೇಳುವುದೇನೆಂದರೆ, ನಾವೆಲ್ಲಾ ಮಾನ್ಯ ಸದಸ್ಯರುಗಳು ಪದ್ಧತಿಯನ್ನು ಬಿಟ್ಟು ಹೋಗುವುದು ಬೇಡ. ನಾನು ಅದಕ್ಕೋಸ್ಕರ ಮಾನ್ಯ ಜಿ. ರಘು ಆಚಾರ್‌ರವರಲ್ಲಿ ಮನವಿ ಮಾಡುವುದೇನೆಂದರೆ, ಇದು ಯಾವುದೇ ಕಾರಣಕ್ಕೂ ವಿಧಾನ ಪರಿಷತ್ತಿಗೆ ಶೋಭೆ ತರುವುದಿಲ್ಲ. ಇಡೀ ವಿಧಾನ ಪರಿಷತ್ತಿಗೆ, ಇದು ಕೇವಲ ನಿಮ್ಮ ಪಕ್ಷಕ್ಕೆ ಅಲ್ಲ. ಇಡೀ ವಿಧಾನ ಪರಿಷತ್ತಿಗೆ ಶೋಭೆ ತರುವುದಿಲ್ಲ. ಮಾನ್ಯ ಸದಸ್ಯರು ಈ ರೀತಿ ಧರಣಿಯಲ್ಲಿ ಕುಳಿತುಕೊಂಡಾಗ ನಾವು ನಿಮ್ಮ ಜೊತೆಯಲ್ಲಿ ಇದ್ದೇವೆ. ಈಗ ಏನು ಮಾಡಬೇಕು ಎಂಬುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಸ್.ಆರ್.ಪಾಟೀಲ್‌ರವರು ಸ್ಪಷ್ಟ ಮಾಡಿದರು. ಹಾಗೆಯೇ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಬಾವಿಯ ಒಳಗೆ ಕುಳಿತುಕೊಂಡು ಏನೋ ಮಾಡಿ, ಇಡೀ ಸದನ ನಿನ್ನ ಜೊತೆಯಲ್ಲಿ ನಾವೆಲ್ಲಾ ಇದ್ದೇವೆ. ಇದರ ಬಗ್ಗೆ ಏನು ಮಾಡಬೇಕು. ಇದಕ್ಕೆ plan ಮಾಡೋಣ ಎಂದು ಅವರು ಹೇಳಿದರೂ ಕೂಡ ಈ ರೀತಿ ಮಾನ್ಯ ಸದಸ್ಯರು ಧರಣಿಯಲ್ಲಿ ಕುಳಿತುಕೊಳ್ಳುವುದು ಯಾವ ನ್ಯಾಯ?

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇವರೇನು, ಸದನಕ್ಕಿಂತ ದೊಡ್ಡವರೇ? ನೋಡಿ, ಈ ಅಶಿಸ್ತನ್ನು ನಾವಂತು ಸಹಿಸುವುದಿಲ್ಲ. ಶಿಸ್ತಿಗೆ ಒಳಪಟ್ಟು ಇರಬೇಕು. ಪಕ್ಷದ ಶಿಸ್ತು, ಈ ಸದನ ನಮ್ಮೆಲ್ಲರಿಗೂ ಒಂದು ಪವಿತ್ರವಾದಂತಹ ಸದನವಾಗಿದೆ. ಈ ಸದನದಲ್ಲಿ across the party line, ನಾವು ಹೇಳಿದ್ದೇವೆ, ಜೆ.ಡಿ.(ಎಸ್) ನಾಯಕರು, ಮಾನ್ಯ ಸಭಾನಾಯಕರು, ಮಾನ್ಯ ಸಚಿವರುಗಳು ಸಹ ಹೇಳಿದ್ದಾರೆ. ಇಷ್ಟಾದರೂ ಕೂಡ ಮಾನ್ಯ ಸದಸ್ಯರು ಬಾವಿಯಲ್ಲಿ ಕುಳಿತಿದ್ದಾರೆ ಎಂದರೆ, ಇದು ಅಶಿಸ್ತು ಎಂದು ಹೇಳಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಜಿ. ರಘು ಆಚಾರ್‌ರವರೇ ಸದನದ ಹಿರಿಯ ಸದಸ್ಯರೆಲ್ಲಾ ಹೇಳುತ್ತಿದ್ದಾರೆ. ದಯವಿಟ್ಟು ಎದ್ದೇಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಮಾನ್ಯ ಜಿ.ರಘು ಆಚಾರ್‌ರವರನ್ನು ತಾವು ಒಂದು ಬಾರಿ ಕರೆಯಿರಿ. ಅವರು ಬರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ರೀತಿಯ ಅಶಿಸ್ತಿನ ವರ್ತನೆಯನ್ನು ನಾವಂತೂ ಸಹಿಸುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ತಾವು ಈ ರೀತಿಯ ವರ್ತನೆಯನ್ನು ಸಹಿಸುವುದಿಲ್ಲವೆಂದು ಈ ರೀತಿ ಬಾವಿಯಲ್ಲಿ ಕುಳಿತುಕೊಂಡರೆ ಏನು ಮಾಡುತ್ತೀರಿ? ಇದು ಮೇಲ್ಮನೆ. ಸದನದ ಎಲ್ಲಾ ಸದಸ್ಯರು ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ.

**ಸಭಾಪತಿಯವರು:–** ಇದೆಲ್ಲಾ part of the House...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎಲ್ಲದಕ್ಕೂ ಒಂದು ಮಿತಿ ಇದೆ. ಆ ಮಿತಿ ಮೀರಿ ಈ ಸದನಕ್ಕಿಂತ ತಾವೇನೂ ದೊಡ್ಡವರಲ್ಲ. ನಾವೆಲ್ಲಾ ಸದನಕ್ಕಿಂತ ದೊಡ್ಡವರೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ ಒಂದು ನಿಮಿಷ. ನಾವು ಹೇಳಿದ್ದು,

**ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ ಸ್ವಲ್ಪ ಈ ಕಡೆಗೆ ಬನ್ನಿ. ಈಗ ನಾನು ಹೇಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದು ನಿಜ ಇದೆ. ಇದರ ಬಗ್ಗೆ ನಮಗೇನು ಕಲ್ಪನೆ ಇತ್ತು ಎಂದರೆ, ಮಾನ್ಯ ಸದಸ್ಯರು Notice ಕೊಟ್ಟಿದ್ದಾರೆ ಎಂದು ತಿಳಿದುಕೊಂಡಿದ್ದೆವು. ಮಾನ್ಯ ಸದಸ್ಯರು Notice ಕೊಟ್ಟಿಲ್ಲ ಎನ್ನುವ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದೀರಿ. ಇದು ಕಾನೂನು ಪ್ರಕಾರ ಬರುವ ಹಾಗಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರು Notice ಕೊಟ್ಟ ನಂತರ ಇದು ಬರಲಿ. ಆಗ ಇದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಜಿ.ರಘು ಆಚಾರ್‌ರವರು ದಯಮಾಡಿ ಬಾವಿಯಿಂದ ಹೊರಗೆ ಬರಬೇಕು. ಇಷ್ಟೆಲ್ಲಾ ಮಾನ್ಯ ಸದಸ್ಯರು ಹೇಳಿದಾಗ ತಾವು ಅತಿಯಾಗಿ ಹಠ ಮಾಡುವುದು ಸರಿಯಲ್ಲ. ಬಾವಿಯಿಂದ ಹೊರಗೆ ಬನ್ನಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸದಸ್ಯರು ಹಠ ಮಾಡುತ್ತಿಲ್ಲ. ದಯಮಾಡಿ ಬಾವಿಯಿಂದ ಹೊರಗೆ ಬನ್ನಿ.

**(ಈ ಹಂತದಲ್ಲಿ ಧರಣಿಯಲ್ಲಿ ನಿರತರಾಗಿದ್ದ ಮಾನ್ಯ ಸದಸ್ಯರಾದ ಶ್ರೀ ಜಿ.ರಘು ಆಚಾರ್‌ರವರು ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಿದರು)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ: 1653**
**(ಉತ್ತರವನ್ನು ಲಗತ್ತಿಲಾಗಿದೆ)**

**ಡಾ॥ ಜಯಮಾಲ:-** ಮಾನ್ಯ ಸಭಾಪತಿಯವರೇ, ದಮನಿತ ಮಹಿಳೆಯರಿಗಾಗಿ ಕೌಶಲ್ಯ ತರಬೇತಿ ಮತ್ತು ಘಟಕ ಸ್ಥಾಪನೆಗಾಗಿ ಕಳೆದ ಬಜೆಟ್‌ನಲ್ಲಿ 2019-20ನೇ ಸಾಲಿನಲ್ಲಿ 11.50 ಕೋಟಿ ರೂಪಾಯಿಗಳು ಬಿಡುಗಡೆಯಾಗಿತ್ತು. ಇದರ ಸಂಬಂಧವಾಗಿ ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. 11.50 ಕೋಟಿ ರೂಪಾಯಿಗಳಲ್ಲಿ 3.50 ಕೋಟಿ ರೂಪಾಯಿಗಳು ಮಾತ್ರ ವೆಚ್ಚ ಭರಿಸುವುದಕ್ಕೆ ಅನುಮೋದನೆಯಾಗಿದೆ ಎಂದು ಮಾನ್ಯ ಸಚಿವರು ಕೊಟ್ಟಿರುವ ಲಿಖಿತ ಉತ್ತರದಲ್ಲಿ ಒದಗಿಸಿದ್ದಾರೆ. ನಾನು ಮಾನ್ಯ ಸಚಿವರನ್ನು ಕೇಳುವುದೇನೆಂದರೆ, ಸಾಮಾಜಿಕವಾಗಿ ಹಿಂದುಳಿದಂತಹ, ಆರ್ಥಿಕವಾಗಿ ಬದುಕಿನಲ್ಲಿ ಎಲ್ಲಾ ಆಸರೆಯನ್ನು ಕಳೆದುಕೊಂಡಿರುವಂತಹ ಈ ವರ್ಗವನ್ನು ಸರ್ವೋಚ್ಚ ನ್ಯಾಯಾಲಯ ಇವತ್ತಿನ ದಿವಸ ಅವರಿಗೆ ಸಂಪೂರ್ಣವಾದಂತಹ ಪುನರ್‌ವಸತಿಯನ್ನು ಕೊಡಬೇಕು. ಅವರನ್ನು ಸಶಕ್ತೀಕರಣ ಮಾಡಬೇಕು. ಈ ರೀತಿಯ ದಮನವನ್ನು ತಡೆಯಬೇಕು. ಈ trafficking ಅನ್ನು ನಿಲ್ಲಿಸಬೇಕು. ಅವರ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಬೇಕೆಂದು ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಇಡೀ ಭಾರತ ದೇಶಕ್ಕೆ ಕಳುಹಿಸಿರುವಂತಹದ್ದು. ಇದರ ಬಗ್ಗೆ ನಾವು ಹೆಮ್ಮೆ ಪಡಬೇಕು. ಕರ್ನಾಟಕ ಯಾವತ್ತಿಗೂ ಕೂಡ ಮಾನವೀಯತೆಯಲ್ಲಿ ಮೊದಲನೇ ಸ್ಥಾನವನ್ನು ಪಡೆದುಕೊಂಡಿದೆ. ಕರ್ನಾಟಕ ರಾಜ್ಯ ಪ್ರಪ್ರಥಮ ಬಾರಿಗೆ 30 ಜಿಲ್ಲೆಗಳಲ್ಲಿರುವಂತಹ ಸಂಪೂರ್ಣ ಮಾಹಿತಿಯನ್ನು ತೆಗೆದುಕೊಂಡು, ಒಂದು ಕೋಶವನ್ನು ಮಾಡಿ, ಆ ಕೋಶಕ್ಕೆ ಕಳೆದ ಎರಡು ವರ್ಷದ ಬಜೆಟ್‌ನಲ್ಲಿ ಇದನ್ನು ಪಾಸ್ ಮಾಡಿ, ಆದಾದ ನಂತರ 2019-20ನೇ ಸಾಲಿನಲ್ಲಿ 11.50 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಮೀಸಲಾಗಿ ಇಟ್ಟಿರುವಂತಹದ್ದು, ಆದರೆ, ನಮಗೆ ಬಹಳ ದುಃಖದ ವಿಷಯವೇನೆಂದರೆ, ಆರ್ಥಿಕ ಇಲಾಖೆಗೆ ಹೋಗುವಂತಹ ಕಡತ ವಾಪಸ್ಸು ನಮಗೆ ಬರುವುದೇ ಇಲ್ಲ. ಇವತ್ತು ಈ 11.50 ಕೋಟಿ ರೂಪಾಯಿಗಳಲ್ಲಿ 1.50 ಕೋಟಿ ರೂಪಾಯಿಗಳನ್ನು ಕೌಶಲ್ಯ ತರಬೇತಿಗಾಗಿ ಮತ್ತು 10.00 ಕೋಟಿ ರೂಪಾಯಿಗಳನ್ನು ಮಹಿಳೆಯರ ಘಟಕ ಸ್ಥಾಪನೆಗಾಗಿ ವೆಚ್ಚ ಮಾಡಬೇಕು. ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಇವತ್ತು ನೊಂದಣಿ ಆಗಿರುವಂತಹ ದಮನಿತರು ಕರ್ನಾಟಕದಲ್ಲಿ ಇದ್ದಾರೆ. ಇನ್ನು ನೊಂದಣಿ ಆಗಿಲ್ಲದೆ ಇರುವಂತಹ ಸಂಖ್ಯೆಗಳನ್ನು ನಾವು ಊಹಿಸುವುದಕ್ಕೂ ಸಾಧ್ಯ ಇಲ್ಲ. ಕನಿಷ್ಠ ಮಹಿಳೆಯರು ಕೇಳಿರುವಂತಹದ್ದು, ನಮಗೆ ದಿನಕ್ಕೆ 400 ರೂಪಾಯಿಗಳನ್ನು ಕೊಟ್ಟು ಬದುಕುವುದಕ್ಕೆ ಅವಕಾಶ ಮಾಡಿಕೊಡಿ ಎಂಬುದಾಗಿದೆ. ಸರ್ಕಾರ ದೊಡ್ಡ ಮನಸ್ಸು ಮಾಡಿ ಇವತ್ತು ಘಟಕ ಸ್ಥಾಪನೆಗಾಗಿ 11.50 ಕೋಟಿ ರೂಪಾಯಿಗಳನ್ನು ಕಳೆದ ಬಾರಿಯ ಬಜೆಟ್‌ನಲ್ಲಿ ಕೊಟ್ಟಿದೆ. ಆದರೆ ಇವತ್ತು ಆ ಹಣ ನಮಗೆ ಈ ಆಯವ್ಯಯದಲ್ಲಿ ಕಾಣಿಸುತ್ತಿಲ್ಲ. ಈ ಬಾರಿ ಬಜೆಟ್‌ನಲ್ಲಿಯೂ ಕೂಡ ಒಂದು ರೂಪಾಯಿಯನ್ನು ಕೂಡ ಇದಕ್ಕಾಗಿ ಮೀಸಲಾಗಿ ಇಟ್ಟಿಲ್ಲ. ಕಳೆದ ಬಾರಿಯ ಹಣವೇ ಬಂದಿಲ್ಲ. ಇದು ಅತ್ಯಂತ ಅವಶ್ಯಕ. ಇದರ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಈ ಹಣವನ್ನು ಮಾನ್ಯ ಸಚಿವರು ಸಹ ಹೇಳಿದ್ದಾರೆ. ಹಣ ಬಿಡುಗಡೆಯಾದ ನಂತರ ಘಟಕ ಸ್ಥಾಪನೆ ಬಗ್ಗೆ ನಾವು ಆಲೋಚನೆ ಮಾಡುತ್ತೇವೆ. ಹಣ ಏಕೆ ಬಿಡುಗಡೆ ಆಗುತ್ತಿಲ್ಲ ಎನ್ನುವುದಕ್ಕೆ ನಮಗೆ ಸಮಜಾಯಿಷಿ ಬೇಕು. ಈ ಹಣ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಿಡುಗಡೆಯಾಗುವುದಕ್ಕೆ ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ನೋಡಲ್ ಅಧಿಕಾರಿಯನ್ನು ನೇಮಕ ಮಾಡಬೇಕು. ಈ ನೋಡಲ್ ಅಧಿಕಾರಿಗೆ ಈಗಾಗಲೇ ರೂಪುರೇಷೆಗಳನ್ನು ತಯಾರು ಮಾಡಿ, 30 ಜಿಲ್ಲೆಗಳಿಗೂ ಕೂಡ ಇದನ್ನು ಕಳುಹಿಸಲಾಗಿದೆ. ಇಲ್ಲಿ 30 ಜಿಲ್ಲೆಗಳಲ್ಲಿಯೂ ಕೂಡ ಜಿಲ್ಲಾಧಿಕಾರಿಯವರು ಸಭೆಯನ್ನು ಸೇರಿಸಿದ್ದಾರೆ. ಆದರೆ ಕೆಲವು ಜಿಲ್ಲೆಗಳಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ನಿಜಕ್ಕೂ ಬಹಳ ನೋವಾಗುತ್ತದೆ. Transgender, ಅವರನ್ನು ದಮನಿತರು ಎಂದು ಭಾವಿಸಲಾಗುತ್ತಿದೆ. ಇದು ಅತ್ಯಂತ ಶೋಚನೀಯವಾದಂತಹ ವಿಷಯವಾಗಿದೆ. Transgender ಅವರು ಪ್ರತ್ಯೇಕ ಲಿಂಗ; ಅಲ್ಪಸಂಖ್ಯಾತರು ಬೇರೆ, ದಮನಿತರು ಬೇರೆ. ಇವರ ಮಕ್ಕಳಿಗಾಗಿ ಇವರಿಗೆ ಕೊಟ್ಟಿರುವಂತಹ ಹಣವನ್ನು, ಈ ಬಾರಿಯೂ ಕೂಡ ಒಂದು ಸ್ವಲ್ಪ ಹಣವನ್ನು ಇಟ್ಟಿಲ್ಲ. ತಾವು ದಯವಿಟ್ಟು ಇದರ ಬಗ್ಗೆ ನನಗೆ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ಕೋರಿಕೊಳ್ಳುತ್ತೇನೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಹೋದರಿಯಾದ ಜಯಮಾಲರವರಿಗೆ ನಾನು ಮೊದಲನೆಯದಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ನಮ್ಮ ಕರ್ನಾಟಕದ ಒಂದು ಇತಿಹಾಸದಲ್ಲಿ ಅವರ ಅಧ್ಯಕ್ಷತೆಯಲ್ಲಿ 21 ಜನ ತಜ್ಞರನ್ನು ಒಳಗೊಂಡಂತಹ ಒಂದು ಸಮಿತಿ ಸುಮಾರು 30 ಜಿಲ್ಲೆಗಳಲ್ಲಿಯೂ ಕೂಡ ತಮ್ಮ ಅಮೂಲ್ಯವಾದ ವೇಳೆಯನ್ನು ಮತ್ತು ದಮನಿತರ ಬಗ್ಗೆ ಇರುವಂತಹ ಕಳಕಳಿಯನ್ನು, ಅನೇಕ ಶೋಷಿತ, ನೊಂದ, ಕಣ್ಣೀರು ಇಡುವಂತಹ ಮಹಿಳೆಯರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಸುಮಾರು ಆ ತಂಡದ ಜೊತೆಗೆ 30 ಜಿಲ್ಲೆಗಳಿಗೂ ಭೇಟಿ ಕೊಟ್ಟಿದ್ದಾರೆ. ಏಕೆಂದರೆ, ನಾನು ಕೂಡ ಕಳೆದ ಬಾರಿ ಶಾಸಕಿಯಾಗಿದ್ದಾಗ ನನ್ನ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದರು. ಅದೇ ರೀತಿಯಾಗಿ 176 ತಾಲ್ಲೂಕುಗಳಲ್ಲಿ ಸುಮಾರು 17600 ಪ್ರಶ್ನಾವಳಿಯನ್ನು ಕೇಳಿ ಅವರ ಜೊತೆಯಲ್ಲಿ ಸ್ಪಂದಿಸಿ, ಅವರ ಕಷ್ಟ–ಸುಖ, ನೋವುಗಳನ್ನೆಲ್ಲವನ್ನೂ ಕೂಡ ಸಂಗ್ರಹಣೆ ಮಾಡಿಕೊಂಡು ದಿನಾಂಕ:13–02–2017ರಲ್ಲಿ ಬಹಳಷ್ಟು ಸುಂದರವಾದಂತಹ ಮತ್ತು ಅರ್ಥಪೂರ್ಣವಾದಂತಹ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಆ ವರದಿ ನನಗೂ ಕೂಡ ಬಂದಿತ್ತು. ನಾನು ಕೂಡ ಅದನ್ನು ಗಮನಿಸಿದ್ದೇನೆ. ನಾನು ಮಾನ್ಯ ಸಚಿವರಲ್ಲಿ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ನಾನು ಯಾವತ್ತೂ ಕೂಡ ತಮ್ಮ ಪರವಾಗಿ ಇದ್ದೇನೆ. ನಾನು ಕೂಡ ಮಹಿಳೆಯರಿಗೋಸ್ಕರ ನನ್ನ ಒಂದು ಸಮಾಜ ಸೇವೆಯಲ್ಲಿ ಇದಕ್ಕೆ ಒಂದು ಪ್ರಾಮುಖ್ಯತೆಯನ್ನು ಕೊಟ್ಟು, ಕೆಲಸವನ್ನೂ ಕೂಡ ಮಾಡಿದ್ದೇನೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ 2019–20 ನೇ ಸಾಲಿನ ಬಜೆಟ್‌ನಲ್ಲಿ ಸುಮಾರು 10 ಕೋಟಿ ರೂಪಾಯಿಗಳನ್ನು ಘಟಕ ಸ್ಥಾಪನೆಗಾಗಿ ಮೀಸಲಿಡಬೇಕೆಂಬ ಬಗ್ಗೆ ಚರ್ಚೆ ಮಾಡಲಾಗಿತ್ತು. ಆದರೆ ಇದುವರೆಗೂ ಕೂಡ ಆ ವ್ಯವಸ್ಥೆ ಆಗಿಲ್ಲ ಎನ್ನುವುದು ನಿಜ. ಆದರೆ ಇದು ಸ್ವಲ್ಪ ದಿನಗಳಲ್ಲಿಯೇ ಆಗುತ್ತದೆ. ನಾನು ಅದರ follow-up ನಲ್ಲಿ ಇದ್ದೇನೆ. ಅಲ್ಲಿ ಆಗಿರುವಂತಹ ಒಂದು ತಪ್ಪು ಏನೆಂದರೆ, ಘಟಕ ಸ್ಥಾಪನೆಯ ಬಂಡವಾಳ ಲೆಕ್ಕಶೀರ್ಷಿಕೆಯಡಿಯಲ್ಲಿ ಆ ಕಡತ ಹೋಗಿತ್ತು. ಆ ಬಂಡವಾಳ ಲೆಕ್ಕಶೀರ್ಷಿಕೆಯಲ್ಲಿ ಬಂದಿರುವುದರಿಂದ, ಮತ್ತೆ ಅದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿದ್ದುಪಡಿಯಾಗಬೇಕಾಗಿತ್ತು. ಏಕೆಂದರೆ, ರಾಜಸ್ವ ಲೆಕ್ಕಶೀರ್ಷಿಕೆಯಡಿಯಲ್ಲಿ ಹೋಗಬೇಕಿತ್ತು. ಅದನ್ನು ತಿದ್ದುಪಡಿ ಮಾಡಿ ಈಗಾಗಲೇ ಕಳುಹಿಸಿದ್ದೇವೆ. ಇದರ ಬಗ್ಗೆ ಯೋಚನೆ ಮಾಡಬೇಡಿ. ನಾನು ಕೂಡ ಕರ್ನಾಟಕದ ದಮನಿತ ಮಹಿಳೆಯರ ಪರವಾಗಿ ಇದ್ದೇನೆ. ಮಾನ್ಯ ಸದಸ್ಯರು ನನಗೆ ವರದಿಯನ್ನು ಒಪ್ಪಿಸಿ ಸಹಾಯವನ್ನು ಮಾಡಿದ್ದಾರೆ. ಆದಷ್ಟು ಬೇಗ ಇದನ್ನು clear ಮಾಡುವಂತಹದನ್ನು ಮಾಡುತ್ತೇನೆ. ಅದೇ ರೀತಿಯಾಗಿ ಒಂದು ಸಾವಿರ ಮಹಿಳೆಯರಿಗೆ 1.50 ಕೋಟಿ ರೂಪಾಯಿಗಳು ಮಹಿಳಾ ತರಬೇತಿಗಾಗಿ ಎಂದು ಕೊಟ್ಟಿದ್ದೇವೆ. ಈಗಾಗಲೇ ಚೇತನ ಯೋಜನೆಯಡಿ ಒದಗಿಸಲಾಗಿರುವ 4.00 ಕೋಟಿ ರೂಪಾಯಿಗಳ ಪೈಕಿ 2.00 ಕೋಟಿ ರೂಪಾಯಿಗಳನ್ನು ದಮನಿತ ಮಹಿಳೆಯರ ಘಟಕ ಸ್ಥಾಪನೆಗೂ ಕೂಡ ಈಗಾಗಲೇ ಇಟ್ಟಿದ್ದೇನೆ.

(ಮುಂದು)

**(619) 20/03/2020/11:00/ಎಸ್‌ಪಿಆರ್/ವಿಕೆ**
**ಶ್ರೀಮತಿ ಶಶಿಕಲಾ ಅಣ್ಣಾ ಸಾಹೇಬ ಜೊಲ್ಲೆ(ಮುಂದು):-**

ತರಬೇತಿ ಕಾರ್ಯಕ್ರಮಗಳಲ್ಲಿ ಜಿಲ್ಲಾಧಿಕಾರಿಗಳ ಹಂತದಲ್ಲಿ ಆಯ್ಕೆಯಾಗುತ್ತದೆ. ಚೇತನ ಯೋಜನೆಯಡಿ 2019 ನೇ ಸಾಲಿನಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಸಾಲದ ರೂಪದಲ್ಲಿ ಕೊಡಲಾಗುತ್ತಿತ್ತು. ಈಗ ಅದನ್ನು ಒಂದು ಲಕ್ಷ ರೂಪಾಯಿಗಳಿಗೆ ಏರಿಸಲಾಗಿದೆ. ಐವತ್ತು ಸಾವಿರ ರೂಪಾಯಿಗಳನ್ನು ಸಾಲದ ರೂಪದಲ್ಲಿ ಹಾಗೂ ಇನ್ನುಳಿದ ಐವತ್ತು ಸಾವಿರ ರೂಪಾಯಿಗಳನ್ನು ಸಹಾಯಧನ ರೂಪದಲ್ಲಿ ಕೊಡಲಾಗುತ್ತದೆ. 2019-20 ನೇ ಸಾಲಿನಲ್ಲಿ ಚೇತನ ಯೋಜನೆಡಿ ಬಳಕೆಯಾಗದ ಹಣ ಉಳಿದಿತ್ತು ಆ ಪೈಕಿ ಸುಮಾರು... ನನಗನ್ನಿಸಿದ ಹಾಗೆ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ಈ ರೀತಿಯ ಬದಲಾವಣೆಯಾಗಿದೆ. 13.58 ಕೋಟಿ ರೂಪಾಯಿಗಳನ್ನು ಮಹಿಳೆಯರಿಗಾಗಿ ಮೀಸಲಿಟ್ಟಿದ್ದೇವೆ. ಮಾನ್ಯ ಸದಸ್ಯೆ ಸಲ್ಲಿಸಿರುವ ವರದಿಯಲ್ಲಿ ಎಲ್ಲಾ ರೀತಿಯ ಮಹಿಳೆಯರಿಗಾಗಿ ಸುಮಾರು 733 ಕೋಟಿ ರೂಪಾಯಿಗಳ ಅನುದಾನ ಬೇಕು ಎಂದು ಕೇಳಲಾಗಿದೆ. ನನ್ನ ಪ್ರಯತ್ನದಿಂದಾಗಿ ಈಗ 13.58 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಉದ್ಯೋಗಿನಿ ಮತ್ತು ಸಮೃದ್ಧಿ ಯೋಜನೆಗಳಡಿ ಇಂತಹ ಮಹಿಳೆಯರಿಗೆ ಆದ್ಯತೆಯ ಮೇಲೆ ಆಯ್ಕೆ ಮಾಡಬೇಕೇನ್ನುವ ಆದೇಶವನ್ನು ಈಗಾಗಲೇ ನೀಡಲಾಗಿದೆ. ಮಾನ್ಯ ಸದಸ್ಯರಂತೆ ನಾನು ರಾಜ್ಯದ ಪ್ರತಿಯೊಂದು ಜಿಲ್ಲೆಗೆ ಹೋಗಲಿಕ್ಕಾಗಲಿಲ್ಲ. ಆದರೂ ಸಹ ಕಳೆದ ಆರು ತಿಂಗಳ ಅಧಿಕಾರಾವಧಿಯಲ್ಲಿ ಈ ವಿಚಾರದಲ್ಲಿ ನಾನು ಸಭೆಯೊಂದನ್ನು ಮಾಡಿ, ಅವರೊಂದಿಗೆ ಸ್ಪಂದಿಸುವ ಕಾರ್ಯವನ್ನು ಮಾಡಿದ್ದೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ನೋವನ್ನು ಅನುಭವಿಸುವುದು ಬೇಡ ಹಾಗೂ ಅನ್ಯಥಾ ಭಾವಿಸುವುದೂ ಬೇಡ. 10 ಕೋಟಿ ರೂಪಾಯಿಗಳನ್ನು ಆದಷ್ಟು ಶೀಘ್ರದಲ್ಲಿ ಬಿಡುಗಡೆ ಮಾಡಿ ಅದಕ್ಕೆ ಬಳಕೆಯಾಗದ ಅನುದಾನ 13.58 ಕೋಟಿ ರೂಪಾಯಿಗಳನ್ನು ಅದಕ್ಕೆ ಸೇರಿಸಿ ಮೀಸಲಿಡಿಸಲಾಗಿದೆ. ಮಾನ್ಯ ಸದಸ್ಯರ ಮಾರ್ಗದರ್ಶನದಲ್ಲಿ ಹಾಗೂ ಇನ್ನುಳಿದ ಎಲ್ಲಾ ಸದಸ್ಯರುಗಳ ಸಲಹೆಯ ಮೇರೆಗೆ ಒಳ್ಳೆಯ ರೀತಿಯಲ್ಲಿ ಅವರಿಗೆ ನ್ಯಾಯ ಒದಗಿಸುವ ಕೆಲಸವನ್ನು ಪ್ರಾಮಾಣಿಕವಾಗಿ ನಾನು ಮಾಡುತ್ತೇನೆ ಎಂದು ತಮ್ಮ ಮೂಲಕ ತಿಳಿಸಲಿಚ್ಛಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ|| ಜಯಮಾಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಎಷ್ಟು ಅಭಿನಂದನೆಗಳನ್ನು ಹೇಳಿದರೂ ಸಾಲದು. ನೊಂದ ಹೆಣ್ಣುಮಕ್ಕಳ ಪರವಾಗಿ ನಾನು ಹೃದಯಪೂರ್ವಕ ಅಭಿನಂದನೆಯನ್ನು ಮಾನ್ಯ ಸಚಿವರಿಗೆ ಸಲ್ಲಿಸುತ್ತೇನೆ. ಇಷ್ಟೂ ಕಾರ್ಯಕ್ರಮಗಳು ಜಾರಿಗೊಳ್ಳಬೇಕಾದರೆ, ನೋಡಲ್ ಅಧಿಕಾರಿಯು ಬಹಳ ಮುಖ್ಯವಾಗಿರುತ್ತಾರೆ. ಏಕೆಂದರೆ ಸಮನ್ವಯ ಸಮಿತಿಗಳಲ್ಲಿ ಏನಾಗುತ್ತಿದೆ, ಏನಾಗಬೇಕು ಎನ್ನುವುದನ್ನು ನೋಡಬೇಕು. ಈಗಿರುವ 22 ಜನ ಸದಸ್ಯರಲ್ಲಿ ಮಾನ್ಯ ಸಚಿವರು ಯಾರನ್ನಾದರೂ ಒಬ್ಬರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಬೇಕು. ಪರಿಶಿಷ್ಟ ಜಾತಿಯಲ್ಲಿ ಶೇಕಡಾ 36.8 ರಷ್ಟು ದಮನಿತರಿದ್ದಾರೆ. ಅಂತಹವರ ಪರವಾಗಿ ಕೈಮುಗಿದು ನಾನು ಸಚಿವರಿಗೆ ನಮಸ್ಕರಿಸುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಬಿ.ಜಿ.ಪಾಟೀಲ್ ರವರದ್ದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯು ಇವತ್ತಿನ ಪಟ್ಟಿಯಲ್ಲಿ ಮೊದಲನೆಯದಾಗಿತ್ತು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ವಿಳಂಬವಾಗಿ ಸದನಕ್ಕೆ ಬಂದಿದ್ದೀರಿ. ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೋರಿದ್ದಾರೆ. ಮಾನ್ಯ ವಿಜಯ ಸಿಂಗ್‌ರವರು ಕೇಳಿರುವ ಪ್ರಶ್ನೆಗೂ ಸಹ ಮಂತ್ರಿಗಳು ಕಾಲಾವಕಾಶವನ್ನು ಕೋರಿದ್ದಾರೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಸಿದ್ಧವಿದೆ.

**ಸಭಾಪತಿಯವರು:–** ನನಗೆ ನೀಡಿರುವ ಪತ್ರದಲ್ಲಿ ಕಾಲಾವಕಾಶವನ್ನು ಕೋರಲಾಗಿದೆ. ಇದನ್ನು ನಂತರದಲ್ಲಿ ತೆಗೆದುಕೊಳ್ಳಲಾಗುವುದು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರಿಸುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕೇಳಿರುವ ಪ್ರಶ್ನೆಗೆ ಕಾಲಾವಕಾಶವನ್ನು ಕೋರಿದ್ದಾರೆ. ಆದರೆ ಅದನ್ನು ಮುಂದಿನ ವಾರದಲ್ಲಿ ತೆಗೆದುಕೊಳ್ಳೋಣ. ಅದರಲ್ಲಿ ಬಹಳ ಗಂಭೀರವಾದ ಆಪಾದನೆಗಳಿವೆ. ಮಾನ್ಯ ಸಚಿವರು ಈ ವಿಷಯವನ್ನು ಬಹಳ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಗುರವಾಗಿ ತೆಗೆದುಕೊಳ್ಳುವುದು ಬೇಡ. ಇದು 32 ಕೋಟಿ ರೂಪಾಯಿಗಳ ಹಗರಣದ ವಿಷಯವಾಗಿದೆ. ಹೀಗಾಗಿ ಇದನ್ನು ಮುಂದಿನ ವಾರ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಎಷ್ಟು ದಿನಗಳ ಕಾಲಾವಾಕಾಶವನ್ನು ಕೋರಿದ್ದಾರೆ?

**ಸಭಾಪತಿಯವರು:–** ಮಾನ್ಯ ಸಚಿವರು 15 ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಯಲ್ಲಿ ಯಾವ ಅಂಶವಿದೆ ಎಂದು ಸಚಿವರು 15 ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ?

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಪ್ರಮುಖವಾದ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಸಚಿವರು ಈ ರೀತಿಯಾಗಿ ಮಾಡುವುದಾದರೆ, ಸದನವನ್ನು ಕರೆಯುವುದರಲ್ಲಿ ಯಾವ ಅರ್ಥವಿದೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಸರಳವಾದ ಪ್ರಶ್ನೆಯನ್ನು ಕೇಳಿದ್ದೇನೆ. ಈ ಹಿಂದೆ ಶ್ರೀ ಸಿ.ಟಿ.ರವಿಯವರು ಪ್ರಶ್ನೆಯೊಂದಕ್ಕೆ ಉತ್ತರಿಸಲು 15 ದಿನಗಳ ಕಾಲಾವಕಾಶವನ್ನು ಕೋರಿ, ಮುಂದಿನ ವಾರದಲ್ಲಿ ಉತ್ತರ ಒದಗಿಸುವುದಾಗಿ ಹೇಳಿದ್ದರು. ಮಾನ್ಯ ಸಭಾನಾಯಕರೇ, ಮಂತ್ರಿಗಳು ಪ್ರಶ್ನೆಗೆ ಉತ್ತರವನ್ನು ಒದಗಿಸಲು ಈ ರೀತಿಯಾಗಿ 15 ದಿನಗಳ ಕಾಲಾವಕಾಶವನ್ನು ತೆಗೆದುಕೊಂಡರೆ ಅಧಿವೇಶನದ ಅವಧಿಯು ಮುಗಿದು ಹೋಗುತ್ತದೆ. ನಾನು ಕೇಳಿರುವ ಪ್ರಶ್ನೆಗೆ ಉತ್ತರ ನೀಡಲು 15 ದಿನಗಳ ಕಾಲಾವಕಾಶ ಏಕೆ ಬೇಕೆಂದು ನನಗೆ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಅಧಿವೇಶನ ಮುಗಿಯುವುದರೊಳಗಾಗಿ ಉತ್ತರಗಳನ್ನು ಒದಗಿಸಲಾಗುವುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಯನ್ನು ಹಾಗೂ ಅದರಲ್ಲಿನ ಅಂಶಗಳನ್ನು ಸಭಾನಾಯಕರು ನೋಡಿ ಹೇಳಬೇಕು. ಹೀಗಾಗಿ ಇದನ್ನು ಮುಂದಿನ ವಾರದಲ್ಲಿ ತೆಗೆದುಕೊಳ್ಳಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಬಹಳ ಬೇಗ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಎನ್.ಎಸ್.ಬೋಸ್‌ರಾಜು ರವರದ್ದು.

**ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಮತ್ತು ಮಾನ್ಯ ಶರಣಪ್ಪ ಮಟ್ಟೂರ ರವರುಗಳು ಕೇಳಿರುವ ಪ್ರಶ್ನೆಗೆ ನಾನು ಕಾಲಾವಕಾಶವನ್ನು ಕೋರಿದ್ದೇನೆ. ಆದರೆ ಮಾನ್ಯ ಸದಸ್ಯರುಗಳು 15 ದಿನಗಳು ಏಕೆಂದು ಕೇಳಿದ್ದಾರೆ. ಮಾನ್ಯ ಸದಸ್ಯರುಗಳು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ನಾನು ಇನ್ನೂ ತನಿಖೆಯನ್ನು ಮಾಡಿಲ್ಲ. ಪರಿಸ್ಥಿತಿ ಹೀಗಿರುವಾಗ ನಾನು ಹೇಗೆ ವರದಿಯನ್ನು ನೀಡಲಿ? ಈ ವಿಷಯದಲ್ಲಿ ನನಗೂ ಸಹ ಬಹಳ ಬೇಜಾರಾಗಿದೆ. ಬೀದರ್‌ನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿಗಳ ಬಗ್ಗೆ ನನಗೆ ಬಹಳ ದೂರುಗಳು ಬಂದಿವೆ. ದೂರುಪಟ್ಟಿಯಲ್ಲಿ ಹಾಕಿರುವ ಪತ್ರವೂ ಸಹ ನನಗೆ ಬಂದಿದೆ. ಈ ವಿಚಾರದಲ್ಲಿ ಸಮಗ್ರ ತನಿಖೆಯನ್ನು ನಡೆಸುವ ನಿಟ್ಟಿನಲ್ಲಿ ನಾನು ಕಾಲಾವಕಾಶವನ್ನು ಕೇಳಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವಿಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಲ್ಲಿನ ಉಪ ಕುಲಪತಿಗಳಿಗೆ ಯಾವುದೇ ನಿಯಮ ಹಾಗೂ ಕಾನೂನುಗಳಿಲ್ಲ. ಅವರುಗಳು ತಮ್ಮ ಮನಸ್ಸಿಗೆ ಬಂದ ಹಾಗೆ ಕೋಟ್ಯಾಂತರ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆ.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಕಾನೂನಿನ ಚೌಕಟ್ಟಿನೊಳಗೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಈ ವಿಚಾರದಲ್ಲಿ 100 per cent ಯಾರನ್ನೂ ಬಿಡುವುದಿಲ್ಲ; ತನಿಖೆಯನ್ನು ಕೈಗೊಳ್ಳಲಾಗುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅಲ್ಲಿ ಒಂದು ಬಾರಿ ಪರಿಕರಗಳನ್ನು ಖರೀದಿಸಿದರೆ ಅದಕ್ಕೆ ಮೂರು ಬಾರಿ ಬಿಲ್ಲುಗಳನ್ನು ಸಲ್ಲಿಸಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನನ್ನ ಪ್ರಶ್ನೆಗೆ ಮುಂದಿನ ವಾರ ಉತ್ತರವನ್ನು ಕೊಡಿಸಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 1620**
**ಉತ್ತರವನ್ನು ಲಗತ್ತಿಸಲಾಗಿದೆ**

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿರುವ ಪ್ರಶ್ನೆಯಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದು, ಅದನ್ನೂ ಸಹ ಮಾನ್ಯ ಸಚಿವರು ಸರಿಪಡಿಸಿದ್ದಾರೆ. ಇದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸುವರ್ಣ ಕರ್ನಾಟಕದ ಸವಿ ನೆನಪಿಗಾಗಿ, ಇಡೀ ಕಲ್ಯಾಣ ಕರ್ನಾಟಕ ಭಾಗಕ್ಕೆ ಕೇವಲ ಒಂದು ಸುವರ್ಣ ರಂಗಮಂದಿರವನ್ನು ನೀಡಿದ್ದಾರೆ. ಆ ಸಂದರ್ಭದಲ್ಲಿ ನಾನು ವಿಧಾನಸಭೆಯ ಸದಸ್ಯನಾಗಿದ್ದೆನು. ಸುವರ್ಣ ರಂಗಮಂದಿರವನ್ನು ಉತ್ತಮ ರೀತಿಯಲ್ಲಿ ನಿರ್ಮಾಣ ಮಾಡಬೇಕೆಂದು ನಗರದ ಅತ್ಯಂತ ಮಧ್ಯ ಭಾಗದಲ್ಲಿ, ಒಬ್ಬ ಸ್ವಾಮಿಗಳು ತಮಗೆ ಸೇರಿದ ಒಂದು ಎಕರೆ ಭೂಮಿಯನ್ನು ಸರ್ಕಾರಕ್ಕೆ ದಾನವಾಗಿ ನೀಡಿದರು. ಅಲ್ಲಿ ಭವನ ನಿರ್ಮಾಣ ಮಾಡಲು ಸರ್ಕಾರ ಹೌಸಿಂಗ್ ಬೋರ್ಡ್‌ನವರಿಗೆ ವಹಿಸಲಾಯಿತು. ಆದರೆ ಅವರು ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿರಲಿಲ್ಲ. ನಾನು ಈ ದಿನ ಬೆಳಗ್ಗೆ ಅಧಿಕಾರಿಗಳೊಂದಿಗೆ ಈ ವಿಚಾರವಾಗಿ ದೂರವಾಣಿ ಮುಖೇನ ಮಾತನಾಡಿದ್ದೇನೆ. ಅವರುಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ ಹಾಗೂ ಎರಡು–ಮೂರು ಪತ್ರ ವ್ಯವಹಾರಗಳಾಗಿವೆ. ಆದರೆ ನಿರ್ಮಾಣ ಕೆಲಸ ವಹಿಸಿರುವ ಏಜೆನ್ಸಿಯು ಸ್ಥಳಕ್ಕೆ ಹೋಗುತ್ತಿಲ್ಲ. ಆ ಪ್ರದೇಶದಲ್ಲೆಲ್ಲಾ ಜಾಲಿ ಗಿಡ ಬೆಳೆದಿದೆ. ಅದು ಒಂದು ಎಕರೆ ವಿಸ್ತೀರ್ಣ ಪ್ರದೇಶವಾಗಿದ್ದು, ಬಹಳ ಮೌಲ್ಯವುಳ್ಳದ್ದಾಗಿದೆ. ಆ ರಂಗ ಮಂದಿರಕ್ಕೆ ಸ್ವಾಮಿಗಳು ಜಾಗ ನೀಡಿದ್ದರಿಂದ ಅದಕ್ಕೆ ಅವರ ಹೆಸರನ್ನು ಇಡುವುದಾಗಿ ತಿಳಿಸಲಾಗಿದೆ. ಈ ವಿಚಾರದಲ್ಲಿ ಮಾನ್ಯ ಸಚಿವರು ಪ್ರತ್ಯೇಕವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸುವರ್ಣ ಕರ್ನಾಟಕದ ಸವಿ ನೆನಪಿಗಾಗಿ, ಇಡೀ ಕಲ್ಯಾಣ ಕರ್ನಾಟಕ ಭಾಗಕ್ಕೆ ಕೇವಲ ಒಂದು ಸುವರ್ಣ ರಂಗಮಂದಿರವನ್ನು ನನ್ನ ಕ್ಷೇತ್ರದಲ್ಲಿ ನೀಡಿದ್ದಾರೆ. ಈ ವಿಚಾರದಲ್ಲಿ ದಯಮಾಡಿ ಮಾನ್ಯ ಸಚಿವರು ಸಂಬಂಧಪಟ್ಟವರೊಂದಿಗೆ ಮಾತನಾಡಿ ಅಲ್ಲಿನ ಎಲ್ಲಾ ಸಮಸ್ಯೆಗಳನ್ನು ಸರಿಪಡಿಸಬೇಕೆಂದು ಕೋರುತ್ತೇನೆ. ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿರುವ ಅನುದಾನಗಳ ಬಗ್ಗೆ ಮಾನ್ಯ ಸಚಿವರು ಕೋರಿರುವ ಮಾಹಿತಿಯನ್ನು ನೀಡಿದ್ದಾರೆ. ಅನುದಾನಿತ ಶಾಲೆಗೆ ನಾವು 10 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ಆ ಪೈಕಿ ಐದು ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ಇನ್ನುಳಿದ ಬಾಕಿ ಹಣವನ್ನು ಆದಷ್ಟು ಶೀಘ್ರದಲ್ಲಿ ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ. ಗಡಿ ನಾಡು ಪ್ರದೇಶವಾದ ರಾಯಚೂರು ಜಿಲ್ಲೆಯಲ್ಲಿ ಈ ಬಗ್ಗೆ ನಾವು ಇತ್ತೀಚೆಗೆ ಮಾತನಾಡಿದ್ದೇವೆ. ಮಂಡ್ಯ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮಾತ್ರವೇ 1958 ನೇ ಇಸವಿಯಲ್ಲಿ ಕರ್ನಾಟಕ ಸಂಘಗಳನ್ನು ಮಾಡಲಾಗಿದೆ. ಗಡಿನಾಡು ಪ್ರದೇಶವಾದ ರಾಯಚೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟಂತೆ ಸಚಿವರು ಅಧಿಕಾರಿಗಳಿಗೆ ನೇರವಾಗಿ ಮಾತನಾಡಿ, ಬಾಕಿಯಿರುವ ಕೆಲಸಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸಚಿವರಿಗೆ ವಿನಂತಿ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯನ್ನು ಸ್ವಲ್ಪ ಸರಿಪಡಿಸಿ ಉತ್ತರ ಒದಗಿಸಲಾಗಿದೆ. ಮೊದಲು ನಮ್ಮ ಇಲಾಖೆಯಿಂದ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ ಎಂಬ ಮಾಹಿತಿಯು ಬಂತು. ಏಕೆಂದರೆ ಮಾನ್ಯ ಸದಸ್ಯರು ಸುವರ್ಣ ಗ್ರಾಮ ಯೋಜನೆಯಡಿ ಎಂದು ಪ್ರಶ್ನೆಯನ್ನು ಕೇಳಿದ್ದರು. ಈ ಬಗ್ಗೆ ನಾವು ಪರಿಶೀಲನೆ ಮಾಡಿ ಸ್ಥಳೀಯವಾಗಿ ವರದಿಯನ್ನು ಪಡೆದುಕೊಂಡ ನಂತರ ಮಾನ್ಯ ಸದಸ್ಯರಿಗೆ ಉತ್ತರವನ್ನು ನೀಡಲಾಗಿದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಕೇವಲ ಉತ್ತರ ನೀಡುವುದು ಮಾತ್ರವೇ ಸರ್ಕಾರದ ಕೆಲಸವಲ್ಲ. ಇರುವ ಸಮಸ್ಯೆಗೆ ಪರಿಹಾರವನ್ನು ರೂಪಿಸುವುದೂ ಸಹ ಸರ್ಕಾರದ ಕೆಲಸವಾಗಿದೆ. ಮಾನ್ಯ ಸದಸ್ಯರು ಸಾರ್ವಜನಿಕರಿಗೆ ಮುಕ್ತವಾಗಿ ಉಪಯೋಗಿಸುವುದಕ್ಕೆ ಅವಶ್ಯಕವಾಗಿರುವುದನ್ನು ಪೂರ್ಣಗೊಳಿಸಿ ಜನರು ಸಂತೋಷದಿಂದ ರಂಗ ಮಂದಿರವನ್ನು ಉಪಯೋಗಿಸಿಕೊಳ್ಳುವ ರೀತಿಯಲ್ಲಿ ಮಾಡುತ್ತೇವೆ. ಬಾಕಿಯಿರುವ ಅನುದಾನ ಬಿಡುಗಡೆ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನವು ವೆಚ್ಚವಾಗಿದೆಯೆ ಎನ್ನುವುದರ ಬಗ್ಗೆ ನಾವು Third Party Inspection ಮಾಡಿಸಿ ಅವರಿಂದ ವರದಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಮಂಜೂರಾಗಿರುವ ಅನುದಾನವು ವೆಚ್ಚವಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿಯನ್ನು ಪಡೆದುಕೊಂಡ ನಂತರ ಅಂದರೆ, ಅನುದಾನವನ್ನು ಯೋಜನೆಯ ರೀತ್ಯ ಬಳಕೆ ಮಾಡಿದ್ದಾರೆ ಎಂದರೆ ಇನ್ನುಳಿದ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, utilisation certificate ನ್ನು ಪಡೆದುಕೊಳ್ಳಬೇಕು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, utilisation certificate ಜೊತೆಗೆ ಜಿಲ್ಲಾಧಿಕಾರಿಗಳು monitor ಮಾಡುವಂತಾಗಲಿ.

**(ಮುಂದು)**

(620)/20.03.2020/11.10/ಎಲ್‌ಎಂ(ಹೆಚ್‌ವಿ)–ಬಿಎನ್‌ಎಸ್

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಹಣವನ್ನು ಬಳಸಿಕೊಂಡಿರುವ ಬಗ್ಗೆ utilization certification ಅನ್ನು ಅವರಿಂದ ಪಡೆದುಕೊಳ್ಳಬೇಕಾಗುತ್ತದೆ.

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಇರುವಂತಹ ಮಾಹಿತಿಯ ಪ್ರಕಾರ ಹೇಳಬೇಕಾದರೆ, 2006ರಲ್ಲಿ ಮಂಜೂರಾಗಿದೆ. 2007ನೇ ಇಸವಿಯಲ್ಲಿ 38 ಲಕ್ಷ ರೂಪಾಯಿಗಳ ಆಡಳಿತಾತ್ಮಕ ಅನುಮೋದನೆ ದೊರೆತಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸುಮಾರು 38 ಲಕ್ಷ ರೂಪಾಯಿಗಳ ಕಾಮಗಾರಿಯನ್ನು ಮಾಡುವುದಕ್ಕೆ ಸುಮಾರು 13–14 ವರ್ಷಗಳನ್ನು ತೆಗೆದುಕೊಂಡರೆ ಆ ಕಾಮಗಾರಿಯನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳಬೇಕಾಗಿದೆ. ಎಲ್ಲಾ ಸರ್ಕಾರಿ ಯೋಜನೆಗಳಿಗೂ ಒಂದು ಕಾಲಮಿತಿಯನ್ನು ಹಾಕಿಕೊಂಡು ಆ ಕಾಲಮಿತಿಯೊಳಗೆ ಅದನ್ನು ಪೂರ್ಣಗೊಳಿಸಬೇಕು.

**ಶ್ರೀ ಎನ್.ಎಸ್.ಬೋಸ್‌ರಾಜ್:–** ಸನ್ಮಾನ್ಯ ಸಭಾಪತಿಯವರೇ, ಜನೋಪಯೋಗಕ್ಕಾಗಿ ಮಾಡಿರುವಂತಹ ಕಟ್ಟಡವಾಗಿದೆ. ತಡವಾಗಿರುವುದನ್ನು ಮುಂದುವರಿಸದೇ ಒಂದು ಕಾಲಮಿತಿಯೊಳಗೆ ಇದನ್ನು ಪೂರೈಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಬಾಕಿ ಇರುವ ಕೆಲಸಗಳ ಬಗ್ಗೆ ಈಗಾಗಲೇ ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಬಾಕಿ ಕೆಲಸಗಳಿಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಬೇಕು ಆ ಹಣವನ್ನು ಈ ವರ್ಷದ ಅನುದಾನದಲ್ಲಿಯೇ ಬಿಡುಗಡೆ ಮಾಡಿ, ಶೀಘ್ರದಲ್ಲಿಯೇ ಅದನ್ನು ಲೋಕಾರ್ಪಣೆಗೆ ಒಪ್ಪಿಸುವಂತಹ ಕೆಲಸವನ್ನು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1567**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಪ್ರವಾಸೋದ್ಯಮ ಸಚಿವರು ಯುವಕರು ಮತ್ತು ಬಹಳ ಚಟುವಟಿಕೆಯಿಂದ ಇರುವವರು ಎನ್ನುವುದರಲ್ಲಿ ಎರಡನೆಯ ಮಾತಿಲ್ಲ. ಈ ಸಕಾರದಲ್ಲಿ ಪವರ್‌ಫುಲ್ ಮಂತ್ರಿ ಎಂದು ಬಹಳ ಜನ ಹೇಳುತ್ತಾರೆ. ಪ್ರಪಂಚದ ಭೂಪಟದಲ್ಲಿ ಚಿಕ್ಕಮಗಳೂರಿಗೆ ವೈಯಕ್ತಿಕವಾಗಿ ಭೇಟಿ ನೀಡಿದ ಮೇಲೆ ನಂಬರ್ ಒನ್ ಪ್ರವಾಸಿ ತಾಣವೆಂದು ಪ್ರವಾಸಿಗರು ಬಿರುದು ಕೊಟ್ಟಿದ್ದಾರೆ. ಇದು ಯಾವುದೇ ಸರ್ಕಾರ ಕೊಟ್ಟಿರುವ ಬಿರುದಲ್ಲ. ನಮ್ಮ ಪ್ರವಾಸೋದ್ಯಮ ಸಚಿವರು ಅಂತಹ ಒಂದು ಜಾಗದಿಂದ ಬಂದವರಾಗಿದ್ದಾರೆ. ಈ ಇಲಾಖೆಗೆ ಈ ಬಾರಿಯ ಆಯವ್ಯಯದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಪ್ರವಾಸೋದ್ಯಮಕ್ಕೆ ಅತೀ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡುವುದರಲ್ಲಿ ಮಾನ್ಯ ಸಚಿವರಿಗೆ ಉತ್ಸಾಹವಿದೆ. ಇಲಾಖೆಗೆ ಹಣ ಬಿಡುಗಡೆ ಮಾಡಿಸಿಕೊಳ್ಳುವುದರಲ್ಲಿ ಅವರು ಎಡವಿದ್ದಾರೆನ್ನುವುದು ನನ್ನ ಭಾವನೆಯಾಗಿದೆ. ಮೊನ್ನೆ ಮಾನ್ಯ ಪ್ರವಾಸೋದ್ಯಮ ಸಚಿವರು ಒಂದು ಪತ್ರಿಕಾ ಹೇಳಿಕೆಯಲ್ಲಿ, 'ಸುಮಾರು 20 ಪ್ರವಾಸಿ ತಾಣಗಳನ್ನು ವಿಶ್ವದರ್ಜೆಗೇರಿಸುತ್ತೇವೆ' ಎಂದು ಹೇಳಿದ್ದಾರೆ. ಪ್ರವಾಸಿ ತಾಣವನ್ನು ವಿಶ್ವದರ್ಜೆಗೇರಿಸಬೇಕಾದರೆ, ಒಂದೊಂದು ಪ್ರವಾಸಿ ತಾಣಕ್ಕೆ ಎಷ್ಟು ಖರ್ಚು ಮಾಡಬೇಕೆನ್ನುವುದನ್ನು ಮಾನ್ಯ ಸಚಿವರು ಅವಲೋಕಿಸಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ, ಪ್ರವಾಸೋದ್ಯಮ ಇಲಾಖೆಗೆ 'ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎನ್ನುವ ರೀತಿಯಲ್ಲಿ ಅನುದಾನವನ್ನು ಕೊಟ್ಟಿದ್ದಾರೆ. ಇದು ಅತ್ಯಂತ ವಿಷಾದಕರವಾದ ಸಂಗತಿಯಾಗಿದೆ. ಪ್ರವಾಸೋದ್ಯಮಕ್ಕೆ ಅಗತ್ಯವಾಗಿರುವ ಎಲ್ಲ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುವ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹೆಚ್ಚು ಒತ್ತುಕೊಟ್ಟು ಕಾರ್ಯನಿರ್ವಹಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಅಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಆದರೆ, ಯಾತ್ರಿ ನಿವಾಸಗಳನ್ನು ಮಾಡುವುದರ ಬಗ್ಗೆ ನಮ್ಮ ತಕರಾರು ಇಲ್ಲ. ಆದರೆ, ಯಾತ್ರಿ ನಿವಾಸಗಳನ್ನು ಮಾಡಿದ ಕೂಡಲೇ ಪ್ರವಾಸೋದ್ಯಮ ಮುಂದುವರೆಯುತ್ತದೆನ್ನುವ ವಿಚಾರಕ್ಕೆ ನಾನು ವ್ಯತಿರಿಕ್ತವಾಗಿದ್ದೇನೆ. ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬೇಕಾದರೆ, ಮುಖ್ಯವಾಗಿ ನಮಗೆ ರಸ್ತೆಗಳ ಅವಶ್ಯಕತೆಯಿದೆ. ರಸ್ತೆಗಳ ನಿರ್ಮಾಣದ ವಿಚಾರದಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಚಿಕ್ಕಮಗಳೂರಿನಲ್ಲಿ ಪ್ರವಾಸೋದ್ಯಮಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿದರೆ ಪ್ರವಾಸಿಗರು ಆಕರ್ಷಿತರಾಗಿ ನಮ್ಮ ಜಿಲ್ಲೆಗೆ ಬರುತ್ತಾರೆನ್ನುವುದು ನನ್ನ ಅಭಿಮತವಾಗಿದೆ.

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಸರಳವಾಗಿತ್ತು. ಅವರಿಗೆ ತೃಪ್ತಿಯಾಗುವ ರೀತಿಯಲ್ಲಿ ಲಿಖಿತ ರೂಪದ ಉತ್ತರವನ್ನು ಕೊಟ್ಟಿದ್ದೇನೆ. ಪೂರಕವಾಗಿ ಅವರು ಕೇಳಿರುವ ಪ್ರಶ್ನೆಗಳಿಗೆ ಈಗ ಮೌಖಿಕವಾಗಿ ಉತ್ತರವನ್ನು ನೀಡುತ್ತಿದೇನೆ. ಚಿಕ್ಕಮಗಳೂರು ಪ್ರಾಕೃತಿಕವಾಗಿ ಸಂಪದ್ಭರಿತವಾಗಿರುವ ಜಿಲ್ಲೆ,

ಹೊರಗಡೆಯಿಂದ ಬಂದ ಪ್ರವಾಸಿಗರು ಈ ಪ್ರಕೃತಿ ಸೌಂದರ್ಯವನ್ನು ನೋಡಿ ಮಂತ್ರಮುಗ್ಧರಾಗುತ್ತಾರೆ ಮತ್ತು ಹಾಡಿ ಹೊಗಳುತ್ತಾರೆ. ನಾವು ಅದೇ ಊರಿನವರಾಗಿರುವುದರಿಂದ ನಾವು ಪ್ರತಿದಿನ ಆ ಪ್ರಕೃತಿಯನ್ನು ನೋಡುತ್ತಿರುವುದರಿಂದ ನಮಗೆ ಏನೂ ಅನಿಸುವುದಿಲ್ಲ. ಆದರೆ, ಹೊರಗಡೆಯಿಂದ ಬಂದ ಪ್ರವಾಸಿಗರು ಚಿಕ್ಕಮಗಳೂರು ಜಿಲ್ಲೆಯನ್ನು 'ಸ್ವರ್ಗ' ಎಂದು ಹೇಳುತ್ತಾರೆ. ಆ ಮಾತು ನಿಜ. ಏಕೆಂದರೆ, ಇತ್ತೀಚೆಗೆ ನಡೆದ ಒಂದು ಸರ್ವೇಯಲ್ಲಿ 'ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಬೆಟ್ಟದ ತಪ್ಪಲು ಸ್ವಿಜರ್‌ಲ್ಯಾಂಡ್‌ಗಿಂತ ಹೆಚ್ಚು ಸುಂದರವಾಗಿದೆ' ಎನ್ನುವ ರಿಪೋರ್ಟ್ ಕೊಟ್ಟಿದ್ದಾರೆ. ಅತೀ ಹೆಚ್ಚು ಆಮ್ಲಜನಕ ವಲಯವನ್ನು ಇದು ಒಳಗೊಂಡಿದೆ. ಅವರು ಒಂದು ದಿನ ಬಂದು ಹೋಗುವುದಕ್ಕೆ ಸ್ವರ್ಗ ಎಂದು ಹೇಳಬೇಕಾದರೆ, ನಾನು ಶ್ರೀಯುತರುಗಳಾದ ಎಸ್.ಎಲ್.ಭೋಜೇಗೌಡರು, ಶ್ರೀ ಎಸ್.ಎಲ್.ಧರ್ಮೇಗೌಡರು ಸ್ವರ್ಗದಲ್ಲಿಯೇ ಇದ್ದೇವೆಂದು ಸಂತೋಷಪಡುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ನನ್ನ ಪ್ರಕಾರ ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕಾದರೆ, ಮೊದಲು ಸಂಪರ್ಕ ರಸ್ತೆಗಳು ಅಭಿವೃದ್ಧಿಯಾಗಬೇಕು. ಎರಡನೆಯದು ಅತಿಥಿ ಸತ್ಕಾರ ಮೂರನೆಯದು ಚಟುವಟಿಕೆಗಳು. ದೇವರು ದಯಪಾಲಿಸಿರುವಂತಹ ಪ್ರಕೃತಿ ಸಂಪತ್ತು ನಮ್ಮ ಬಳಿ ಇದೆ. ನಮ್ಮ ಹಿರಿಯರು ಕೊಟ್ಟು ಹೋಗಿರುವ ಬೇಲೂರು, ಹಳೇಬೀಡು, ಅಮೃತಾಪುರ ಮತ್ತು ಬೆಳವಾಡಿಯಂತಹ ಶ್ರೀಮಂತ ಸಂಪದ್ಭರಿತವಾಗಿರುವ ಕಲಾ ದೇಗುಲಗಳು ಇವೆ. ರಸ್ತೆ ಸಂಪರ್ಕದ ಬಗ್ಗೆ ಹೇಳಬೇಕಾದರೆ, ಒಂದು ಕಡೆ ಕಡೂರಿನಿಂದ ಚತುಷ್ಪಥ ರಾಷ್ಟ್ರೀಯ ರಸ್ತೆ ನಿರ್ಮಾಣವಾಗುತ್ತಿದೆ. ಹಾಸನದಿಂದ ಚಿಕ್ಕಮಗಳೂರಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. Air strip ಅಭಿವೃದ್ಧಿಪಡಿಸಿ 'ಉಡಾನ್' ಯೋಜನೆಯಲ್ಲಿ ಅದನ್ನು ಸೇರಿಸುವಂತಹ ಪ್ರಯತ್ನ ನಡೆದಿದೆ. ಅದಕ್ಕೆ ಜಾಗದ ಅವಶ್ಯಕತೆಯಿದೆ. ಭೂಸ್ವಾಧೀನಪಡಿಸಿಕೊಂಡರೆ, ಸಂಪರ್ಕ ಅಭಿವೃದ್ಧಿಯಾಗುತ್ತದೆ. ರೈಲ್ವೆ ಮಾರ್ಗ ಈಗಾಗಲೇ ಅಭಿವೃದ್ಧಿ ಹೊಂದಿದೆ. ಅತಿಥಿ ಸತ್ಕಾರಕ್ಕೆ ನಾವು ಪ್ರವಾಸೋದ್ಯಮ ಇಲಾಖೆಯಿಂದಲೂ ಉತ್ತೇಜನವನ್ನು ನೀಡುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಪ್ರವಾಸೋದ್ಯಮ ಇಲಾಖೆಗೆ ಹಣವನ್ನೇ ಬಿಡುಗಡೆ ಮಾಡಿಲ್ಲ. ನಾನು ಅದರ ಬಗ್ಗೆ ಪ್ರಶ್ನೆ ಮಾಡುತ್ತಿದೇನೆ.

**ಶ್ರೀ ಸಿ.ಟಿ.ರವಿಃ–** ಸನ್ಮಾನ್ಯ ಸಭಪತಿಯವರೇ, ಕಳೆದ ವರ್ಷ ಸುಮಾರು 497 ಕೋಟಿ ರೂಪಾಯಿಗಳನ್ನು 1919–20ನೇ ಸಾಲಿಗೆ ಒದಗಿಸಲಾಗಿತ್ತು. ಈ ಸಾಲಿನಲ್ಲಿ 500 ಕೋಟಿ ರೂಪಾಯಿಗಳನ್ನು ಒದಗಿಸುವುದರ ಜೊತೆಗೆ 24 ಹೊಸ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಆದ್ದರಿಂದ ಈಗ ಪ್ರಗತಿಯಲ್ಲಿರುವ ಕಾರ್ಯಗಳಿಗೆ ಮತ್ತು ನಮ್ಮ ವಿವೇಚನೆ ಆಧಾರದ ಮೇಲೆ ಕೈಗೆತ್ತಿಕೊಳ್ಳುವ ಯೋಜನೆಗಳಿಗೆ ಹಣದ ಕೊರತೆ ಇರುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ವಿಧಾನಸಭೆಯಲ್ಲಿ ಕೇಳಲಾಗಿದ್ದ ಪ್ರಶ್ನೆಯೊಂದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ನಾನು ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಸರಿಪಡಿಸಿಕೊಡುವ ಭರವಸೆಯನ್ನು ವಿಧಾನಸಭೆಯಲ್ಲಿಯೇ ನೀಡಿದ್ದಾರೆ. ಡಾ॥ಸುಧಾಮೂರ್ತಿಯವರ ನೇತೃತ್ವದಲ್ಲಿ ಒಂದು ಟಾಸ್ಕ್‌ಫೋರ್ಸ್ ಅನ್ನು ರಚನೆ ಮಾಡಲಾಗಿದೆ. ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ಕೊಡುವ ನಿಟ್ಟಿನಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸಿಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದೈವಭಕ್ತರು. ಹೊರನಾಡು, ಶೃಂಗೇರಿ ದೇವಸ್ಥಾನಗಳಿಗೆ ಹೋಗುವಾಗ ಬಳಸುವ ರಸ್ತೆಗಳು ಯಾವ ರೀತಿಯಿವೆ ಎನ್ನುವುದನ್ನು ಅವರು ಕೂಡ ಗಮನಿಸಿರಬಹುದು. ಹೊರನಾಡಿಗೆ ಹೋಗಲು ಬಳಸುವ ರಸ್ತೆ ಬಹಳ ಹದಗೆಟ್ಟಿದೆ. ಎಲ್ಲರೂ ಹೊರನಾಡು ಮತ್ತು ಶೃಂಗೇರಿ ದೇವಸ್ಥಾನಗಳಿಗೆ ಬಂದು ಹೋಗುತ್ತಿರುತ್ತಾರೆ. ಆದ್ದರಿಂದ ಈ ರಸ್ತೆಯನ್ನು ದುರಸ್ತಿಗೊಳಿಸಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಸಿ.ಟಿ.ರವಿಃ–** ಸನ್ಮಾನ್ಯ ಸಭಾಪತಿಯವರೇ, ಲೋಕೋಪಯೋಗಿ ಇಲಾಖೆಯವರು ರಾಷ್ಟ್ರೀಯ ಹೆದ್ದಾರಿಗಳನ್ನು ನೋಡಿಕೊಳ್ಳುತ್ತಾರೆ. ಅವರಿಗೆ ಪ್ರಸ್ತಾವನೆ ಕಳುಹಿಸಿಕೊಡುವುದಷ್ಟೇ ನಮ್ಮ ಕೆಲಸವಾಗಿದೆ. ಅದಕ್ಕೆ ಸಂಬಂಧಪಟ್ಟ ಮೂಲಸೌಕರ್ಯಗಳ ಅಭಿವೃದ್ಧಿಗೆ ನಮ್ಮ ಸೀಮಿತ ಅನುದಾನದಲ್ಲಿ ಏನು ಮಾಡುವುದಕ್ಕೆ ಸಾಧ್ಯ ಅದನ್ನು ನಾವು ಮಾಡುತ್ತೇವೆ. ಅವರ ಕಳಕಳಿಯನ್ನು ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ಖಾಸಗಿಯಾಗಿ ಮತ್ತು ವಿಧಾನಸಭೆಯ ಪ್ರಶ್ನೋತ್ತರ ಸಂದರ್ಭದಲ್ಲಿಯೂ ಅವರ ಗಮನಕ್ಕೆ ತಂದಿದ್ದೇನೆ. ಹೆಚ್ಚಿನ ಅನುದಾನವನ್ನು ತೆಗೆದುಕೊಂಡು ಅಭಿವೃದ್ಧಿಪಡಿಸುವ ಕೆಲಸವನ್ನು ಮಾಡಲಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

(ಮುಂದುವರಿದಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(621)20–03–2020(11–20)ಬಿಎಸ್‌ಡಿ–ಬಿಎನ್‌ಎಸ್**

**ಪ್ರಶ್ನೆ ಸಂಖ್ಯೆ: 1647**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದು, ನಾನು ರಾಜ್ಯದಲ್ಲಿ ಅನೇಕ ಗ್ರಾಮೀಣ ಸಂಪರ್ಕ ರಸ್ತೆಗಳು ತೀರ ಹದಗೆಟ್ಟಿದ್ದು, ಅವುಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸರ್ಕಾರವು ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ? ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ' ರೂಪಿಸಿದೆ ' ಎಂದು ಉತ್ತರವನ್ನು ನೀಡಲಾಗಿದೆ. ಜೊತೆಗೆ ಹಾಗಿದ್ದಲ್ಲಿ ಆ ಯೋಜನೆಗಳು ಯಾವುವು ಮತ್ತು ಎಷ್ಟು ಕಿ.ಮೀ. ರಸ್ತೆಗಳನ್ನು ಸರಿಪಡಿಸಲು ಅಂದಾಜು ಮಾಡಲಾಗಿದೆ? ಜಿಲ್ಲಾವಾರು ಮಾಹಿತಿಗಳಲ್ಲಿ ನಾನು ಮಂಡ್ಯ ಜಿಲ್ಲೆಯ ಬಗ್ಗೆ ಮಾಹಿತಿಯನ್ನು ಕೇಳಿದ್ದೇನೆ. ಉತ್ತರದಲ್ಲಿ ಗ್ರಾಮೀಣ ರಸ್ತೆ ನಿರ್ಮಾಣ ಮತ್ತು ನಿರ್ವಹಣೆಗೆ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಹೇಳಿದ್ದಾರೆ. ಅದರಲ್ಲಿ NABARD, 3054-CMGSY, 3054-Lumpsum, Task Force, PMGSY, ಎಂದು ಹೇಳಿದ್ದಾರೆ. ಈಗಾಗಲೇ ಮಾನ್ಯ ಪ್ರವಾಸೋದ್ಯಮ ಸಚಿವರು ಒಂದು ವಿಷಯವನ್ನು ಉಲ್ಲೇಖ ಮಾಡುತ್ತಿದ್ದರು. ಅದೇನೆಂದರೆ ಪ್ರವಾಸೋದ್ಯಮ ಆಕರ್ಷಣೀಯವಾಗಿ ಇರಲು ರಸ್ತೆಗಳ connectivity ಬಹಳ ಮುಖ್ಯ ಎಂದು ಹೇಳುತ್ತಿದ್ದರು. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳು ಕಳೆದರೂ ನಮ್ಮ ಗ್ರಾಮೀಣ ರಸ್ತೆಗಳ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಈಗ National Highway, State Highway, K-SHIP ನಿಂದ ಸುಮಾರು ರಸ್ತೆಗಳು Public-Private Partnership ನಲ್ಲಿ ನಡೆಯುತ್ತಿವೆ. ಇದು ಬಹಳ ಸಂತೋಷ. ಆದರೆ ಇವತ್ತು ನಿಜವಾಗಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಯಾಗಬೇಕಾಗಿದೆ. ಸರ್ಕಾರ ಇದರ ಬಗ್ಗೆ ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಿ, ರಸ್ತೆಗಳನ್ನು develop ಮಾಡಿದರೆ, ನಿಜವಾಗಿಯೂ ಗ್ರಾಮೀಣ ಜನರು ಸಂತೋಷ ಪಡುತ್ತಾರೆ. ಜೊತೆಗೆ Task Force ಸಹ ಇದ್ದು, ಒಂದೊಂದು Constituency ಗೆ ರಸ್ತೆಗಳ ರಿಪೇರಿಗಾಗಿ ರೂ.1 ಕೋಟಿಯನ್ನು ಕೊಡುತ್ತಾರೆ. ನಿಜವಾಗಿ ರೂ.1 ಕೋಟಿ ಕೊಡದಿದ್ದರೆ ಒಳ್ಳೆಯದು. ಗುತ್ತಿಗೆದಾರರು ಮತ್ತು ಅಧಿಕಾರಿಗಳು ರಸ್ತೆಯಲ್ಲಿ ಏನೋ ಒಂದು patch ಮಾಡುತ್ತಾರೋ, ಇಲ್ಲವೋ, ಗೊತ್ತಿಲ್ಲ. ಅದಕ್ಕೆ GPS ಇಲ್ಲ, ಏನೂ ಇಲ್ಲ. ಇದು ಬಹಳ ದೊಡ್ಡ ಲೋಪ ಮತ್ತು ದುರಂತ. ಜೊತೆಗೆ ನಮ್ಮ ಮಂಡ್ಯ ಜಿಲ್ಲೆಗೆ ಹಿಂದಿನ ಸರ್ಕಾರವು ಅನೇಕ ಕೋಟಿ ರೂಪಾಯಿಗಳನ್ನು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಬಿಡುಗಡೆ ಮಾಡಿತ್ತು. ನಂತರ ಬಂದ ಸರ್ಕಾರ ಆ ಎಲ್ಲಾ ಅನುದಾನವನ್ನು ತಡೆಹಿಡಿದಿದೆ. ನಾನು ಮಾನ್ಯ ಸಭಾಪತಿಯವರ ಮೂಲಕ ವಿನಂತಿ ಮಾಡುವುದೇನೆಂದರೆ, ಹಿಂದಿನ ಸರ್ಕಾರವು ಬಿಡುಗಡೆ ಮಾಡಿದ ಎಲ್ಲಾ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಈ ವರ್ಷದಲ್ಲಿ ಇಡೀ ದೇಶದಲ್ಲಿಯೇ ನಮ್ಮ ರಾಜ್ಯಕ್ಕೆ ಮೊದಲನೆಯ ಬಾರಿಗೆ ಮೊದಲನೆಯ ಸ್ಥಾನದಲ್ಲಿ sanction ಮಾಡಿ ಕಳುಹಿಸಿಕೊಟ್ಟಿದ್ದಾರೆ. ಇದರ PMGSY (Pradhan Mantri Gram Sadak Yojana) ನ ಬ್ಯಾಚ್ 1ರಲ್ಲಿ 3226 ಕಿಲೋಮೀಟರ್ ರಸ್ತೆಗಳಿಗೆ ರೂ.2,169 ಕೋಟಿಗಳು ಬಂದಿರುವುದು ನಿಜಕ್ಕೂ ಸಂತೋಷ. ಒಟ್ಟು PMGSY ರೊಳಗೆ 5,612 ಕಿಲೋಮೀಟರ್ ರಸ್ತೆಗಳು ಮೊದಲ ಮತ್ತು ಎರಡನೆ Stage ನೊಳಗೆ ಬರುತ್ತಿವೆ. ಹಾಗಾಗಿ 5 ವರ್ಷಗಳಲ್ಲಿ 5,212 ಕಿಲೋಮೀಟರ್‌ಗಳನ್ನು ಪೂರ್ಣ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳುತ್ತಿರುವಂತೆ ರಾಜ್ಯದಲ್ಲಿ ರಸ್ತೆಗಳು ಹಾಳಾಗಿರುವುದು ನಿಜ. ಅದಕ್ಕಾಗಿ ಕೇಂದ್ರ ಸರ್ಕಾರವು ನಾವು ಕೇಳಿದ ತಕ್ಷಣ ಮತ್ತು ಮೊದಲನೆಯ ಬಾರಿ ಅಧಿಕಾರಿಗಳು ಬಹಳ ಶ್ರಮದಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಅದರ ಬೆನ್ನತ್ತಿ ದೇಶದಲ್ಲಿಯೇ ಮೊದಲನೆಯ ಅವಕಾಶವನ್ನು ಕರ್ನಾಟಕ ರಾಜ್ಯಕ್ಕೆ ಮಾಡಿಕೊಟ್ಟಿದ್ದಾರೆ. ಇದೊಂದು ಸಂತೋಷದ ವಿಚಾರ. ಹೀಗಾಗಿ 5 ವರ್ಷಗಳಲ್ಲಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವವರಿದ್ದೇವೆ. ಜೊತೆಗೆ 2020–21ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣ ಸುಮಾರ್ಗ ಯೋಜನೆಯನ್ನು ಅನುಷ್ಠಾನ ಮಾಡಬೇಕೆಂದು ಘೋಷಣೆ ಮಾಡಿದ್ದು, ಈ ಯೋಜನೆಯಲ್ಲಿ 20 ಸಾವಿರ ಕಿಲೋಮೀಟರ್‌ಗಳು 5 ವರ್ಷಗಳಲ್ಲಿ ಆಗುತ್ತದೆ. ಹೀಗೆ ರಾಜ್ಯದ ಗ್ರಾಮೀಣ ಪ್ರದೇಶದ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕಾದ ಕರ್ತವ್ಯ ರಾಜ್ಯ ಸರ್ಕಾರದ್ದಾಗಿದೆ. ಈ ದಿಕ್ಕಿನಲ್ಲಿ ಮೊದಲನೆಯ ಆದ್ಯತೆ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಮಂಡ್ಯ ಬಗ್ಗೆ ಪ್ರಸ್ತಾಪ ಮಾಡಿದ್ದು, ಖಂಡಿತ ಅದಕ್ಕೆ ಅಗತ್ಯವಿರುವ ಅನುಕೂಲಗಳನ್ನು ಮಾಡುತ್ತೇವೆ. ಕೊನೆಯದಾಗಿ ಕೆಲವು ರಸ್ತೆಗಳನ್ನು ನಿಲ್ಲಿಸಿರುವ ಬಗ್ಗೆ ಪ್ರಸ್ತಾಪ ಮಾಡಿದ್ದು, ಈ ಸರ್ಕಾರ ಬಂದ ಮೇಲೆ ನಿಲ್ಲಿಸಿರುವುದು ನಿಜ. ನಾನು ಇಲ್ಲ ಎಂದು ಹೇಳುವುದಿಲ್ಲ. ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ವಿಧಾನ ಸಭೆಯಲ್ಲಿ ಹಣ ಬಿಡುಗಡೆ ಮಾಡದೇ ನಿಲ್ಲಿಸಿರುವ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಸಭಾಪತಿಯವರು:–** ಶ್ರೀ ಎಸ್. ರವಿಯವರು ಸದನದಲ್ಲಿ ಇಲ್ಲ, ನಂತರ ಶ್ರೀ ಪ್ರಸನ್ನ ಕುಮಾರ್‌ರವರು ಪ್ರಶ್ನೆ ಕೇಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 1570**
**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಆರ್. ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಪಂಚಾಯಿತಿಗಳಲ್ಲಿ ಕರೆಯುವ ಗ್ರಾಮ ಸಭೆಗಳಿಗೆ ಅಧಿಕಾರಿಗಳು ಬರುವುದಿಲ್ಲ, ಅಧಿಕಾರಿಗಳು ಬರದಿದ್ದರೆ ಗ್ರಾಮ ಸಭೆಗಳಿಗೆ ಮಹತ್ವವೇ ಇರುವುದಿಲ್ಲ ಎನ್ನುವ ಉದ್ದೇಶದಿಂದ ಪ್ರಶ್ನೆಯನ್ನು ಕೇಳಿದ್ದೆನು. PDO (Panchayat Development Officer) ಗಳು Deputy Tahsildar ನ ಗ್ರೇಡ್‌ನವರಾಗಿದ್ದು, ಅವರು ಕರೆದಂತಹ ಸಭೆಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಭೆಗೆ ಬರುವುದಿಲ್ಲ, ಗ್ರಾಮ ಸಭೆಗಳನ್ನು ಕರೆದು, ಗ್ರಾಮ ಸಭೆಗಳಲ್ಲಿ ಆಡಳಿತ ಪಾರದರ್ಶಕವಾಗಿ ಗೊತ್ತಾಗಬೇಕು, ಯಾವ ಕೆಲಸ–ಕಾಮಗಾರಿಗಳು ನಡೆಯುತ್ತವೆ, ಫಲಾನುಭವಿಗಳ ಆಯ್ಕೆ ಸೇರಿದಂತೆ ಎಲ್ಲಾ ವಿಚಾರಗಳು ಪಾರದರ್ಶಕವಾಗಿ ಇರಬೇಕೆಂದು ಸರ್ಕಾರದ ಉದ್ದೇಶ ಏನಿದೆ, ಈ ಸಭೆಗಳಿಗೆ ಅಧಿಕಾರಿಗಳು ಬರದೇ ಗ್ರಾಮ ಸಭೆಗಳು ಇವತ್ತು ಅರ್ಥ ಕಳೆದುಕೊಂಡು ಬಿಟ್ಟಿವೆ. ಆದ್ದರಿಂದ PDO ಗಳ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರದ ಮುಂದೆ ಇದೆಯೇ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಬರದಿದ್ದರೆ, ಅಂತಹ ಅಧಿಕಾರಿಗಳಿಗೆ ನೋಟೀಸ್ ಕೊಟ್ಟು ಮುಂದಿನ ಸಭೆಗೆ ಕರೆಸುವ ಬಗ್ಗೆ ತಿಳಿಸಿದ್ದಾರೆ. ಆದರೆ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಯಾರೂ ನೋಡುವುದಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ 271 ಗ್ರಾಮ ಪಂಚಾಯಿತಿಗಳಿದ್ದು, ಅಲ್ಲಿ 56 PDO ಗಳಿಲ್ಲ. PDO ಗಳಿಲ್ಲದೇ ಕಾರ್ಯದರ್ಶಿ ಹುದ್ದೆಗೆ ಬೇರೆ ಬೇರೆಯವನ್ನು ಹಾಕಿದ್ದಾರೆ. ಆದ್ದರಿಂದ PDO ಗಳನ್ನು ಭರ್ತಿ ಮಾಡಬೇಕು ಮತ್ತು PDO ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಮಾಹಿತಿ ನೀಡಲು ಕೋರುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದು, PDO ಗಳನ್ನು ಮೇಲ್ದರ್ಜೆಗೇರಿಸುವ ವಿಚಾರ ಪರಿಶೀಲನೆ ಮಾಡುತ್ತೇನೆ. ಅದಕ್ಕಿಂತ ಬಹಳ ಮುಖ್ಯವಾಗಿ ಗ್ರಾಮ ಪಂಚಾಯಿತಿ ಸಭೆಗಳು ನಡೆಯಬೇಕು. ಆ ಗ್ರಾಮ ಸಭೆಗಳಿಗೆ ಅಧಿಕಾರಿಗಳು ಬಂದು ಅವರ ಕರ್ತವ್ಯಗಳನ್ನು ನಿಭಾಯಿಸಬೇಕು. ಏಕೆಂದರೆ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಗ್ರಾಮ ಸಭೆಗಳಿಗೆ ಪ್ರತಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಣ ಸಮಿತಿಯ ಅಧ್ಯಕ್ಷರು, ಪ್ರಾಥಮಿಕ ಆರೋಗ್ಯ ವೈದ್ಯಾಧಿಕಾರಿಗಳು, ಪಶುಚಿಕಿತ್ಸಾ ಮತ್ತು ಪಶುವೈದ್ಯ ಸಹಾಯಕರು, ವಾಣಿಜ್ಯ ಬ್ಯಾಂಕ್ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಮ್ಯಾನೇಜರ್ ಮತ್ತು ಪ್ರತಿನಿಧಿಗಳು, ಸಹಾಯಕ ಕೃಷಿ ಅಧಿಕಾರಿಗಳು, ಗ್ರಾಮಾಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರು, ಅಂಗನವಾಡಿ ಕಾರ್ಯಕರ್ತರು, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಭಾಗದ ಸಂಬಂಧಪಟ್ಟ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಗಳು, ವಿದ್ಯುತ್ ಇಲಾಖೆಯ ಅಧಿಕಾರಿಗಳು ಸೇರಿದಂತೆ ಎಲ್ಲರೂ ಬರಬೇಕು. ಇವರುಗಳು ಬಂದು ಗ್ರಾಮ ಸಭೆಗಳಲ್ಲಿ ಭಾಗವಹಿಸಿ, ಗ್ರಾಮೀಣ ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಪರಿಹಾರ ಮಾಡಬೇಕು. ಆ ದಿಕ್ಕಿನಲ್ಲಿ ಅನೇಕ ಕಡೆ ಚೆನ್ನಾಗಿ ಆಗುತ್ತಿದೆ. ಯಾವ ಭಾಗದಲ್ಲಿ ಆಗಿಲ್ಲ, ಆ ಭಾಗದಲ್ಲಿ ಗ್ರಾಮ ಸಭೆಗಳಿಗೆ ಸಕಾರಣವಿಲ್ಲದೇ ಗೈರುಹಾಜರಾಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಗ್ರಾಮ ಸಭೆಗೆ ಶಿಫಾರಸ್ಸು ಮಾಡುವ ಅಧಿಕಾರ ಕೊಟ್ಟಿದೆ. ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಗ್ರಾಮ ಸಭೆಯು ಇಂತಿಂತಹ ಅಧಿಕಾರಿಗಳು ಬಂದಿಲ್ಲ ಎಂದರೆ ಶಿಸ್ತು ಕ್ರಮ ಜರುಗಿಸಲು ಅವರಿಗೆ ಅಧಿಕಾರ ಕೊಟ್ಟಿದೆ. ಅವರು ನಮಗೆ ಕಳುಹಿಸಿಕೊಡುತ್ತಾರೆ. ಹೀಗಾಗಿ ಗ್ರಾಮ ಸಭೆಯ ಮಹತ್ವ ನಮಗೆ ಅರ್ಥವಾಗಿದೆ. ಮಾನ್ಯ ಸದಸ್ಯರು PDO ಗಳ ಬಗ್ಗೆ ಪ್ರಶ್ನೆ ಕೇಳಿದ್ದು, ಅದನ್ನು ಖಂಡಿತ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 1637**
**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ, ಬಹುಶಃ ಇದು ನನಗೂ ಕೂಡ ತಿಳಿದಿತ್ತು.

(ಮುಂದು)

(622)/20.03.2020/11.30/ಹೆಚ್‌ವಿ–ಜಿಆರ್
**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ಮುಂದುವರೆದುದು):–**
2018ನೇ ಇಸವಿಯಲ್ಲಿ ನನ್ನ ಜಿಲ್ಲೆಯಲ್ಲಿ ಅತಿವೃಷ್ಟಿ ಆದಂತಹ ಸಂದರ್ಭದಲ್ಲಿ ಕೆ.ನಿಡುಗಣೆ, ಮಕ್ಕಂದೂರು ಮತ್ತು ಗಾಳಿಬೀಡು ಇವು ನಾನು ವಾಸವಾಗಿರುವ ಮತ್ತು ನನ್ನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುತ್ತವೆ. ಅಲ್ಲಿ ಪ್ರತಿದಿನ ಓಡಾಡುವವಳು ಕೂಡ ನಾನೇ. ಕಳೆದ 2018–19ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಹಣದ ವಿವರವನ್ನು ಅನುಬಂಧ–1ರಲ್ಲಿ ಮಾನ್ಯ ಸಚಿವರು ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಟೆಂಡರ್ ಕರೆಯದೇ 4ಜಿ ಕೆಲಸ ಆಗಿತ್ತು. ಆ ಕೆಲಸ ಯಾವ ರೀತಿಯಲ್ಲಿ ನಡೆದಿದೆಯೆನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ಮಕ್ಕಂದೂರು ಹಾಗೂ ಹಟ್ಟಿಹೊಳೆಯಿಂದ ಮುಕ್ಕೋಡ್ಲುಗೆ ಹೋಗುವುದು ಮತ್ತು ಮಕ್ಕಂದೂರಿನಿಂದ ಮುಕ್ಕೋಡ್ಲುಗೆ ಹೋಗುವ ಈ ಎರಡು ರಸ್ತೆಗಳ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ. ಮಾನ್ಯ ಸಚಿವರು ಕೊಡಗಿಗೆ ಬಂದಿದ್ದಾಗ, ಅವರ ಗಮನಕ್ಕೂ ತಂದಿದ್ದೆ. ಇವತ್ತಿನವರೆವಿಗೂ ನಾವು ಸುರಕ್ಷಿತವಾಗಿ ಓಡಾಡುವ ಪರಿಸ್ಥಿತಿ ಇಲ್ಲ. ಒಂದು ರಸ್ತೆಗೆ ಸಂಬಂಧಪಟ್ಟಂತೆ ಈಗಾಗಲೇ 18 ಕೋಟಿ ರೂಪಾಯಿಗಳನ್ನು, ಮತ್ತೊಂದು ರಸ್ತೆಗೆ ಸಂಬಂಧಪಟ್ಟಂತೆ ಸುಮಾರು 2–3 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಿದೆ. ಯಾವುದಾದರೊಂದು ರಸ್ತೆಯನ್ನು ನಮಗೆ ಶಾಶ್ವತವಾಗಿ ಮಾಡಿಕೊಡುವ ವ್ಯವಸ್ಥೆ ಆಗಬೇಕಾಗಿದೆ. ಮುಂದಿನ ಎರಡು ಮೂರು ತಿಂಗಳುಗಳಲ್ಲಿ ಕೊಡಗಿನಲ್ಲಿ ಮಳೆಗಾಲ ಪ್ರಾರಂಭವಾಗುತ್ತದೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಆ ಕೆಲಸವಾಗಬೇಕಾಗಿದೆ. ನಾನು ಉಲ್ಲೇಖ ಮಾಡಿರುವ ಮೂರು ಗ್ರಾಮಪಂಚಾಯಿತಿಗಳಲ್ಲಿ 4ಜಿ ಅಡಿಯಲ್ಲಿ ಆಗಿರುವ ಕೆಲಸಗಳ ಬಗ್ಗೆ ನನಗೆ ಸಂಪೂರ್ಣವಾದ ಅನುಮಾನಗಳಿವೆ. ಸರ್ಕಾರದಿಂದ ಬೇಕಾದಷ್ಟು ಹಣ ಬಿಡುಗಡೆಯಾಗಿದ್ದರೂ ಸಹ ಅಲ್ಲಿ ಕೆಲಸವಾಗಿಲ್ಲ ಎನ್ನುವ ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಸಹೋದರಿ ಶ್ರೀಮತಿ ವೀಣಾ ಅಚ್ಚಯ್ಯನವರು ಕೇಳಿರುವ ಪ್ರಶ್ನೆಗಳಿಗೆ ಲಿಖಿತರೂಪದಲ್ಲಿ ವಿವರವಾಗಿರುವ ಉತ್ತರಗಳನ್ನು ನೀಡಿದ್ದೇನೆ. ವಿಶೇಷವಾಗಿ ಅವರು ಮೂರು ಗ್ರಾಮ ಪಂಚಾಯಿತಿ ರಸ್ತೆಗಳ ವ್ಯವಸ್ಥೆ ಅಷ್ಟು ಚೆನ್ನಾಗಿ ಆಗಿಲ್ಲವೆನ್ನುವ ಅಂಶವನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಖುದ್ದು ಅಲ್ಲಿಗೆ ಹೋಗಿ ಸ್ಥಳೀಯ ಶಾಸಕರ ಜೊತೆಗೆ ಶ್ರೀಮತಿ ವೀಣಾ ಅಚ್ಚಯ್ಯನವರನ್ನು ಕರೆದುಕೊಂಡು ಆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಭಾಗದ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಆ ಸಮಸ್ಯೆಯನ್ನು ನಾನು ಅಲ್ಲಿಗೆ ಹೋಗಿ ಕುಳಿತು ಪರಿಹಾರ ಮಾಡಿಕೊಡುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1618**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಗದಗ್–ಧಾರವಾಡ–ಹಾವೇರಿ ಮತ್ತು ಕಾರವಾರ ಜಿಲ್ಲೆಗಳಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳಿವೆ, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಸಂಖ್ಯೆ ಮತ್ತು 'ಡಿ' ದರ್ಜೆ ನೌಕರರ ಬಗ್ಗೆ ಮಾಹಿತಿ ಕೇಳಿದ್ದೆ. ಮಾನ್ಯ ಸಚಿವರು ಸವಿಸ್ತಾರವಾಗಿರುವ ಉತ್ತರವನ್ನು ನೀಡಿದ್ದಾರೆ. ಆ ಅಂಕಿಸಂಖ್ಯೆಗಳನ್ನು ಪರಿಶೀಲನೆ ಮಾಡಿ ನೋಡಿದಾಗ, ಮೇಲ್ನೋಟಕ್ಕೆ ಕಂಡು ಬರುವ ಅಂಶವೆಂದರೆ, ಶೇಕಡಾ 60ರಷ್ಟು ವೈದ್ಯರ ಕೊರತೆ ಇದೆ. ಶೇಕಡಾ 70ರಷ್ಟು 'ಡಿ' ದರ್ಜೆ ನೌಕರರ ಕೊರತೆಯಿರುವುದು ಕಂಡು ಬರುತ್ತಿದೆ. ಗದಗ್ ಜಿಲ್ಲೆಯಲ್ಲಿ ಒಟ್ಟು 87 ಪಶು ಚಿಕಿತ್ಸಾಲಯಗಳಿವೆ. ಅಲ್ಲಿ ಕೆಲಸ ಮಾಡುತ್ತಿರುವವರು ಕೇವಲ 23 ಜನ ಮಾತ್ರ. ಅಂದರೆ, ಒಬ್ಬ ವೈದ್ಯ ಕನಿಷ್ಠ 3–4 ಊರನ್ನು ನೋಡಿಕೊಳ್ಳಬೇಕಾಗಿದೆ. ಹಾವೇರಿ ಜಿಲ್ಲೆಯಲ್ಲಿ 146 ಪಶು ಚಿಕಿತ್ಸಾಲಯಗಳಿವೆ. ಕೇವಲ 48 ಜನ ವೈದ್ಯರಿದ್ದಾರೆ. ಒಬ್ಬ ವೈದ್ಯ 3 ಆಸ್ಪತ್ರೆಗಳನ್ನು ನೋಡಿಕೊಳ್ಳಬೇಕಾಗಿದೆ. ಧಾರವಾಡ ಜಿಲ್ಲೆಯಲ್ಲಿ 112 ಪಶು ವೈದ್ಯಕೀಯ ಆಸ್ಪತ್ರೆಗಳಿವೆ. ಅಲ್ಲಿ 55 ಜನ ವೈದ್ಯರು ಕೆಲಸ ಮಾಡುತ್ತಿದ್ದಾರೆ. ಕನಿಷ್ಠ 2–3 ಆಸ್ಪತ್ರೆಗಳಿಗೆ ಒಬ್ಬ ಪಶು ವೈದ್ಯನಿದ್ದಾನೆ. ಉತ್ತರ ಕರ್ನಾಟಕದಲ್ಲಿ 144 ಪಶು ಚಿಕಿತ್ಸಾಲಯಗಳಿವೆ. ಅಲ್ಲಿ 37 ಜನ ವೈದ್ಯರು ಮಾತ್ರ ಇದ್ದಾರೆ. ಅಂದರೆ ಕನಿಷ್ಠ 2–3 ಆಸ್ಪತ್ರೆಗಳಿಗೆ ಒಬ್ಬ ವೈದ್ಯರು ಇದ್ದಾರೆ. 'ಡಿ' ದರ್ಜೆ ನೌಕರರ ಸ್ಥಿತಿ ಇನ್ನೂ ಕೆಟ್ಟದಾಗಿದೆ. ಮೂಕ ಪ್ರಾಣಿಗಳಾದ ಪಶುಗಳು ಕಾಯಿಲೆಗಳಿಗೆ ಒಳಗಾದರೆ ಸೂಕ್ತ ಚಿಕಿತ್ಸೆ ಇಲ್ಲದೆ ಕೃಷಿಕರಿಗೆ ಬಹಳ ತೊಂದರೆಯಾಗುತ್ತಿದೆ. ವೈದ್ಯರ ಕೊರತೆ ಏನಿದೆ, ಇದನ್ನು ಯಾವ ರೀತಿಯಲ್ಲಿ ಸರಿಪಡಿಸಲಾಗುತ್ತದೆ? ಈ ಸಾಲಿನಲ್ಲಿ ಪಶು ವೈದ್ಯರನ್ನು ನೇಮಕಾತಿ ಮಾಡಿಕೊಳ್ಳುವ ಚಿಂತನೆಯೇನಾದರೂ ಸರ್ಕಾರದ ಮುಂದಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಪ್ರಭು ಬಿ. ಚವ್ಹಾಣ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ್‌ರವರು ಬಹಳ ಪ್ರಮುಖವಾಗಿರುವ ಪ್ರಶ್ನೆಯನ್ನು ಕೇಳಿದ್ದಾರೆ. ರಾಜ್ಯದಲ್ಲಿ ಪಶು ವೈದ್ಯರ ಸಂಖ್ಯೆ ಶೇಕಡಾ 45ಕ್ಕಿಂತ ಕಡಿಮೆಯಿದೆ. ನಾನು ಮಂತ್ರಿಯಾದ ಮೇಲೆ ಪಶು ವೈದ್ಯರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ 638 ಜನ ಪಶು ವೈದ್ಯರನ್ನು ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿಕೊಡಲಾಗಿದೆ. ಮುಂದಿನ ದಿನಗಳಲ್ಲಿ 638 ಪಶು ವೈದ್ಯರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಾಗುತ್ತದೆ. 'ಡಿ' ದರ್ಜೆ ನೌಕರರ ಸಂಖ್ಯೆ ಬಹಳ ಕಡಿಮೆಯಿದೆ. ನಮ್ಮೆಲ್ಲರಿಗೂ ಗೋಮಾತೆ ನಮ್ಮ ತಾಯಿಯಂತೆ. ಆದ್ದರಿಂದ ನಾನು ಮಂತ್ರಿಯಾದ ಮೇಲೆ ಪಶುವೈದ್ಯರ ನೇಮಕಾತಿ ಪ್ರಯತ್ನ ಪ್ರಾರಂಭವಾಗಿದೆ. ಈ ಬಗ್ಗೆ ಮಾನ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ, ಮಾನ್ಯ ಸದಸ್ಯರ ಬೇಡಿಕೆಗಳನ್ನು ಈಡೇರಿಸುವಂತಹ ಪ್ರಯತ್ನ ಮಾಡಲಾಗುತ್ತದೆ.

**ತಡೆಹಿಡಿಯಲಾದ ಚುಕ್ಕೆ ಗುರುತಿನ**
**ಪ್ರಶ್ನೆ ಸಂಖ್ಯೆ: 1027**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ ಸಿಂಗ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 'ಬೀದರ್ ಜಿಲ್ಲೆಯಲ್ಲಿ ಕ್ರೀಡಾಂಗಣ ಪ್ರಾರಂಭವಾಗಿದೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಅಲ್ಲಿ ಇನ್ನೂ ಕೆಲಸಗಳು ನಡೆಯುತ್ತಿವೆ, ಟ್ರಾಕ್ ಇನ್ನೂ ಸಿದ್ಧಗೊಂಡಿಲ್ಲ. ಗ್ಯಾಲರಿ ಮತ್ತು ಒಳಗಿನ ಸುಣ್ಣಬಣ್ಣ ಕೆಲಸವನ್ನು ಮಾತ್ರ ಮಾಡಲಾಗಿದೆ. ಸುಮಾರು ಮೂರೂವರೆ–ನಾಲ್ಕು ಕೋಟಿ ರೂಪಾಯಿಗಳ ಕಾಮಗಾರಿಯಾಗಿದೆ. ಶೇಕಡಾ 90ರಷ್ಟು ಹಣವನ್ನು ಗುತ್ತಿಗೆದಾರರಿಗೆ ನೀಡಿದ್ದಾರೆ. ಆದರೆ, ಕೆಲಸ ಇನ್ನೂ ಪೂರ್ಣಗೊಂಡಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟನೆಯನ್ನು ನೀಡಬೇಕಾಗಿದೆ.

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಬೀದರ್‌ನಲ್ಲಿ ಜಿಲ್ಲಾ ಕ್ರೀಡಾಂಗಣವನ್ನು ನಿರ್ಮಾಣ ಮಾಡುವುದಕ್ಕಾಗಿ ಸುಮಾರು 5 ಕೋಟಿ ರೂಪಾಯಿಗಳ ಅಂದಾಜು ಪಟ್ಟಿಯನ್ನು ಸಿದ್ಧಗೊಳಿಸಲಾಗಿತ್ತು. ಅದರಲ್ಲಿ 4 ಕೋಟಿ 66 ಲಕ್ಷದ 61 ಸಾವಿರ ರೂಪಾಯಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕಾರ್ಯಾದೇಶ ನೀಡಿರುವ ಮೊತ್ತ 3 ಕೋಟಿ 87 ಲಕ್ಷ ರೂಪಾಯಿಗಳಾಗಿವೆ. ದಿನಾಂಕ:15.12.2017ರಂದು ಸದರಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಇದುವರೆವಿಗೂ 3 ಕೋಟಿ 73 ಲಕ್ಷ 29 ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಲಾಗಿದ್ದು, ನನಗಿರುವ ಮಾಹಿತಿಯ ಪ್ರಕಾರ ಕಾಮಗಾರಿ ಅಂತಿಮ ಹಂತದಲ್ಲಿದೆ. ಉಳಿದ ಹಣವನ್ನು ಬಿಡುಗಡೆ ಮಾಡಿ ಕಾಮಗಾರಿಯನ್ನು ಪೂರ್ಣಗೊಳಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ವಿಜಯ ಸಿಂಗ್:–** ಸನ್ಮಾನ್ಯ ಸಭಾಪತಿಯವರೇ, ಅಲ್ಲಿ ಕೆಲಸ ಸರಿಯಾಗಿ ಆಗುತ್ತಿಲ್ಲವೆಂದು ಹೇಳಿ ಒಂದು ತನಿಖೆ ನಡೆಸಲು ತಿಳಿಸಲಾಗಿತ್ತು. ಆ ತನಿಖೆಯ ಬಗ್ಗೆ ಮಾನ್ಯ ಸಚಿವರಿಗೆ ಮಾಹಿತಿ ಇದೆಯೇ?

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಯಾವುದೇ ತನಿಖೆ ನಡೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ರೀತಿ ಯಾವುದಾದರೊಂದು ತನಿಖೆ ನಡೆದಿದ್ದರೆ, ಆ ತನಿಖೆಯಲ್ಲಿ ಯಾರಾದರು ತಪ್ಪಿತಸ್ಥರೆಂದು ಕಂಡು ಬಂದಿದ್ದರೆ, ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ. ಕಾಮಗಾರಿ ಕಳಪೆಯಾಗಿದ್ದರೂ ಕ್ರಮ ತೆಗೆದುಕೊಳ್ಳುತ್ತೇವೆ, ಮೆಜರ್‌ಮೆಂಟ್‌ನಲ್ಲಿ ವ್ಯತ್ಯಾಸವಾಗಿದ್ದರೂ ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೆ ಸ್ಥಳೀಯ ಅಧಿಕಾರಿಗಳು ಮತ್ತು

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಗುತ್ತಿಗೆದಾರನೇ ಹೊಣೆಗಾರರಾಗಿರುತ್ತಾರೆ. ಗುಣಮಟ್ಟವನ್ನು ನೋಡಿಕೊಳ್ಳಬೇಕಾಗಿರುವುದು ಸ್ಥಳೀಯ ಅಧಿಕಾರಿಗಳ ಹೊಣೆಯಾಗಿರುತ್ತದೆ. ಇದರ ಬಗ್ಗೆ ದೂರು ಬಂದರೆ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ವಿಜಯ ಸಿಂಗ್:–** ಸನ್ಮಾನ್ಯ ಸಭಾಪತಿಯವರೇ, ಬಾಲ್ಕಿಯಲ್ಲಿ ಸ್ಟೇಡಿಯಂ ಕಟ್ಟುವುದಕ್ಕೆ ಭೂಮಿ ದೊರೆತಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಮಾನ್ಯ ಸಚಿವರು ಈ ನಿಟ್ಟಿನಲ್ಲಿ ಆಸಕ್ತಿ ವಹಿಸಿದರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದಾಗಿದೆ. ಅದೇ ರೀತಿಯಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ಚಿಟಗುಪ್ಪ, ಕಮಲನಗರ ಮತ್ತು ಹುಲ್ಸೂರು ತಾಲ್ಲೂಕುಗಳಲ್ಲಿಯೂ ಕ್ರೀಡಾಂಗಣವನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಹುಮ್ನಾಬಾದ್, ಬಸವಕಲ್ಯಾಣ ಮತ್ತು ಔರಾದ್‌ಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಬಾಲ್ಕಿ, ಕಮಲ್‌ನಗರ, ಚಿಟಗುಪ್ಪ ಮತ್ತು ಹುಲ್ಸೂರುಗಳಲ್ಲಿ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಸೂಕ್ತ ನಿವೇಶನವನ್ನು ಗುರುತಿಸಿ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಅವರು ಜಾಗ ಗುರುತಿಸಿ ನಮ್ಮ ಇಲಾಖೆಗೆ ಹಸ್ತಾಂತರಿಸಿದರೆ, ಹಂತಹಂತವಾಗಿ ಅನುದಾನದ ಲಭ್ಯತೆಯ ಆಧಾರದ ಮೇಲೆ ಅಭಿವೃದ್ಧಿಪಡಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ವಿಜಯ ಸಿಂಗ್:–** ಆದಷ್ಟು ಬೇಗ ಆ ಕೆಲಸವಾಗಬೇಕೆನ್ನುವುದು ನನ್ನ ವಿನಂತಿ.

**ಶ್ರೀ ಸಿ.ಟಿ.ರವಿ:–** ಜಾಗ ದೊರೆತ ಕೂಡಲೇ ಕಾಮಗಾರಿಯನ್ನು ಕೈಗೊಳ್ಳುತ್ತೇವೆ.

(ಮುಂದುವರಿದಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(623) 20.3.2020 11.40 ಪಿಕೆ:ಜಿಆರ್

**ತಡೆಹಿಡಿಯಲಾದ ಚುಕ್ಕೆ ಗುರುತಿನ**
**ಪ್ರಶ್ನೆ ಸಂಖ್ಯೆ: 903**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನನಗೊಂದು ಸಮಾಧಾನವಾಯಿತು. ಏಕೆಂದರೆ, ಮೊನ್ನೆ ನಾನು, ಮಾತು ಬಾರದ, ನೋವು ನುಡಿಯದ ಮೂಕ ಪ್ರಾಣಿಗಳ ರಕ್ಷಣೆ ನಮ್ಮೆಲ್ಲರ ಹೊಣೆ ಆಗಬೇಕು. ಆದರೆ ಸಂಬಂಧಪಟ್ಟ ಸಚಿವರೇ ಬರಲಿಲ್ಲವಲ್ಲ? ಇಂತಹ ಪ್ರಾಣಿಗಳ ಕಷ್ಟ ಕೇಳುವವರು ಯಾರು ಎಂಬ ಮಾತನ್ನು ಹೇಳಿದ್ದೆ. ಈಗ ಸಚಿವರು ಉತ್ತರ ಕೊಟ್ಟಿದ್ದಾರೆ. ರಾಜ್ಯದಲ್ಲಿನ ಸುಮಾರು 200 ಪಶು ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳೇ ಇಲ್ಲ. ಇರುವ ಆಸ್ಪತ್ರೆಗಳಲ್ಲಿ ಅರ್ಧಕರ್ಧ ವೈದ್ಯರೇ ಇಲ್ಲ. ತಮ್ಮ ಉತ್ತರದಲ್ಲಿ, ಸಂಚಾರಿ ಪಶು ಚಿಕಿತ್ಸಾಲಯ 176, ಪ್ರಾಥಮಿಕ ಚಿಕಿತ್ಸಾಲಯ 1206, ಪಶು ಚಿಕಿತ್ಸಾಲಯ 2135, ಪಶು ಆಸ್ಪತ್ರಗಳು 664 ಮತ್ತು ಪಾಲಿಕ್ಲಿನಿಕ್ 26 ಅಂದರೆ ಒಟ್ಟು 4212 ಆಸ್ಪತ್ರೆಗಳಿದ್ದು ಇಲ್ಲಿ ಕನಿಷ್ಠ 2000 ವೈದ್ಯರುಗಳಿಲ್ಲ. ಒಬ್ಬೊಬ್ಬ ವೈದ್ಯ 3–4 ಆಸ್ಪತ್ರೆಗಳನ್ನು ನೋಡಿಕೊಳ್ಳಬೇಕಾಗಿದೆ. ಖಾಲಿ ಇರುವ ಪಶುವೈದ್ಯರ ಹುದ್ದೆಯನ್ನು ಎಷ್ಟು ಅವಧಿಯ ಒಳಗೆ ನೇಮಕ ಮಾಡಿಕೊಳ್ಳುತ್ತೀರಿ? ಎಷ್ಟು ಅವಧಿ ಒಳಗೆ ಈ ಎಲ್ಲಾ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡದ ವ್ಯವಸ್ಥೆ ಮಾಡಿಸುತ್ತೀರಿ?

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸ್ವಂತ ಕಟ್ಟಡ ಕಟ್ಟಿಸುವುದರ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ನಾನು ಮಂತ್ರಿಯಾದ ಮೇಲೆ 307 ಕಟ್ಟಡ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದೇವೆ. ರಾಜ್ಯದ ಎಲ್ಲಾ ಭಾಗಗಳಲ್ಲಿ, ಎಲ್ಲಿ ಕಟ್ಟಡ ಕಾಮಗಾರಿ ಅರ್ಧಕ್ಕೆ ನಿಂತಿದೆಯೋ ಅಥವಾ ಸ್ವಂತ ಕಟ್ಟಡ ಕಟ್ಟಲು ಜಾಗ ಸಿಕ್ಕಿಲ್ಲವೋ ಅಂತಹ ಕಡೆ ಸ್ವಂತ ಕಟ್ಟಡ ಕಟ್ಟುವ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ತಮ್ಮ ಉತ್ತರದಲ್ಲಿ, ವಿವಿಧ ಹಂತದಲ್ಲಿರುವ ಕಾಮಗಾರಿಗಳ ಸಂಖ್ಯೆ 171, ಮತ್ತು ಪ್ರಾರಂಭಿಸದೆ ಇರುವ ಕಾಮಗಾರಿಗಳ ಸಂಖ್ಯೆ : 209 ಎಂದು ತಿಳಿಸಿದ್ದೀರಿ. ಪಶುವೈದ್ಯರನ್ನು ಯಾವಾಗ ನೇಮಕ ಮಾಡುತ್ತೀರಿ?

**ಶ್ರೀ ಪ್ರಭು ಬಿ.ಚವ್ಹಾಣ್:–** ನಮ್ಮ ರಾಜ್ಯದಲ್ಲಿ ಒಟ್ಟು 8000 ಪಶುವೈದ್ಯರ ಹುದ್ದೆಗಳಿವೆ. ಈಗ 638 ಹುದ್ದೆಗಳನ್ನು ತುಂಬುವ ಕೆಲಸ ಮಾಡುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಮಂಡ್ಯದಲ್ಲಿ V.C.Farm ಅನ್ನು Dr.Leslie C.Coleman ಪ್ರಾರಂಭ ಮಾಡಿದರು. ಅಲ್ಲದೇ ಅಲ್ಲಿ agriculture and horticulture ವ್ಯಾಸಂಗಕ್ಕೆ ಅವಕಾಶ ಇದೆ. ಅದೇರೀತಿ ಒಂದು Veterinary Science College ನ್ನು ಮಂಜೂರು ಮಾಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಸಭಾಪತಿಯವರು:–** ಉಪಪ್ರಶ್ನೆ ಬಿಟ್ಟು ಬೇರೆ ವಿಷಯವನ್ನು ಕೇಳಿದರೆ ತಕ್ಷಣಕ್ಕೆ ಅದರ ಬಗ್ಗೆ ಉತ್ತರ ಕೊಡುವುದಕ್ಕಾಗುವುದಿಲ್ಲ.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆ–ಸೂಚನೆಗಳ ಕಡೆ ಗಮನ ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಹಿರಿಯ ಸಚಿವರು.

**ಶ್ರೀ ಹೆಚ್.ಎಂ.ರೇವಣ್ಣ:–** ಅವರು ಸಚಿವರಲ್ಲ, ಶಾಸಕರು.

**ಶ್ರೀ ಸಿ.ಟಿ.ರವಿ:–** ನನ್ನ ಬಾಯಿಯಿಂದ ಆಕಸ್ಮಿಕವಾಗಿ "ಸಚಿವರು" ಎಂದು ಬಂತು. ಅವರು ಮಂತ್ರಿಯಾಗುವ ಯೋಗವಿದ್ದು, ಮೇಲಿನಿಂದ ಅಸ್ತು ಎಂದು ಹೇಳಿದ್ದರೆ ಅದನ್ನು ತಪ್ಪಿಸುವುದಕ್ಕಂತೂ ಆಗುವುದಿಲ್ಲ. ನಾನು ಹೇಳಿದ್ದಕ್ಕೆ ಮೇಲಿನವನು "ಅಸ್ತು" ಎಂದು ಹೇಳದೇ ಹೋದರೆ ಅವರು ಶಾಸಕರಾಗಿಯೇ ಇರುತ್ತಾರೆ.

(ಸದನದಲ್ಲಿ ನಗು) (ಗೊಂದಲ)

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಚಿವರು ಕಲ್ಯಾಣ ಕರ್ನಾಟಕ ಭಾಗದ ಏಕೈಕ ಸಚಿವರಾಗಿದ್ದಾರೆ. ಸುಮ್ಮನೆ ಎಲ್ಲರೂ ಮಾತನಾಡಿ ಮಾನ್ಯ ಸಚಿವರನ್ನು ಗಾಬರಿಗೊಳಿಸಬೇಡಿ. ಅವರು ಉತ್ತರ ಕೊಡುವುದನ್ನು ಮರೆತುಬಿಡುತ್ತಾರೆ. ಮಾನ್ಯ ಸಚಿವರು ಎಲ್ಲವನ್ನೂ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾವು ಮನುಷ್ಯನ ಆರೋಗ್ಯದ ಬಗ್ಗೆ ಸಾಕಷ್ಟು ಚರ್ಚೆ ಮಾಡುತ್ತೇವೆ. ಪಶು ಸಂಪತ್ತು ಕೂಡ ಅಷ್ಟೇ ಮುಖ್ಯ. ಅವು ಮೂಕ ಪ್ರಾಣಿಗಳು. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ತೆಲಂಗಾಣ ರಾಜ್ಯದಲ್ಲಿ ಪಶುಗಳಿಗೋಸ್ಕರ 100 ಎಂಬ ಹೆಸರಿನಲ್ಲಿ ಆಂಬ್ಯುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡಿದರು. ನಾನು ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂದರ್ಭದಲ್ಲಿ ನನಗೆ ಗೊತ್ತಾಯಿತು. ನಮಗೆ ಹೇಗೆ 108 ಎಂಬ ಹೆಸರಿನಲ್ಲಿ ಆಂಬ್ಯುಲೆನ್ಸ್ ಇದೆಯೋ ಅದೇರೀತಿ ಪಶು–ಪ್ರಾಣಿಗಳಿಗೆ, ಕುರಿ ಮತ್ತಿತರ ಜಾನುವಾರುಗಳಿಗೋಸ್ಕರ 100 ಎಂಬ ಹೆಸರಿನಲ್ಲಿ ಆಂಬ್ಯುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡಿದರು. ಈ ನಿಟ್ಟಿನಲ್ಲಿ ನಮ್ಮ ರಾಜ್ಯ ಕೂಡ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ನಾನೂ ಕೂಡ ಪ್ರಯತ್ನ ಮಾಡುತ್ತಿದ್ದೇನೆ. ಇಷ್ಟರಲ್ಲೇ ಅದರ ಫಲಿತಾಂಶ ಬರುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ತಡೆಹಿಡಿಯಲಾದ ಚುಕ್ಕೆ ಗುರುತಿನ**
**ಪ್ರಶ್ನೆ ಸಂಖ್ಯೆ : 1029**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಎಂ.ಕೆ.ಪ್ರಾಣೇಶ್ ಪರವಾಗಿ):–** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯತಿಗಳ ಗ್ರಂಥ ಪಾಲಕರು ಕಳೆದ 30 ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರುತ್ತಾರೆ. ರಾಜ್ಯದಲ್ಲಿ ಸುಮಾರು 6773 ಗ್ರಾಮ ಪಂಚಾಯತಿಗಳ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳಿದ್ದಾರೆ. ಅವರು 30 ವರ್ಷಗಳಿಂದ ಕನಿಷ್ಠ ವೇತನ ಪಡೆದುಕೊಳ್ಳಲು ಆಸೆ ಪಡುತ್ತಿದ್ದಾರೆ, ಒದ್ದಾಡುತ್ತಿದ್ದಾರೆ. ಆದರೆ ಅವರ ಯಾವುದೇ ಪ್ರಯತ್ನ ಕೈಗೂಡುತ್ತಿಲ್ಲ. ಮೊದಲು ಇವರಿಗೆ 8 ಗಂಟೆ ಗಳ ಕಾಲ ಕೆಲಸ ಇತ್ತು. ಮತ್ತೆ ಅದನ್ನು 4 ಗಂಟೆ ಕಾಲಕ್ಕೆ ಇಳಿಸಿದರು. ಕಳೆದ 30 ವರ್ಷಗಳಿಂದ 8 ಗಂಟೆಗಳ ಕಾಲ ಮಾಡುತ್ತಿದ್ದುದನ್ನು ದಿಢೀರ್ ಎಂದು 4 ಗಂಟೆಗಳ ಅವಧಿಗೆ ಸಮಯವನ್ನು ಇಳಿಕೆ ಮಾಡಿ ಕನಿಷ್ಠ ವೇತನ ಬರದೇ ಇರುವ ಹಾಗೆ ಮಾಡಿದ್ದಾರೆ. ಕಾರ್ಮಿಕ ನೀತಿಯ ಪ್ರಕಾರ ರೂ. 13200/– ಕೊಡಬೇಕೆಂದು 2015ರಲ್ಲಿ ಕಾರ್ಮಿಕ ಇಲಾಖೆ ನಿರ್ದೇಶನ ಕೊಟ್ಟಿರುತ್ತದೆ. ಈ ಕಡತ ಸುಮಾರು 8 ತಿಂಗಳಿಂದ ಹಾಗೆಯೇ ಕೊಳೆಯುತ್ತಿದೆ. ಈ ಹಿಂದೆ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗ ಅವರ ಧರ್ಮಪತ್ನಿಯಾಗಿದ್ದ ಶ್ರೀಮತಿ ಅನಿತಾ ಕುಮಾರಸ್ವಾಮಿಯವರೂ ಸಹ ಇವರಿಗೆ ಕನಿಷ್ಠ ವೇತನವನ್ನು ಜಾರಿ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಪ್ರಯತ್ನ ಮಾಡಿದರು. ಆಗ ಹಲವಾರು ನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಇದಕ್ಕೆ ಕೈಜೋಡಿಸಿದ್ದರು. ಆದರೆ ಇದುವರೆಗೂ ಯಾವುದೇ ರೀತಿಯ ಅನುಕೂಲ ಮಾಡಿಕೊಟ್ಟಿಲ್ಲ. ಇವತ್ತಿನ ವಿಜಯ ಕರ್ನಾಟಕ ಪತ್ರಿಕೆಯಲ್ಲಿ, ಅವರು ಕೇವಲ ಕನಸು ಕಾಣುವಂತಾಗಿದೆ ಎಂಬ ಮಾತಿದೆ. ಪ್ರತಿ ಸಂದರ್ಭದಲ್ಲೂ ಆರ್ಥಿಕ ಇಲಾಖೆಯವರು ಸಪೋರ್ಟ್ ಮಾಡುತ್ತಿಲ್ಲ. ಮಾನ್ಯ ಈಶ್ವರಪ್ಪನವರಂಥವರು ಮಂತ್ರಿಗಳಾಗಿರುವುದರಿಂದ ಅವರಾದರೂ ಈ ಸಿಬ್ಬಂದಿಗೆ ಕರುಣೆ ತೋರಿಸಬೇಕು. ಈಗ ಇವರಿಗೆ ಕೇವಲ ರೂ. 5000 ಕೊಡುವಂತಹ ಪರಿಸ್ಥಿತಿ ಇದೆ. ಇವರ ಬಗ್ಗೆ ದಯವಿಟ್ಟು ಕರುಣೆ ತೋರಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಗ್ರಾಮ ಪಂಚಾಯತಿಗಳಲ್ಲಿರುವ ಗ್ರಂಥಾಲಯಗಳಲ್ಲಿ ಕನಿಷ್ಠ ವೇತನ ಕೊಡುವುದು ಮತ್ತು ಮೇಲ್ವಿಚಾರಕರ ನೇಮಕ ಮಾಡುವಂಥದ್ದು ಶ್ರೀ ಅಂಬೇಡ್ಕರ್‌ರವರ ಮತ್ತು ಮಹಾತ್ಮ ಗಾಂಧೀಜಿಯವರ ತತ್ವಗಳ ಆಧಾರದ ಮೇಲೆ ಸರ್ಕಾರಗಳು ಜಾರಿಗೆ ತಂದಿವೆ. ಇಷ್ಟು ವರ್ಷಗಳಾದರೂ ಕೂಡ ನಾವು ಆ ಗ್ರಂಥಾಲಯಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿರುವಂತಹ ಮುಗ್ಧ ಜನತೆಯನ್ನು ಎಚ್ಚರಿಸುವಂತಹ, ಅವರು ಪಾರದರ್ಶಕರನ್ನಾಗಿ ಮಾಡುವಂತಹ, ಜ್ಞಾನವಂತರನ್ನಾಗಿ ಮಾಡುವಂತಹ ಕೆಲಸವನ್ನು ಪರಿಪೂರ್ಣವಾಗಿ ಮಾಡುವುದಕ್ಕೆ ಆಗಲಿಲ್ಲ. ಇವತ್ತಿನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಮ್ಮ ಉತ್ತರವನ್ನು ನೋಡಿ ನನಗೆ ಬಹಳ ಬೇಸರವಾಯಿತು. ಗ್ರಂಥಾಲಯದ ಮೇಲ್ವಿಚಾರಕರಿಗೆ 4 ತಾಸು ಕೆಲಸ ಮಾಡಿ ಎಂದು ಹೇಳುವುದು ಸರಿಯೇ? ಗ್ರಂಥಾಲಯದ ಬಾಗಿಲನ್ನು ಯಾರಾದರೂ ತೆಗೆಯುತ್ತಾರೆಯೇ? ಹೀಗೆ ಮಾಡಿದರೆ ಎಷ್ಟರಮಟ್ಟಿಗೆ ಗ್ರಾಮೀಣ ಪ್ರದೇಶದ ಜನರಿಗೆ ಆ ಸವಲತ್ತು ಸಿಗುತ್ತದೆಯೇ? ಈ ಹಿಂದೆ ಇದ್ದಂತೆ 8 ಗಂಟೆಗಳ ಅವಧಿಯ ಡ್ಯೂಟಿ ಕೊಡಬೇಕು. ಕಾರ್ಮಿಕ ಇಲಾಖೆ, ಕನಿಷ್ಠ ವೇತನ ರೂ. 13200/– ಎಂದು ಹೇಳಿದೆ. ಆ ಮೇಲ್ವಿಚಾರಕರಿಗೆ ಕನಿಷ್ಠ ವೇತನ ರೂ. 13200/– ಸಿಗುವಂತೆ ಮಾಡಬೇಕು. ಈ ಗ್ರಂಥಾಲಯಗಳಲ್ಲಿ ಉಪಯುಕ್ತವಾದ ಪುಸ್ತಕಗಳು ಸಿಗಬೇಕು. ಸರ್ಕಾರಿ ಕಾರ್ಯಕ್ರಮಗಳಿರಬಹುದು ಅಥವಾ ಎಲ್ಲಾ ಪ್ರಾಪಂಚಿಕ ವಿಚಾರಗಳು ಆ ಗ್ರಂಥಾಲಯದಿಂದ ಗ್ರಾಮೀಣ ಮಟ್ಟದ ಜನರಿಗೆ ಸಿಗಬೇಕು. ಅದನ್ನು ಬಲಿಷ್ಠಗೊಳಿಸುವುದಕ್ಕೆ ಏನಾದರೂ ವಿಶೇಷವಾಗಿ ಕಾರ್ಯಕ್ರಮವನ್ನು ಮಾಡಿ. ಮತ್ತೆ, ಇವರೆಲ್ಲರಿಗೂ 8 ಗಂಟೆಗಳ ಕೆಲಸ ಮತ್ತು ಕನಿಷ್ಠ ವೇತನ ಸಿಗುವಂತೆ ನಿಯಮವನ್ನು ಮಾಡಬೇಕು. ಈ ನಿಯಮವನ್ನು ಯಾವ ಅವಧಿಯ ಒಳಗೆ ತಂದು ಜಾರಿ ಮಾಡುತ್ತೀರಿ ಎಂದು ಕೇಳಬಯಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್**:– ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆ, ಇವರಿಗೆ ಗೌರವಧನ ಕೊಡುತ್ತಿದ್ದೇವೆ, ಇದು ಕಾರ್ಮಿಕ ನೀತಿಯೊಳಗೆ ಬರುವುದಿಲ್ಲ ಎಂದು ಹೇಳಿದೆ. ಒಂದು ಸರ್ಕಾರ, ಎಲ್ಲಾ ರೀತಿಯ ಶೋಷಣೆಗಳ ವಿರುದ್ಧವಾಗಿ ಇರಬೇಕೇ ಹೊರತು ಸರ್ಕಾರವೇ ಬುದ್ಧಿವಂತಿಕೆಯಿಂದ ಶೋಷಣೆ ಮಾಡಬಾರದು. ಕನಿಷ್ಠ ವೇತನ ಕೊಡುವುದಕ್ಕೆ ಆಗುವುದಿಲ್ಲ ಎಂದು ಮುಚ್ಚಿಬಿಡಿ. ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಿದ್ದ ಶ್ರೀ ಭಗವತಿಯವರು ಬಹಳ ಹಿಂದೆ ಒಂದು ಆದೇಶ ಮಾಡಿದ್ದರು. ಯಾರಿಗೆ ಕನಿಷ್ಠ ವೇತನವನ್ನು ಕೊಡುವುದಕ್ಕೆ ಶಕ್ತಿ ಇಲ್ಲವೋ, ಸಿಬ್ಬಂದಿಗಳನ್ನು ಕಡಿಮೆ ದುಡ್ಡು ಕೊಟ್ಟು ಕೊಟ್ಟು ದುಡಿಸಿಕೊಳ್ಳುತ್ತಾರೋ ಅಂತಹ ಸಂಸ್ಥೆಗಳು ನಡೆಯುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದರು. ಮಾನ್ಯ ಈಶ್ವರಪ್ಪನವರೇ ತಾವೂ ಕೂಡ ಬಡತನವನ್ನು ಕಂಡು ಉಂಡಂಥವರು. ಕನಿಷ್ಠ ವೇತನ ಎಂದರೆ ಬದುಕುವುದಕ್ಕೆ ಕೊಡುವಂತಹ ವೇತನವಲ್ಲ. ನಾಗರಿಕ ಸಮಾಜದೊಳಗೆ ಕನಿಷ್ಠ ಉಡುಪುಗಳನ್ನು ಹಾಕಬೇಕು ಎಂದಿದೆ. ಅದು ಕನಿಷ್ಠ ಉಡುಪೇ ಹೊರತು ಪರಿಪೂರ್ಣ ಉಡುಪಲ್ಲ. ನಾಗರಿಕ ಸಮಾಜದ ಒಳಗೆ ಹೇಗೆ ಕನಿಷ್ಠ ಒಳಉಡುಪನ್ನಾದರೂ ಧರಿಸಬೇಕು ಎಂದಿರುತ್ತದೆಯೋ ಅದೇರೀತಿ ಕನಿಷ್ಠ ವೇತನವನ್ನು ಸರ್ಕಾರ ಕೊಡಬೇಕು. ಕನಿಷ್ಠ ವೇತನವನ್ನು ಕೊಡುವುದಕ್ಕೆ ಅಸಹಾಯಕವಾಗಿರುವ ಸರ್ಕಾರ, ಯಾರಿಗೋಸ್ಕರವೋ ಬಹಳ ದೊಡ್ಡ ಉಪಕಾರ ಮಾಡುತ್ತಿದ್ದೇವೆ ಎಂದು ಭಾವಿಸಿ ಈ ಗ್ರಂಥಾಲಯಗಳನ್ನು ನಡೆಸುತ್ತಿದೆಯೇ? 8 ಗಂಟೆಯ ಅವಧಿಯನ್ನು 4 ಗಂಟೆಗೆ, 4 ಗಂಟೆಯ ಅವಧಿಯನ್ನು 2 ಗಂಟೆಗೆ ಹೇಗೆ ಇಳಿಸಬೇಕು ಎಂದು ನಿಮ್ಮ ಬುದ್ಧಿವಂತಿಕೆಯ ಪ್ರದರ್ಶನಕ್ಕೆ ನಾಚಿಕೆ ಆಗಬೇಡವೇ? ಕನಿಷ್ಠ ವೇತನವನ್ನು ಜಾರಿ ಮಾಡಬೇಕು. ಮಾನ್ಯ ಈಶ್ವರಪ್ಪನವರು ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ಅವರಿಗೆ ಇದು ಸುಲಭವಾಗಿ ಅರ್ಥವಾಗುತ್ತದೆ ಎನ್ನುವ ವಿಶ್ವಾಸ ನನಗೆ ಇದೆ.

(ಮುಂದು)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(624) 20–03–2020 11.50 ಡಿಎಸ್–ಎಂಡಿ

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆಯ ಪ್ರಶ್ನೆಯನ್ನು ನಮ್ಮ ಸ್ನೇಹಿತರು ಕೇಳಿದ್ದಾರೆ. ಮಾನ್ಯ ಸಚಿವರು ಬಹಳ ಸಮರ್ಥ ಸಚಿವರಾಗಿದ್ದಾರೆ. ಮಾನ್ಯ ಸಚಿವರು ಇವತ್ತು ಒಂದು ನಿರ್ಧಾರ ಮಾಡಿಬಿಡಬೇಕು. ಇವರು ಮೊದಲು ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿದ್ದರು. ಆಗ ಆರು ಗಂಟೆ ವೇಳೆಯನ್ನು ನಿಗದಿ ಮಾಡಿದ್ದರು. ನಮ್ಮ ಹಳ್ಳಿಗಳಲ್ಲಿ ಈಗಲೂ ಬೆಳಗ್ಗೆ 6–7 ಗಂಟೆಗೆ ದಿನಪತ್ರಿಕೆಯನ್ನು ಓದುತ್ತೇವೆ, 11 ಗಂಟೆಯವರೆಗೆ ಓದುತ್ತೇವೆ. ತೋಟದ ಕೆಲಸಗಳನ್ನು ಮುಗಿಸಿಕೊಂಡು ಸಂಜೆ ಪತ್ರಿಕೆಯನ್ನು ಓದುತ್ತಾರೆ. ಬೆಳಿಗ್ಗೆ 4 ಗಂಟೆ, ಸಂಜೆ 3 ಗಂಟೆ, 7 ಗಂಟೆಗಳ ಕಾಲ ಲೈಬ್ರರಿ ತೆಗೆಯುತ್ತಿದ್ದರು. ಅವರೇನು ಮಾಡಿದರು ಎಂದರೆ, ತಪ್ಪಿಸಿಕೊಳ್ಳುವುದಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಾಕಿದರು. ಇವರೇನು ಮಾಡಿದರು ಎಂದರೆ ಉದ್ದೇಶ ಪೂರ್ವಕವಾಗಿ Guest Faculty ಎಂದು ಮಾಡಿದ್ದಾರೆ. Guest Faculty ಮಾಡಿ ಬೆಳಿಗ್ಗೆ 2 ಗಂಟೆ, ಸಂಜೆ 2 ಗಂಟೆ, ಒಟ್ಟು 4 ಗಂಟೆಗಳ ಕಾಲ ಮಾಡಿದರು. 4 ಗಂಟೆ ಮಾಡಿ ಅವರು guest ಆದರು. ಮೊದಲು ಫುಲ್‌ಟೈಮ್ ಇದ್ದರು. ದಿಢೀರ್ ಆಗಿ part time ಮಾಡಿ ಅವರಿಗೆ 5,000 ರೂಪಾಯಿ ಕೊಟ್ಟರೆ ನಮಗೆ ಅವಮಾನ ಆಗುವುದಿಲ್ಲವೇ? ಅವರಿಗೆ ಭದ್ರತೆ ಕೊಡಬೇಕು. ಅವರಿಗೆ ಕನಿಷ್ಠ 13,200 ರೂಪಾಯಿ ಕೊಡುತ್ತೇವೆಂದು ಇವತ್ತು ನಿರ್ಧಾರ ಮಾಡಿ, ಆಮೇಲೆ ಹಣಕಾಸಿನ ಇಲಾಖೆಯವರು ಮಾನ್ಯ ಸಚಿವರು ಹೇಳಿದ ಹಾಗೆ ಕೇಳುತ್ತಾರೆ. ಅವರು ಜೀವನ ಮಾಡಬೇಕಲ್ಲವೇ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, 8 ಗಂಟೆ ಇರುವ ಕೆಲಸವನ್ನು 4 ಗಂಟೆಗೆ ಇಳಿಸಿರುವುದನ್ನು ನೋಡಿದರೆ ಅಧಿಕಾರಿಗಳ ಯೋಚನೆ ಮತ್ತು ಯೋಜನೆಗಳನ್ನು ನೋಡಿದರೆ ಮುಂದಿನ ದಿನಗಳಲ್ಲಿ ಇದನ್ನು ಮುಚ್ಚಿಬಿಡಬೇಕು ಎನ್ನುವ ತಂತ್ರಗಾರಿಕೆ ನಮಗೆಲ್ಲರಿಗೂ ಅರ್ಥವಾಗುತ್ತದೆ. ಹಾಗಾಗಿ 8 ಗಂಟೆಗಳ ಕಾಲ ಓಪನ್ ಮಾಡಬೇಕು. ಕಾರ್ಮಿಕ ಇಲಾಖೆ ನಿಗದಿ ಮಾಡಿರುವ ವೇತನವನ್ನು ಕೊಡಬೇಕು. ಅವರಿಗೆ ಪಿಂಚಣಿಯಷ್ಟು ಸಂಬಳವನ್ನು ಕೊಡುತ್ತಿಲ್ಲ. 13,200 ರೂಪಾಯಿ ಏಕೆ ಕೊಡುವುದಕ್ಕಾಗುವುದಿಲ್ಲ? ಮಾನ್ಯ ಈಶ್ವರಪ್ಪನವರು ಮಂತ್ರಿಯಾಗಿರುವಂತಹ ಸಂದರ್ಭದಲ್ಲಿ 4 ಗಂಟೆಗೆ ಇಳಿಸಿ ಅವರು ಸುಮ್ಮನೆ ಕುಳಿತುಕೊಳ್ಳುವುದನ್ನು ಒಪ್ಪುವುದಿಲ್ಲ. ಮಾನ್ಯ ಈಶ್ವರಪ್ಪನವರು ಕಾರ್ಮಿಕ ಇಲಾಖೆ ಕನಿಷ್ಠ 13,200 ರೂಪಾಯಿಯನ್ನು ನಿಗದಿ ಮಾಡಿದೆ ಅದನ್ನು ಕೊಡುವುದಕ್ಕೆ ಇವತ್ತೇ ನಿರ್ಧಾರ ಮಾಡಬೇಕೆಂದು ಆಗ್ರಹಪಡಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ವಿಚಾರ ರಾಜ್ಯದಾದ್ಯಂತ ಇರುವಂತಹ ಸಮಸ್ಯೆ. ನನ್ನ ಊರಿನಲ್ಲಿ ಲೈಬ್ರರಿ ನಡೆಸಿ ಎಂದು ಮನವಿಯನ್ನು ಕೊಟ್ಟಿದೆ. ಲೈಬ್ರರಿಗೆ ಪುಸ್ತಕವೆಲ್ಲಾ ತಂದು ಹಾಕಿದ ಮೇಲೆ ಈ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಮಸ್ಯೆಯಿಂದಾಗಿ ಅದು ಮುಚ್ಚಿ ಹೋಗುವಂತಹ ಪರಿಸ್ಥಿತಿಯಾಗಿದೆ. ನಾನು ಮಾನ್ಯ ರವಿಕುಮಾರ್‌ರವರು, ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿರುವುದನ್ನು ಸಮರ್ಥಿಸುತ್ತೇನೆ. ನಾನು ಮತ್ತೆ ಅದೇ ವಿಚಾರ ಹೇಳುವುದಿಲ್ಲ. ಈ ಅಧಿಕಾರಿಗಳ ತಂತ್ರ ಏನೆಂದರೆ, ಈ ಗ್ರಂಥಾಲಯಗಳನ್ನು ಗ್ರಾಮೀಣ ಪ್ರದೇಶದಲ್ಲಿ ಮುಚ್ಚಬೇಕು, ಬೇರೆ ಏನೂ ಇಲ್ಲ. ಕನಿಷ್ಠ ವೇತನ ಕೊಡುವುದಕ್ಕೂ ಹಿಂದೆ ಮುಂದೆ ನೋಡುವ ಸರ್ಕಾರ ಇರಬಾರದು. ಮಾನ್ಯ ಈಶ್ವರಪ್ಪನವರು ಸಮರ್ಥರಿದ್ದಾರೆ. ಈ ನೌಕರರು ಯಾರಿದ್ದಾರೆ ಅವರಿಗೆ ಖಂಡಿತವಾಗಿಯೂ ನ್ಯಾಯ ಒದಗಿಸಿಕೊಡಬೇಕೆಂದು ಕೇಳುತ್ತಿದ್ದೇನೆ. ಇದೇ ಸದನದಲ್ಲಿ ಮಾನ್ಯ ಈಶ್ವರಪ್ಪನವರು ಘೋಷಣೆ ಮಾಡಬೇಕು ಮತ್ತು ಅವರಿಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಡಾ||ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, 4 ಗಂಟೆಗಳ ಕಾಲ ಕೊಟ್ಟು ಉಳಿದ ಸಮಯ ಅವರು ಏನು ಮಾಡಬೇಕು? Domestic help ಕೂಡ, ಅವರ ಜೀವಮಾನ ಸುಧಾರಣೆಗಾಗಿ 4 ಕಡೆಗಳಲ್ಲಿ ಕೆಲಸ ಮಾಡುತ್ತಾರೆ. Directive Principles of State Policy (ರಾಜ್ಯಾಂಗದ ನಿರ್ದೇಶನ ತತ್ವ)ಗಳಲ್ಲಿ ಅನುಚ್ಛೇಧ 38 ಮತ್ತು 39 ನಿರ್ದೇಶನ ಕೊಡುತ್ತದೆ. ಒಂದು ಕಲ್ಯಾಣ ರಾಜ್ಯ ಎಂದು ಹೇಳಿದರೆ ಜನತೆಯ ಕಲ್ಯಾಣಕ್ಕಾಗಿ ಏನು ಮಾಡಬೇಕೆಂದು directives ಕೊಟ್ಟಿದೆ. ಇದರಲ್ಲಿ ನಮಗೆ charity ಅಲ್ಲ, ಆಯ್ಕೆ ಇಲ್ಲ. ಸುಶಿಕ್ಷಿತ ಸಮಾಜ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಮಾತನಾಡಿದ್ದೇವೆ, ಕೊರೊನಾ ಬಗ್ಗೆ ಜಾಗೃತಿ ಮೂಡಿಸುವ ಬಗ್ಗೆ ಮಾತನಾಡಿದ್ದೇವೆ. ಸಂವಿಧಾನದ ಬಗ್ಗೆ ಮಾತನಾಡುತ್ತೇವೆ. ಅವರಿಗೆ ಅಧ್ಯಯನಕ್ಕೆ ನೀಡಬೇಕಾದ ಗ್ರಂಥಾಲಯಗಳ ರಕ್ಷಣೆ, ಗ್ರಂಥಪಾಲಕರನ್ನು ನೇಮಿಸುವುದಕ್ಕೆ ಈ ರೀತಿಯ ತಾರತಮ್ಯ ಮಾಡಿದರೆ ಸರಿಯಲ್ಲ. ನಮ್ಮದೇ ಸರ್ಕಾರ ಇರಬಹುದು, ಮಾನ್ಯ ಈಶ್ವರಪ್ಪನವರಿಗೆ ನಾನು ಆಗ್ರಹ ಮಾಡುತ್ತೇನೆ. 8 ಗಂಟೆಗಳ ಕಾಲ ಕೆಲಸ ಕೊಡಬೇಕು ಮತ್ತು ಅವರಿಗೆ ಕನಿಷ್ಠ ವೇತನ 13,200 ರೂಪಾಯಿಗಳನ್ನು ಯಾವುದೇ ಸಬೂಬು ಇಲ್ಲದೆ ಕೊಡಬೇಕು. ಇಡೀ ಸದನ ಅವರ ಬೆಂಬಲಕ್ಕೆ ನಿಲ್ಲುತ್ತೇವೆ. ತಕ್ಷಣ ತುರ್ತಾಗಿ ಅದನ್ನು ಮಾಡಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ.

**ಶ್ರೀ ಎಸ್.ವಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಕಳೆದ 25 ವರ್ಷಗಳಿಂದ ಅತ್ಯಂತ ಕಡಿಮೆ ವೇತನದಲ್ಲಿ ಅವರು ದುಡಿಯುತ್ತಿದ್ದಾರೆ. ಇವತ್ತಲ್ಲ, ನಾಳೆ minimum wages ಗೆ ಅವರು ಅರ್ಹರಾಗುತ್ತಾರೆ ಎಂದು ತಿಳಿದುಕೊಂಡು ಮದುವೆ ಮಾಡಿಕೊಂಡಿದ್ದಾರೆ, ಇಬ್ಬರು ಮಕ್ಕಳು ಆಗಿವೆ. ಈಗ ಅವರು ಬದುಕುವುದಕ್ಕೆ ಬಹಳ ಕಷ್ಟವಾಗಿದೆ. 20–25 ವರ್ಷಗಳಿಂದ ಅವರಿಗೆ 8 ಗಂಟೆಗಳ ಕಾಲ ಕೆಲಸ ಕೊಟ್ಟು ದಿಢೀರ್ ಆಗಿ 4 ಗಂಟೆಗಳನ್ನು ಮಾಡುವುದಕ್ಕೆ ಕಾರಣ ಏನು? ಅವರು minimum wages ಗೆ ಅರ್ಹರಾಗಬಾರದೆನ್ನುವ ಉದ್ದೇಶಕ್ಕಾಗಿ 8 ಗಂಟೆ ಇರುವುದು 4 ಗಂಟೆ ಮಾಡಿದ್ದಾರೆ. ಹಿರಿಯರಾದ ಮಾನ್ಯ ಈಶ್ವರಪ್ಪನವರಿಗೆ ನಾನು ಕೈ ಮುಗಿದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಸಮಸ್ಯೆಗಳನ್ನು ಅರ್ಥೈಸಿಕೊಂಡಿದ್ದಾರೆ. ಅವರಿಗೆ 8 ಗಂಟೆಗಳ ಕಾಲ ಕೆಲಸ ಕೊಡಬೇಕು ಮತ್ತು minimum wages ಅವರಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಗ್ರಂಥಾಲಯದ ಬಗ್ಗೆ ಸಾಕಷ್ಟು ನಮ್ಮ ಸದಸ್ಯರುಗಳು ಮಾತನಾಡಿದ್ದಾರೆ. ನಿಜವಾಗಿಯೂ ತುಂಬಾ ಕಷ್ಟ ಇದೆ. ಅವರು ಜೀವನ ನಿರ್ವಹಣೆ ಮಾಡಿಕೊಳ್ಳುವುದಕ್ಕಾಗದೆಯೇ ವಿಧಾನಸೌಧದಲ್ಲೇ ಕತ್ತನ್ನು ಕೊಯ್ದುಕೊಂಡರು ಎಂದು ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ನೋಡಿದ್ದೇನೆ. ಅವರನ್ನು ಖಾಯಂಗೊಳಿಸಬೇಕು. ಇನ್ನು ಕೆಲವು ಕಡೆ ಗ್ರಂಥಾಲಯಗಳ ಅವಶ್ಯಕತೆ ಇದೆ. ಕೆಲವು ಕಡೆ ಸಾಕಷ್ಟು ಪದವೀಧರರು ಇರುತ್ತಾರೆ. ಗ್ರಂಥಾಲಯದಲ್ಲಿ ಹೆಚ್ಚಿನ ಪತ್ರಿಕೆಗಳನ್ನು ಹಾಕಿಸಬೇಕು, ಗೆಜೆಟ್ ಹಾಕಿಸಬೇಕು. ಅಲ್ಲಿ ಪದವೀಧರರು ನಿರುದ್ಯೋಗಿಗಳಾಗಿರುತ್ತಾರೆ. ಯಾವ್ಯಾವ ಕೆಲಸಗಳಿಗೆ ಕಾಲ್ ಮಾಡಿದ್ದಾರೆ ಎಂದು ಪತ್ರಿಕೆಗಳಲ್ಲಿ ನೋಡಬೇಕಾಗುತ್ತದೆ. ಹಾಗಾಗಿ ಅವರನ್ನು ಖಾಯಂಗೊಳಿಸಬೇಕು. ಮಾನ್ಯ ಈಶ್ವರಪ್ಪನವರನ್ನು ಮಂತ್ರಿಗಳೆಂದು ಭಾವಿಸುತ್ತಿಲ್ಲ, ನನ್ನ ಸಹೋದರರು ಎಂದು ನಾನು ಭಾವಿಸುತ್ತೇನೆ. ನಿಜವಾಗಿಯೂ ಅದನ್ನು ಮಾಡಲೇಬೇಕು ಎಂದು ತಮ್ಮ ಮೂಲಕ ನಮ್ಮ ಸಹೋದರರಿಗೆ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ. ನಮ್ಮ ಸ್ನೇಹಿತರಾದ ಸುನಿಲ್ ಸುಬ್ರಮಣಿಯವರು ಬಹಳ ಔಚಿತ್ಯಪೂರ್ಣವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. 8 ಗಂಟೆ ಇದ್ದಂತಹ ಅವಧಿಯನ್ನು 4 ಗಂಟೆ ಇಳಿಸಿರುವುದು, ನಿಜವಾಗಿಯೂ ಕೂಡ ಈ ಶೋಷಣೆ ಎಲ್ಲಿ ಆಗುತ್ತಿದೆ ಎಂದರೆ ಸರ್ಕಾರದಲ್ಲಿ ಅದರಲ್ಲೂ ಅಧಿಕಾರಿಗಳ ಮಟ್ಟದಲ್ಲಿ ಆಗುತ್ತಿದೆ ಎಂಬುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಪಕ್ಷತೀತಾವಾಗಿ ಎಲ್ಲಾ ಸದಸ್ಯರುಗಳ ಆಗ್ರಹವೇನೆಂದರೆ, ಕಾರ್ಮಿಕ ಇಲಾಖೆಯ ಸುತ್ತೋಲೆ ಪ್ರಕಾರ ಕನಿಷ್ಠ ವೇತನ ಕೊಡಬೇಕೆಂದು ನಾವೆಲ್ಲರೂ ಕೇಳಿಕೊಳ್ಳುತ್ತಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಸುನಿಲ್ ಸುಬ್ರಮಣಿಯವರು ಒಳ್ಳೊಳ್ಳೆಯ ಪ್ರಶ್ನೆಗಳನ್ನು ಕೇಳುತ್ತಾರೆ. ಆದರೆ ಅವರು ಆಡಳಿತ ಪಕ್ಷದಲ್ಲಿದ್ದಾರೆ, ಅದನ್ನು ಅಷ್ಟೊಂದು ಖಡಾಖಂಡಿತವಾಗಿ ಹೇಳುವುದಕ್ಕೆ ಅವರಿಗೆ ಎಲ್ಲೋ ಒಂದು ಕಡೆ ಮುಜುಗರವಾಗುತ್ತಿದೆ. ನಾನು ಮೊನ್ನೆಯಿಂದ ನೋಡುತ್ತಿದ್ದೇನೆ. ಹಾಗಾಗಿ ಇಷ್ಟೊಂದು ಜನರೆಲ್ಲರೂ ಬೆಂಬಲವನ್ನು ಕೊಟ್ಟಿದ್ದಾರೆ. ಹಾಗಾಗಿ ನಾನೇನು ಮಾತನಾಡುವುದಿಲ್ಲ. ನಮ್ಮಲ್ಲಿ ಒಂದು ಗಾದೆ ಇದೆ. ಯಾರಂತೆ ಎಂದರೆ, ಇವರೆಲ್ಲಾ ಏನು ಹೇಳಿದ್ದಾರೆ ಅದರಂತೆ ನನ್ನದುವೇ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೇ, ಗ್ರಂಥಾಲಯ ಪಾಲಕರು ಬಹಳಷ್ಟು ಹೋರಾಟವನ್ನು ಮಾಡುತ್ತಿದ್ದಾರೆ. ಈ ಹಿಂದೆ ಇದ್ದಂತಹ ಸರ್ಕಾರದ ಮೇಲೆ ಬಹಳ ಒತ್ತಡವನ್ನು ತಂದಿದ್ದರು. ಆಗಲೂ ಇದು ಆಗಲಿಲ್ಲ. ಸನ್ಮಾನ್ಯ ಈಶ್ವರಪ್ಪನವರು ಮನಸ್ಸು ಮಾಡಿದರೆ ಖಂಡಿತ ಇದಕ್ಕೆ ವಿವಾದವನ್ನು ಮುಗಿಸಬಹುದು. ಶ್ರೀಮತಿ ಜಯಮ್ಮನವರು ಹೇಳಿದ ಹಾಗೆ ವಿಧಾನಸೌಧದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ತಾವೆಲ್ಲರೂ ಏನು ಪ್ರಸ್ತಾಪ ಮಾಡುತ್ತಿದ್ದೀರಿ, ಅದಕ್ಕೆ ನನ್ನ ಸಹಮತವೂ ಇದೆ. ಆದರೆ ಮುಂಚೆ ಅವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 7200 ರೂಪಾಯಿ ಇತ್ತು. ಆಗ ಅವರ ಹತ್ತಿರ 8 ಗಂಟೆ ಕೆಲಸವನ್ನು ತೆಗೆದುಕೊಂಡು 7200 ರೂಪಾಯಿ ಕೊಡುತ್ತಿದ್ದರು. ಆದರೆ ಈ 7200 ರೂಪಾಯಿ ಯಾವುದೇ ಕಾರಣಕ್ಕೂ ನನಗೂ ಸಮಾಧಾನವಿಲ್ಲ. ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ನನ್ನ ಹತ್ತಿರ ಮೂರು ಸಲ ಶಿಕ್ಷಣ ಇಲಾಖೆಯ ಕೈಯಲ್ಲಿದ್ದಾಗ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಶಿಕ್ಷಣ ಇಲಾಖೆಯಿಂದ ದಿನಾಂಕ:27–02–2019ರ ಆದೇಶದಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯ ನಿರ್ವಹಣೆಯನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯಿತಿಗಳಿಗೆ ದಿನಾಂಕ:01–03–2019 ರಂದು ವರ್ಗಾಯಿಸಿದರು. ಆಗಲೂ ಅವರದ್ದೇ ಸರ್ಕಾರ ಇತ್ತು. 8 ಗಂಟೆ ಕಾಲ ಕೆಲಸ ತೆಗೆದುಕೊಂಡು ಕನಿಷ್ಠ 7200 ರೂಪಾಯಿ ಕೊಡುತ್ತಿದ್ದರು. ಅವರೆಲ್ಲರೂ ಬಹಳ ಜೋರಾಗಿ ಮಾತನಾಡುತ್ತಿದ್ದಾರೆ. ಅದಕ್ಕೆ ನಾನು ಹೇಳುತ್ತಿದ್ದೇನೆ. ನಾನು ಅವರ ಪರ ಇದ್ದೇನೆಂದು ಮೊದಲಿನಿಂದಲೂ ಹೇಳುತ್ತಿದ್ದೇನೆ. ಇದರಲ್ಲೇನೂ ಪ್ರಶ್ನೆ ಇಲ್ಲ. ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದ ಹಾಗೆ ನಾನು, ನನ್ನ ಅಮ್ಮ ಅಡಕೆ ಮಂಡಿಯಲ್ಲಿ ಕೂಲಿ ಕೆಲಸ ಮಾಡಿಕೊಂಡು ನಾನು ಇಲ್ಲಿಯವರೆಗೆ ಬಂದಿದ್ದೇನೆ. ಅವರ ಕಷ್ಟ ನನಗೆ ಅರ್ಥವಾಗುತ್ತದೆ. ಈ ಸಮಸ್ಯೆಗಳಿವೆ ಎಂದು ತಿಳಿದುಕೊಂಡು ಬಹಳ ಪ್ರಯತ್ನವನ್ನು ನಡೆಸಿ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಹೇಳಿದ ಹಾಗೆ ನಮ್ಮ ಅಧಿಕಾರಿಗಳು, ಗ್ರಂಥಾಲಯ ಅಧಿಕಾರಿಗಳು, ಆರ್ಥಿಕ ಇಲಾಖೆಯವರು, ಇವರೆಲ್ಲರನ್ನು ಕರೆದು ಸಭೆಯನ್ನು ಮಾಡಿ ಕನಿಷ್ಠ 13,200 ರೂಪಾಯಿ ಕೊಡಬೇಕೆಂದು ಆ ಸಭೆಯಲ್ಲಿ ತೀರ್ಮಾನ ಮಾಡಿ ಆರ್ಥಿಕ ಇಲಾಖೆಯವರಿಗೆ ಕಳುಹಿಸಿದ್ದೇವೆ. ಅದು ಕನಿಷ್ಠ ವೇತನ. ಅದಕ್ಕಿಂತ ಕಡಿಮೆ ಮಾಡುವುದು ಸೂಕ್ತವಲ್ಲ. ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದ ಹಾಗೆ ಬುದ್ಧಿವಂತಿಕೆಯಿಂದ 4 ಗಂಟೆ ಇಳಿಸಿದ್ದಾರಲ್ಲಾ, ನಾವು ಬುದ್ಧಿವಂತರೇ 8 ಗಂಟೆ ಕೆಲಸ ಅವರ ಹತ್ತಿರ ತೆಗೆದುಕೊಳ್ಳಿ ಎಂದು ಶಿಫಾರಸ್ಸು ಮಾಡಿದ್ದೇವೆ. ಆದರೆ ಅವರು ಆ ಎರಡಕ್ಕೂ ಒಪ್ಪಿಲ್ಲ.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(625) 20.03.2020 12.00 ಎಸ್‌ವಿ–ಎಂಡಿ**
**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು):–**

ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇದನ್ನು ಮಾಡಬೇಕೆಂಬುದು ನೋವಿರುವವರಿಗೆ ತಿಳಿಯುತ್ತದೆ. ಹೊಟ್ಟೆ ತುಂಬಿರುವವರಿಗೆ ತಿಳಿಯುವುದಿಲ್ಲ. ಆ ಗ್ರಂಥಪಾಲಕರು ಹೋಗಿ ಎಷ್ಟು ಜನರ ಕಾಲುಗಳನ್ನು ಹಿಡಿದು ಬೇಡಿದ್ದಾರೆಂಬುದು ನಮಗೆ ಗೊತ್ತು. ಮುಖ್ಯಮಂತ್ರಿಗಳಾದಿಯಾಗಿ ಮಂತ್ರಿಗಳು, ಶಾಸಕರು ಹೀಗೆ ಎಲ್ಲರ ಬಳಿ ಬೇಡಿಕೊಂಡರೂ ಸಹ ಆರ್ಥಿಕ ಇಲಾಖೆಯು ಒಪ್ಪಿಲ್ಲವೆಂಬುದನ್ನು ನಾನು ಒಬ್ಬ ಮಂತ್ರಿಯಾಗಿ ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇಂತಹ ವಿಚಾರಗಳಿಗೆ ನಾನು ಹಿಂದೊಂದು ಮುಂದೊಂದು ಮಾತನಾಡುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಹೇಳಿದಂತೆ ಒಬ್ಬ ಗ್ರಂಥಪಾಲಕರು ವಿಧಾನಸೌಧಕ್ಕೆ ಬಂದು ಕತ್ತು ಕೊಯ್ದುಕೊಳ್ಳಲು ಪ್ರಯತ್ನಿಸಿರುವ ಸತ್ಯ. ಇದೆಲ್ಲವನ್ನೂ ನಾವು ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಆರ್ಥಿಕ ಇಲಾಖೆಯವರನ್ನು ಕರೆದು ಅವರ ಬಳಿಯೂ ನಾವು ಮಾತನಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಈಗ ಇದನ್ನು ಸಚಿವಸಂಪುಟದ ಮುಂದೆ ತೆಗೆದುಕೊಂಡು ಹೋಗಬೇಕೆ ಅಥವಾ ಬೇಡವೆ ಎಂಬುದು ಇಲ್ಲಿರುವ ಪ್ರಶ್ನೆ. ಈ ವಿಷಯದಲ್ಲಿ ಆರ್ಥಿಕ ಇಲಾಖೆಯು ಒಪ್ಪಿಗೆಯನ್ನು ಸೂಚಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ನಾನು ಕೂಡ ಪ್ರಯತ್ನವನ್ನು ನಡೆಸುತ್ತೇನೆ. ಇಲ್ಲಿ ವಿರೋಧಪಕ್ಷ ಅಥವಾ ಆಡಳಿತ ಪಕ್ಷ ಎಂಬುದು ಮುಖ್ಯವಲ್ಲ. ಬಡವರು ನಾಲ್ಕು ಗಂಟೆ ಕೆಲಸ ಮಾಡಬೇಕೆಂದು ಹೇಳಿದರೆ ಅವರು ನಾಲ್ಕು ಗಂಟೆಗಳ ಕಾಲವೇ ಕೆಲಸ ಮಾಡುತ್ತಾರೆಯೋ, ಎರಡು ಗಂಟೆಗಳ ಕಾಲ ಕೆಲಸ ಮಾಡುತ್ತಾರೆಯೋ ಅಥವಾ ಪುಗಸಟ್ಟೆ ಸಂಬಳವನ್ನೇ ತೆಗೆದುಕೊಂಡು ಹೋಗುತ್ತಾರೆಯೋ ಅದು ಬೇರೆ ಪ್ರಶ್ನೆ. ಇದರಿಂದ ಅವರಿಗೆ ಕೆಲಸದ ಮೇಲೆ ಏನು ಹಿಡಿತ ಬರುತ್ತದೆ? ಅವರೇನು ಕೆಲಸ ಮಾಡುತ್ತಾರೆ? ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಿ, ಅದರ ಮೂಲಕ ರೈತಾಪಿ ವರ್ಗದವರ ಮಕ್ಕಳ ಜ್ಞಾನಾರ್ಜನೆಯಾಗಬೇಕೆಂದು ಈ ಇಲಾಖೆ ಇದೆ.

ಆಗಲೇ ಮಾನ್ಯ ರವಿಕುಮಾರ್ ಅವರು ಮಾತನಾಡುತ್ತಿದ್ದಾಗ ಕೇಳಿದ್ದಕ್ಕೆ ಯಾವುದೇ ಕಾರಣಕ್ಕೂ ಇದನ್ನು ಮುಚ್ಚುವುದಿಲ್ಲ ಎಂದು ಬಹಳ ಸ್ಪಷ್ಟವಾಗಿ ಈ ಸದನದಲ್ಲಿ ಹೇಳುತ್ತೇನೆ. ಇದನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಆರ್ಥಿಕ ಇಲಾಖೆಯವರ ಬಳಿ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಬಳಿ ಮಾತನಾಡುತ್ತೇನೆ. ಈ ಸದನದ ಮಾನ್ಯ ಸದಸ್ಯರೂ ಸಹ ಸ್ವಲ್ಪ ಒತ್ತಾಯವನ್ನು ಮಾಡಬೇಕು. ಏಕೆಂದರೆ ಸಚಿವಸಂಪುಟಕ್ಕೆ ಈ ವಿಷಯವನ್ನು ತೆಗೆದುಕೊಂಡು ಹೋಗಬೇಕೆಂದರೆ ಮಾನ್ಯ ಮುಖ್ಯಮಂತ್ರಿಯವರ ಅನುಮತಿ ಬೇಕು. ನಾವು move ಮಾಡುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ ಎನ್ನುವಂತಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:–** ಹಿಂದಿನ ಸರ್ಕಾರದಲ್ಲಿ ಮಾನ್ಯ ಹೆಚ್.ಡಿ.ದೇವೇಗೌಡರು ಕೊಡದಿದ್ದರಿಂದ ಪೂಜಾರಿಗಳೂ ಕೊಡಲಿಲ್ಲ. ಮಾನ್ಯ ಹೆಚ್.ಡಿ.ದೇವೇಗೌಡರು ಪೂಜೆಗೆ ಹೋಗುತ್ತಾರೆ. ಇಡೀ ದೇಶದಲ್ಲಿ, ಪ್ರಪಂಚದಲ್ಲಿ ಎಷ್ಟು ದೇವಸ್ಥಾನಗಳಿವೆಯೋ ಯಾವುದೇ ದೇವಸ್ಥಾನವನ್ನು ಬಿಟ್ಟಿಲ್ಲ.

**ಶ್ರೀ ಸುನಿಲ್ ಸುಬ್ರಮಣಿ:–** ಮಾನ್ಯ ಹೆಚ್.ಡಿ.ದೇವೇಗೌಡರು ಪೂಜಾರಿಗಳ ಪರವಾಗಿದ್ದಾರೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಹೆಚ್.ಡಿ.ದೇವೇಗೌಡರು ಇದ್ದರೆ ಪೂಜಾರಿ ಬೇಕೇ ಇಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಚಿವರೇ, ಬಹಳ ಚೆನ್ನಾಗಿ ಮಾತನಾಡುತ್ತಿದ್ದಿರಿ. ಈಗೇಕೆ ವಿಷಯಾಂತರ ಮಾಡುತ್ತೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇನ್ನು ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ನಾನು ಇಲ್ಲಿರುವ ಎಲ್ಲಾ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರ ಬಳಿಯಲ್ಲಿ ನಾವೆಲ್ಲರೂ ಮಾತನಾಡೋಣ. ವೈಯಕ್ತಿಕವಾಗಿ ನಾನೂ ಮಾತನಾಡುತ್ತೇನೆ. ಮಾನ್ಯ ಸದಸ್ಯರು ಬಹಳ influence ಅನ್ನು ಹೊಂದಿರುವುದು ನನಗೆ ತಿಳಿದಿದೆ ಮತ್ತು ಎಲ್ಲರೂ ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ನಾವು ಹಗಲು ಹೊತ್ತು ಹೋದರೆ ನೀವು ಸಂಜೆ ಹೊತ್ತು ಹೋಗುತ್ತೀರೆಂದು ಮಾನ್ಯ ಸಿ.ಟಿ.ರವಿಯವರು ಹೇಳುತ್ತಿದ್ದಾರೆ. ನನಗೆ ಗೊತ್ತಿಲ್ಲ.

**ಶ್ರೀ ಐವನ್ ಡಿ'ಸೋಜ:–** ಅವರೂ ಹಿಂದೆ ಬರುತ್ತಿದ್ದರು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಅದು ನನಗೆ ಗೊತ್ತಿಲ್ಲ. ನೀವಿಬ್ಬರೂ ಒಟ್ಟಿಗೆ ಹೋಗಿದ್ದೂ ನನಗೆ ಗೊತ್ತಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಈಶ್ವರಪ್ಪನವರೇ, ಮಾನ್ಯ ಸಿ.ಟಿ.ರವಿಯವರಿಗೆ ಭಾರಿ ಅನುಭವ ಇದೆ. ಅವರ ಅನುಭವದ ಮಾತನ್ನು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಆದ್ದರಿಂದ ಗ್ರಂಥಪಾಲಕರಿಗೆ ಎಂಟು ಗಂಟೆಗಳ ಕಾಲ ಕೆಲಸ ಮಾಡಬೇಕು. ರೂ.13,200/– ಗಳ ವೇತನವನ್ನು ನೀಡಬೇಕೆಂಬ ಯೋಚನೆಯನ್ನು ನಾವು ಈಗಾಗಲೇ ಮಾಡಿದ್ದು, ಇದಕ್ಕೆ ಎಲ್ಲರೂ ಸೇರಿ ಪ್ರಯತ್ನ ಮಾಡೋಣ. ನಾನು ಮುಖ್ಯಮಂತ್ರಿಯವರ ಬಳಿ ಮಾತನಾಡುತ್ತೇನೆ. ಆರ್ಥಿಕ ಇಲಾಖೆಯವರೊಂದಿಗೂ ನಾವೆಲ್ಲರೂ ಮಾತನಾಡೋಣ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರು ಪಕ್ಷಾತೀತವಾಗಿ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀಮತಿ ಜಯಮ್ಮ:–** ಮಾನ್ಯ ಸಚಿವರೇ, ಆ ಗ್ರಂಥಪಾಲಕರನ್ನು ಖಾಯಂ ಮಾಡಿಬಿಡಿ. ನಿಮ್ಮ ಹೆಸರು ಸ್ಥಿರವಾಗಿ ನಿಲ್ಲುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಆದರೆ ಯಾವ ಕಾಲಮಿತಿಯೊಳಗಾಗಿ ಮಾಡುತ್ತಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರನ್ನು ನಾನು ಭೇಟಿ ಮಾಡಿ convince ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇಂದೇ ಈ ನಿಮಿಷದಲ್ಲಿಯೇ ಹೋಗಲು ನಾನು ಸಿದ್ಧ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ನಿಮಗೆ ಇದರ ಬಗ್ಗೆ ಇರುವ ಕಾಳಜಿಗೆ ನಾನು ಅಭಿನಂದಿಸುತ್ತೇನೆ. ಆದರೆ ನನಗೆ ಎಲ್ಲೋ ಒಂದು ಕಡೆ ಸಂಶಯ ಬರುತ್ತಿದೆ. ಗ್ರಾಮೀಣಾಭಿವೃದ್ಧಿ ಸಚಿವರಾದ ಮಾನ್ಯ ಈಶ್ವರಪ್ಪನವರು ಮುಖ್ಯಮಂತ್ರಿಯವರ ಬಳಿ ಮತ್ತು ಆರ್ಥಿಕ ಇಲಾಖೆಯ ಬಳಿ ನಡೆಯುವುದಿಲ್ಲ ಎಂದು ಇಷ್ಟು ಅಸಹಾಯಕತೆಯನ್ನು ತೋರುತ್ತೀರಿ ಎಂದರೆ ನಿಮಗೂ ಮುಖ್ಯಮಂತ್ರಿಯವರಿಗೂ ಹೊಂದಾಣಿಕೆಯ ಕೊರತೆ ಇದೆಯೇ ಎಂದು ನಮಗೆ ಅನುಮಾನ ಮೂಡುತ್ತದೆ. ನೀವು ಇಂತಿಷ್ಟು ಅವಧಿಯೊಳಗೆ ಇದನ್ನು ಮಾಡಿಕೊಡುತ್ತೇವೆಂದು ಘೋಷಣೆ ಮಾಡುತ್ತೀರೆಂದು ನಾನಾದರೂ ನಿರೀಕ್ಷಿಸಿದ್ದೆನು.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದಲ್ಲಿ ಒಬ್ಬ ವ್ಯಕ್ತಿ ಸರ್ಕಾರವನ್ನು ನಡೆಸುವುದಿಲ್ಲ. ಎಲ್ಲರೂ ಸೇರಿ ಸರ್ಕಾರವನ್ನು ಮಾಡುವುದು.

**ಶ್ರೀ ಸಿ.ಟಿ.ರವಿ:–** ಮಾನ್ಯ ಮರಿತಿಬ್ಬೇಗೌಡರೇ, ನಿಮ್ಮ ಕಳಕಳಿ ವಾಸ್ತವಿಕವಾದುದಾಗಿದ್ದರೆ ದಿನಾಂಕ 01.03.2019ರಂದು ಈ ಆದೇಶವೇ ಆಗುತ್ತಿರಲಿಲ್ಲ. ದಿನಾಂಕ 01.03.2019ರಂದು ನಿಮ್ಮದೇ ಸರ್ಕಾರವಿತ್ತಲ್ಲವೇ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ರವಿಯವರೇ, ಮಾನ್ಯ ಮುಖ್ಯಮಂತ್ರಿಯವರ ಬಳಿ ನಿಮ್ಮ ಮಾತು ನಡೆಯುತ್ತದೆಯೋ ಇಲ್ಲವೋ, ಮಾನ್ಯ ಈಶ್ವರಪ್ಪನವರ ಮಾತು ನಡೆಯುತ್ತದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಟಿ.ರವಿ:–** ಹಾಗಾದರೆ ದಿನಾಂಕ 01.03.2019ರಂದು ನಿಮ್ಮದೇ ಸರ್ಕಾರವಿತ್ತಲ್ಲವೇ.. ಆಗ ಏಕೆ ಮಾಡಲಿಲ್ಲ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇಂದು ಮಾನ್ಯ ಈಶ್ವರಪ್ಪನವರು ಹೇಳುತ್ತಿರುವುದು ಸತ್ಯ. ಸುಳ್ಳನ್ನೇನೂ ಹೇಳುತ್ತಿಲ್ಲ. ಅದು ಯಾವುದೇ ಸರ್ಕಾರವಾಗಿರಲಿ, ಆರ್ಥಿಕ ಇಲಾಖೆಯ ಬಳಿ ಅದರ ಪರಿಸ್ಥಿತಿ ಹೀಗೆಯೇ ಇರುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1666**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಉತ್ತರವನ್ನು ನೀಡಿದ್ದಾರೆ.

ಇಂದು ಬೆಂಗಳೂರು ಎಂಬುದು ಒಂದು branded city ಆಗಿದೆ. ಜನರಿಗೆ ನೀರು ಹಾಗೂ ಉತ್ತಮ ಆಹಾರ ಪದಾರ್ಥಗಳನ್ನು ನೀಡಬಹುದು. ಆದರೆ ಗಾಳಿ ಎನ್ನುವುದನ್ನು ಯಾರೂ ಕೊಡುವುದಕ್ಕಾಗುವುದಿಲ್ಲ. ಗಾಳಿಯನ್ನು ಶುದ್ಧವಾಗಿಡಲು ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಬೇಕು ಎಂದು ಎಲ್ಲಾ ಇಲಾಖೆಗಳಲ್ಲಿಯೂ ಸಾಕಷ್ಟು ಯೋಜನೆಗಳನ್ನು ರೂಪಿಸಲಾಗುತ್ತದೆ. ಆದರೆ ಆ ರೂಪುರೇಷೆಗಳನ್ನು ಅನುಷ್ಠಾನಕ್ಕೆ ತರುವುದು ಆಗುವುದೇ ಇಲ್ಲ. ಇದು ಬಹಳ ಗಂಭೀರವಾದ ವಿಷಯ.

**ಸಭಾಪತಿಯವರು:–** ಮಾನ್ಯ ಸಚಿವರೇ ಉತ್ತರವನ್ನು ಕೊಡಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನಾನಿನ್ನೂ ಪ್ರಶ್ನೆಯನ್ನೇ ಕೇಳಿರುವುದಿಲ್ಲ. ನನ್ನದು ಐದು ಪ್ರಶ್ನೆಗಳಿವೆ. ನನ್ನ (ಅ) ಪ್ರಶ್ನೆಗೆ "ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ." ಎಂದು ಉತ್ತರವನ್ನು ನೀಡಿದ್ದಾರೆ. ಎರಡನೆಯದಾಗಿ ಸಾರಿಗೆ ಇಲಾಖೆ ಹಾಗೂ ಪರಿಸರ ಮಾಲಿನ್ಯ ಮಂಡಳಿ ಯಾವ ಕ್ರಮಗಳನ್ನು ಕೈಗೊಂಡಿವೆ ಎಂದು ಕೇಳಿರುವುದಕ್ಕೆ ಇಲ್ಲಿ ಕ್ರಮಗಳ ಬಗ್ಗೆ ಏನೂ ಹೇಳಿರುವುದಿಲ್ಲ. ಹಸಿರು ನ್ಯಾಯಪೀಠದ ಆದೇಶದನ್ವಯ 44 ಅಂಶಗಳ ಕ್ರಿಯಾಯೋಜನೆಯನ್ನು ಸಿದ್ಧಪಡಿಸಲಾಗಿದ್ದು, 14 ಅಂಶಗಳನ್ನು ರೂಪಿಸಲಾಗಿದೆ ಎಂದು ಹೇಳಿದ್ದಾರೆ. ಈ ಅಂಶಗಳನ್ನು ಸಂಬಂಧಪಟ್ಟ ಇಲಾಖೆಗಳು ಅನುಷ್ಠಾನಗೊಳಿಸುತ್ತಿವೆ. ಅಂದರೆ ನಾನು ಕೇಳಿರುವುದಕ್ಕೆ ಮಾನ್ಯ ಸಚಿವರು ಉತ್ತರವನ್ನು ನೀಡಿಲ್ಲ. ಇಲಾಖೆಯ internal correspondence ಅನ್ನು ಮಾಡಿಕೊಳ್ಳಲಾಗಿದ್ದು, ನೀವೇನು ಕೇಳಬೇಡಿ ಎನ್ನುವ ರೀತಿಯಲ್ಲಿ ಉತ್ತರವಿದೆ. ಸದನದಲ್ಲಿ ನಾವು ಕೇಳುವ ಪ್ರಶ್ನೆಗಳಿಗೆ ಒಂದು ಗೌರವವಿರಬೇಕು. ಅದನ್ನು ನಾವು ಸಾರ್ವಜನಿಕರ ಹಿತದೃಷ್ಟಿಯಿಂದ ಕೇಳಿರುತ್ತೇವೆ. ಅವರು ಸರಿಯಾದಂತಹ ಉತ್ತರವನ್ನು ಕೊಡಬೇಕು.

ಇನ್ನು ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ವಾಹನಗಳಿಂದ ಹಾನಿಕಾರಕ ಹೊಗೆಯು ಹೊರ ಹೊಮ್ಮುತ್ತಿದ್ದು, ಅವುಗಳ ಮೇಲೆ ಯಾವ ರೀತಿಯ ಕ್ರಮವನ್ನು ಜರುಗಿಸಲಾಗುತ್ತಿದೆ ಎಂದು ಕೇಳಿರುವುದಕ್ಕೆ ಯಾವುದೇ ಕ್ರಮವನ್ನು ಜರುಗಿಸದ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಖಾಸಗಿಯವರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ಮಾನ್ಯ ಸಚಿವರು ಅರ್ಧ ತಾಸು ನನ್ನೊಂದಿಗೆ ಬೆಂಗಳೂರಿನ ಸುತ್ತಮುತ್ತ ವೀಕ್ಷಿಸಲು ಬರಬೇಕು.

ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ. ಬಸ್‌ಗಳು ಯಾವ ರೀತಿ ಹೊಗೆಯನ್ನು ಉಗುಳುತ್ತಾ ಹೋಗುತ್ತಿರುತ್ತವೆ ಎಂಬುದನ್ನು ತೋರಿಸುತ್ತೇನೆ.

ಮಾನ್ಯ ಸಭಾಪತಿಯವರೇ, ವಾಹನ ಚಾಲಕರು ಮೊಬೈಲ್‌ನಲ್ಲಿ ಮಾತನಾಡಿಕೊಂಡು ಚಾಲನೆ ಮಾಡುತ್ತಿರುವುದರಿಂದ ಅಪಘಾತಗಳಾಗುತ್ತಿರುವ ಬಗ್ಗೆ ಉತ್ತರವನ್ನೇ ಕೊಟ್ಟಿಲ್ಲ. ಇದರ ಬಗ್ಗೆ ನಾನು ಪುನಃ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ದಯವಿಟ್ಟು ಅನುಮತಿಯನ್ನು ನೀಡಬೇಕು. ಇದು ಬಹಳ ಮುಖ್ಯವಾದ ವಿಷಯ. ಒಂದು ಕೋಟಿಗಿಂತಲೂ ಹೆಚ್ಚು ಜನಸಂಖ್ಯೆಯಿರುವಂತಹ ಈ ನಗರದಲ್ಲಿ ಕೊರೊನಾ ಬಗ್ಗೆ ಮಾತನಾಡುತ್ತಿರುವ ಈ ಸಂದರ್ಭದಲ್ಲಿ ಇಂದು ಗಾಳಿಯಿಂದ ಹರಡುತ್ತಿರುವ ಹೃದಯ, ಶ್ವಾಸಕೋಶ ಸಂಬಂಧಿ ಕಾಯಿಲೆಗಳಿಗೆ ಮಾಲಿನ್ಯವೇ ಮೂಲಕ ಕಾರಣ.

**ಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರವನ್ನು ಕೊಡಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಅವರಿಗೆ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಈಗ ಕೊಟ್ಟಿರುವ ಉತ್ತರವೇ ಸರಿಯಾಗಿಲ್ಲ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ಕೊಡುವುದಕ್ಕೆ ಮೊದಲೇ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ ಎಂಬ ತೀರ್ಮಾನವನ್ನು ಅವರೇ ಮಾಡಿದ ಮೇಲೆ ಉತ್ತರವನ್ನು ನಾನು ಏಕೆ ಕೊಡಬೇಕು?

**(...ಮುಂದು)**

(626) 12.10 20.3.2020 KG AK

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಷಯದಲ್ಲಿ ಕೋಪ ಮಾಡಿಕೊಳ್ಳಬಾರದು. ಮಾನ್ಯ ಸದಸ್ಯರು ಬೇಡವೆಂದು ಹೇಳಿದರೂ ಸಹ, ಮಾನ್ಯ ಸಚಿವರು ಉತ್ತರ ಕೊಡಬೇಕಾಗುತ್ತದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ನನಗೆ ಕೋಪ ಬರುವುದಿಲ್ಲ. ನನ್ನ style ಹಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ರಮೇಶ್‌ರವರಿಗೆ pollution ಬಗ್ಗೆ ಆ ರೀತಿಯ ಕಳಕಳಿ ಇದೆ. ಬೆಂಗಳೂರು pollution ನಿಂದ ಹದಗೆಡುತ್ತಿದೆ. ಅದಕ್ಕೆ ಅವರು present ಮಾಡುವ ರೀತಿ ಸ್ವಲ್ಪ ಹೆಚ್ಚು ಕಡಿಮೆ ಆಗಿದೆ ಅಷ್ಟೇ.

**ಸಭಾಪತಿಯವರು:–** ಸದಸ್ಯರುಗಳೇ ಸಾಕು ಬಿಡಿ. ದಯವಿಟ್ಟು ಕುಳಿತುಕೊಳ್ಳಿ, ಸಚಿವರೇ ಉತ್ತರ ಕೊಡಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ರಮೇಶ್‌ರವರು ಈ ಪರಿಸರದ ಬಗ್ಗೆ ಕಾಳಜಿ ಇರುವಂಥದ್ದನ್ನು ಅರ್ಥಮಾಡಿಕೊಂಡು ಈ ಪ್ರಶ್ನೆಗಳನ್ನು ಕೇಳಿದ್ದಾರೆ. ನಾವು ಈಗಾಗಲೇ ನಮ್ಮ ಇಲಾಖೆಯಲ್ಲಿರುವಂತಹ ಎಲ್ಲಾ ಸಾರಿಗೆ ಬಸ್‌ಗಳನ್ನು ಅನೇಕ ಬಾರಿ ತಪಾಸಣೆಗೆ ಒಳಪಡಿಸಿದ್ದೇವೆ. ಅದೇರೀತಿ ಖಾಸಗಿ ಬಸ್‌ಗಳನ್ನು ಸಹ ತಪಾಸಣೆಗೆ ಒಳಪಡಿಸಿದ್ದೇವೆ. ಅದರ ಜೊತೆಗೆ ಇಡೀ ಭಾರತ ದೇಶದ ಪರಿಸರವನ್ನು ಕಾಪಾಡಬೇಕು ಮತ್ತು ಮಾಲಿನ್ಯದಿಂದ ಹೊರಗೆ ಬರಬೇಕೆನ್ನುವಂತಹ ವಿಚಾರವನ್ನು ಇಟ್ಟುಕೊಂಡು ಇಡೀ ಭಾರತ ದೇಶದಲ್ಲಿ ಕರ್ನಾಟಕ ಒಳಗೊಂಡಿರುವಂತಹ ಬೆಂಗಳೂರು ನಗರವನ್ನು ಸೇರಿಸಿಕೊಂಡು, ಈಗಾಗಲೇ BS-IV engine; machine ಇವೆ, ಬಸ್‌ಗಳಿವೆ. ಏಪ್ರಿಲ್ 1ನೇ ತಾರೀಖಿನಿಂದ ಇಡೀ ದೇಶದಲ್ಲಿಯೇ BS-VI ಬಸ್‌ಗಳು ಮತ್ತು ವಾಹನಗಳು ಬರುವುದಕ್ಕೆ ಸಾಧ್ಯವಾಗುತ್ತದೆ. ನಾವು ಈಗಾಗಲೇ ಮೂರು ಸಾವಿರ ಬಸ್‌ಗಳನ್ನು ತೆಗೆದುಕೊಳ್ಳಬೇಕೆಂದು ಆದೇಶವನ್ನು ಕೊಟ್ಟಂತಹ ಸಂದರ್ಭದಲ್ಲಿ, ಅವರು ಮೂರು ಸಾವಿರ ಬಸ್‌ಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಕೇವಲ 1200 ಬಸ್‌ಗಳನ್ನು ಕೊಡುವುದಕ್ಕೆ ಮಾತ್ರ ಸೀಮಿತವಾಗುತ್ತೇವೆಂದು ಹೇಳಿದರು. ಕಾರಣವೇನೆಂದರೆ, ಏಪ್ರಿಲ್ 01ನೇ ತಾರೀಖಿನ ನಂತರ BS-VI engine ಕೊಡಬೇಕಾಗುತ್ತದೆ. ಹಾಗಾಗಿ, ನಾವು ಇಷ್ಟು ಬೇಗ ಅದನ್ನು ಕೊಡುವುದಕ್ಕೆ ಆಗುವುದಿಲ್ಲವೆಂಬ ವಿಚಾರವನ್ನು ತಿಳಿಸಿದರು. ನಾವು ಅದನ್ನು ಒಪ್ಪಿಕೊಂಡೆವು. ಮುಂದೆ ಏಪ್ರಿಲ್ 01ನೇ ತಾರೀಖಿನ ನಂತರ ಬೆಂಗಳೂರು ನಗರದಲ್ಲಿ ಬಿಎಂಟಿಸಿಯಿಂದ ಬರುವಂತಹ ಎಲ್ಲಾ ಬಸ್‌ಗಳನ್ನು BS-VI ಎನ್ನುವಂತಹ ಬಸ್‌ಗಳನ್ನು ಖರೀದಿ ಮಾಡುತ್ತೇವೆ. ನಾವು ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಮ್ಮ ಇಲಾಖೆ ಅತ್ಯಂತ ಆಸಕ್ತಿಯನ್ನು ವಹಿಸಿ ಕಾರ್ಯವನ್ನು ಪ್ರಾರಂಭ ಮಾಡಿದೆ. ಇದು ಒಂದು ವಿಚಾರವಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎರಡನೆಯದಾಗಿ, ಇದರ ಜೊತೆಗೆ ಒಂದು ಭಾಗ ಮುಂದುವರಿದು ಬೆಂಗಳೂರು ನಗರದಲ್ಲಿ ಹೆಚ್ಚಿಗೆ ಸಂಚರಿಸುವಂತಹ ಬಿಎಂಟಿಸಿ ಬಸ್‌ಗಳು ಏನಿವೆ, ಇದರಲ್ಲಿ ಹೆಚ್ಚಿಗೆ electric ಬಸ್‌ಗಳನ್ನು ಅಳವಡಿಸಿಕೊಂಡು ಪರಿಸರದಿಂದ ನಮಗೆ ಒಳ್ಳೆಯ ಒಂದು ವಾತಾವರಣ ಬರಲಿ ಎಂದು ಸುಮಾರು 400ಕ್ಕಿಂತ ಹೆಚ್ಚು electric ಬಸ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿದೆ. ಈಗಾಗಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ.

ಅದು ಮುಗಿದ ತಕ್ಷಣ ನಮಗೆ ಸುಮಾರು 400 ಬಸ್‌ಗಳು ಬರುತ್ತವೆ. ನಾವು ಇದನ್ನೆಲ್ಲಾ ಒಳ್ಳೆಯ ಪರಿಸರಕ್ಕಾಗಿ ಮಾಡುವಂತಹ efforts ಇದೆ. ಖಾಸಗಿಯವರು ಯಾರು electric ಬಸ್, ಕಾರು, ವಾಹನಗಳನ್ನು ತೆಗೆದುಕೊಳ್ಳುತ್ತಾರೆ ಅವರಿಗೂ ಸಹ 100 ಕಡೆಗೆ Charging Point ಗಳನ್ನು ಮಾಡಿದ್ದೇವೆ. ಈಗಾಗಲೇ ಅದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಬೆಂಗಳೂರಿನಲ್ಲಿ ಆಗುತ್ತಿರುವಂತಹ ಮಾಲಿನ್ಯವನ್ನು ತಡೆಗಟ್ಟಿ ಬೆಂಗಳೂರಿನಲ್ಲಿ ನೆಲೆಸಿರುವ ಜನರಿಗೆ ಉತ್ತಮವಾದಂತಹ ವಾತಾವರಣ ಸಿಗಬೇಕು. ಒಳ್ಳೆಯ ಗಾಳಿ ಸಿಗಬೇಕು ಮತ್ತು ಉತ್ತಮವಾದಂತಹ ಆರೋಗ್ಯ ಸಿಗಬೇಕು ಎನ್ನುವಂತಹ ವಿಚಾರದಿಂದ ನಾವು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಇದಕ್ಕೆ ಬೇರೆ ಏನಾದರು ಸಲಹೆ ಕೊಡುವುದಿದ್ದರೆ ಅದನ್ನು ನಾವು ಅತ್ಯಂತ ಗೌರವದಿಂದ ಸ್ವೀಕರಿಸಿ ಮುಂದೆ ಏನು ಮಾಡಬೇಕೆಂಬ ತೀರ್ಮಾನಕ್ಕೆ ಬರುತ್ತೇವೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ತೆಗೆದುಕೊಂಡಿರುವಂತಹ ಕ್ರಮಗಳ ಬಗ್ಗೆ ಹೇಳಿದ್ದಾರೆ, ಅದು ಸ್ವಾಗತಾರ್ಹ. ಆದರೆ, ಇವತ್ತು ಆಟೋ, ಟ್ಯಾಕ್ಸಿ ಇರಬಹುದು ಈ ವಾಹನಗಳು ಹಲವಾರು ರೀತಿಯಲ್ಲಿ public transportation ನಲ್ಲಿ, privatization ನಲ್ಲಿ ಅವರು involve ಆಗಿದ್ದಾರೆ, ಅಂತಹವರನ್ನು ಸರ್ಕಾರ ಯಾವ ರೀತಿ ಬದಲಾವಣೆ ತರುತ್ತಿದೆ? ಕಾರು, ಆಟೋಗಳು, ಬೇರೆ two stroke ವಾಹನಗಳಿಗೆ ಅದಕ್ಕೆ ಯಾವ ಬದಲಾವಣೆ ತರುತ್ತಿದ್ದೀರಿ. ಇದಲ್ಲದೆ ಲಾರಿಗಳು ಕಲ್ಲು ಮತ್ತು ಜಲ್ಲಿಯನ್ನು ತೆಗೆದುಕೊಂಡು ಹೋಗಬೇಕಾದರೆ ಹೊಗೆ ಉಗುಳಿಸಿಕೊಂಡು ಹೋಗುತ್ತಿರುತ್ತಾರೆ. ನಮ್ಮ ಕಾಯಿದೆಯಲ್ಲಿ 15 ವರ್ಷಗಳಿಗೂ ಮೇಲ್ಪಟ್ಟ ವಾಹನಗಳನ್ನು ತೆಗೆಯಬೇಕೆಂದು ಇದೆ. ಆದರೆ, ಅದು ಕೇವಲ ಪೇಪರ್‌ನ ಮೇಲೆ ಇರುವಂಥದ್ದಾಗಿದೆ. ಯಾವುದನ್ನು ಸರ್ಕಾರ ಅನುಷ್ಠಾನಕ್ಕೆ ತರಲಿಲ್ಲ. ಈ ರೀತಿಯ ಸುಮಾರು 80 ಲಕ್ಷ ವಾಹನಗಳು ಬೆಂಗಳೂರಿನಲ್ಲಿ ಪ್ರತಿನಿತ್ಯ ಸಂಚರಿಸುತ್ತಿವೆ. ಈ ವಾಹನಗಳಿಂದ ಬರುವಂತಹ ಹೊಗೆ ಎಂತಹ ಹಾನಿಕಾರಕವೆಂದರೆ, 60 ವರ್ಷಗಳ ಕಾಲ ಬದುಕುವ ಮನುಷ್ಯ, 35 ವರ್ಷಗಳಿಗೆ ಸಾಯುವಂಥ ಪರಿಸ್ಥಿತಿ ಈ ನಗರದಲ್ಲಿ ಸೃಷ್ಟಿಯಾಗಿದೆ, ಇದಕ್ಕೆ ವಾಹನಗಳು ಮಾತ್ರ ಕಾರಣವಲ್ಲ. ಬೇರೆ ಬೇರೆ ಕಾರಣಗಳು ಇವೆ. ಆದರೆ, ಇದು ಬಹಳ ಪ್ರಮುಖವಾದಂತಹ ಸಮಸ್ಯೆಯಾಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಗ್ಗೆ ಹೇಳಿದ್ದಾರೆ. ಆದರೆ, ಸರ್ಕಾರ ಯಾವ ವಾಹನಗಳಿಗೆ ಪರವಾನಗಿಯನ್ನು ಕೊಡುತ್ತದೆ ಅಥವಾ ನೋಂದಣಿ ಮಾಡಿಕೊಳ್ಳುತ್ತದೆ, ಅಂತಹ ವಾಹನಗಳ ಮೇಲೆ ಯಾವ ರೀತಿ ಹತೋಟಿ ಇಟ್ಟುಕೊಳ್ಳುತ್ತದೆ ಎಂಬುದನ್ನು ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಎಂ.ಫಾರೂಖ್:–** ಮಾನ್ಯ ಸಭಾಪತಿಯವರೇ, I would like to give a small suggestion. It will take a minimum of 7-8 hours for charging a vehicle in the Charging Stations. ಈಗ ಹೊಸದಾಗಿ ಒಂದು ಸಿಸ್ಟಮ್ ಬಂದಿದೆ; ಅದು ಏನೆಂದರೆ, ಹಳೆ ಬ್ಯಾಟರಿಯನ್ನು replace ಮಾಡಿ ಹೊಸ ಬ್ಯಾಟರಿ ಕೊಡುವಂತಹ ಒಂದು ವಿಧಾನ. ಈಗ ಅದನ್ನು ಗುಜರಾತ್‌ನಲ್ಲಿ ಪ್ರಾರಂಭ ಮಾಡಿದ್ದಾರೆ. ಸುಮಾರು ಹತ್ತು ಸಾವಿರ ಬಸ್‌ಗಳು ಇವೆ. ಎಲ್ಲಾ ಬಸ್‌ಗಳನ್ನು eradicate ಮಾಡಿ the government should completely go for electric buses. ಸರ್ಕಾರ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿದರೆ, there are private people who want to invest. ಅದನ್ನು ಕಿಲೋಮೀಟರ್ ಲೆಕ್ಕದಲ್ಲಿ ಕೊಟ್ಟುಬಿಡುವುದು. ಈಗ ದ್ವಿಚಕ್ರ ವಾಹನದಲ್ಲಿ ಅತಿ ಹೆಚ್ಚು carbon monoxide ಬರುತ್ತದೆ. ಅದರಲ್ಲಿ ಸಣ್ಣ ಸಣ್ಣ ಬ್ಯಾಟರಿಗಳು ಇವೆ. ಅದಕ್ಕೂ ಸಹ minimum four hours charging ಬೇಕು. ಅವರು ಬಂದು ಅಲ್ಲಿ ಕುಳಿತುಕೊಂಡು ಚಾರ್ಜ್ ಮಾಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಅವು ಮಾಲ್‌ಗಳಲ್ಲಿವೆ. ಅವುಗಳನ್ನು ಅಲ್ಲಲ್ಲಿ ಖಾಸಗಿಯವರಿಗೆ ಕೊಟ್ಟುಬಿಡಬೇಕು. ಈಗ IOC ಎಂದು ಒಂದು private company tie-up ಮಾಡಿದ್ದಾರೆ. ನಾವು ಅಂತಹ ಕಡೆಗೆ ಹೋದ ತಕ್ಷಣ the battery should be replaced immediately. ನಾವು 4 ಗಂಟೆಗಳ ಕಾಲ ಕಾಯುವುದಕ್ಕೆ ಆಗುವುದಿಲ್ಲ. So that way you can make this system.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, Fame India ಇದರಲ್ಲಿ Stage-I and Stage-II ನಲ್ಲಿ ಕೇಂದ್ರ ಸರ್ಕಾರದಿಂದ ಸುಮಾರು 18 ಕೋಟಿ ರೂಪಾಯಿಗಳು ನಮಗೆ ಸಬ್ಸಿಡಿ ಬರಬೇಕಾಗಿತ್ತು. 400 electric ಬಸ್‌ಗಳನ್ನು ಖರೀದಿ ಮಾಡಿ ಎಂದು ಬಂದಿತ್ತು. ಬಹುಶಃ ಅದು ಇಲ್ಲಿಯವರೆಗೂ utilize ಆಗಿಲ್ಲವೆಂದು ಕಾಣುತ್ತೆ. ಬಹುಶಃ ಅದು ಏನಾಯಿತು ಎಂದು ಮಾನ್ಯ ಸಚಿವರಲ್ಲಿ clarification ಕೇಳಬಯಸುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಸುಮಾರು 4 ರಿಂದ 5 ಗಂಟೆಗಳ ಕಾಲ battery charge ಮಾಡುವಂತಹ ಸಂದರ್ಭ ಬರುತ್ತದೆ. ಈಗ ಹೊಸ technology ಬಂದಿದೆ. ಈಗ ಕೇವಲ ಅರ್ಧ ಗಂಟೆಯಲ್ಲಿ battery charge ಆಗುವಂತಹ ಹೊಸ ತಾಂತ್ರಿಕತೆ ಪ್ರಾರಂಭವಾಗಿವೆ. ಮಾನ್ಯ ಸದಸ್ಯರು battery replacement ಬಗ್ಗೆ ಹೇಳಿದ್ದಾರೆ. ನಾವು ಅದನ್ನು ಪರಿಶೀಲನೆ ಮಾಡುತ್ತೇವೆ. ಅದರ ಜೊತೆಗೆ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ರವರು ಕೇಳಿರುವಂತಹ ಖಾಸಗಿ ವಾಹನಗಳ ಮತ್ತು ಸರ್ಕಾರಿ ಬಸ್‌ಗಳಿಂದ ಆಗುವಂತಹ ಮಾಲಿನ್ಯವನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಡೆಗಟ್ಟಲು ಕೈಗೊಂಡಿರುವಂತಹ ಕ್ರಮಗಳನ್ನು ಸ್ವಾಗತಾರ್ಹವೆಂದು ಹೇಳಿದ್ದಾರೆ. ಖಾಸಗಿಯವರಿಗೂ ಸಹ ಬಿಗಿಯಾಗಿ ಅಧಿಕಾರಿಗಳು ಸೂಚನೆ ಕೊಡುವುದರ ಮೂಲಕ ಖಾಸಗಿ ವಾಹನಗಳ Fitness Certificate ಗಳನ್ನು ತೆಗೆದುಕೊಳ್ಳುವಂತೆ ಮಾಡಿದ್ದೇವೆ. ಅನೇಕ ಕಡೆಗಳಲ್ಲಿ Fitness station ಗಳನ್ನು ಮಾಡಿದ್ದೇವೆ. ಯಾವ ವಾಹನಗಳು fitness ಗೆ ಒಳಪಡುವುದಿಲ್ಲವೋ ಅಂತಹವರ ವಿರುದ್ಧ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅಲ್ಲದೇ, ಅನೇಕ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆ. ಅಂತಹವರಿಗೆ ದಂಡ ಸಹ ಹಾಕಿದ್ದೇವೆ. ಅಂತಹವರಿಗೆ ನೋಟಿಸ್ ಕೊಡುವಂತಹ ಕೆಲಸವನ್ನು ಸಹ ಮಾಡಿದ್ದೇವೆ. ಒಟ್ಟಾರೆಯಾಗಿ, ಸರ್ಕಾರದಿಂದ ಪರಿಸರ ಕಾಪಾಡುವಂತಹ ಕೆಲಸ ಏನಾಗಬೇಕಿದೆ, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಪರಿಸರ ಕಾಪಾಡುವುದರ ಬಗ್ಗೆ ಇನ್ನೂ ತಮ್ಮ ಸಲಹೆಗಳು ಏನಾದರೂ ಇದ್ದರೆ, ನಾವು ಮುಕ್ತ ಮನಸ್ಸಿನಿಂದ ಕೊಡಬಹುದು. ನಿಮೆಲ್ಲರ ಸಲಹೆಗಳನ್ನು ಪಡೆದುಕೊಂಡು ಮುಂದೆ ಕಾರ್ಯೋನ್ಮೂಖರಾಗಲು ಸಿದ್ಧರಿದ್ದೇವೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದರ ಜೊತೆಗೆ ಕೇಂದ್ರ ಸರ್ಕಾರದ ಯೋಜನೆ ಏನಿತ್ತು, ಅದಕ್ಕೆ ಕೇಂದ್ರ ಸರ್ಕಾರದ ಹಣ ಬಂದಿದೆ. ಈಗ ನಾವು ಟೆಂಡರ್ ಕರೆದಿರುವುದು ಅದೇ ಯೊಜನೆಗೆ. ಈ ಮೊದಲು ಒಂದು ಟೆಂಡರ್‌ನ್ನು ಕರೆದಿದ್ದೆವು ಅದು single ಟೆಂಡರ್ ಆಗಿತ್ತು. ಟೆಂಡರ್ ಆಗಿರುವುದರಿಂದ ಕೊಡಬಾರದೆಂದು ವಿಚಾರ ಮಾಡಿಕೊಂಡು ಮತ್ತು ಅವರ tariff rate ಬಹಳ ಜಾಸ್ತಿ ಇತ್ತು. ಸಾರ್ವಜನಿಕರಿಗೆ ಹೊರೆಯಾಗಬಾರದು ಎನ್ನುವ ದೃಷ್ಟಿಯಿಂದ re-tender ಮಾಡಿದ್ದೇವೆ. ಕೇಂದ್ರ ಸರ್ಕಾರದ ಯೋಜನೆಯಲ್ಲಿ ಅದನ್ನು ಸುಮಾರು 400 ಬಸ್‌ಗಳಿಗೆ ಟೆಂಡರ್ ಕರೆದಿದ್ದೇವೆ. ಇನ್ನು ಕೆಲವೇ ದಿವಸಗಳಲ್ಲಿ ಟೆಂಡರ್ ಓಪನ್ ಆಗುತ್ತದೆ. ಅದರಲ್ಲಿ ಸುಮಾರು 3 ರಿಂದ 4 ಜನರು ಭಾಗವಹಿಸಿದ್ದಾರೆ.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮೊಬೈಲ್ ಬಳಸಿಕೊಂಡು ವಾಹನಗಳನ್ನು ಚಾಲನೆ ಮಾಡುತ್ತಿರುತ್ತಾರೆ. ಅದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಅಲ್ಲದೇ, ಇದರಿಂದ ಬಹಳಷ್ಟು ಅನಾಹುತಗಳು ಆಗಿವೆ ಎಂದು ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ. ಆದ್ದರಿಂದ, ಎಲ್ಲಾ ಕಡೆ ಸಿಸಿ ಟಿವಿ ಹಾಕಿ ಯಾರು ಮೊಬೈಲ್ ಬಳಸಿಕೊಂಡು ವಾಹನಗಳನ್ನು ಚಾಲನೆ ಮಾಡಿಕೊಂಡು ಹೋಗುತ್ತಾರೆ, ಅಂತಹವರನ್ನು surveillance ನಲ್ಲಿ ಅದನ್ನು ತರುವಂತಹ ಒಂದು network create ಮಾಡಿದರೆ, ಇದರಿಂದ ಬಹಳಷ್ಟು ಅನಾಹುತಗಳು ಕಡಿಮೆ ಆಗುತ್ತವೆ ಎಂದು ನನಗೆ ಅನಿಸುತ್ತದೆ. ಈ ದಿಶೆಯಲ್ಲಿ ಸರ್ಕಾರ ಚಿಂತನೆ ಮಾಡುವಂಥದ್ದು ಬಹಳ ಮುಖ್ಯ. ಇದರಿಂದ ಪ್ರಾಣ ಹಾನಿಯಾಗುವಂತಹದ್ದನ್ನು ತಡೆಯಬಹುದು. ವಾಹನಗಳ ಸಂಚಾರ ಸಹ ಒಂದು ತರಹ secured ವಾಹನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂಚಾರ ಆಗುತ್ತದೆ. ಇದರ ಕಡೆಗೆ ಸರ್ಕಾರ ಸ್ವಲ್ಪ ಗಂಭೀರವಾಗಿ ಗಮನಹರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಕೆಲವು ಖಾಸಗಿ ಬಸ್‌ಗಳಿಗೆ ಸೀಮೆ ಎಣ್ಣೆ ಹಾಕಿ ಬಸ್‌ಗಳನ್ನು ಓಡಿಸುತ್ತಾರೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ವಾಹನಗಳನ್ನು ಚಾಲನೆ ಮಾಡುವಾಗ ಮೊಬೈಲ್ ಬಳಸುವುದಕ್ಕೆ ನಿರ್ಬಂಧ ಇದೆ. ಕಾನೂನಿನಲ್ಲಿ ಅಂತಹವರಿಗೆ ದಂಡ ವಿಧಿಸುವಂತಹ ವ್ಯವಸ್ಥೆ ಸಹ ಇದೆ. ಇದರ ಬಗ್ಗೆ ನಮ್ಮ ಅಧಿಕಾರಿಗಳನ್ನು ಇನ್ನಷ್ಟು ಚುರುಕುಗೊಳಿಸಲಾಗುವುದು. ಅವರು ಖಾಸಗಿ ವಾಹನ ಚಾಲನೆ ಮಾಡುತ್ತಿರಬಹುದು ಅಥವಾ ಸರ್ಕಾರಿ ವಾಹನ ಚಾಲನೆ ಮಾಡುತ್ತಿರಬಹುದು ಅಂತಹವರ ಮೇಲೆ ತಕ್ಷಣ ಯಾವುದೇ ಮುಲಾಜಿಲ್ಲದೆ ಅವರ ಮೇಲೆ ಕೇಸ್ ಹಾಕಿ, ಅವರು ಮೊಬೈಲ್ ಬಳಸಿಕೊಂಡು ಚಾಲನೆ ಮಾಡುವಂಥದ್ದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

(ಮುಂದು.,)

(627)20–03–2020(12–20)ಎಂವಿ–ಎಕೆ

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಒಂದು ಮನವಿ ಏನೆಂದರೆ, ಇತ್ತೀಚೆಗೆ ಕೋರ್ಟ್‌ನಿಂದ ಆದೇಶ ಬಂದಿದ್ದು, ವಾಹನಗಳ ಮುಂಭಾಗದಲ್ಲಿ ಬೋರ್ಡ್‌ಗಳಲ್ಲಿ ತಮ್ಮ ಹೆಸರುಗಳನ್ನು ಬರೆಯಿಸುವುದು, ಸ್ಟಿಕರಿಂಗ್ ಮಾಡಿಸುವುದು, ಕರ್ನಾಟಕ ಸರ್ಕಾರ ಮತ್ತು ಶಾಸಕರು ಎಂದು ಬರೆಯಿಸುವುದು ಇವುಗಳ ಬಗ್ಗೆ ಸ್ವಲ್ಪ ಗೊಂದಲಗಳಿವೆ. ಇದನ್ನು ಮಾಡಬೇಕೆ, ಮಾಡಬಾರದೆ. ಇವತ್ತಿನ ದಿವಸ ಹಲವಾರು ಸಂಘಟನೆಗಳು ರಾಜಾರೋಷವಾಗಿ ದೊಡ್ಡ ದೊಡ್ಡ ಸೈಜ್‌ಗಳಲ್ಲಿ ಬೋರ್ಡ್‌ಗಳನ್ನು ಹಾಕಿಕೊಂಡು ಓಡಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಕೇಳಿರುವಂಥದ್ದು, ಈ ಖಾಸಗಿ ವಾಹನಗಳಲ್ಲಿ ಅನೇಕ ಸಂಘಟನೆಯವರು ಅವುಗಳ ಮುಂದೆ ಬೋರ್ಡ್ ಬರೆಯಿಸಿಕೊಂಡು ತಾವು ಶಾಸಕರು, ವಿಧಾನ ಪರಿಷತ್ತಿನ ಸದಸ್ಯರು, ಜಿಲ್ಲಾ ಪಂಚಾಯತ್ ಸದಸ್ಯರು, ತಾಲ್ಲೂಕು ಪಂಚಾಯತ್ ಸದಸ್ಯರು, ಗ್ರಾಮ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಪಂಚಾಯತ್ ಸದಸ್ಯರು ಎಂದು ತಮ್ಮ ಹೆಸರನ್ನು ಹಾಕಿಕೊಂಡು ಅದನ್ನು ಬಿಂಬಿಸುವಥದ್ದನ್ನು ನಾವು ತಡೆಯುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಅದನ್ನು ಸಂಪೂರ್ಣವಾಗಿ ನಿಷೇಧ ಮಾಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ಟೋಲ್‌ಗಳಲ್ಲಿ ದೊಡ್ಡ ಗಲಾಟೆಯಾಗುತ್ತಿದೆ. ಯಾರ್‍ಯಾರೊ ಬೋರ್ಡ್‌ಗಳನ್ನು ಹಾಕಿಕೊಂಡು ಹೋಗುತ್ತಾರೆ. ನಾವು ನಿಜವಾಗಿ ಹೋದರೆ ಅವರು ನಮ್ಮನ್ನು ಬಿಡುವುದಿಲ್ಲ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಅದಕ್ಕೆ ಒಂದು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಿ. ಈಗ Name Plate ಮೇಲೆ ಶಾಸನ ಸಭೆಯ ಸದಸ್ಯರನ್ನೊಳಗೊಂಡು ಯಾರು ಹೆಸರು ಹಾಕಬಾರದು ಎಂದು ಕೋರ್ಟ್ ಆದೇಶ ಮಾಡಿದೆ. ಅದಕ್ಕೆ ಒಂದು ತೀರ್ಮಾನ ಮಾಡಬೇಕು. ಈಗ ಅಲ್ಲಿ ಪಾಸ್ ಕೇಳುತ್ತಾರೆ ನಮ್ಮದು ಏನೂ ತೊಂದರೆ ಇಲ್ಲ ಅದನ್ನು ನಾವು ತೋರಿಸಿ ಹೋಗುತ್ತೇವೆ. ನಕಲಿಯವರೆ ಜಾಸ್ತಿ ಜನ ಹೋಗುತ್ತಿದ್ದಾರೆ. ನಮ್ಮ ಪಾಸುಗಳನ್ನು ಜೆರಾಕ್ಸ್ ಮಾಡಿಸಿಕೊಂಡು, ಅದನ್ನು ಕಾರಿಗೆ ಅಂಟಿಸಿಕೊಂಡು ಹೋಗುತ್ತಾರೆ. ಅಲ್ಲಿ ಅವರು ಶಾಸಕರ ಘನತೆ ಗೌರವ ಕಡಿಮೆ ಆಗುವ ಸ್ಥಿತಿಗೆ ತಂದಿದ್ದಾರೆ. ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಇದಕ್ಕೆ ಏನಾದರೂ ಒಂದು ಪರಿಹಾರ ಕಂಡು ಹಿಡಿಯಿರಿ. ಶಾಸಕರಿಗೆ ಏನು ಮಾಡಬೇಕೆಂದು ಚರ್ಚೆ ಮಾಡಿ. ಶಾಸಕರು ಐಡಿ ಕಾರ್ಡ್ ತೋರಿಸಬೇಕೆಂದು ಇದೆ. ಐಡಿ ಕಾರ್ಡ್ ತೋರಿಸುವಾಗ ಸಹಿತ ಎಷ್ಟೋ ಬಾರಿ ಐಡಿ ಕಾರ್ಡ್ ಅನ್ನು ಯಾರ್‍ಯಾರೊ ತೆಗೆದುಕೊಂಡು ಹೋಗಿರುತ್ತಾರೆ. ಈ ರೀತಿಯೆಲ್ಲಾ ಆಗುತ್ತದೆ. ಟೋಲ್‌ಗಳಲ್ಲಿ ಅವರುಗಳೇ ಬೇಕಾದಷ್ಟು ತಪ್ಪುಗಳನ್ನು ಮಾಡುತ್ತಾರೆ. ಅದಕ್ಕೆ ಮಾನ್ಯ ಸಚಿವರು ಒಂದು ಸಭೆಯನ್ನು ಕರೆದರೆ, ನಾವೆಲ್ಲರೂ ಸಲಹೆ ಕೊಡುತ್ತೇವೆ. ನಾವು ಸಲಹೆ ಕೊಟ್ಟಹಾಗೆ ಮಾಡಿದರೆ ಸರಿಯಾಗುತ್ತದೆ ಎಂಬುದು ನನ್ನ ಅನಿಸಿಕೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದಕ್ಕೆ ಪೂರಕವಾಗಿ ಇನ್ನೊಂದು ಪ್ರಶ್ನೆ ಇದೆ. ನಾನು ಈ ಹಿಂದೆ ಕೂಡ ಚರ್ಚೆ ಮಾಡಿದ್ದೇನೆ ಅದು ಮಾನ್ಯ ಸಚಿವರಿಗೆ ಗೊತ್ತಿದೆ. ಶಾಸಕರ ಅನುದಾನ ಎಂದು ಬರುತ್ತದೆ. ಈಗಾಗಲೇ ಹೈಕೋರ್ಟ್ ಹೇಳಿದ್ದಾರೆ, ಸಂಬಂಧಪಟ್ಟ ಶಾಸಕರು ಬೋರ್ಡ್ ಹಾಕಿಕೊಂಡು, ಊರೆಲ್ಲಾ ಫೋಟೋ ಹಾಕಿಕೊಳ್ಳುತ್ತಾರೆಂದು ಹೈಕೋರ್ಟ್‌ನವರು tackle ಮಾಡುತ್ತಾರೆ. ಅಲ್ಲಿ ಶಾಸಕರ ಅನುದಾನವೆಂದು ಹೇಳಿದರೆ ಪರವಾಗಿಲ್ಲ. ಆ ಸಮಯದಲ್ಲಿ ಯಾರು ಶಾಸಕರು ಇದ್ದರು ಎಂದು ಗೊತ್ತಾಗುತ್ತದೆ. ಮಾನ್ಯ ಶಾಸಕರು ಫೋಟೋಗಳನ್ನು ಹಾಕಿಕೊಳ್ಳುತ್ತಾರೆಂದು ಹೈಕೋರ್ಟ್‌ನವರು objection ಮಾಡಿದ್ದಾರೆ. ಫೋಟೋಗಳನ್ನು Bus Stand ನಲ್ಲಿ ಎಲ್ಲೂ ಹಾಕಬಾರದು ಎನ್ನುತ್ತಾರೆ. ಈಗ ನಾವು ಶಾಸಕರ ಅನುದಾನದಲ್ಲಿ ಬಸ್ ನಿಲುಗಡೆಗಳಲ್ಲಿ Bus Shelter ಗೆ ಅನುದಾನ ಕೊಟ್ಟಿರುತ್ತೇವೆ. ಕಲ್ಯಾಣ ಮಂಟಪಗಳಿಗೆ ಅನುದಾನ ಕೊಟ್ಟಿರುತ್ತೇವೆ. ಆದುದರಿಂದ ನಾವು ನಮ್ಮ ಫೋಟೋ ಹಾಕಿ ಶಾಸಕರ ಅನುದಾನ ಎಂದು ಬೋರ್ಡ್ ಹಾಕಿರುತ್ತೇವೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುದಾನವನ್ನು ನಿಮ್ಮ ಮನೆಯಿಂದ ಕೊಡುತ್ತೀರಾ? ಅದು ಜನರ ಹಣ, ಆ ಜನರ ಹಣದಲ್ಲಿ they have no right to put their photos. ಅದು advertisement ಅಲ್ಲ. ಶಾಸಕರ ಅನುದಾನ ಮತ್ತು ಅವರ period ಹಾಕಿ. ಆ period ನಲ್ಲಿ ಯಾರು ಶಾಸಕರು ಇರುತ್ತಾರೆಂದು ಗೊತ್ತಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಪಿ.ಐ.ಎಲ್.ಗಳನ್ನು ಹಾಕುತ್ತಿದ್ದಾರೆ. ನಮಗೆ ಆ ರೀತಿಯ ಪ್ರಚಾರ ಬೇಕಾಗಿಲ್ಲ. ಕೆಲಸ ಯಾರು ಮಾಡುತ್ತಾರೆಂದು ಜನರಿಗೆ ಗೊತ್ತಾಗುತ್ತದೆ. ದಯಮಾಡಿ ಅದರಲ್ಲೂ ಒಂದು conclusion ಗೆ ಬರಬೇಕು. ಅನುದಾನ ಕೊಟ್ಟಂತಹ ಸಂದರ್ಭದಲ್ಲಿ, ಆ ಅನುದಾನ ಶಾಸಕರ ನಿಧಿ ಮತ್ತು ಸಂಸದರ ನಿಧಿ ಎಂದು ಬರಲಿ. ಆದರೆ, ಫೋಟೋಗಳನ್ನು ಹಾಕುವ ವಿಚಾರದಲ್ಲಿ ಪಿ.ಐ.ಎಲ್.ಗಳನ್ನು ಹಾಕುತ್ತಿದ್ದಾರೆ. ಅದು ಒಂದು ತರಹ ನಮಗೆ ಅವಮಾನದ ರೀತಿ ಕಾಣುತ್ತದೆ. ಅದರ ಬಗ್ಗೆ ಒಂದು ತೀರ್ಮಾನ ಮಾಡಬೇಕಾಗುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಾರಿಗೆ ಸಚಿವರಿಗೆ ಕೇಳಿಕೊಳ್ಳುವುದೇನೆಂದರೆ, ಈಗ ಲಾರಿಗಳಲ್ಲಿ ದೊಡ್ಡ ದೊಡ್ಡ ಚಪ್ಪಡಿಗಳು ಮತ್ತು ಎಂ–ಸ್ಯಾಂಡ್ ಇವುಗಳನ್ನು ಸಾಗಿಸಬೇಕಾದರೆ, ಅವುಗಳನ್ನು ಮುಚ್ಚಿರಬೇಕು. ನಾವು ರಸ್ತೆಯಲ್ಲಿ ಹೋಗಬೇಕಾದರೆ, ಲಾರಿಯಿಂದ ಕಲ್ಲು ಬಿದ್ದು ಮೂರು ಬಾರಿ ನನ್ನ ಕಾರಿನ ಗಾಜು ಒಡೆದು ಹೋಗಿದೆ. ಕೆಲವು ಬಾರಿ ಅಪಘಾತಗಳು ಕೂಡ ಆಗಿದೆ. ಲಾರಿಯಲ್ಲಿ ಚಪ್ಪಡಿ ಕಲ್ಲು ಮತ್ತು ಎಂ–ಸ್ಯಾಂಡ್‌ನ್ನು ತೆಗೆದುಕೊಂಡು ಹೋಗಬೇಕಾದರೆ ಅವು ಕೆಳಗೆ ಬೀಳುತ್ತಿರುತ್ತವೆ. ಆದುದರಿಂದ ಅದನ್ನು ಪೂರ್ತಿಯಾಗಿ ಮುಚ್ಚಿರಬೇಕು. ಇದರ ಬಗ್ಗೆ ಸರ್ಕಾರ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳದೆ ಇದ್ದರೆ ಪ್ರಾಣಹಾನಿ ಮತ್ತು ವಾಹನಗಳಿಗೆ ಡ್ಯಾಮೇಜ್ ಆಗುತ್ತದೆ. ಇದರಿಂದ ಆಗುವಂತಹ ಅನಾಹುತವನ್ನು ತಪ್ಪಿಸಬೇಕು.

**ಶ್ರೀ ಬಿ.ಎಂ.ಫಾರೂಖ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಒಂದು ಮನವಿ ಏನೆಂದರೆ, ಈಗ ಇಡೀ ರಾಜ್ಯದಲ್ಲಿರುವ ಎಲ್ಲಾ Bus Stand ಮತ್ತು Workshop ಗಳ ಮೇಲೆ rooftop solar ಅಳವಡಿಸುವುದಕ್ಕೆ ಒಂದು ಯೋಜನೆ ಮಾಡಿ. ತಮ್ಮ ಉಪಯೋಗಕ್ಕೆ ಎಷ್ಟು ವಿದ್ಯುಚ್ಛಕ್ತಿ ಬೇಕು ಅದನ್ನು consumption ಮಾಡಿ, ಉಳಿಯುವ ಬಾಕಿಯನ್ನು ಮೀಟರ್ ಮುಖಾಂತರ ವಿದ್ಯುತ್ ಸರಬರಾಜು ಕಂಪನಿಗಳಿಗೆ ನೀಡಿ. So it will be more profitable and you will also cut lot of pollution. ಅದರ ಬಗ್ಗೆ ಸ್ವಲ್ಪ ಗಮನ ಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಮೂರ್‍ನಾಲ್ಕು ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ನೀಡಿದ್ದಾರೆ. ಮೊದಲನೆಯದಾಗಿ, ಸದಸ್ಯರಾದ ಮಾನ್ಯ ಎಸ್.ಎಲ್.ಭೋಜೇಗೌಡರು ಶಾಸಕರ ನಿಧಿಯ ಲೋಪಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳಿದ್ದಾರೆ. ಈ ವಿಷಯ ನನ್ನ ಇಲಾಖೆಗೆ ಬರುವುದಿಲ್ಲ. ಅದರ ಬಗ್ಗೆ ಸಂಬಂಧಪಟ್ಟವರ ಸಚಿವರಿಂದ ಉತ್ತರ ಒದಗಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಎರಡನೆಯದಾಗಿ, ಎಂ–ಸ್ಯಾಂಡ್ ಮತ್ತು ಕಟ್ಟಡಗಳ ಸಾಮಗ್ರಿಗಳನ್ನು ಸರಬರಾಜು ಮಾಡುವಾಗ open ಇರುವಂತಹ ಸಂದರ್ಭದಲ್ಲಿ ಅದು ನನಗೂ ಕೂಡ ಅನುಭವವಾಗಿದೆ. ಇದರಿಂದ ಗಾಜುಗಳು ಒಡೆದು, ಬೈಕ್‌ನಲ್ಲಿ ಹೋಗುವವರಿಗೆ ವಿಪರೀತ ಪರಿಣಾಮ ಬೀರುವುದನ್ನು ನಾನು ನೋಡಿದ್ದೇನೆ. ಅದಕ್ಕೆ ನಾವು ಮತ್ತು ಮಾನ್ಯ ಗೃಹಮಂತ್ರಿಗಳು ಹಾಗೂ ಅಧಿಕಾರಿಗಳ ಜೊತೆ ಒಂದು ಜಂಟಿ ಸಭೆ ಮಾಡಬೇಕು. ಏಕೆಂದರೆ, ಕೇವಲ ಸಾರಿಗೆ ಇಲಾಖೆಯವರು ಅದನ್ನು ಪೂರ್ತಿಯಾಗಿ ನಿಷೇಧ ಮಾಡುವುದಕ್ಕೆ ಕಷ್ಟವಾಗಬಹುದು. ಅದಕ್ಕೆ ಮಾನ್ಯ ಗೃಹಮಂತ್ರಿಗಳ ಜೊತೆ ಒಂದು ಜಂಟಿ ಸಭೆ ಮಾಡಿ, ಅದಕ್ಕೆ ಸೂಚನೆಯನ್ನು ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಅದರ ಬಗ್ಗೆ ಕಾಳಜಿ ವಹಿಸುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಸದಸ್ಯರಾದ ಮಾನ್ಯ ಬಿ.ಎಂ.ಫಾರೂಖ್‌ರವರು ಸೋಲಾರ್ ಬಗ್ಗೆ ಬಹಳ expert ಇದ್ದಾರೆ. ಅವರ ಸಲಹೆಯನ್ನು ಕೂಡ ಪಡೆದುಕೊಳ್ಳುತ್ತೇನೆ. ರೂಫ್‌ಟಾಪ್ ಮೇಲೆ ಸೋಲಾರನ್ನು ಬಳಸಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಹಣಕಾಸಿನ ಲಭ್ಯತೆಯನ್ನು ನೋಡಬೇಕಾಗುತ್ತದೆ.

**ಶ್ರೀ ಬಿ.ಎಂ.ಫಾರೂಖ್:–** ಮಾನ್ಯ ಸಭಾಪತಿಯವರೇ, ಒಂದು ತಾವು ಹೂಡಿಕೆ ಮಾಡಬಹುದು ಅಥವಾ you can rent out the roofs also. ಏಕೆಂದರೆ, ಪ್ರೈವೇಟ್‌ನವರು ಸಹ ಬಂದು ಮಾಡುತ್ತಾರೆ. ತಮಗೆ ಎಷ್ಟು ಬೇಕು ಅಷ್ಟನ್ನು ಉಪಯೋಗಿಸಿಕೊಂಡು ಉಳಿಯುವುದನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ನೀಡಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ರೂಫ್‌ಟಾಪ್ ಮೇಲೆ ಸೋಲಾರ್ ಮಾಡಿಕೊಂಡು, ಅದನ್ನು ಹೊರಗುತ್ತಿಗೆ ಕೊಟ್ಟು, ಅದರಿಂದ ಸರ್ಕಾರಕ್ಕೆ ಏನು ಆದಾಯ ಬರುತ್ತದೆಂದು ನೋಡಿಕೊಂಡು ಮಾಡುವುದಕ್ಕೆ ಪ್ರಯತ್ನಪಡುತ್ತೇವೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಹೊರಟ್ಟಿ ಸಾಹೇಬರು ಕೇಳಿರುವ ಪ್ರಶ್ನೆಗೆ ಉತ್ತರ ಬಂದಿಲ್ಲ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಹೊರಟ್ಟಿಯವರು ಕೇಳಿರುವುದು, ಟೋಲ್‌ಗಳಲ್ಲಿ ಶಾಸಕರಿಗೆ ಮತ್ತು ಎಂ.ಪಿ.ಗಳಿಗೆ ತೊಂದರೆಯಾಗುತ್ತಿದೆ. ಬೇರೆ ಬೇರೆಯವರು ಅದನ್ನು ಜೆರಾಕ್ಸ್ ಮಾಡಿಕೊಂಡು ದುರುಪಯೋಗವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಅದು ನಮ್ಮ ಇಲಾಖೆಗೆ ಬರುವುದಿಲ್ಲ. ಆದರೂ ಕೂಡ National Highways Authority of India ಯವರ ಜೊತೆ ಒಂದು ಜಂಟಿ ಸಭೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತೇವೆ. ಕೆಲವು ರಾಜ್ಯ ಹೆದ್ದಾರಿಗಳು ಮಾತ್ರ ಲೋಕೋಪಯೋಗಿ ಇಲಾಖೆಗೆ ಬರುತ್ತದೆ. National Highway ಇರತಕ್ಕಂಥದ್ದು, National Highways Authority of India ಅಧಿಕಾರಿಗಳ ಜೊತೆ ಜಂಟಿ ಸಭೆ ಮಾಡಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ನಾವು ಒಂದು ತೀರ್ಮಾನಕ್ಕೆ ಬರುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಲೋಕೋಪಯೋಗಿ ಇಲಾಖೆಯ ಸಚಿವರು ಮತ್ತು National Highways Authority of India ಅಧಿಕಾರಿಗಳನ್ನು ಕರೆದು ಸಭೆ ಮಾಡಬೇಕು. ಈ ಹಿಂದೆ ಒಂದು ಬಾರಿ ಸಭೆಯಾಗಿತ್ತು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 1635**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ್ ಸಿಂಗ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಿದ್ರಿ ಕಲೆ ವಿಶ್ವದಲ್ಲೇ ಅತ್ಯಂತ ಖ್ಯಾತಿಯಾಗಿದೆ ಮತ್ತೆ ಅದು Geographical Index Register ನಲ್ಲೂ ಸ್ಥಾನ ಪಡೆದಿದೆ. ಇಂತಹ ಅಪರೂಪದ ಬಿದ್ರಿ ಕಲೆ ಬೀದರ್ ಜಿಲ್ಲೆಯ ಹೆಮ್ಮೆಯ ವಿಷಯ. ಇಂತಹ ವಿಶ್ವವಿಖ್ಯಾತ ಕಲಾಕೃತಿಗಳನ್ನು ಸಿದ್ಧಪಡಿಸುವ ಕಾರ್ಯದಲ್ಲಿ ಬೀದರ್‌ನ ಹಲವು ಕುಟುಂಬಗಳು ಜೀವನಾಧಾರವನ್ನು ಮಾಡುತ್ತೀವೆ. ಆದರೆ, ಸಚಿವರು ತಮ್ಮ ಉತ್ತರದಲ್ಲಿ ಕೇವಲ 300 ಕುಟುಂಬಗಳು ಕಲೆಯಲ್ಲಿ ತೊಡಗಿವೆ ಎಂದು ತಿಳಿಸಿದ್ದಾರೆ. ಇದಕ್ಕಿಂತ ಮೊದಲು ಬಹಳಷ್ಟು ಕುಟುಂಬಗಳು ಇದೇ ಕೆಲಸವನ್ನು ಮಾಡುತ್ತಿದ್ದವು. ಈಗ ಇದು ಏಕೆ ಇಷ್ಟು ಕಡಿಮೆಯಾಗುತ್ತಿದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಇದಕ್ಕೆ ಕಾರಣವೇನೆಂದರೆ, ಆರ್ಥಿಕ ಮುಗ್ಗಟ್ಟು ಮತ್ತು ಸೂಕ್ತ ಮಾರುಕಟ್ಟೆಯ ಕೊರತೆ ಇದೆ. ಕಲಾಕೃತಿಗಳ ಸಿದ್ಧತೆಗೆ ಸ್ಥಳಾವಕಾಶದ ಕೊರತೆ ಇದೆ ಎಂದು ಅವರ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ಅವರು ವಿಚಾರ ಮಾಡಬೇಕು. ಇದು ಒಂದು business ತರಹ ಆಗಿದೆ. ಇದಕ್ಕೆ ಮಾರ್ಕೆಟ್ ಕೊರತೆ ಇದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಇದನ್ನು ಪ್ರಚಾರ ಮಾಡಬೇಕು ಎಂದು ಬೇಡಿಕೊಳ್ಳುತ್ತೇನೆ. ಈಗ ಎಲ್ಲಿ ಈ ತರಹದ ವಸ್ತುಗಳಿಗೆ ಮಾರ್ಕೆಟಿಂಗ್ ಆಗುತ್ತಿದೆ ಅಲ್ಲಿ ಇದಕ್ಕೆ ಸ್ವಲ್ಪ prominence ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಈ ಬಿದ್ರಿ ಕಲೆಗೆ ಸಂಬಂಧಪಟ್ಟಂತೆ ಏನು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಅವರಿಗೆ ಉತ್ತರವನ್ನು ಕೊಟ್ಟಿದ್ದೇನೆ. ಪೂರಕವಾಗಿ ಹೇಳುವುದೇನೆಂದರೆ, ಈ ಬಿದ್ರಿ ಕಲೆಗೆ ಸುಮಾರು 600 ವರ್ಷಗಳ ಇತಿಹಾಸವಿದೆ. ಬಹಮನಿ ಸುಲ್ತಾನರಾದ ಸುಲ್ತಾನ್ ಅಹ್ಮದ್ ಶಾ ಬಹಮನಿರವರ ಕಾಲದಲ್ಲಿ ಒಬ್ಬ ಅಬ್ದುಲ್ ಬಿನ್ ಕೈಸರ್ ಎಂಬ ಕರಕುಶಲದವನನ್ನು ಪರ್ಷಿಯಾದಿಂದ ಕರೆಯಿಸಿ, ಅಲ್ಲಿನ ಸ್ಥಳೀಯರಿಗೆ ತರಬೇತಿ ನೀಡಿ, ಈ ಬಿದ್ರಿ ಕಲೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಸುಮಾರು 650 ವರ್ಷಗಳಿಂದ ಈ ಬಿದ್ರಿ ಕಲೆ ತನ್ನದೇ ಆದಂತಹ ಪ್ರಖ್ಯಾತವಾಗಿರತಕ್ಕಂಥ ಕಲೆಯಾಗಿದೆ. ಇದಕ್ಕೆ ಬೆಳ್ಳಿ, ಸತು ಮತ್ತು ತಾಮ್ರವನ್ನು ಉಪಯೋಗಿಸಿ ಇದನ್ನು ತಯಾರಿಸುತ್ತಾರೆ.

**(ಮುಂದು...)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(628) 20.03.2020 12.30 LL-RN
**ಶ್ರೀ ಸಿ.ಟಿ. ರವಿ:– ಮುಂದುವರೆದಿದ್ದು...**

ಈ ವೃತ್ತಿಯಲ್ಲಿ ತೊಡಗಿಸಿಕೊಂಡಿರತಕ್ಕಂತಹ ಕಲಾವಿದರು 300 ಕುಶಲಕರ್ಮಿಗಳಿದ್ದಾರೆ. ನೋಂದಾಯಿಸಿಕೊಂಡಿರುವಂತಹ ಕರಕುಶಲಕರ್ಮಿಗಳು 108 ಇದ್ದಾರೆ. ಅವರಿಗೆ ಶೇಕಡ 50 ರಷ್ಟು ವಸ್ತುವನ್ನು ರಿಯಾಯಿತಿ ದರದಲ್ಲಿ ಕೊಡಲಾಗುತ್ತಿದೆ. ಜೊತೆಗೆ, ಅವರು ತಯಾರು ಮಾಡಿದಂತಹ ಕರಕುಶಲ ವಸ್ತುಗಳನ್ನು ಮಾರುಕಟ್ಟೆ ಮಾಡುವುದಕ್ಕೆ ಕೂಡ ಈಗಾಗಲೇ ನಿಗಾ ವಹಿಸಿ ಶೇಕಡ 20 ರಷ್ಟು ರಿಯಾಯಿತಿ ಮಾರಾಟ ಕೊಟ್ಟು, ಆ ವಸ್ತುಗಳನ್ನು ಮಾರುಕಟ್ಟೆ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ, ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹಾಗೂ ಆನ್‌ಲೈನ್ ಮೂಲಕ ಈ ಕರಕುಶಲ ವಸ್ತುಗಳನ್ನು ಅಥವಾ ಕಲಾಕೃತಿಗಳನ್ನು ಮಾರಾಟ ಮಾಡುವಂತಹ ವ್ಯವಸ್ಥೆ ಕೂಡ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಇದನ್ನು ಅಲ್ಪ ಪರಿಚಿತ ವಸ್ತು ಎಂದು ಹೇಳಿದ್ದಾರೆ. ಆದರೆ, ಕನ್ನಡ ಭಾಷಾಂತರ ಪದ ಅಷ್ಟು ಪೂರಕವಾಗಿರುವುದಿಲ್ಲ. Lesser known Crafts ಎನ್ನುವುದನ್ನು ಅಪರೂಪದ ಕಲೆ ಎಂದು ಹೇಳುವುದು ಬಹಳ ಸರಳವಾಗಿ ಅರ್ಥವಾಗುವಂತಹ ಕನ್ನಡ ಭಾಷಾಂತರವಾಗಿದೆ. ಇದು ಮೊದಲಿಗೆ ನನಗೂ ಕೂಡ ಅರ್ಥವಾಗದೇ, ನಂತರ ಈ ಬಗ್ಗೆ ಅವರನ್ನು ವಿಚಾರ ಮಾಡಿ, ಕೊನೆಗೆ ನಾನು ಇಂಗ್ಲೀಷ್ ಭಾಷೆ ನೋಡಿದಾಗ ಅದನ್ನು 'ಅಪರೂಪದ ಕಲೆ' ಎಂದು ಹೇಳುವುದು ಸೂಕ್ತ ಎನಿಸಿದೆ. ಅದರಂತೆ, ಆ ಕಲೆಯನ್ನು 'ಅಪರೂಪದ ಕಲೆ' ಎಂದು ಈಗಾಗಲೇ ಪರಿಗಣಿಸಿ, ಅವರಿಗೆ ತರಬೇತಿ ಕೊಡುವ ಮತ್ತು ವಸತಿ ಕಾರ್ಯಾಗಾರ (ವರ್ಕ್ ಶೆಡ್)ಗಳನ್ನು ಕೊಡುವಂತಹ ಕೆಲಸ ಹಾಗೂ ಇನ್ನಿತರ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ, ಈ ಕಲೆಯನ್ನು ಉಳಿಸುವುದಕ್ಕೆ ಬೇಕಾಗುವಂತಹ ಎಲ್ಲಾ ಉತ್ತೇಜನಗಳನ್ನು ಕೊಡುತ್ತೇವೆ ಮತ್ತು ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕುಸುರಿ ಕಲೆಗಳು ಹಾಗೂ ಇತರೆ ಅನೇಕ ಕಲಾಕೃತಿಗಳನ್ನು ರಚಿಸಿರುವುದನ್ನು ಇವೊತ್ತಿನ ದಿವಸ ನಾವು ಕಣ್ಣಿನಲ್ಲಿ ನೋಡುವುದಕ್ಕೆ ನಮಗೆ ಸಿಗುತ್ತಿದೆ. ಆದರೆ, ಆ ಕಲೆಗಳನ್ನು ರಚನೆ ಮಾಡಿದವರು ಇವೊತ್ತಿನ ದಿವಸ ನಮಗೆ ಸಿಗುತ್ತಿಲ್ಲ. ಜೊತೆಗೆ, ಆ ಕಲೆಗಳನ್ನು ರಚನೆ ಮಾಡಿದವರ ಕುಟುಂಬ ಅಥವಾ ಅವರ successors ನಮಗೆ ಸಿಗುತ್ತಿಲ್ಲ. ಉದಾಹರಣೆಗೆ, ವಿಧಾನ ಸೌಧದಲ್ಲಿ ರಚನೆ ಮಾಡಿರುವಂತಹ ಕಲಾಕೃತಿಗಳ ರಚನಾಕಾರರು ಇವೊತ್ತಿನ ದಿವಸ ಎಲ್ಲಿದ್ದಾರೆಂದು ನಮಗೆ ಗೊತ್ತಿರುವುದಿಲ್ಲ. ದೇವಸ್ಥಾನಗಳನ್ನು ನಿರ್ಮಿಸುವುದಕ್ಕೆ ಅಥವಾ ಮರದ ಕೆಲಸ ಮಾಡುವುದಕ್ಕೆ ನಾವು ಕೇರಳ ಅಥವಾ ತಮಿಳುನಾಡು ರಾಜ್ಯದಿಂದ ಕರಕುಶಲಕರ್ಮಿಗಳನ್ನು ಕರೆಸುತ್ತಿದ್ದೇವೆ. ನಮ್ಮಲ್ಲಿ ಮಾರ್ಬಲ್ ಕೆಲಸ ಇದ್ದರೆ ರಾಜಸ್ಥಾನದಿಂದ ಕುಶಲಕರ್ಮಿಗಳನ್ನು ಕರೆಸುತ್ತೇವೆ. ಹಾಗಾಗಿ, ನಮ್ಮ ರಾಜ್ಯದಲ್ಲಿ ಈ ಹಿಂದೆ ಕಲಾಕೃತಿಗಳನ್ನು ರಚನೆ ಮಾಡಿದಂತಹವರು ಹಾಗೂ ಅವರು ಕುಟುಂಬ ವರ್ಗದವರು ಸಹ ಇದ್ದಾರೆ. ಆದರೆ, ಆ ಕಲೆಯನ್ನು ಮುಂದಿನ ಪೀಳಿಗೆಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಲಿಸಿಕೊಡುವಂತಹ ಕೆಲಸವನ್ನು ಮಾಡಬೇಕಾಗಿರುತ್ತದೆ. ಅದಕ್ಕಾಗಿ, ಮಾನ್ಯ ಸಚಿವರು ಕರಕುಶಲಕರ್ಮಿಗಳಿಗೆ ತರಬೇತಿ ಕೊಡುವ ಬಗ್ಗೆ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಸಹ ಅತ್ಯಂತ ಜನಪ್ರಿಯವಾದಂತಹ ಕಲಾಕೃತಿಗಳು ಇದ್ದು, ಅಂತಹ ಕಲಾಕೃತಿ ರಚನೆ ಮಾಡುವುದನ್ನು ಕಲಿಸುವ ಬಗ್ಗೆ ತರಬೇತಿ ನೀಡುವ ಬಗ್ಗೆ ಏನಾದರೂ ಒಂದು ರೂಪುರೇಷೆ ತಯಾರು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಈ ರೀತಿ ನಶಿಸಿ ಹೋಗುತ್ತಿರುವ ಕಲೆಯನ್ನು ಉಳಿಸಿಕೊಳ್ಳುವುದಕ್ಕೆ ತರಬೇತಿ ಕೊಡುವುದಕ್ಕೆ ಭಾರತ ಸರ್ಕಾರ ಕ್ರಮ ಕೈಗೊಂಡಿದೆ. ಅದರ ಜೊತೆಗೆ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕೂಡ ಆ ತರಬೇತಿಗೆ ಬೇಕಾದಂತಹ ಪ್ರಯತ್ನವನ್ನು ಮಾಡುತ್ತಿದೆ. ಮಾನ್ಯ ಸದಸ್ಯರು ಹೇಳಿರುವುದು ಒಳ್ಳೆಯ ಸಲಹೆಯಾಗಿದೆ. ಖಂಡಿತವಾಗಿಯೂ ಅಂತಹ ಕಲೆಗಳನ್ನು ಗುರುತಿಸಿ ಉಳಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ವಿಜಯ ಸಿಂಗ್:–** ಮಾನ್ಯ ಸಭಾಪತಿಯವರೇ, ಆ ಕಲಾಕೃತಿಗಳನ್ನು ಮಾರುಕಟ್ಟೆ ಮಾಡುವ ಬಗ್ಗೆಯೂ ಗಮನ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಕಲಾಕೃತಿಗಳನ್ನು ಮಾರುಕಟ್ಟೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಉದಾಹರಣೆಗೆ, ಬೀದಿ ಬದಿಯಲ್ಲಿ 'ಪ್ಲಾಸ್ಟರ್ ಆಫ್ ಪ್ಯಾರೀಸ್' ಮಾರಾಟ ಮಾಡುತ್ತಿರುವವರ ಬಳಿ ನಾವು ಹೋಗಿ ಕಾರು ನಿಲ್ಲಿಸಿ, “20 ರೂಪಾಯಿ ನೀಡಬೇಕೆಂದು” ಚೌಕಾಸಿ ಮಾಡುತ್ತೇವೆ. ಅದನ್ನೇ, ಶೋರೋಮ್‌ನ ಶೋಕೇಸ್‌ನಲ್ಲಿ ಇಟ್ಟು 2000 ರೂಪಾಯಿ ಬೆಲೆ ಹೇಳಿದರೆ ನಾವು ಆ ಹಣ ಕೊಟ್ಟು ಕೊಂಡುಕೊಳ್ಳುತ್ತೇವೆ. ನಮ್ಮ ಮನಸ್ಥಿತಿಯೂ ಸಹ ಬದಲಾಗಬೇಕಾಗಿದೆ. ನಾವು ಅದೇ ಕಲಾಕೃತಿಯನ್ನು ಕಲಾವಿದರಿಂದ ನೇರವಾಗಿ ಖರೀದಿ ಮಾಡುವುದಕ್ಕೆ ಹೋದಾಗ ಬಿಡಿಗಾಸು ಕೇಳುವಂತಹ ಮನಸ್ಥಿತಿ ಇದೆ. ಆದರೆ, ಅದೇ ಕಲಾಕೃತಿಯನ್ನು ಶೋಕೇಸ್‌ನಲ್ಲಿ ಇಟ್ಟರೆ ಆತ ಕೇಳಿದ ದರಕ್ಕೆ ಹಣ ಕೊಟ್ಟು ರಸೀದಿ ಪಡೆದು ಮನೆಗೆ ಬರುತ್ತೇವೆ. ಈ ಮನಸ್ಥಿತಿ ಬದಲಾಗಬೇಕಾಗಿದೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 1593**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರಗಳನ್ನು ಒದಗಿಸಿದ್ದಾರೆ. ಮೊದಲನೆದಾಗಿ, ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರಥಮವಾಗಿ ನೇಕಾರರು ಪಡೆದಂತಹ ಸಾಲವನ್ನು ಮನ್ನಾ ಮಾಡುತ್ತೇವೆಂಬ ಮಾತನ್ನು ಹೇಳುತ್ತಾರೆ. ಅದನ್ನು ಕೇಳಿ ನನಗೆ ಸಂತೋಷವಾಯಿತು. ಏಕೆಂದರೆ, ಇವೊತ್ತಿನ ದಿವಸ ಈ ರಾಜ್ಯದಲ್ಲಿ ಉದ್ಯೋಗ ಸೃಷ್ಟಿ ಮಾಡುವುದರಲ್ಲಿ 3–4 ಪ್ರಕಾರಗಳಿವೆ. ಮೊದಲನೆಯದಾಗಿ, ಕೃಷಿ ಜನರಲ್ಲಿ; ಎರಡನೆಯದಾಗಿ, ಹೈನುಗಾರಿಕೆಯಲ್ಲಿ; ಮೂರನೆಯದಾಗಿ, ತೋಟಗಾರಿಕೆಯಲ್ಲಿ; ನಾಲ್ಕನೆಯದಾಗಿ ಜವಳಿ ಉದ್ಯಮ ಕೂಡ ಅಷ್ಟೇ ಪ್ರಮುಖವಾಗಿರುತ್ತದೆ. ಆದರೆ, ಈ ಉತ್ತರ ನೋಡಿದಾಗ, ಕೇವಲ ಸಾಲ ಮನ್ನಾ ಮಾಡುವುದಕ್ಕೆ ರೂ.227.86 ಲಕ್ಷಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ, ನಾನು ಬಯಸಿದ ಉತ್ತರವೇನೆಂದರೆ, ಈ ರಾಜ್ಯದ ಸಹಕಾರಿ ಬ್ಯಾಂಕುಗಳಲ್ಲಿ 28,657 ಬ್ಯಾಂಕ್ ಖಾತೆಗಳಿದ್ದು, 175.22 ಲಕ್ಷ ಸಾಲ ಬಾಕಿ ಇದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 8072 ಫಲಾನುಭವಿಗಳಲ್ಲಿ 66.09 ಕೋಟಿ ರೂಪಾಯಿ ಹಾಗೂ ಒಟ್ಟಾರೆಯಾಗಿ 36,727 ಫಲಾನುಭವಿಗಳಿಗೆ 241 ಕೋಟಿ ರೂಪಾಯಿಗಳ ಹಣ ಬೇಕಾಗಿರುತ್ತದೆ. ಇದು ಬಹಳ ಹೆಚ್ಚಾಗಿರುವುದಿಲ್ಲ. ಏಕೆಂದರೆ, ರಾಷ್ಟ್ರೀಕೃತ ಬ್ಯಾಂಕು ಮತ್ತು ಸಹಕಾರ ಬ್ಯಾಂಕುಗಳ ಸಾಲದ ಮೊತ್ತ ಕೂಡ ಇಷ್ಟೇ ಆಗಿರುತ್ತದೆ. ಆದರೆ, ಸರ್ಕಾರ ಕೊಟ್ಟಿರುವಂತಹ ಉತ್ತರದಲ್ಲಿ, ಬಡ್ಡಿ ಮನ್ನಾ ಕೇವಲ 227.86 ಲಕ್ಷ. ಅದರ ವಿಶ್ಲೇಷಣೆ ನೋಡಿದರೆ,... ಇವೊತ್ತಿನ ದಿವಸ ಹೆಚ್ಚು ಎಲ್ಲೆಲ್ಲಿ ನೇಕಾರರು ಇದ್ದಾರೆಂದು ಹೇಳಿದರೆ ಉತ್ತರ ಕರ್ನಾಟಕವೆಂದು ನಾವು ಬಹಳ ಇಷ್ಟಪಡುತ್ತೇವೆ. ಮೊದಲನೆಯದಾಗಿ, ಬಾಗಲಕೋಟೆ ಜಿಲ್ಲೆಯಲ್ಲಿ ಅತಿ ಹೆಚ್ಚು ನೇಕಾರರು ಅಂದರೆ, 8375.62 ಲಕ್ಷ ರೂಪಾಯಿಗಳನ್ನು ಸಾಲವನ್ನಾಗಿ ಪಡೆದ ನೇಕಾರರು ಇದ್ದಾರೆ. ಎರಡನೆಯದಾಗಿ, ಮಾನ್ಯ ಸಚಿವರ ಜಿಲ್ಲೆಯಾದಂತಹ ಬಳ್ಳಾರಿ ಜಿಲ್ಲೆಯಲ್ಲಿ 3253.34 ಲಕ್ಷ ರೂಪಾಯಿಗಳ ಸಾಲವನ್ನು ಪಡೆದ ನೇಕಾರರು ಇದ್ದಾರೆ. ನಾಲ್ಕನೆಯದಾಗಿ, ಬೆಂಗಳೂರು ನಗರದಲ್ಲಿ 199 ಲಕ್ಷ ರೂಪಾಯಿಗಳ ಸಾಲವನ್ನು ಪಡೆದ ಮತ್ತು ಐದನೆಯದಾಗಿ, ತುಮಕೂರು ಜಿಲ್ಲೆಯಲ್ಲಿಯೂ ಸಾಲವನ್ನು ಪಡೆದ ನೇಕಾರರು ಇದ್ದಾರೆ. ನೇಕಾರರು ರಾಜ್ಯಾದ್ಯಂತ ಹಂಚಿದ್ದರೂ ಸಹ ಸಾಂದ್ರತೆ ಇರುವುದು ಇದು. ಇದಕ್ಕೆ ತಾವು ಹೆಚ್ಚು ಒತ್ತು ಕೊಡಲೇಬೇಕು. ಏಕೆಂದರೆ, ಮಾನ್ಯ ಸಚಿವರೂ ಕೂಡ ಆ ಭಾಗದಿಂದ ಬಂದಿರುವಂತಹವರು. ನೇಕಾರರ ಪರಿಸ್ಥಿತಿ ಹೇಗಿದೆ ಎಂದರೆ, ನಾವು ಅನೇಕ ಅಭಿವೃದ್ಧಿ ನಿಗಮಗಳನ್ನು ರಚನೆ ಮಾಡಿದ್ದೇವೆ. ನಾವು ಶ್ರೀ ದೇವರಾಜು ಅರಸುರವರನ್ನು ಮೆಚ್ಚಬೇಕು. ಏಕೆಂದರೆ, ಅವೊತ್ತಿನ ಕಾಲಕ್ಕೆ KHDC (Karnataka Handloom Development Corporation) ಯನ್ನು ರಚನೆ ಮಾಡಿದಂತಹ ಸಂದರ್ಭ, ಇವೊತ್ತಿನ ದಿವಸ ಅನೇಕ ಹಿಂದುಳಿದ ವರ್ಗದವರಿಗೆ ನೇಕಾರ ವೃತ್ತಿಯಲ್ಲಿ ಭಾಗಿಯಾಗಿರುವವರಿಗೆ ಸಹಾಯ ಆಗಿದೆ. ಶ್ರೀ ದೇವರಾಜು ಅರಸುರವರು ಪ್ರಾರಂಭ ಮಾಡಿದಂತಹ KHDC ಇವೊತ್ತಿನ ದಿವಸ ಮುಚ್ಚುವಂತಹ ಪರಿಸ್ಥಿತಿ ಇದೆ. ಈ ಹಿಂದೆ ಆ

ನಿಗಮದಲ್ಲಿ 850 ನೌಕರರು ಇದ್ದು, 250 ನೌಕರರಿಗೆ ಇಳಿದಿದೆ. 15 ಸಾವಿರ ನೇಕಾರರ ಕುಟುಂಬಗಳು ಅದರಲ್ಲಿ ಭಾಗವಹಿಸುತ್ತಿದ್ದು, ಇವೊತ್ತಿನ ದಿವಸ 3 ಸಾವಿರಕ್ಕೆ ಬಂದು ನಿಂತಿದೆ. ಇದರಿಂದಾಗಿ, ಸುಮಾರು 150 ಕೋಟಿ ರೂಪಾಯಿಗಿಂತಲೂ ನಷ್ಟವಾಗುವಂತಹ ಪರಿಸ್ಥಿತಿ ಆಗಿದೆ. ನೇಕಾರರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ನೇಕಾರರು ಬೇರೆಯವರಿಗೆ ಬಟ್ಟೆ ನೇಯ್ದು ಕೊಟ್ಟು, ಇವೊತ್ತಿನ ದಿವಸ ಅವರು ಬಟ್ಟೆ ಇಲ್ಲದೇ ಇರುವ ಪರಿಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣವಾಗಿದೆ.

ಈ ಹಿಂದೆ 54 ಪ್ರಿಯದರ್ಶಿನಿ ಔಟ್‌ಲೆಟ್‌ಗಳು, ದೆಹಲಿ, ಬಾಂಬೆ ಮತ್ತು ಇತರೆ ಕಡೆಗಳಲ್ಲಿ ಇದ್ದು, ಇವೊತ್ತಿನ ದಿವಸ ಎಲ್ಲಾ ಔಟ್‌ಲೆಟ್‌ಗಳು ಮುಚ್ಚಿ 20 ಔಟ್‌ಲೆಟ್ಸ್‌ಗಳಿಗೆ ಬಂದಿವೆ. ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿ ನಿಗಮಗಳನ್ನು ಮಾಡಬೇಕೆಂದು ಚರ್ಚೆಯಾಗುತ್ತಿದೆ. ಅದರಂತೆ, ಜಾತಿಗೊಂದು ಅಭಿವೃದ್ಧಿ ನಿಗಮ ರಚನೆಯಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಇರುವಂತಹ ನಿಗಮಗಳನ್ನು ಸರಿಯಾಗಿ ನಡೆಸದೇ ಇದ್ದರೆ, ಬಹಳ ಅನ್ಯಾಯವಾಗುತ್ತದೆ. ಈ ಉದ್ಯೋಗ ಸೃಷ್ಟಿಯಲ್ಲಿ ನಮ್ಮೆಲ್ಲಾ ಕ್ಷೇತ್ರಗಳಿಗಿಂತಲೂ ಜವಳಿ ಕ್ಷೇತ್ರ ಬಹಳಷ್ಟು ಪ್ರಮುಖವಾಗಿದೆ. ನಮ್ಮ ರಾಜ್ಯದ ಜವಳಿ ಹೊರ ರಾಷ್ಟ್ರಕ್ಕೆ ಹೋಗುವಂತಹ ಪರಿಸ್ಥಿತಿ ಇರತಕ್ಕಂತಹ ಸಂದರ್ಭದಲ್ಲಿ ಇದರ ಅಭಿವೃದ್ಧಿಗೆ ತಮ್ಮ ಚಿಂತನೆ ಏನು ಮತ್ತು ಸಾಲ ಇರತಕ್ಕಂಥದ್ದು, ಬಹಳ ಕಡಿಮೆ ಅಂದರೆ, ಒಟ್ಟು 241 ಕೋಟಿ ರೂಪಾಯಿಗಳಾಗುತ್ತದೆ. ಇದನ್ನು ಮನ್ನಾ ಮಾಡಬೇಕೆಂಬ ಒತ್ತಾಯವನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಪೂರಕವಾಗಿ...

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಎಲ್ಲಾ ಪ್ರಶ್ನೆಗಳಿಗೂ ಶ್ರೀ ಎಸ್.ಎಲ್. ಭೋಜೇಗೌಡರ ಉಪ ಪ್ರಶ್ನೆ ಇರುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ನಾನು ಸ್ವಲ್ಪ ಸಪೋರ್ಟ್ ಮಾಡುತ್ತಿದ್ದೇವೆ. **(ಗೊಂದಲ)** ಈ ಸದನದಲ್ಲಿ ಅನೇಕ ಹಿರಿಯ ಸದಸ್ಯರುಗಳಿದ್ದಾರೆ ಅವರು ಗಮನ ಹರಿಸುತ್ತಾರೆಂದು ನಾನು ಪೂರಕ ಉಪ ಪ್ರಶ್ನೆ ಕೇಳುತ್ತಿದ್ದೇನೆ.

**ಶ್ರೀ ಶ್ರೀಮಂತ ಬಾಳಾಸಾಹೇಬ ಪಾಟೀಲ್:–** ಮಾನ್ಯ ಸಭಾಪತಿಯವರೇ, ಮೊದಲನೆ ಬಾರಿ ನಮ್ಮ ಸರ್ಕಾರದಿಂದ ನೇಕಾರರ 50 ಸಾವಿರ ರೂಪಾಯಿವರೆಗೆ ಸಾಲ ಮನ್ನಾ ಮಾಡಲಾಗಿದೆ. ಅದರಂತೆ, ಸುಮಾರು 41.60 ಲಕ್ಷ ರೂಪಾಯಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮನ್ನಾ ಆಗಿರುತ್ತದೆ. ಆ ನಂತರ, ನೇಕಾರರ 1 ಲಕ್ಷ ರೂಪಾಯಿವರೆಗೆ ಸಾಲ ಮನ್ನಾ ಮಾಡುವುದಕ್ಕೆ ಆದೇಶ ಮಾಡಿದ್ದೇವೆ, ಅದರಲ್ಲಿ ಸುಮಾರು 51.14 ಲಕ್ಷ ರೂಪಾಯಿ ಸಾಲ ಮನ್ನಾ ಆಗುತ್ತದೆ. ಅದರಲ್ಲಿ, ಬಡ್ಡಿ ಮತ್ತು ಪ್ರಿನ್ಸಿಪಲ್ ಮೊತ್ತ ಕೂಡ ಸೇರಿರುತ್ತದೆ. ಇದರ ಜೊತೆಗೆ, ಕೆಲವು ನೇಕಾರರು ಸಾಲ ಮನ್ನಾ ಮಾಡಬೇಕೆಂದು ನಮಗೆ ಬೇಡಿಕೆ ಇಟ್ಟಿರುತ್ತಾರೆ. Cash Credit ಸಾಲ ಏನಿದೆ, ಅದು ವರ್ಕಿಂಗ್ ಕ್ಯಾಪಿಟಲ್. ಅದನ್ನೂ ಸಹ ನಾವು ಪರಿಶೀಲನೆ ಮಾಡುತ್ತಿದ್ದೇವೆ. ನೇಕಾರರ ಕಷ್ಟ ಪರಿಸ್ಥಿತಿಯನ್ನು ನಾವು ಅರ್ಥ ಮಾಡಿಕೊಂಡಿದ್ದು, ಆ ಸಿ.ಸಿ. ಸಾಲ ಮನ್ನಾ ಮಾಡುವ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಆ ಸಾಲವನ್ನು ಸಹ ಮನ್ನಾ ಮಾಡುತ್ತೇವೆ. ಇತ್ತೀಚೆಗೆ ಈ ಜವಳಿ ಉದ್ಯಮ ತುಂಬಾ ನಿಧಾನಗತಿಯಲ್ಲಿ ಸಾಗುತ್ತಿದೆ. ಇದರಲ್ಲಿ ಎಲ್ಲಕ್ಕಿಂತಲೂ ಬಹಳ ಕಡಿಮೆ ಮಾರ್ಜಿನ್ ಇದೆ. ಇತರೆ, ಉದ್ಯಮಗಳಿಗಿಂತ ಕಡಿಮೆ ಲಾಭದ ಉದ್ಯಮ ಇದ್ದರೆ ಅದು ಈ ಜವಳಿ ಉದ್ಯಮವಾಗಿರುತ್ತದೆ.

(ಮುಂದುವರೆದಿದೆ...

(629)20.03.2020/12.40/ವೈಎಲ್–ಆರ್‌ಎನ್

**ಶ್ರೀಮಂತ ಬಾಳಾಸಾಹೇಬ ಪಾಟೀಲ್(ಮುಂದು):–**

ಅದಕ್ಕಾಗಿ ನಮ್ಮ ಸರ್ಕಾರ ವತಿಯಿಂದ ಹೊಸ ಟೆಕ್ಸ್‌ಟೈಲ್ಸ್ ಯೋಜನೆಯನ್ನು ಜಾರಿಗೆ ತರಲಾಗಿದೆ. ಈಗಾಗಲೇ ಇರುವಂಥ ಕೈಮಗ್ಗ, Power looms ಗಳೆಲ್ಲಾ ಹಳೆಯದಾಂಥ ತಂತ್ರಜ್ಞಾನಗಳಾಗಿವೆ. ಅದನ್ನೇ ಮುಂದುವರೆಸಿಕೊಂಡು ಹೋದರೆ ಅದರಿಂದ ನಮ್ಮಗೆ ಯಾವತ್ತು ಲಾಭ ಸಿಗುವುದಿಲ್ಲ, ನೇಕಾರರು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಹೊಸ ಟೆಕ್ಸ್‌ಟೈಲ್ ಪಾಲಿಸಿ ಏನಿದೆ, ಅದರಲ್ಲಿ ಬೇರೆ ಬೇರೆ ರೀತಿಯ ಹೊಸ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣ ಮಾಡುವುದು ಹಾಗೂ ಬೇರೆ ಬೇರೆ ಕಡೆಗಳಿಂದ ದೊಡ್ಡ ದೊಡ್ಡ ಹೂಡಿಕೆದಾರರು ಬಂದರೆ, ಅವರಿಗೆಲ್ಲಾ ಉಳಿದುಕೊಳ್ಳುವುದಕ್ಕೆ ಜಾಗದ ವ್ಯವಸ್ಥೆ, ನೀರಿನ ಹಾಗೂ ವಿದ್ಯುತ್ ಸೌಲಭ್ಯಗಳೆಲ್ಲಾವನ್ನು ಒದಗಿಸಿ, ದೊಡ್ಡ ಕೈಗಾರಿಕೆಗಳನ್ನು ನಿರ್ಮಿಸಿ, ಅವರಿಗೆ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿಯು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹೊಸ ಟೆಕ್ಸ್‌ಟೈಲ್ ಪಾಲಿಸಿಯಲ್ಲಿ ಇಡೀ ದೇಶದಲ್ಲಿಯೇ ಯಾವ ರಾಜ್ಯದಲ್ಲಿಯು ನೀಡದಷ್ಟು ರಿಯಾಯಿತಿಯನ್ನು ಈ ನೌಕರರಿಗೆ ನೀಡುತ್ತಿದ್ದೇವೆ. ಅವರು ಏನು ಹೂಡಿಕೆ ಮಾಡುತ್ತಾರೆ ಅದರಲ್ಲಿ ಶೇಕಡಾ 30 ರಷ್ಟು total investment ನಲ್ಲಿ ಸಬ್ಸಿಡಿ ನೀಡುತ್ತಿದ್ದೇವೆ, ಪವರ್ ಸಬ್ಸಿಡಿಯನ್ನು ನೀಡಲಾಗುತ್ತದೆ. ನಮ್ಮ ದೇಶದಲ್ಲಿ ನೇಕಾರರ ಸಲುವಾಗಿ ನೀಡತಕ್ಕಂಥ ಹಣವೇನಿದೆ, ಅದನ್ನು ಪ್ರತಿಯೊಬ್ಬ ನೌಕರನಿಗೆ ಪ್ರತಿ ತಿಂಗಳು ರೂ.1,000 ಗಳಂತೆ 5 ವರ್ಷಗಳವರೆಗೂ ನೀಡುವಂಥ ಯೋಜನೆ ಏನಿದೆ, ಅದನ್ನು ಇಡೀ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಜಾರಿಗೆ ತಂದಿರುವಂಥ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ತಂದಿದ್ದೇವೆ. ಈ ನೇಕಾರರ ಟೆಕ್ಸ್‌ಟೈಲ್ Bill ತರುತ್ತಿದ್ದೇವೆ, ಅದನ್ನು ಬಿಟ್ಟು ಆಂಧ್ರಪ್ರದೇಶ, ತಮಿಳುನಾಡು, ಗುಜರಾತ್, ಮಹಾರಾಷ್ಟ್ರ, ಈ ರೀತಿ ಎಲ್ಲಾ ಕಡೆಯು ಬೇರೆ–ಬೇರೆ ರೀತಿಯ ಯೋಜನೆಗಳೇನಿದೆ, ಅವೆಲ್ಲಾವನ್ನು ಅಭ್ಯಾಸ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿ, ಶಕ್ತಿ ಇರುವಷ್ಟು ನಮ್ಮಲ್ಲಿ ಅದಕ್ಕಿಂತಲೂ ಚೆನ್ನಾಗಿರುವ ಯೋಜನೆಯನ್ನು ಜಾರಿಗೆ ತಂದು, ಇದನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಕಾಳಜಿಯನ್ನು ಒಪ್ಪುತ್ತೇನೆ. ಅವರು ಇವತ್ತಿಗೂ ಸಹ ಪ್ರಯತ್ನ ಮಾಡುತ್ತಿದ್ದಾರೆ. ನಾನು ಹೇಳುವುದೇನೆಂದರೆ, ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ಡಿ.ದೇವರಾಜ ಅರಸ್‌ರವರ ಕಾಲದಿಂದಲೂ ಇದಕ್ಕೆ ಆಗಿಂದಾಗ್ಗೆ ಒತ್ತು ನೀಡಿ, ಬಹಳಷ್ಟು ಪ್ರಕ್ರಿಯೆಗಳು ನಡೆದಿದೆ. ಕೆ.ಹೆಚ್.ಡಿ.ಸಿ. ಇವತ್ತಿಗೂ ಕೂಡಾ, ... ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ.ಲಕ್ಷ್ಮೀನಾರಾಯಣರವರ ಕಾಲದಲ್ಲಿ ರೂ.50.00 ಕೋಟಿಗಳಷ್ಟು ಲಾಭ ಬಂದಿದೆ. ಅದನ್ನು ಸಹ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ಹೆಚ್.ಕೆ.ಪಾಟೀಲ್‌ರವರು ಈ ಇಲಾಖೆಯ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಆವೊತ್ತು ಒಂದು ನೀತಿಯನ್ನು ಜಾರಿಗೆ ತಂದಿದ್ದರು. ನಾನು ಸಹ ಆ ಸಂದರ್ಭದಲ್ಲಿ ಸಚಿವನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ಸಮಯದಲ್ಲಿಯು ಕೂಡಾ ಜವಳಿ ನೀತಿಯನ್ನು ಜಾರಿಗೆ ತಂದಿದ್ದೇವೆ. ದೊಡ್ಡಬಳ್ಳಾಪುರ ಮತ್ತು ಇನ್ನಿತರೆ ಜಾಗಗಳಲ್ಲಿ Apparel Park ಸಹ ಮಾಡಿದ್ದೇವೆ. ಈಗಾಗಲೇ ಮಾನ್ಯ ಸಚಿವರು ಹೇಳಿರುವುದೆಲ್ಲಾ ನಡೆದುಕೊಂಡು ಬಂದ ದಾರಿಯಾಗಿದೆ. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಇವೆಲ್ಲವೂ ಹೋಗುತ್ತಿದ್ದೆ. ಮಾನ್ಯ ಸಚಿವರು ಮುಂದೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ನೇಕಾರರ ಬಾಕಿ ಉಳಿದಿರುವ ರೂ.241 ಕೋಟಿ ಬ್ಯಾಂಕ್ ಸಾಲವೇನಿದೆ, ಅದನ್ನು ನೀಡುವುದಕ್ಕೆ ಸಾಧ್ಯವೇ ಎನ್ನುವ ಮಾತನ್ನು ಕೇಳಿದ್ದೆ. ಆದರೆ, ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡಲಿಲ್ಲ.

ಎರಡನೆಯದಾಗಿ, ನಮ್ಮ ಕರ್ನಾಟಕದಲ್ಲಿದ ಒಳ್ಳೆಯ ಸೀರೆ ಮಳಿಗೆಗಳೇನಿತ್ತು ಅವೆಲ್ಲಾವನ್ನು ಇವತ್ತು ಮುಚ್ಚಲಾಗಿದೆ. ಬಾಂಬೆ, ದೆಹಲಿಯಲ್ಲಿ ಕೆ.ಹೆಚ್.ಡಿ.ಸಿ. ಮಳಿಗೆಗಳಿದ್ದು, ಅವೆಲ್ಲಾವನ್ನು ಮುಚ್ಚಲಾಗಿದೆ. ಅವುಗಳ ಬಗ್ಗೆ ಮಾನ್ಯ ಸಚಿವರ ಅಭಿಪ್ರಾಯವೇನು. ಉದ್ಯೋಗ ಸೃಷ್ಟಿಯಲ್ಲಿ ಬೇರೆ–ಬೇರೆ ರೀತಿಯಲ್ಲಿ ಲೆಕ್ಕ ಹಾಕಿ ನೋಡಿದರೆ, ಈ ಇಲಾಖೆಯು ಮೊದಲನೆ ಸ್ಥಾನಕ್ಕೆ ಬರುತ್ತದೆ. ಕೃಷಿ. ತೋಟಗಾರಿಗೆ, ಹೈನುಗಾರಿಕೆ, ಜವಳಿ ಈ ನಾಲ್ಕು ಇಲಾಖೆಯು ರೈತರಿಗೆ ಸಂಬಂಧಪಟ್ಟದ್ದು, ಮಾನವ ಸಂಪನ್ಮೂಲವನ್ನು ಹೆಚ್ಚಿಸುವ ಪರಿಸ್ಥಿತಿಯಲ್ಲಿ ಬರುವಂಥದಾಗಿದೆ. ನಿಜವಾಗಿಯು ಕೂಡಾ ಹೊಸ–ಹೊಸದಾಗಿ ಜಾತಿಗೊಂದು ನಿಗಮಗಳನ್ನು ತೆರೆಯುವ ಬಗ್ಗೆಯು comment ಆಗುತ್ತಿದೆ. ಆ ದೃಷ್ಟಿಯಿಂದ ಮಾನ್ಯ ಸಚಿವರು ಮುಂದಿನ ದಿನಮಾನದಲ್ಲಿ ಇರುವುದನ್ನು ಪ್ರಬಲವಾಗಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕು. ಮಾನ್ಯ ಸಚಿವರಿಗೆ ಕಾಳಜಿ ಇದೆ. ಆದರೆ, ಇದರ ಬಗ್ಗೆ ಉತ್ತರ ಸಿಗಲಿಲ್ಲ ದಯವಿಟ್ಟು ತಿಳಿಸಬೇಕು.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಮಹತ್ವದ ಪ್ರಶ್ನೆಯಾಗಿದೆ. ಕೆ.ಹೆಚ್.ಡಿ.ಸಿ.ಎಲ್. (Karnataka Handloom Development Corporation Limited) ಸಾಲದ ಸುಳಿನಲ್ಲಿ ಸಿಲುಕಿಕೊಂಡು ಅದರ ಪರಿಸ್ಥಿತಿ ಚಿಂತಾಜನಕವಾಗಿದೆ. ಅದನ್ನು revival ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂಬುದು ಬಹಳ ಮಹತ್ವದಾಗಿದೆ. ಏಕೆಂದರೆ, ಬಹಳಷ್ಟು ಕೈಮಗ್ಗ ನೇಕಾರರು ಕೆ.ಹೆಚ್.ಡಿ.ಸಿ.ಎಲ್. ಅಡಿ ಬರತಕ್ಕಂಥವರಾಗಿದ್ದಾರೆ. ಅವರಿಗೆ ನೂಲು ಇನ್ನಿತರೆ ಎಲ್ಲಾ ರೀತಿಯ ಕಚ್ಚಾಮಾಲುಗಳನ್ನು ನೀಡಿ, ಅವರು ನೇಯ್ದ ನಂತರ ಲೇಬರ್ ನೀಡುವಂಥ ವ್ಯವಸ್ಥೆ ಇದೆ. ಕೆ.ಹೆಚ್.ಡಿ.ಸಿ.ಎಲ್. ಮುಳುಗಿ ಹೋದರೆ, ಅದನ್ನೇ ಅವಲಂಬಿಸಿರುವ ಕೈಮಗ್ಗ ನೇಕಾರರ ಗತಿಯೇನು ಎಂಬುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಈಗಾಗಲೇ ಮಾನ್ಯ ಸಚಿವರು 'ಟೆಕ್ಸ್‌ಟೈಲ್ ಪಾಲಿಸಿಗೆ ನಮ್ಮ ರಾಜ್ಯದಲ್ಲಿ ಹೊಂದುವಂಥ ಅನೇಕ ವಿಚಾರಗಳನ್ನು ಸೇರಿಸಿಕೊಂಡು, ಇನ್ನೂ ಹೆಚ್ಚು ನೇಕಾರರಿಗೆ ಉಪಯೋಗವಾಗುವಂಥ ರೀತಿಯಲ್ಲಿ ಮಾಡುತ್ತೇವೆ' ಎಂದು ಹೇಳಿರುವುದು ಒಳ್ಳೆಯದು ಅದನ್ನು ಸ್ವಾಗತಿಸುತ್ತೇವೆ. ಆದರೆ, ಬಹುತೇಕವಾಗಿ ಕರ್ನಾಟಕ ರಾಜ್ಯದ ಒಟ್ಟು ಎಕರೆಯಲ್ಲಿ ಮಾನ್ಯ ಹೆಚ್.ಎಂ.ರೇವಣ್ಣನವರು ಹೇಳಿದ ಹಾಗೆ ನೇಕಾರಿಕೆ ಉದ್ದೇಶಕ್ಕಾಗಿ ರೂ.8375.82 ಲಕ್ಷ ಸಾಲವನ್ನು ಬಾಗಲಕೋಟೆ ಜಿಲ್ಲೆಯಲ್ಲಿವರು ಪಡೆದಿದ್ದಾರೆ. ನಮ್ಮಲ್ಲಿ 'ಮೇಳಿ' ಎಷ್ಟು ಮಹತ್ವವೋ 'ಲಾಳಿ'ಯು ಕೂಡಾ ಅಷ್ಟೇ ಮಹತ್ತರವಾಗಿದೆ. 'ಲಾಳಿ' ಎಂದರೆ, ನೇಕಾರರಿಗೆ ಸಂಬಂಧಿಸಿದಂಥ ಶಬ್ದ. ಇವೆರಡೂ ಪ್ರಾಮುಖ್ಯತೆ ಪಡೆದಂಥದಾಗಿದೆ. ಇವತ್ತು ರೈತರಿಗೆ 'ಸಾಲ ಮನ್ನಾ' ಎನ್ನುವಂಥ ಬಹಳಷ್ಟು ಯೋಜನೆಗಳನ್ನು ನೀಡಿದ್ದೇವೆ. ನೇಕಾರರ ಪರಿಸ್ಥಿತಿ ಎಷ್ಟು ಚಿಂತಾಜನಕವಾಗಿದೆ ಎಂದರೆ, ಅವರ ಹೆಂಡತಿ–ಮಕ್ಕಳೆಲ್ಲರೂ ಮಗ್ಗ ಬಿಟ್ಟು ಹೊರಗೆ ಬರುವುದಕ್ಕೆ ಸಾಧ್ಯವಾಗದಷ್ಟು ಚಿಂತಾಜನಕವಾಗಿದೆ. ಮಗ್ಗದಿಂದ ಹಗಲು–ರಾತ್ರಿ ದುಡಿಮೆ ಮಾಡಿದರೂ ಅವರ ಹೊಟ್ಟೆ ತುಂಬಿಸಿಕೊಳ್ಳಲಾರದ ಸ್ಥಿತಿಗೆ ಬಂದಿದ್ದಾರೆ. ನಮ್ಮಲ್ಲಿ 'ಇಳಕಲ್ ಸೀರೆ' ಜಗತ್ಪ್ರಸಿದ್ಧ ಎಂದು ಹೇಳುತ್ತೇವೆ. Granite ಎಷ್ಟು ಪ್ರಸಿದ್ಧ, ಅದೇ ರೀತಿ 'ಇಳಕಲ್ ಸೀರೆ' ಸಹ ಜಗತ್ಪ್ರಸಿದ್ಧವಾಗಿದೆ. ಹಿಂದಿನ ಕಾಲದಲ್ಲಿ ಸ್ತ್ರೀಯರು 'ಇಳಕಲ್ ಸೀರೆ' ಯನ್ನು ಧರಿಸುತ್ತಿದ್ದರು. ಈಗಿನ ಕಾಲದವರಿಗೆ ಆ ಸೀರೆಯನ್ನು ಹೊರೆಯುವುದಕ್ಕಾಗುವುದಿಲ್ಲ. 'ಇಳಕಲ್ ಸೀರೆ'ಯು ಅಷ್ಟು ಬಾರ ಇರುತ್ತದೆ. ಒಬ್ಬ ಹೆಣ್ಣು ಮಗಳು ಜೀವ ಬಿಟ್ಟರೆ, ಒಂದು ಮಗ್ಗವನ್ನು ಮುಚ್ಚುವಂಥ ಸ್ಥಿತಿಗೆ ತಲುಪಿದ್ದೇವೆ. ಅದರಲ್ಲಿಯು ವಯಸ್ಸಾದ ಹಿರಿಯ ಸ್ತ್ರೀ ಏನಿದ್ದಾರೆ ಅಂಥವರು ಒಬ್ಬರು ಸತ್ತರೆ ಸಾಕು ಒಂದು ಮಗ್ಗವನ್ನೇ ಮುಚ್ಚುವಂಥ ಸ್ಥಿತಿಗೆ ತಲುಪಿದ್ದೇವೆ. ಅದು ಹೊಸ ವಿನ್ಯಾಸ. ತಾವು ನೇಕಾರರಿಗೆ ಏನಾದರೂ ಮಾಡುವುದಾದರೆ, ಗ್ರಾಹಕರ ಅಭಿರುಚಿಗೆ ತಕ್ಕ ಹಾಗೆ ನೇಯ್ಗೆ ಕೆಲಸವಾಗಬೇಕು. ನಾವೇನಾದರೂ 'ಇಳಕಲ್ ಸೀರೆ'ಯನ್ನು ಜಗತ್ಪ್ರಸಿದ್ಧ ಮಾಡಲಿಲ್ಲವೆಂದರೆ, ಹೊಟ್ಟೆಯು ತುಂಬುವುದಿಲ್ಲ, ಮಾರ್ಕೆಟಿಂಗ್ ಸಹ ಆಗುವುದಿಲ್ಲ. ಹಾಗಾಗಿ ಇವತ್ತು ಮಾರ್ಕೆಟಿಂಗ್ ಆಗಬೇಕು. ಆಧುನಿಕ ಪ್ರಪಂಚದ ಕಡೆ ಮಹಿಳೆಯರಿಗೆ ಸಾಕಷ್ಟು ಫ್ಯಾಶನ್ ಇದೆ. ಆ ಫ್ಯಾಶನ್‌ಗೆ ಅನುಗುಣವಾಗಿ ನೇಕಾರರು ತಮ್ಮ ನೇಯ್ಗೆಯನ್ನು ಸುಧಾರಣೆ ಮಾಡಿಕೊಳ್ಳಬೇಕು. ಅಂತಹ ಹೊಸ ವಿನ್ಯಾಸದ ನೆಯ್ಗೆ ಮಾಡುವುದಕ್ಕೆ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಜಾರಿಗೆ ತಂದು, ಅದನ್ನು viable ಮಾಡುವಂಥ ಕೆಲಸವನ್ನು

ಮಾನ್ಯ ಸಚಿವರು ಮಾಡಬೇಕು. ಎಲ್ಲದಕ್ಕಿಂತ ಪ್ರಮುಖವಾಗಿ ಕೆ.ಹೆಚ್.ಡಿ.ಸಿ.ಎಲ್. revive ಮಾಡುವುದಕ್ಕೆ ಸರ್ಕಾರ ಮುಂಚೂಣಿಯಲ್ಲಿದ್ದು, ಅದನ್ನು revive ಮಾಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸಮಯವು 12 ಗಂಟೆ 50 ನಿಮಿಷವಾಗಿದೆ. ಇನ್ನೂ ಪ್ರಶ್ನೋತ್ತರವೇ ನಡೆಯುತ್ತಿದೆ, ಬೇರೆ ಬಿಸ್‌ನೆಸ್ ಕೈಗೊಳ್ಳಲಾಗುತ್ತದೆಯೇ ಎಂಬುದು ಅರ್ಥವಾಗುತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನೇಕಾರರ ಪರಿಸ್ಥಿತಿ ಏನಿದೆ,

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸದಸ್ಯರೇ, ಆಯಿತು. ಅದನ್ನು ಅರ್ಧ ಗಂಟೆ ಚರ್ಚೆಯಲ್ಲಿ ಅಥವಾ ನಿಯಮ 330 ರಡಿ ತೆಗೆದುಕೊಂಡು ಬನ್ನಿ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಪ್ಯಾಶನ್‌ಗೂ ಮಹಿಳೆಯರಿಗೂ...

**ಉಪ ಸಭಾಪತಿಯವರು:–** ಆಡಳಿತ ಪಕ್ಷದವರೆಲ್ಲರೂ ಸ್ವಲ್ಪ ಮಾನ್ಯ ಸಚಿವರ ಹತ್ತಿರ ಹೋಗಿ ವೈಯಕ್ತಿಕವಾಗಿ ಮಾತನಾಡಿ, ನಂತರ ಹೇಳಿದರೆ ಇದಕ್ಕೆ ಇನ್ನೂ ಸಹಾಯವಾಗುತ್ತದೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ನೀಡಿದರೆ ಮಾತನಾಡುತ್ತೇನೆ.

**ಉಪ ಸಭಾಪತಿಯವರು:–** ಆಯಿತು, ಮಾತನಾಡಿ.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷ ಎನ್ನುವುದಕ್ಕಿಂತ ನೇಕಾರಿಕೆಯಲ್ಲಿ ಜವ್ವನೆಯರಿಗೂ, ಜವಳಿಗೂ ಮನುಷ್ಯನ ಅಂದ ಹೆಚ್ಚಿಸುವುದರಲ್ಲಿ ಆಭರಣ ಮತ್ತು ವಸ್ತ್ರದ ಪಾತ್ರ ಬಹಳ ದೊಡ್ಡ ಪಾತ್ರ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ತಾವು 'ಇಳಕಲ್ ಸೀರೆ' ಧರಿಸಿಕೊಂಡು ಬನ್ನಿ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇಳಕಲ್ ಸೀರೆ, ರಾಜ್‌ಕೋಟ್ ಸೀರೆ, ಬೆಂಗಳೂರು ಸೀರೆ, ಮೈಸೂರ್ ಸಿಲ್ಕ್ ಸೀರೆಯ ಬಗ್ಗೆ ಅರ್ಧ ಘಂಟೆ ಚರ್ಚೆ ಮಾಡೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ತೇಜಸ್ವಿನಿ ಗೌಡರವರು 'ಇಳಕಲ್ ಸೀರೆ' ತೆಗೆದುಕೊಂಡು, ಧರಿಸಿಕೊಂಡು ಬರುತ್ತಾರೆಯೇ ಕೇಳಿ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅದನ್ನು ಮಾನ್ಯ ಸದಸ್ಯರು ನನಗೆ ಉಡುಗೆಯಾಗಿ ನೀಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸದಸ್ಯರೇ, ಆಯಿತು.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರಿಗೆ ಕೋಪ ಬಂತು. ,ದಯವಿಟ್ಟು ಇದಕ್ಕೆ ಅರ್ಧ ಘಂಟೆ ಕಾಲ ಚರ್ಚೆಯಲ್ಲಿ ಮಾತನಾಡಲು ಅವಕಾಶ ಮಾಡಿಕೊಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹೌದು. ದಯವಿಟ್ಟು ಅರ್ಧ ಘಂಟೆ ಕಾಲ ಚರ್ಚೆಯಲ್ಲಿ ಮಾತನಾಡಲು ಅವಕಾಶ ನೀಡಿ. ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಲು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಹೌದು. ನೇಕಾರರ ಸ್ಥಿತಿ ಏನಾಗಿದೆ ಎಂದರೆ,... ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಬಡ್ಡಿ ಮಾತ್ರ ಮನ್ನಾ ಎಂದು ಹೇಳಿದ್ದಾರೆ. ಆದರೆ, ಮೂಲ ಪ್ರಶ್ನೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವಹಿಸಿಕೊಂಡಾಗ ಪ್ರಥಮ ದಿನದಲ್ಲಿ ಹೇಳಿದಂಥ ಮಾತು, ನೇಕಾರರ ಸಾಲ ಮನ್ನಾ ಮಾಡುತ್ತೇನೆ ಎಂದು ಹೇಳಿರುವುದು. ಆದರೆ, ಸಚಿವರ ಉತ್ತರ ಬಡ್ಡಿ ಮನ್ನಾ, ...

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರೇವಣ್ಣರವರು ಉದ್ಯಮದ ಬಗ್ಗೆ ನೇಕಾರರ ಬಗ್ಗೆ ಮಾತನಾಡಿದ್ದಾರೆ. ನಾನು ಪುನರಾವರ್ತನೆ ಮಾಡುವುದಿಲ್ಲ ಮತ್ತು ನಮ್ಮ ಸಚಿವರು ಸಹ ಬಹಳ ಕಾಳಜಿ ವಹಿಸಿ, ಹೊಸದಾಗಿ ಸಚಿವರಾಗಿ ಬಂದರೂ, ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಚಿವರಿಗೆ ಕಾಳಜಿ ಇಲ್ಲವೆಂದು ಹೇಳಲಿಲ್ಲ. ಅವರಿಗೆ ಕಾಳಜಿ, ಚಿಂತನೆ ಇದೆ. ಅದಕ್ಕಾಗಿ ಇದನ್ನು ಅರ್ಧ ಘಂಟೆ ಕಾಲ ಚರ್ಚೆಗೆ ಅವಕಾಶ ನೀಡುವುದು ಬಹಳ ಅವಶ್ಯಕವಾಗಿದೆ. ಇವತ್ತು ನೇಕಾರರು ಜಗತ್ತಿನ ಮಾನ ಮುಚ್ಚುತ್ತಿದ್ದಾರೆ. ಆದರೆ, ಅವರ ಮನೆಯ ಮಾನ ಮುಚ್ಚುವಂಥ ಪರಿಸ್ಥಿತಿಯಲ್ಲಿಲ್ಲ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಮಾನ್ಯ ಸಚಿವರ ಕಾಳಜಿ ಸರಿ ಇದೆ. ಈ ನೇಕಾರರಿಗೆ ಅವರು ನೇಯ್ದಂಥ ಸರಕಿಗೆ ಮಾರ್ಕೆಟಿಂಗ್ ವ್ಯವಸ್ಥೆ ಮಾಡಿಕೊಡಬೇಕು. ಸಾಲ ಮನ್ನಾ ಒಂದು ಕಡೆ ಇದೆ. ಮಂಗಳೂರು, ಉಡುಪಿ ಕಡೆ ಇರತಕ್ಕಂಥ ನೇಕಾರರು ಕೈಮಗ್ಗವನ್ನು ಮುಚ್ಚಿಯೇ ಬಿಟ್ಟಿದ್ದಾರೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(630)/20.03.2020/12.50/ಎಸ್‌ಕೆ-ವಿಕೆ

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಕೌಶಲ್ಯ ಯೋಜನೆ ಮತ್ತು ಪ್ರಧಾನಮಂತ್ರಿ ಕೌಶಲ್ಯ ಯೋಜನೆ ಎನ್ನುವುದೊಂದು ಯೋಜನೆಯಿದೆ. ಸುಮಾರು ಮೂವತ್ಮೂರು ಸಾವಿರ ಅಭ್ಯರ್ಥಿಗಳಿಗೆ ತರಬೇತಿಯನ್ನು ಕೊಡುತ್ತಿರುವಂತಹದ್ದರ ಬಗ್ಗೆ ಈಗಾಗಲೇ ಉಲ್ಲೇಖವಾಗಿದೆ. ಇವತ್ತು ಅದರ ಲಾಭ ಪಡೆದು, ಮಾನ್ಯ ವಿಜಯ್ ಸಿಂಗ್ ಎತ್ತಿದಂತಹ ಪ್ರಶ್ನೆ ಅಳಿದು ಹೋಗುತ್ತಿರತಕ್ಕಂತಹ ಅಪರೂಪ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ನೇಕಾರರಿಗೆ hand woven ಅಂದರೆ ಕೈಮಗ್ಗ ಹಾಗೆಯೇ fashion update ಆಗಬೇಕೆಂದು ಅನೇಕ ಸಹೋದರರು ಹೇಳಿದರು. ಇವತ್ತು ನಮ್ಮ ಸೆರಗಿನ ಅಂಚಿನಲ್ಲಿ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಅಯಿತು ಬಿಡಿ. ಅರ್ಧ ಗಂಟೆ ಚರ್ಚೆಯಲ್ಲಿ ಹೇಳಿರಿ. ಅದನ್ನು ಬಿಡಿ ಎಂದರೆ, ಈಗಾಗಲೇ ಒಂದು ಗಂಟೆಯಾಯಿತು.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ನಾಲ್ಕು ಜನ ಮಹಿಳಾ ಸದಸ್ಯರಿದ್ದೇವೆ. ಇದು ನಮಗೆ ಸಂಬಂಧಪಟ್ಟಂತಹದ್ದು. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. Reservation ಅಂತೂ ಇಲ್ಲ.

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಇದು ಪ್ರಶ್ನೋತ್ತರವಲ್ಲ. ಇದನ್ನು ನಿಯಮ 330ರ ಅಡಿಯಲ್ಲಿ ಚರ್ಚೆಗೆ ಹಾಕಿಕೊಳ್ಳಿ. ಇದು Question Hour ಅಲ್ಲ.

**ಡಾ॥ ತೇಜಸ್ವಿನಿ ಗೌಡ:–** ನೀವು ಮಾತನಾಡುವ ಸಂದರ್ಭದಲ್ಲಿ ನಾನು ಅಡ್ಡ ಬರಲಿಲ್ಲ. ನೀವು ಎಷ್ಟು ಹೊತ್ತು ಮಾತನಾಡುತ್ತೀರಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಮಾನ್ಯ ಸದಸ್ಯರು ಈ ವಿಷಯದ ಬಗ್ಗೆ ಚರ್ಚಿಸಲು ಅವಕಾಶ ಕೋರಬಹುದಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ತೇಜಸ್ವಿನಿ ಗೌಡ:–** ಇಡೀ ಮಹಿಳಾ ಸದಸ್ಯರಿಗೆ ಕಾರ್ಯಕಲಾಪಗಳಲ್ಲಿ ಮಾತನಾಡಲು ಎಷ್ಟು ಸಮಯ ಕೊಟ್ಟಿದೆ ಎಂಬುದರ ಬಗ್ಗೆ ಲೆಕ್ಕ ಹಾಕಿ. ಇವತ್ತು ನಾವು ಇನ್ನೂ ಅಲ್ಪ ಸಂಖ್ಯಾತರು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ನೀವು ರೂಲಿಂಗ್ ಪಾರ್ಟಿಯವರು.

**ಡಾ|| ತೇಜಸ್ವಿನಿ ಗೌಡ:–** ನಮ್ಮ ನಾಲ್ಕು ಜನ ಮಹಿಳಾ ಸದಸ್ಯರು ಇಲ್ಲಿ ಅಭಿಪ್ರಾಯವನ್ನು ಹೇಳುವುದಕ್ಕಾಗುವುದಿಲ್ಲವೆಂದರೆ ಹೇಗೆ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ನಿಮ್ಮ ಅಭಿಪ್ರಾಯಗಳನ್ನು ಹೇಳಬೇಕೆಂದರೆ, ಇದು ಪ್ರಶ್ನೋತ್ತರವಲ್ಲ. ಪ್ರಶ್ನೋತ್ತರಕ್ಕೆ ಪ್ರಶ್ನೆ ಮಾತ್ರ. ನೀವು ಚರ್ಚೆ ಮಾಡಬೇಕೆಂದರೆ Rule 330 ಯಲ್ಲಿ ಮಾಡಿ. ಅರ್ಧಗಂಟೆಗಳ ಕಾಲ ಚರ್ಚೆ ಮಾಡಿ.

**ಡಾ|| ತೇಜಸ್ವಿನಿ ಗೌಡ:–** Business Advisory Committee ಗೆ ನಾವು ಅಪೀಲು ಮಾಡುತ್ತೇವೆ. ಮಹಿಳೆಯರಿಗೆ ಮಾತನಾಡುವ ಅವಕಾಶವನ್ನು ಕೊಡಬೇಕು. ನಿಮ್ಮ ಅಸಹನೆ ಸರಿಯಲ್ಲ.

**(ಗೊಂದಲ)**

**ಶ್ರಿ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಅಲ್ಲ, ಸಹೋದರಿ ನಾವು ವಿರೋಧ ಪಕ್ಷದಲ್ಲಿರುವವರು ಕಿರುಚಾಡಬೇಕು. ತಾವು ಆಡಳಿತ ಪಕ್ಷದಲ್ಲಿದ್ದುಕೊಂಡು ಹೋರಾಟ ಮಾಡುತ್ತಿದ್ದೀರಲ್ಲ!

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಮರಿತಿಬ್ಬೇಗೌಡರೇ ತಾವು ಮತ್ತೇನೂ ಹೇಳಬೇಡಿ. ತಾವು ಮಾತನಾಡಿದ್ದನ್ನು ನಾವು ನೋಡಿದ್ದೇವೆ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಅರ್ಧ ಗಂಟೆ ಅವಕಾಶ ಕೊಟ್ಟ ಮೇಲೂ, ತಾವು ಮಾತನಾಡುತ್ತೀರೆಂದರೆ, ...

**ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–**ಬಿಡ್ರಪ್ಪಾ ಹೋಗಲಿ, ಅಯ್ಯೋ ರಾಮ!

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ನೀವು ಇಲ್ಲಿಂದ ಹೋದ ಮೇಲೆ ಗುಡುಗು ಇಲ್ಲವೆಂದು ಮಾತನಾಡುತ್ತಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಆಹಾ ಗುಡುಗು!

**ಸಭಾಪತಿಯವರು:–** ಮಾನ್ಯ ಬಿ.ಜಿ. ಪಾಟೀಲ್‌ರವರೇ ಮಾತನಾಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1596**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ. ಬಿ.ಜಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಉತ್ತರ ಬಂದಿದೆ.

**ಸಭಾಪತಿಯವರು:–** ಉತ್ತರ ಬಂದಿದೆಯಾ?

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಕೆ.ಎಸ್. ಈಶ್ವರಪ್ಪನವರೇ, ನೀವು ಇಲ್ಲಿಂದ ಹೋದ ಮೇಲೆ ಗುಡುಗು ಇಲ್ಲವೆಂದು ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉತ್ತರಕ್ಕೆ ಸಂತೋಷದಿಂದ ಒಪ್ಪಿಗೆ ಕೊಟ್ಟಿದ್ದಾರೆ. ನಾನು ತಮ್ಮ ಮೂಲಕ ಅವರಿಗೆ ಸಂತೋಷದಿಂದ ಅಭಿನಂದನೆ ಸಲ್ಲಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 1578**
**(ಉತ್ತರವನ್ನು ಒದಗಿಸಲಾಗಿದೆ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಅರವಿಂದ ಕುಮಾರ್ ಅರಳಿಯವರು ಕೇಳಿದಂತಹ ಪ್ರಶ್ನೆಗೆ ಉಪ ಮುಖ್ಯಮಂತ್ರಿಯವರ ಪರವಾಗಿ ತಾವು ಉತ್ತರ ಕೊಡುತ್ತೀರಾ. ಮಾನ್ಯ ಉಪಮುಖ್ಯಮಂತ್ರಿಯವರು ತಡವಾಗಿ ಬಂದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಇನ್ನೊಂದು ಪ್ರಶ್ನೆಯಾದ ಮೇಲೆ ಈ ಪ್ರಶ್ನೆಯನ್ನು ತೆಗೆದುಕೊಳ್ಳಬಹುದಾಗಿದೆ.

**ಸಭಾಪತಿಯವರು:–** ಈಗಾಗಲೇ ಪ್ರಶ್ನೆಗಳೆಲ್ಲಾ ಮುಗಿದಿರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಹೌದು ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ತಡೆಹಿಡಿಯಬೇಕು. ಮುಂದಿನ ಪ್ರಶ್ನೋತ್ತರ ಸಂದರ್ಭದಲ್ಲಿ ಇದನ್ನು ತೆಗೆದುಕೊಳ್ಳಿ. ಏಕೆಂದರೆ, ನಾನು ಇದನ್ನು ಸ್ಟಡಿ ಮಾಡಿಲ್ಲ.

**(ಪ್ರಶ್ನೆಯನ್ನು ತಡೆಹಿಡಿಯಲಾಯಿತು)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ:20ನೇ ಮಾರ್ಚ್, 2020 ರ ಸಮೂಹ–Vರ ಲಿಖಿತ ಮೂಲಕ ಉತ್ತರಿಸುವ ಒಟ್ಟು 92 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, 92 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಮಂಡಿಸಲಾಗಿದೆ. ಹಾಗಾದರೆ ಇನ್ನುಳಿದ ಪ್ರಶ್ನೆಗಳನ್ನು ಯಾವಾಗ ಉತ್ತರ ಕೊಡಲಾಗುತ್ತದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, 92 ಪ್ರಶ್ನೆಗಳಲ್ಲಿ 38 ಕ್ಕೆ ಉತ್ತರ ಸಿಕ್ಕಿದೆ ಎಂದರೆ ಈಗಿನ ಕಾಲದಲ್ಲಿ ಅತ್ಯಂತ ಗರಿಷ್ಠ ಪ್ರಮಾಣದಲ್ಲಿ ಉತ್ತರ ಕೊಟ್ಟಿದ್ದಾರೆಂದು ತಿಳಿದುಕೊಳ್ಳಬೇಕು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, 92 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಉತ್ತರ. ..**(ಗೊಂದಲ)** ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುವ ಬಗ್ಗೆ ತಾವು ಆದೇಶ ಮಾಡಬೇಕು. You have to come to our rescue.

**ಶ್ರೀ ಎಸ್.ಎಲ್. ಭೋಜೇಗೌಡ:–** 92 ಪ್ರಶ್ನೆಗಳಲ್ಲಿ 38 ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಟ್ಟಿದ್ದಾರೆ ಎಂದರೆ, ಇನ್ನುಳಿದ ಸುಮಾರು 60 ಪ್ರಶ್ನೆಗಳು ಅನುಪಯುಕ್ತ ಪ್ರಶ್ನೆಗಳು ಅವು ಸಮಾಜಮುಖಿಯಾಗಿಲ್ಲವೆಂದು ನಾವು ಭಾವಿಸಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರು ಏನು ಭಾವಿಸುತ್ತಾರೆಂಬುದು ಗೊತ್ತಿಲ್ಲ. ಉತ್ತರವನ್ನು ತರಿಸಿಕೊಡಲಾಗುವುದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾನಾಯಕರವರೇ, ತಾವು ಅಧಿಕಾರಿಗಳಿಗೆ ಕಟ್ಟಪ್ಪಣೆ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಉತ್ತರ ಬಂದಿರಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾನಾಯಕರವರೇ, ಉತ್ತರ ತರಿಸಿಕೊಳ್ಳುವಂತಹ ವ್ಯವಸ್ಥೆ ಮಾಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಒಂದು ಗಮನಿಸಬೇಕು. ಹಿಂದಿನ ಸಾಲಿನ ಅಂಕಿ–ಅಂಶಗಳೆಲ್ಲವನ್ನೂ ತೆಗೆದುಕೊಂಡರೆ, ಈ ಬಾರಿ ಗರಿಷ್ಠ ಪ್ರಮಾಣದಲ್ಲಿ ಉತ್ತರವನ್ನು ಕೊಟ್ಟಿದ್ದೇವೆ. ಇನ್ನುಳಿದ ಪ್ರಶ್ನೆಗಳಿಗೂ ಸಹ ಉತ್ತರವನ್ನು ಮಂಡಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ಐದು ಪ್ರಶ್ನೆಗಳನ್ನು ಕೇಳಿದ್ದೆ. ಆದರೆ ಮೂರು ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇನ್ನುಳಿದ ನಿಮ್ಮ ಎರಡು ಪ್ರಶ್ನೆಗಳಿಗೂ ಸಹ ಉತ್ತರವನ್ನು ತರಿಸಿಕೊಡಲಾಗುವುದು.

**ಸಭಾಪತಿಯವರು:–** ಈಗ ಶೂನ್ಯವೇಳೆಯ ಪ್ರಸ್ತಾವಗಳು.

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**(ಅ) ಡಿಪ್ಲೋಮಾ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ನೀಡಲಾಗುತ್ತಿರುವ ಸಂಭಾವನೆಯನ್ನು ಪರಿಷ್ಕರಿಸುವ ಕುರಿತು.**

– – –

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುತ್ತಿರುವ ಡಿಪ್ಲೋಮಾ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ನೀಡುವ ಸಂಭಾವನೆಯನ್ನು ಪರಿಷ್ಕರಿಸಿ 8 ವರ್ಷಗಳಾಗಿದ್ದು, ಮೌಲ್ಯಮಾಪನದ ದರ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ ಮತ್ತು ದಿನ ಭತ್ಯೆ ಪಿ.ಯು.ಸಿ. ಮೌಲ್ಯಮಾಪಕರ ದರಕ್ಕಿಂತ ಕಡಿಮೆ ಇರುತ್ತದೆ. ಪಿ.ಯು.ಸಿ. ಉತ್ತರ ಪತ್ರಿಕೆಗಳ ಮೌಲ್ಯಮಾಪನ ದರ ರೂ. 25/– ಗಳಾಗಿರುತ್ತದೆ. ಆದರೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ರೂ.15/– ಮಾತ್ರ ನೀಡಲಾಗುತ್ತಿದೆ. ಆದ್ದರಿಂದ ಮೌಲ್ಯಮಾಪನ ದರ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ ಮತ್ತು ದಿನಭತ್ಯೆಯನ್ನು ಪರಿಷ್ಕರಿಸಿ, ಹೆಚ್ಚಿಸುವಂತೆ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ 5 ಪತ್ರಗಳನ್ನು ಬರೆದಿದ್ದರೂ ಯಾವುದೇ ಕ್ರಮ ವಹಿಸದಿರುವುದು ವಿಷಾದನೀಯ. ಶಿಕ್ಷಣ ಇಲಾಖೆಯಲ್ಲಿ ಪ್ರತಿ 3 ವರ್ಷಕ್ಕೊಮ್ಮೆ ಮೌಲ್ಯಮಾಪನ ದರಗಳನ್ನು ಪರಿಷ್ಕರಿಸಲಾಗುತ್ತಿದೆ. ಆದರೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ 8 ವರ್ಷಗಳಾದರೂ ಮೌಲ್ಯಮಾಪನ ದರ ಪರಿಷ್ಕರಣೆಯಾಗಿರುವುದಿಲ್ಲ. ಇದಕ್ಕೆ ಇಲಾಖಾ ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ. ಕೂಡಲೇ ಮೌಲ್ಯಮಾಪನ ದರ ಮತ್ತು ಇತರೆ ಭತ್ಯೆಗಳನ್ನು ಸೂಕ್ತವಾಗಿ ಪರಿಷ್ಕರಣೆ ಮಾಡಿ, ಮೌಲ್ಯಮಾಪಕರಿಗೆ ಪಾವತಿಸುವಂತೆ ಮಾನ್ಯ ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರನ್ನು ಕೋರುತ್ತೇನೆ.

ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ|| ಅಶ್ವತ್ಥನಾರಾಯಣ ಸಿ.ಎನ್. (ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ನಂತರ ಒದಗಿಸಲಾಗುವುದು.

**(ಆ) ಮಂಡ್ಯ ಜಿಲ್ಲೆಯಲ್ಲಿನ ಕಂದಾಯ ಇಲಾಖೆ ಬೇಜವಾಬ್ದಾರಿಯಿಂದ ಭದ್ರತಾ ಯೋಜನೆ ಅಡಿ ಹೊಸದಾಗಿ ಸೇರ್ಪಡೆಗೊಂಡ ವೃದ್ಧರು, ವಿಧವೆಯರು ಅಂಗವಿಕಲರುಗಳಿಗೆ ಮಾಸಾಶನ ಸ್ಥಗಿತಗೊಂಡಿರುವ ಬಗ್ಗೆ.**

**– – –**

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಂಡ್ಯ ಜಿಲ್ಲೆಯಲ್ಲಿನ ಕಂದಾಯ ಇಲಾಖೆಯ ಅಧಿಕಾರಿಗಳು ಬೇಜವಾಬ್ದಾರಿಯಿಂದ ಸಾಮಾಜಿಕ ಭದ್ರತಾ ಯೋಜನೆಗಳಡಿ ವೃದ್ಧರು, ವಿಧವೆಯರು, ಅಂಗವಿಕಲರು, ಸೇರಿ ವಿವಿಧ ಸ್ತರದ ಜನರಿಗೆ ನೀಡುವ ಮಾಸಿಕ ಪಿಂಚಣಿಯು ಸಾಕಷ್ಟು ಫಲಾನುಭವಿಗಳಿಗೆ ಸ್ಥಗಿತವಾಗಿದೆ.

ಕೆಲವರಿಗೆ ಆಧಾರ ಸಂಖ್ಯೆ ನೋಂದಣಿಯ ಸಮಸ್ಯೆಯಾಗಿದ್ದರೆ, ಕೆಲವರನ್ನು ಅಧಿಕಾರಿ ಹಾಗೂ ಸಿಬ್ಬಂದಿಗಳ ನಿರ್ಲಕ್ಷದಿಂದ ಬದುಕಿದ್ದರೂ ಮೃತಪಟ್ಟಿದ್ದಾರೆಂದು ನಮೂದಿಸಿರುವುದರಿಂದ ಡಿಲೀಟ್ ಮಾಡಲಾಗಿದೆ. ಹೀಗೆ ಅನೇಕ ವೃದ್ಧರು, ವಿಧವೆಯರು, ಅಂಗವಿಕಲರಿಗೆ ಮಾಸಾಶನ ಸ್ಥಗಿತವಾಗಿದೆ. ಸ್ಥಗಿತವಾಗಿರುವವರ ಪರವಾಗಿ ಕೆಲವರು ಅರ್ಜಿಗಳನ್ನು ಹಿಡಿದು ಬೆಂಗಳೂರಿನ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದ ಕಛೇರಿಗೂ ಎಡತಾಕಿದ್ದಾರೆ. ಮದ್ದೂರು ತಾಲ್ಲೂಕು ಚಾಮನಹಳ್ಳಿ ಗ್ರಾಮದ ರಾಮಯ್ಯ ಎಂಬುವರು, ತಮ್ಮ ಊರಿನ ತಿಮ್ಮಮ್ಮ ಕೋಂ ಕಾಡೇಗೌಡ, ಮಂಗಳಮ್ಮ ಕೋಂ ಪಾತಯ್ಯ, ದೇವಮ್ಮ ಕೋಂ ಕ್ಯಾತೇಗೌಡ, ನಾಗಮ್ಮ ಕೋಂ ಶಿವಣ್ಣ, ಗೌರಮ್ಮ ಕೋಂ ಅಪ್ಪಾಜಿ ಇವರುಗಳ ಅರ್ಜಿಗಳನ್ನು ತೆಗೆದುಕೊಂಡು ಪರಿಶೀಲಿಸಿದಾಗ, ತಾಲ್ಲೂಕು ಕಛೇರಿಯಲ್ಲಿ ಇವರೆಲ್ಲರೂ ಬದುಕಿದ್ದರೂ ಮೃತಪಟ್ಟಿದ್ದಾರೆಂದು ನಮೂದಿಸಿ ಕಳುಹಿಸಿದ್ದಾರೆ. ಅಲ್ಲದೇ ಪಾರ್ವತಮ್ಮ ಕೋಂ ಚನ್ನಾಚಾರಿ, ಜಯಮ್ಮ, ಕೆಂಪಮ್ಮ, ಮಹದೇವಯ್ಯ ಎಂಬುವವರಿಗೆ ಪಿಂಚಣಿ ನೀಡಲು ಆದೇಶವಾಗಿದ್ದರೂ, ಈ ಆದೇಶದ ಪ್ರತಿಗಳು ತಾಲ್ಲೂಕು ಕಛೇರಿಯಲ್ಲಿ ನಾಪತ್ತೆಯಾಗಿವೆ. ಅದೇ ರೀತಿ ಮಂಡ್ಯ ತಾಲ್ಲೂಕಿನಲ್ಲಿ ಸಾತನೂರು ಗ್ರಾಮದ ಚನ್ನಮ್ಮ ಕೋಂ ಕಂಬೇಗೌಡ, ನರಸಮ್ಮ ಕೋಂ ದೊಡ್ಡಯ್ಯ, ನಾಗಮ್ಮರವರಿಗೆ ಪಿಂಚಣಿ ಸಂಪೂರ್ಣವಾಗಿ ಸ್ಥಗಿತವಾಗಿದೆ. ಈ ರೀತಿ ಸಾವಿರಾರು ಫಲಾನುಭವಿಗಳಿಗೆ ಅಧಿಕಾರಿಗಳ ಎಡವಟ್ಟಿನಿಂದ ಪಿಂಚಣಿ ಸ್ಥಗಿತವಾಗಿದೆ.

ಮಾಸಾಶನಗಳನ್ನು ಮಂಜೂರು ಮಾಡಿಸಿಕೊಳ್ಳಲು ಅಧಿಕಾರಿಗಳು ಅನವಶ್ಯಕ ದಾಖಲೆಗಳನ್ನು ಕೇಳುತ್ತಾರೆ. ಆದರೆ ಮಧ್ಯವರ್ತಿ ದಲ್ಲಾಳಿಗಳ ಮೂಲಕ ಹೋದರೆ ಸಾವಿರಾರು ರೂಪಾಯಿಗಳವರೆಗೆ ವೆಚ್ಚವಾಗುತ್ತದೆ. ಈ ಸಮಸ್ಯೆ ಕೇವಲ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಂಡ್ಯ ಜಿಲ್ಲೆಯಲ್ಲಿ ಮಾತ್ರವಲ್ಲ. ರಾಜ್ಯದಾದ್ಯಂತವಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಗಂಭೀರ ಕ್ರಮ ಕೈಗೊಂಡು ಅರ್ಹ ಫಲಾನುಭವಿಗಳಿಗೆ ಸರ್ಕಾರದ ಯೋಜನೆ ದೊರಕುವಂತೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ. ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಈ ಪ್ರಶ್ನೆಗೆ ಸಂಬಂಧಿಸಿದಂತೆ ಮಾನ್ಯ ಕಂದಾಯ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

(ಮುಂದು...)

(631) 20.03.2020 1.00 ಟಿಸಿಹೆಚ್-ವಿಕೆ

ಇ) ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಚಿಕ್ಕಸಂಗಮ ದೇವಾಲಯದ ನಡುಗಡ್ಡೆ ಪ್ರದೇಶದಲ್ಲಿ ಪಕ್ಷಿಧಾಮ ನಿರ್ಮಾಣ ಮಾಡಿ ಪಕ್ಷಿ ಸಂಕುಲ ರಕ್ಷಿಸುವುದರ ಕುರಿತು.

~~~

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಂಜುಂಡಪ್ಪ ವರದಿಯಂತೆ, ಅತ್ಯಂತ ಹಿಂದುಳಿದ ಪ್ರದೇಶವಾಗಿರುವ ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗಿ ಅತೀ ಹೆಚ್ಚು ಬಾಧ್ಯತೆಗೊಳಗಾದ ಪ್ರದೇಶಗಳಲ್ಲಿ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ "ಚಿಕ್ಕ ಸಂಗಮ" ಮತ್ತು "ಹೆರಕಲ್" ಗ್ರಾಮಗಳು ಸೇರಿವೆ. ಸದರಿ ಚಿಕ್ಕ ಸಂಗಮದಲ್ಲಿ ಆಲಮಟ್ಟಿಯ ಹಿನ್ನೀರಿನಿಂದಾಗಿ ನಡುಗಡ್ಡೆ ಉಂಟಾಗಿರುತ್ತದೆ. ಈ ಪ್ರದೇಶದಲ್ಲಿ ಹವಾಮಾನಕ್ಕನುಗುಣವಾಗಿ ಸುಮಾರು 100ಕ್ಕೂ ಅಧಿಕ ವಿವಿಧ ಜಾತಿಯ ಪಕ್ಷಿ ಸಂಕುಲಗಳು ವಲಸೆ ಬರುತ್ತವೆಯೆಂದು ತಿಳಿದುಬಂದಿದೆ.

ನಾವೇ ಬಯಸಿ, ಕರೆದರೂ ಅಥವಾ ಸಾಕಷ್ಟು ಹಣ ಖರ್ಚು ಮಾಡಿದರೂ ಸಹ ಪಕ್ಷಿ ಸಂಕುಲವನ್ನು ಒಂದೆಡೆ ಸೇರಿಸಲು ಸಾಧ್ಯವಿಲ್ಲ. ಪಕ್ಷಿಗಳೇ ತಮಗೆ ಪ್ರಸಕ್ತವಾದ ಸ್ಥಳಗಳನ್ನು ಹವಾಮಾನಕ್ಕನುಗುಣವಾಗಿ ಹುಡುಕಿಕೊಂಡು ವಲಸೆ ಹೋಗುವುದು ತಮಗೆಲ್ಲಾ ತಿಳಿದಿರುವ ವಿಷಯವಾಗಿದೆ. ಹೀಗಿರುವಾಗ, ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಚಿಕ್ಕ ಸಂಗಮ ದೇವಸ್ಥಾನದ ಎದುರುಗಡೆ ಏರ್ಪಟ್ಟಿರುವ ನಡುಗಡ್ಡೆಯಲ್ಲಿ ಪಕ್ಷಿ ಸಂಕುಲ ಬೇರೆ-ಬೇರೆ ಪ್ರದೇಶಗಳಿಂದ ವಲಸೆ ಬರುತ್ತಿರುವುದು ಆ ಭಾಗದಲ್ಲಿರುವ ಜನರು ಹೆಮ್ಮೆಪಡುವಂತಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~

ಆದುದರಿಂದ, ಸದರಿ ಪ್ರದೇಶದಲ್ಲಿ ಹೆಚ್ಚು–ಹೆಚ್ಚು ಗಿಡಮರಗಳನ್ನು ಬೆಳೆಸುವುದರೊಂದಿಗೆ ಮತ್ತು ಆ ಪ್ರದೇಶಗಳಲ್ಲಿ ಆಲಮಟ್ಟಿ ಹಿನ್ನೀರು ಬತ್ತಿ ಹೋಗದಂತೆ ನೋಡಿಕೊಳ್ಳುವುದು ಅತೀ ಅವಶ್ಯವಾಗಿದೆ. ಇದರಿಂದಾಗಿ “ಪಕ್ಷಿಧಾಮ” ನಿರ್ಮಾಣದೊಂದಿಗೆ ಪಕ್ಷಿ ಸಂಕುಲವನ್ನು ರಕ್ಷಿಸುವುದರ ಜೊತೆಗೆ ಹಿನ್ನೀರಿನಲ್ಲಿ ಜೀವಿಸುವ ಲಕ್ಷಾಂತರ ಜಲಚರ ಜೀವಿಗಳನ್ನು ಸಂರಕ್ಷಣೆ ಮಾಡಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ, ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣವಾದ ಚಿಕ್ಕಸಂಗಮ ದೇವಾಲಯದ ಎದುರು ಏರ್ಪಟ್ಟಿರುವ ನಡುಗಡ್ಡೆ ಪ್ರದೇಶದಲ್ಲಿ “ಪಕ್ಷಿಧಾಮ” ನಿರ್ಮಾಣ ಮಾಡಲು ಸರ್ಕಾರ ಕೂಡಲೇ ಮುಂದಾಗಬೇಕೆಂದು ಮತ್ತು ಆ ಪ್ರದೇಶದಲ್ಲಿ ಆಲಮಟ್ಟಿ ಹಿನ್ನೀರನ್ನು ಸರ್ವಕಾಲಿಕವಾಗಿ ಕನಿಷ್ಠ ಪ್ರಮಾಣದಲ್ಲಿ ಸಂಗ್ರಹಣೆ ಮಾಡುವುದಕ್ಕಾಗಿ ಕೃಷ್ಣಾ ನದಿಗೆ ಚಿಕ್ಕದಾದ ಬ್ಯಾರೇಜ್‌ನ್ನು “ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತ (ಕೆ.ಬಿ.ಜೆ.ಎನ್.ಎಲ್)”ದ ವತಿಯಿಂದ ನಿರ್ಮಿಸಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಗೌರವಗಳೊಂದಿಗೆ ಸರ್ಕಾರವನ್ನು ಆಗ್ರಹಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)(ಜಲ ಸಂಪನ್ಮೂಲ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು ಪಕ್ಷಿಧಾಮ ನಿರ್ಮಾಣದ ಕುರಿತು ಪಕ್ಷಿ ಸಂಕುಲ ಸಂರಕ್ಷಣೆ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ಪ್ರಶ್ನೆಗೆ ಮಾನ್ಯ ಜಲಸಂಪನ್ಮೂಲ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:–** ಈಗ ದಿನಾಂಕ 16.03.2020ರ ಶೂನ್ಯವೇಳೆ ಪ್ರಸ್ತಾವಗಳಿಗೆ ಸಂಬಂಧಿಸಿದ ಉತ್ತರಗಳು.

**5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

ಅ) “ಇತ್ತೀಚೆಗೆ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಗರ್ಭಿಣಿ ಮಹಿಳೆಯ ಮೇಲೆ 5 ಜನ ಮಹಿಳೆಯರು ಹಾಗೂ ಪುರುಷನನ್ನೊಳಗೊಂಡ ಗ್ಯಾಂಗ್ ಮಾಡಿದ ಹಲ್ಲೆ ಮತ್ತು ದೌರ್ಜನ್ಯದ ಕುರಿತು.

~~~~~~

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಗೃಹ ಸಚಿವರ ಪರವಾಗಿ):–** ಮಾನ್ಯ ಸದಸ್ಯರಾದ ಶ್ರೀ ಲಹರ್ ಸಿಂಗ್ ಸಿರೋಯಾ ರವರು ದಿನಾಂಕ 16.03.2020ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಿದೆ)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~~~~

ಆ) ಗೋವಾದಲ್ಲಿರುವ ಕನ್ನಡಿಗರನ್ನು ಪೋಗೋ ಕಾಯಿದೆಯಿಂದ ರಕ್ಷಿಸುವ ಬಗ್ಗೆ.

~~~~~~

**ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದಂತಹ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸಿದ್ದರು.

ಗೋವಾ ಸರ್ಕಾರದ ಮಾನವ ವಿರೋಧಿ ನಿಲುವಿನಿಂದ ಹಲವು ಬಾರಿ ಸಂಕಷ್ಟ, ಅತಂತ್ರ ಸ್ಥಿತಿ ಎದುರಿಸಿರುವ ಗೋವಾ ಕನ್ನಡಿಗರಿಗೆ ಇದೀಗ ಹೊಸದೊಂದು ಸಮಸ್ಯೆ ಎದುರಾಗಿದೆ. ವಲಸಿಗರನ್ನು ಹೊರದಬ್ಬಿ ಮೂಲ ಗೋವನ್ನರನ್ನು ಕಾಪಾಡಲೆಂದೇ ಹುಟ್ಟಿಕೊಂಡಿರುವ *POGO* (Person of *Goan* Origin) ಆಂದೋಲನಕ್ಕೆ ಕನ್ನಡಿಗರು ಅಕ್ಷರಶಃ ತತ್ತರಿಸಿ ಹೋಗಿದ್ದು, ಇನ್ನೂ ನಮಗೆ ಗೋವಾ ನೆಲ ಸುರಕ್ಷಿತವಲ್ಲ ಎನ್ನುವ ಆತಂಕದಲ್ಲಿದ್ದಾರೆ. 06 ತಿಂಗಳಿನಿಂದ ಗೋವಾ ಕನ್ನಡಿಗರಲ್ಲಿ ಇಂತಹದೊಂದು ಅತಂತ್ರ ಸ್ಥಿತಿ ಪರಕೀಯತೆ ಕಾಡುತ್ತಿದೆ. ಉದ್ಯೋಗ ಅರಸಿ ವಲಸೆ ಹೋಗಿ, ನಾಲ್ಕಾರು ದಶಕಗಳಿಂದ ಅಲ್ಲೇ ಉಳಿದು ತವರೂರಿನ ಸಂಪರ್ಕ ಕಡಿದುಕೊಂಡವರಿಗಂತು ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಗಿದೆ.

ಜಮ್ಮು ಮತ್ತು ಕಾಶ್ಮೀರ ವಿಶೇಷ ಸ್ಥಾನಮಾನ ಅನುಚ್ಛೇದ 370 ತೆಗೆದು, ನಂತರ ಅದೇ ಮಾದರಿಯಲ್ಲಿ ಗೋವಾ ರಕ್ಷಣೆಗೆ ಪೊಗೋ ಹೆಸರಿನಲ್ಲಿ ‘1961ರ ಪೂರ್ವದಲ್ಲಿದ್ದವರು ಮಾತ್ರ ಗೋವಾದವರು. ಉಳಿದವರೆಲ್ಲಾ ವಲಸಿಗರು’ ಎಂದು ಘೋಷಿಸಬೇಕೆಂದು ಸರ್ಕಾರದ ಎಲ್ಲಾ ಹುದ್ದೆಗಳನ್ನು ಗೋವನ್ನರಿಗೆ ಮೀಸಲಿಡಬೇಕೆಂದು ಖಾಸಗಿ ಉದ್ಯೋಗದಲ್ಲಿ ಸಿಂಹಪಾಲು ಸ್ಥಳೀಯರಿಗೆ ಇರಬೇಕು, ವಲಸಿಗರಿಗೆ ಮತದಾನ ಚೀಟಿ, ಆಸ್ತಿ, ವಾಹನ ಖರೀದಿಗೆ ನೋಂದಣಿಗೆ ಅವಕಾಶ ಕೊಡಬಾರದೆಂದು, ವಲಸಿಗರನ್ನು ಪ್ರವಾಸಿಗರೆಂದು ಪರಿಗಣಿಸಿ; 6 ತಿಂಗಳಿಗಿಂತ ಹೆಚ್ಚು ಕಾಲ ಇರಲು ಬಿಡಬಾರದು ಎನ್ನುವುದು *POGO* ದ ಪ್ರಮುಖ ಬೇಡಿಕೆಯಾಗಿದೆ. ಸದ್ಯಕ್ಕೆ ಗೋವಾದ ಜನಸಂಖ್ಯೆ 13.60 ಲಕ್ಷ ಜನಸಂಖ್ಯೆ ಇದ್ದು, ಅದರಲ್ಲಿ ನಾಲ್ಕು ಲಕ್ಷ ಕನ್ನಡಿಗರೇ ಇದ್ದಾರೆ. ಇವರು ಗೋವಾ ವಿಮೋಚನೆ ಹೋರಾಟದಲ್ಲಿ ಪಾಲ್ಗೊಂಡವರು ಸಹ ಇರುತ್ತಾರೆ. ಅದಕ್ಕೂ ಮುನ್ನಾ ಉದ್ಯೋಗ ಅರಸಿ ಮರ್ಮಗೋವಾ ಪೋರ್ಟ್ ಟ್ರಸ್ಟ್ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿದವರೂ ಇದರಲ್ಲಿದ್ದಾರೆ. ಆದುದರಿಂದ ರಾಜ್ಯ ಸರ್ಕಾರವು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ನಾಲ್ಕು ದಶಕಗಳಿಂದ ವಾಸವಾಗಿರುವ ಕನ್ನಡಿಗರ ರಕ್ಷಣೆಗೆ ಮುಂದಾಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆಂದು ಕೇಳಿದ್ದರು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”
~~~~~~

ನಾನು ಹೇಳುವುದೇನೆಂದರೆ, ಇದರಲ್ಲಿ ಯಾರಿಗೂ ಆತಂಕಪಡುವುದು ಬೇಡ. ಏಕೆಂದರೆ, ಗೋವಾದಲ್ಲಿರುವುದು ರಾಷ್ಟ್ರೀಯ ಹಿತಾಸಕ್ತಿಯನ್ನು ಒಳಗೊಂಡಿರತಕ್ಕಂಥ ಸರ್ಕಾರ. ಕರ್ನಾಟಕದಲ್ಲಿ ರುವುದು ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ ಕೊಡತಕ್ಕಂಥ ಸರ್ಕಾರ. ಹಾಗೆಯೇ, ದೇಶದಲ್ಲಿ ಇರತಕ್ಕಂಥದ್ದು ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ ಕೊಡತಕ್ಕಂಥ ಸರ್ಕಾರ. ಇದನ್ನು ಬರೀ ಮಾತಿನಿಂದ ಹೇಳದೇ, ಕೃತಿಯ ಮೂಲಕ ತಂದಿದೆ. ಅನುಚ್ಛೇದ 370 ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿರಲಿಲ್ಲ. ಯಾವುದೇ ಭಾರತೀಯ ಕಾಶ್ಮೀರಕ್ಕೆ ಹೋಗಿ ಆಸ್ತಿಯನ್ನು ಹೊಂದುವಂತಹ ಅಧಿಕಾರವೂ ಇರಲಿಲ್ಲ, ಅಲ್ಲಿ ಹೋಗಿ ಖಾಯಂ ವಾಸಿಯಾಗುವಂತಹ ಯಾವುದೇ ಅವಕಾಶಗಳಿರಲಿಲ್ಲ. ಅಂತಹದ್ದಕ್ಕೆ ತಿದ್ದುಪಡಿ ತಂದಿರುವಾಗ ಹೊಸ ಯಾವುದೇ ರೀತಿಯ ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆಯಾಗತಕ್ಕಂಥ ಯಾವುದೇ ಚಟುವಟಿಕೆಗಳಿಗೆ ಕೇಂದ್ರ ಸರ್ಕಾರವು ಕೂಡ ಅವಕಾಶ ಕೊಡುವುದಿಲ್ಲ. ನಿಮಗೆ ವಿಶ್ವಾಸವಿರಲಿ, ಯಾವ ಹಿನ್ನೆಲೆಯಲ್ಲಿ ಗೋವಾದಲ್ಲಿ ಸರ್ಕಾರ ಈಗ ರಾಷ್ಟ್ರೀಯ ಹಿತಾಸಕ್ತಿಯ ಭಾರತೀಯ ಜನತಾ ಪಾರ್ಟಿಯ ಸರ್ಕಾರ ಇದೆಯೋ, ಅದೂ ಕೂಡ ಅವಕಾಶ ಕೊಡುವುದಿಲ್ಲ. ಪ್ರಾದೇಶಿಕ ಅಸ್ಮಿತೆಗೆ ನಾವು ಗೌರವ ಕೊಡುತ್ತೇವೆ, ಪ್ರಾದೇಶಿಕ ಅಸ್ಮಿತೆಯನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ. ಕರ್ನಾಟಕದಲ್ಲೂ ನಮ್ಮ ಕನ್ನಡಿಗರ ಅಸ್ಮಿತೆಯನ್ನು ನಾವು ಗೌರವಿಸುತ್ತೇವೆ. ಆ ಕನ್ನಡಿಗರ ಅಸ್ಮಿತೆಯನ್ನು ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಬಳಸಿಕೊಳ್ಳುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಕೆಲವರು extreme character ಇರತಕ್ಕಂಥವರು ದೇಶದ ಎಲ್ಲಾ ಕಡೆಗಳಲ್ಲೂ ಇರುತ್ತಾರೆ. ಆ extreme character ಇರುವವರಿಗೆ ಉದ್ದೇಶಕ್ಕಿಂತ ದುರುದ್ದೇಶವೇ ಹೆಚ್ಚಿಗೆ ಇರುತ್ತದೆ. ಆ ದುರುದ್ದೇಶದಲ್ಲಿ ಅವರು ಅದನ್ನು trump card ಆಗಿ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆ. ಹಾಗೆಯೇ trump card ಆಗಿ ಉಪಯೋಗಿಸಿಕೊಂಡು ಕೆಲವರು ತಾತ್ಕಾಲಿಕ ರಾಜಕೀಯ ಲಾಭವನ್ನು ಪಡೆದಿದ್ದಾರೆ. ಈ *POGO* ವನ್ನು ತಾತ್ಕಾಲಿಕ ರಾಜಕೀಯ ಲಾಭಕ್ಕೆ ದುರುಪಯೋಗಪಡಿಸಿಕೊಳ್ಳತಕ್ಕಂಥ ಒಂದು ಗುಂಪು ಗೋವಾದಲ್ಲಿ ಕ್ರಿಯಾಶೀಲವಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಅವರು ಬೇರೊಂದು ಪಕ್ಷಕ್ಕೆ ಸೇರಿದವರು. ಅವರು ಪ್ರಚೋದಿಸಿ, ಅದನ್ನು ವಿಭಜನೆ ಮಾಡಿ, ಮತ ವಿಭಜನೆ ಮಾಡಿಕೊಂಡು ತನ್ನ ಹಿತಾಸಕ್ತಿಯನ್ನು ಬೆಳೆಸಬೇಕು ಎನ್ನುವಂತಹ ಚಿಂತನೆಯಲ್ಲಿ ತೊಡಗಿದ್ದಾರೆಂದು ಗೊತ್ತಾಗಿದೆ. ಆದರೆ, ನಾನು ಅಲ್ಲಿ ಸ್ಥಳೀಯವಾಗಿ ಮಾತನಾಡಿದ್ದೇನೆ. ಅಲ್ಲಿನ ಸಾಮಾನ್ಯ ಗೋವಾದವರು ಅದಕ್ಕೆ ಬೆಂಬಲವನ್ನು ಕೊಟ್ಟಿಲ್ಲ. ಸರ್ಕಾರ ಅದಕ್ಕೆ ಬೆಂಬಲ ಕೊಡುವಂತಹ ಪ್ರಶ್ನೆಯೇ ಇಲ್ಲ. ಗೋವಾದಲ್ಲಿರುವಂತಹ ಸರ್ಕಾರ ಬೆಂಬಲ ಕೊಡುವಂತಹ ಪ್ರಶ್ನೆಯೂ ಇಲ್ಲ. ಹಾಗಾಗಿ, ಆತಂಕಪಡುವುದು ಬೇಡ. ಇಡೀ ದೇಶದ 132 ಕೋಟಿ ಜನರ ಹಿತಾಸಕ್ತಿಯನ್ನೂ ರಕ್ಷಣೆ ಮಾಡುವಂತಹ ಸರ್ಕಾರ ಕೇಂದ್ರದಲ್ಲಿದೆ. ಕನ್ನಡಿಗರ ಹಿತಾಸಕ್ತಿಯನ್ನೂ ರಕ್ಷಣೆ ಮಾಡುತ್ತೇವೆ. ನೀವು ಯಾವುದೇ ರೀತಿಯ ಆತಂಕಪಡುವುದು ಬೇಡ. ಈಗಾಗಲೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಗೋವಾದ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆ. ನಾನು ವ್ಯಕ್ತಿಗತವಾಗಿ ಹಲವಾರು ವರ್ಷಗಳಿಂದ ಸಂಘಟನೆ ಮತ್ತು ಬೇರೆ ಬೇರೆ ಜವಾಬ್ದಾರಿಯನ್ನು ಹೊತ್ತು ಕೆಲಸ ಮಾಡಿದ್ದೇನೆ. ಗೋವಾದಲ್ಲೂ ಕೂಡ ಚುನಾವಣಾ ಹಿನ್ನೆಲೆಯಲ್ಲಿ ಕೆಲಸ ಮಾಡಿದ್ದೇನೆ. ಆ ಸಲಿಗೆಯನ್ನು ಉಪಯೋಗಿಸಿಕೊಂಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಮ್ಮ ಪ್ರಶ್ನೆ ಬಂದ ಕೂಡಲೇ ವ್ಯಕ್ತಿಗತವಾಗಿ ನಾನು ಮಾತನಾಡಿದ್ದೇನೆ. ನೀವು ಆತಂಕಪಡುವಂತಹ ಅವಶ್ಯಕತೆ ಇಲ್ಲ. ಆತಂಕಪಡುವುದಕ್ಕೆ ಬಿಡುವುದೂ ಇಲ್ಲ. ಆ ರೀತಿ ಯಾರಾದರು ವಿಛಿದ್ರಕಾರಿ ಶಕ್ತಿಗಳು ದುರುಪಯೋಗಪಡಿಸಿಕೊಳ್ಳುವುದಕ್ಕೆ ಮುಂದಾದರೆ, ಅದನ್ನು ಹೇಗೆ ಮಟ್ಟ ಹಾಕಬೇಕು ಎನ್ನತಕ್ಕಂಥದ್ದು ಗೊತ್ತಿದೆ. ಆ ಕೆಲಸವನ್ನು ಮಾಡುತ್ತೇವೆ. ಕನ್ನಡಿಗರಿಗೆ ಅನ್ಯಾಯ ಆಗುವುದಕ್ಕೆ ಇಲ್ಲೂ ಕೂಡ ಅವಕಾಶ ಕೊಡುವುದಿಲ್ಲ, ಅಲ್ಲೂ ಕೂಡ ಅವಕಾಶ ಕೊಡುವುದಿಲ್ಲ. ಮತ್ತೆ ನಾನು ನಿಮಗೆ ಒಂದು ಮಾತನ್ನು ಹೇಳುವುದೇನೆಂದರೆ, ಅವರು ಕೂಡ ಗೋವಾದವರೇ ಆಗಿದ್ದಾರೆಂದು ತಮ್ಮ ಅಭಿಪ್ರಾಯದಲ್ಲಿ ಹೇಳಿದ್ದಾರೆ. ಹಾಗಾಗಿ, ಅವರಿಗೆ ಯಾವುದೇ ರೀತಿಯ ಆತಂಕವಿಲ್ಲ. ಬೇರೆ ಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ಉದ್ಯೋಗಕ್ಕೆಂದು ಬಂದಂಥವರು, ಇಲ್ಲೇ ನೆಲೆ ನಿಂತು ಬಹಳಷ್ಟು ಜನ ಕನ್ನಡಿಗರೇ ಆಗಿದ್ದಾರೆ. ಅವರ ರಕ್ಷಣೆಯನ್ನು ಕೂಡ ನಾವು ಮಾಡಿದ್ದೇವೆ. ಹಾಗಾಗಿ, ಗೋವಾದವರ ರಕ್ಷಣೆ ಮಾಡತಕ್ಕಂಥ ಹೊಣೆಗಾರಿಕೆ ಗೋವಾ ಸರ್ಕಾರಕ್ಕಿದೆ. ಭಾರತ ಸರ್ಕಾರ ಅಲ್ಲಿರತಕ್ಕಂಥ ಕನ್ನಡಿಗರ ರಕ್ಷಣೆಯನ್ನು ಮಾಡುತ್ತದೆ. ನಾವು ಕೂಡ ಅಲ್ಲಿರುವಂತಹ ಕನ್ನಡಿಗರ ರಕ್ಷಣೆಯನ್ನೂ ಕೂಡ ಮಾಡುತ್ತೇವೆ.

**6. ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 104ರ ಮೇರೆಗೆ, ವಿಧಾನಸಭೆಯು ದಿನಾಂಕ 19.03.2020ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಭಾರತೀಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020
2) ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕ, 2020
3) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020
4) ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ, 2020

**7. ಗೋವಾದಲ್ಲಿರುವ ಕನ್ನಡಿಗರನ್ನು ಪೋಗೋ ಕಾಯಿದೆಯಿಂದ ರಕ್ಷಿಸುವ ಬಗ್ಗೆ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

~~~~~~~

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಚರ್ಚೆ ಮಾಡುವಂತಿಲ್ಲ. ಅದಕ್ಕಾಗಿ ಮಾನ್ಯ ಸಚಿವರು ಹೇಳಿಕೆ ಕೊಟ್ಟಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~~~~~

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದು ನಾಲ್ಕು ಲಕ್ಷ ಕನ್ನಡಿಗರ ಕನ್ನಡಿಗರ ಬದುಕಿನ ಪ್ರಶ್ನೆ. ನೀವು ಈ ವಿಷಯಯನ್ನು ಇಷ್ಟು ಹಗುರವಾಗಿ ತೆಗೆದುಕೊಳ್ಳಬೇಡಿ. It is a serious matter.

**ಸಭಾಪತಿಯವರು:–** ಹಗುರವಾಗಿ ತೆಗೆದುಕೊಳ್ಳುವುದಲ್ಲ, ಕಾನೂನು ಏನು ಹೇಳುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾಲ್ಕು ಲಕ್ಷ ಕನ್ನಡಿಗರ ಬದುಕಿನ ಪ್ರಶ್ನೆಯಾಗಿದೆ. Whether this is a part of Karnataka ಎನ್ನುವುದು ನಮಗೆ ಅನುಮಾನವಿದೆ. ನಾವು ಅವರ ಬದ್ಧವಾಗಿ ವಕ್ತಾರರಾಗಿರುವುದು ಬೇಡವೆ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಗೋವಾದಲ್ಲಿರುವಂತಹ ಎಲ್ಲಾ ಕನ್ನಡಿಗರ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಚಿವರು ಹೇಳಿದರು, ಇನ್ನೇನು ಹೇಳಬೇಕು. ಎಲ್ಲದಕ್ಕೂ ಅರ್ಧರ್ಧ ಗಂಟೆ ಒಂದು ಗಂಟೆ ಕಾಲಾವಕಾಶ ನೀಡಬೇಕು ಎಂದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬಹುತೇಕ ನಾಲ್ಕು ಲಕ್ಷ ಜನ ಕನ್ನಡಿಗರು ಗೋವಾಕ್ಕೆ ದುಡಿಮೆ ಹೋಗಿರುತ್ತಾರೆ. ಈ ವಿಷಯ ಚರ್ಚೆಯಲ್ಲಿ ಬಂತು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವರಾದ ಮಾನ್ಯ ಸಿ.ಟಿ.ರವಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರ ನಿಮಗೆ ಪೂರಕವಾಗಿ ಸ್ಪಂದನೆ ಮಾಡಿದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರ್ಕಾರ ಅವರಿಗೆ ಸಮಾಧಾನ ಆಗಲಿ ಎಂದು ಸ್ವಯಂಪ್ರೇರಿತವಾಗಿ ಹೇಳಿಕೆ ಕೊಟ್ಟಿದೆ. ಇನ್ನೂ ಕೂಡ ಏಕೆ ಚರ್ಚೆ ಮಾಡುತ್ತಿದ್ದಾರೆ?

**ಶ್ರೀ ಸಿ.ಟಿ.ರವಿ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಒಂದು ನಿಮಿಷ. ತಾವು ಆತಂಕಪಡುವ ಅವಶ್ಯಕತೆ ಇಲ್ಲ. ಇದು ಗೋವಾ ಸರ್ಕಾರದ ತೀರ್ಮಾನವಲ್ಲ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಿ.ಟಿ.ರವಿಯವರೇ, ನಾವು ಹೇಳಿದ ನಂತರ, ನೀವು ಉತ್ತರ ಕೊಡಿ. ಇವತ್ತು ಈ ಸದನಕ್ಕೆ ಒಂದು ಮಹತ್ವದ ವಿಷಯ ಚರ್ಚೆಗೆ ಬಂದಿದೆ. ಇವತ್ತಿನ ದಿವಸ ನಾಲ್ಕು ಲಕ್ಷ ಕನ್ನಡಿಗರು ಗೋವಾದಲ್ಲಿದ್ದಾರೆ. ಅವರ ಬದುಕಿನ ಪ್ರಶ್ನೆಯಾಗಿರುವುದರಿಂದ ಈ ವಿಷಯ ಚರ್ಚೆಗೆ ಬಂದಿದೆ. ನೀವು ಜ್ವಲಂತ ಸಮಸ್ಯೆಗಳ ಬಗ್ಗೆ ಗೋವಾ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೀರಾ ಅಥವಾ ನೀವು ಸ್ವತಃ ಗೋವಾಗೆ ಹೋಗಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಅವರಿಂದ ಭರವಸೆಯನ್ನು ತೆಗೆದುಕೊಂಡು ಬಂದಿದ್ದೀರಾ?

(ಮುಂದು...)

**(632)20.3.2020/1.10/ಎಂ.ಎಂ–ಬಿ.ಎಸ್.ಎಸ್**
**ಶ್ರೀ ಎಸ್.ಆರ್. ಪಾಟೀಲ್(ಮುಂದು):–**

ಈಗ ನೀವು ಗೋವಾದ ಮುಖ್ಯಮಂತ್ರಿ ಹೇಗೆ ಹೇಳಿಕೆ ನೀಡಬೇಕೋ ಆ ರೀತಿ ಹೇಳಿಕೆ ನೀಡಿದ್ದೀರಿ. 'ಮಹಾದಾಯಿ' ಸಲುವಾಗಿ 40 ವರ್ಷದಿಂದ ಹೋರಾಟ ಮಾಡಿದರೆ ಅವರು 200 ಟಿ.ಎಂ.ಸಿ. ನೀರನ್ನು ಸಮುದ್ರಕ್ಕೆ ಕುಡಿಸುತ್ತಾರೆ, ಕರ್ನಾಟಕದವರಿಗೆ ಕುಡಿಯುವುದಕ್ಕೆ ಒಂದು ಹನಿ ನೀರನ್ನೂ ಕೊಡುವುದಕ್ಕೆ ತಯಾರಾಗಿಲ್ಲ. ಇದು ಸರಳವಾದಂತಹ ವಿಚಾರವಲ್ಲ. ನೀವು ಗೋವಾಗೆ ಭೇಟಿ ಕೊಡಬೇಕಾಗಿತ್ತು, ಅಲ್ಲಿನ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಬೇಕಾಗಿತ್ತು, ಅವರ assurance ತೆಗೆದುಕೊಳ್ಳಬೇಕಾಗಿತ್ತು. ನೀವು ಹೇಳಿದರೆ ನಿಮ್ಮ ಮಾತನ್ನು ನಂಬುವುದಕ್ಕಾಗುತ್ತದೆಯೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅದು ಬೇರೆ ಇದು ಬೇರೆ.

**ಶ್ರೀ ಎಸ್.ಆರ್. ಪಾಟೀಲ್:–** ನಿಮಗೆ ಗಂಭೀರತೆಯೇ ಇಲ್ಲ.

**ಶ್ರೀ ಲೆಹರ್ ಸಿಂಗ್ ಸಿರೋಯಾ:– (ಗೊಂದಲ)** ನಮಗೂ ಗಂಭೀರತೆ ಇದೆ. ಇಡೀ ದೇಶದಲ್ಲಿ;

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಲೆಹರ್ ಸಿಂಗ್‌ರವರೇ, 'ಯಾರ ಹೊಟ್ಟೆ ಕಡಿದರೆ ಯಾರು 'ಅಜವಾನ' ತಿನ್ನುತ್ತಾರೆ, ನಮ್ಮ ಹೊಟ್ಟೆ ಕಡಿಯುತ್ತದೆ ನಾವು 'ಅಜವಾನ' ತಿನ್ನಬೇಕು'. ನಿಮ್ಮ ಹೊಟ್ಟೆ ಏನೂ ಕಡಿಯಲಿಲ್ಲ, ನನ್ನ ಹೊಟ್ಟೆ ಕಡಿಯುತ್ತದೆ ನಾನು 'ಅಜವಾನ' ತಿನ್ನಬೇಕು. ನಿಮಗೆ ಹಿಂದೂ ಗೊತ್ತಿಲ್ಲ, ಮುಂದೂ ಗೊತ್ತಿಲ್ಲ, ಅದರ ಬಗ್ಗೆ ಅನುಭವವೇ ನಿಮಗಿಲ್ಲ, ಅದರ ಬಗ್ಗೆ ಜ್ಞಾನ ಕೂಡ ನಿಮಗಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಹತ್ವದ ವಿಚಾರವಲ್ಲವೆ ಇದು? ನಾಲ್ಕು ಲಕ್ಷ ಕನ್ನಡಿಗರು ಗೋವಾ ರಾಜ್ಯದಲ್ಲಿ (ಗೊಂದಲ) ಕನ್ನಡಿಗರ ನೆಲ, ಜಲ ಭಾಷೆ, ಬದುಕಿನ ಪ್ರಶ್ನೆ ಬಂದಾಗ ಸರ್ಕಾರ ಇಷ್ಟು ಲೈಟಾಗಿ ತೆಗೆದುಕೊಳ್ಳಬಾರದು. They have taken it very lightly.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಶೂನ್ಯ ವೇಳೆಯಲ್ಲಿ ಅರ್ಧ ಗಂಟೆ ಚರ್ಚೆಯಾಗಿದ್ದು, ಜ್ವಲಂತ ದೃಷ್ಟಾಂತಗಳನ್ನು ನಿಮಗೆ ನಾವು ಕೊಡುತ್ತೇವೆ. ಮಾನ್ಯ ಸಚಿವರಾದ ಈಶ್ವರಪ್ಪನವರು ವಿರೋಧಪಕ್ಷದಲ್ಲಿದ್ದಾಗ ಈ ಪುಸ್ತಕವನ್ನು ಸುಡಿರಿ ಎಂದು ಹೇಳಿದರು. ನಾವು ಹಾಗೆ ಹೇಳುವುದಿಲ್ಲ ಶೂನ್ಯ ವೇಳೆಯಲ್ಲಿ ಇರಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ಪುಸ್ತಕದಲ್ಲಿ ಎಲ್ಲಾ ವಿಚಾರವನ್ನೂ ವಿರೋಧಪಕ್ಷದ ನಾಯಕರು ಎರಡು ಗಂಟೆ ಮಾತನಾಡಿ (ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಈಶ್ವರಪ್ಪನವರು ವಿರೋಧಪಕ್ಷದ ನಾಯಕರಾಗಿದ್ದಾಗ ಇದೇ ಪ್ರಶ್ನೆ ಬಂದಾಗ ಈ ಪುಸ್ತಕವನ್ನು ಸುಟ್ಟು ಬಿಡಿರಿ ಎಂದರು. ನಾವು ಹಾಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದು ಬಹಳ ಮಹತ್ವವಾದ ವಿಚಾರವಾಗಿದೆ. ಸರ್ಕಾರವು ನಾಲ್ಕು ಲಕ್ಷ ಕನ್ನಡಿಗರ ಬಗ್ಗೆ ಬಹಳ ಹಗುರವಾಗಿ ಪರಿಗಣಿಸಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಸಭಾಪತಿಯವರು:–** ಈಗ ಅರ್ಧ ಗಂಟೆ ಚರ್ಚೆಗೆ ಒಪ್ಪಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡೋಣ.

**ಸಭಾಪತಿಯವರು:–** ಸರಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಹೊರಟ್ಟಿಯವರೇ, ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಇವರಿಗೆ ಆತಂಕ ಬೇಡ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾಲ್ಕು ಲಕ್ಷ ಕನ್ನಡಿಗರ ಬದುಕಿನ ಪ್ರಶ್ನೆ ಇರುವುದರಿಂದ ಅರ್ಧ ಗಂಟೆ ಚರ್ಚೆಗೆ ಈ ಸದನದ ಮೂಲಕ ಆದಷ್ಟು ಬೇಗನೆ, ಅರ್ಧ ಗಂಟೆ ಚರ್ಚೆಯೊಳಗಿನ ವಿಷಯಗಳಲ್ಲಿ ಇದು ಮೊದಲನೆಯ ವಿಷಯವಾಗಿರಲಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಯಾರ ಜೊತೆ ಮಾತನಾಡಿದ್ದಾರೆ ಎಂದು ಕೇಳಿದರು ನಾನು ಮುಖ್ಯಮಂತ್ರಿಯಾದ ಶ್ರೀ ಪ್ರಮೋದ್ ಸಾವಂತ್ ಅವರ ಬಳಿಯೇ ಮಾತನಾಡಿದ್ದೇನೆ. (ಗೊಂದಲ) ಪ್ಲೀಸ್ ಸರ್, ಕೇಳಿ...

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಇವರು ಮಾತನಾಡುವುದಕ್ಕೇ ಬಿಡುವುದಿಲ್ಲ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಇವರು ಆತಂಕ ವ್ಯಕ್ತಪಡಿಸಿದ ತಕ್ಷಣ ನಾನು ನಮ್ಮ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಯವರ ಜೊತೆ ಮಾತನಾಡಿ co-ordination ಮಾಡಿಕೊಂಡು ಗೋವಾ ಮುಖ್ಯಮಂತ್ರಿಯವರಾದ ಶ್ರೀ ಪ್ರಮೋದ್ ಸಾವಂತ್‌ರವರ ಜೊತೆ ಮಾತನಾಡಿದ್ದೇನೆ. ಗೋವಾದಲ್ಲಿ ಆತಂಕ ಪಡುವ ಯಾವ ರೀತಿಯ ವಾತಾವರಣವೂ ಇಲ್ಲ. ನಾವು ಅಲ್ಲಿನ ಕನ್ನಡಿಗರನ್ನು ರಕ್ಷಣೆ ಮಾಡುತ್ತೇವೆ, ಆ ರೀತಿಯ ಯಾವುದೇ ಸರ್ಕಾರದ ಯೋಚನೆ ಇಲ್ಲ. ನಾನು ಒಂದು ಪಕ್ಷದ ಹೆಸರು ಹೇಳುವುದಿಲ್ಲ, ಆ ಪಕ್ಷದ ಒಬ್ಬ ನಾಯಕ ತನ್ನ ರಾಜಕೀಯ ಹಿತಾಸಕ್ತಿಗೋಸ್ಕರ ಈ ರೀತಿ ಕ್ರಿಯೇಟ್ ಮಾಡಿದ್ದಾನೆ. ಇಡೀ ದೇಶದ ಬೇರೆ ಬೇರೆ ಕಡೆಗಳಲ್ಲಿಯೂ ಕೂಡ ಪ್ರಾದೇಶಿಕ ಅಸ್ಮಿತೆಯನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವಂತಹ ಕೆಲಸ ಬಹಳ ಕಾಲದಿಂದ ನಡೆದಿದೆ, ಕೆಲವರು ಯಶಸ್ವಿಯಾಗಿದ್ದಾರೆ, ಇನ್ನು ಕೆಲವರು ಯಶಸ್ವಿಯಾಗಿಲ್ಲ. ಹಾಗೆ ಪ್ರಾದೇಶಿಕ ಅಸ್ಮಿತೆಯನ್ನು ತನ್ನ ರಾಜಕೀಯ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಅಲ್ಲೊಬ್ಬ ವ್ಯಕ್ತಿ, ಅಲ್ಲೊಂದು ಪಕ್ಷದ ನಾಯಕ ಆ ಪ್ರಯತ್ನವನ್ನು ಮಾಡುತ್ತಿದ್ದಾನೆ, ಅದಕ್ಕೆ ಜನ ಬೆಂಬಲ ಇದುವರೆಗೂ ವ್ಯಕ್ತವಾಗಿಲ್ಲ ಇದು ಮೊದಲನೆಯದು. ಎರಡನೆಯದಾಗಿ, ನಿಮಗೆ ಆತಂಕ ಪಡುವುದು ಬೇಡವೆಂದು ಏಕೆ ಹೇಳಿದೆ ಎಂದರೆ, ಸಿರಿಯಾದಲ್ಲಿದ್ದವರನ್ನು, ಇರಾನ್‌ನಲ್ಲಿದ್ದವರನ್ನು, ಇರಾಕ್‌ನಲ್ಲಿದ್ದವರನ್ನು ಮತ್ತು ಇಟಲಿಯಲ್ಲಿದ್ದಂತಹವರನ್ನೇ ರಕ್ಷಣೆ ಮಾಡಿರುವ ಭಾರತ ಸರ್ಕಾರ ದೇಶದೊಳಗಿರುವಂತಹ; ನೀವು ಇದನ್ನು ಹಾಸ್ಯವಾಗಿ ತೆಗೆದುಕೊಳ್ಳಬೇಡಿ, ದುರ್ಬಲ ಸರ್ಕಾರ ಇಲ್ಲ;

**(ಗೊಂದಲ)**

**ಶ್ರೀ ಎಸ್. ರವಿ:–** ಗೋವಾದಿಂದ ಕುಡಿಯುವ ನೀರನ್ನು ಕೊಡಿಸಲಿ ಸಾಕು.

**ಶ್ರೀ ಸಿ.ಟಿ. ರವಿ:–** ಈಗ ತಮಿಳುನಾಡಿಗೆ ಕಾವೇರಿ ನೀರು ಕೊಡುವಾಗ ನಾವು ಹೇಗೆ ಆಡುತ್ತೇವೆ **(ಗೊಂದಲ)**

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ತಾವು ಅರ್ಧಗಂಟೆ ಚರ್ಚೆಗೆ ಅನುಮತಿ ಕೊಟ್ಟಿರುವುದು ...

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ನೀವು ಇದರಲ್ಲಿ ರಾಜಕಾರಣ ಮಾಡುತ್ತಿದ್ದೀರಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಈ ಹಂತದಲ್ಲಿ ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಪಕ್ಷಗಳ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸರ್ಕಾರ ರಕ್ಷಣೆ ಕೊಡುತ್ತದೆ ಎಂದು ಈಗಾಗಲೇ ಹೇಳಿದೆ...

**(ಈ ಹಂತದಲ್ಲಿ ಧರಣಿ ನಿರತ ವಿರೋಧ ಪಕ್ಷಗಳ ಮಾನ್ಯ ಸದಸ್ಯರುಗಳು 'ಬೇಕೇ ಬೇಕು ನ್ಯಾಯ ಬೇಕು' ಎಂದು ಘೋಷಣೆ ಕೂಗುತ್ತಿದ್ದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರವು ಕನ್ನಡಿಗರ ಹಿತರಕ್ಷಣೆಗೆ ಬದ್ಧವಾಗಿದೆ. ವಿರೋಧ ಪಕ್ಷದವರು ಗಲಾಟೆ ಮಾಡುತ್ತಿದ್ದಾರೆ, ಹಿಂದಿನ ಸರ್ಕಾರಕ್ಕೆ ಕನ್ನಡಿಗರ ಬಗ್ಗೆ ಪ್ರಶ್ನೆ ಬಂದಾಗ ಉತ್ತರ ಕೊಡುವ ತಾಕತ್ತು ಇರಲಿಲ್ಲ.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ 01 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗಿದೆ.

(633) 20.3.2020 2.10 ಪಿಕೆ:ಎಕೆ

**(ಮಧ್ಯಾಹ್ನ 01 ಗಂಟೆ 18 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 2 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಗಳು ಪೀಠದಲ್ಲಿ ಉಪಸ್ಥಿತರಾದರು)**

**(ಸದನ ಪ್ರಾರಂಭವಾಗುತ್ತಿದ್ದಂತೆ ಕಾಂಗ್ರೆಸ್ ಮತ್ತು ಜೆಡಿ(ಎಸ್)ನ ಮಾನ್ಯ ಶಾಸಕರುಗಳು ಬಾವಿಯೊಳಗೆ ಬಂದರು)**

**ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳ ಭಾವನೆ ಮತ್ತು ಸರ್ಕಾರದ ಭಾವನೆ ಎರಡೂ ಒಂದೇ ಆಗಿದೆ. ಯಾವುದಾದರೂ ಒಂದು ವಿಷಯದಲ್ಲಿ ಪರಸ್ಪರ ವಿರುದ್ಧದ ಭಾವನೆ ಇದ್ದರೆ ಹೋರಾಟಕ್ಕಿಳಿಯುವ ನಿಮ್ಮ ಭಾವನೆಗಳನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಆದರೆ ಇಲ್ಲಿ, ನಮ್ಮ ಭಾವನೆಗಳಿಗೂ, ನಿಮ್ಮ ಭಾವನೆಗಳಿಗೂ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವ್ಯತ್ಯಾಸಗಳಿಲ್ಲ. ನೀವೂ ಕರ್ನಾಟಕದ ಹಿತಾಸಕ್ತಿಯ ಬಗ್ಗೆ, ಕನ್ನಡಿಗರ ಹಿತಾಸಕ್ತಿಯ ಬಗ್ಗೆ ಧರಣಿಗೆ ಬಂದಿದ್ದೀರಿ. ನಾವೂ ಕೂಡ ಕನ್ನಡಿಗರ, ಕರ್ನಾಟಕದ ಹಿತಾಸಕ್ತಿಯನ್ನು ರಕ್ಷಣೆ ಮಾಡುತ್ತೇವೆ, ಅದಕ್ಕೆ ಬದ್ಧವಾಗಿದ್ದೇವೆ. ಹಾಗಾಗಿ ತಾವು ದಯಮಾಡಿ ಬಾವಿಯಿಂದ ಹೊರಗಡೆ ಬರಬೇಕು. ಅರ್ಧಗಂಟೆ ಕಾಲಾವಧಿಗೆ ಚರ್ಚೆಗೆ ಮಾನ್ಯ ಸಭಾಪತಿಗಳು ಅವಕಾಶ ಕೊಟ್ಟಿದ್ದಾರೆ. ಅರ್ಧಗಂಟೆ ಕಾಲಾವಧಿಯ ಚರ್ಚೆಯ ಸಮಯದಲ್ಲಿ ವಿವರವಾದ ಚರ್ಚೆ ಮಾಡೋಣ. ನಂತರ ಸದನ ಏನು ನಿರ್ಣಯ ತೆಗೆದುಕೊಳ್ಳುತ್ತದೆಯೋ ಅದಕ್ಕೆ ನಾವು ಬದ್ಧರಾಗಿರುತ್ತೇವೆ. ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ಸ್ಥಳಗಳಿಗೆ ತೆರಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಗೋವಾ ರಾಜ್ಯದ ಮೂರನೆಯ ಒಂದರಷ್ಟು ಅಂದರೆ, 13 ಲಕ್ಷ ಜನರಲ್ಲಿ 4 ಲಕ್ಷ ಜನ ಕನ್ನಡಿಗರಿದ್ದಾರೆ. ಅವರು ಇಡೀ ಗೋವಾವಂತೆ ನಿರ್ಮಿಸಿದಂತವರು. ಈ 4 ಲಕ್ಷ ಜನ ಕನ್ನಡಿಗರು ಗೋವಾ ಕಟ್ಟಿದವರೂ ಆಗಿದ್ದಾರೆ. ಗೋವಾ ವಿಮೋಚನಾ ಹೋರಾಟದಲ್ಲಿ ಇವರು ಭಾಗಿಯಾಗಿದ್ದರು. ಗೋವಾ ರಾಜ್ಯಕ್ಕೆ ತಮ್ಮ ಬೆವರನ್ನು ಸುರಿಸಿದ್ದಾರೆ. ಈಗ ಇವರ ಬದುಕಿನ ಪ್ರಶ್ನೆ ಬಂದಿದೆ. ಎರಡು ದಿವಸದ ಹಿಂದೆ ಕನ್ನಡಿಗರ ಮೇಲೆ ಹಲ್ಲೆ ಮಾಡಿದ್ದಾರೆ. ಹಲ್ಲೆಗೊಳಗಾದವರು ಪೊಲೀಸ್ ಠಾಣೆಯಲ್ಲಿ ದೂರು ಕೊಡಲು ಹೋದರೆ ಅವರು ದೂರನ್ನು ತೆಗೆದುಕೊಂಡಿಲ್ಲ. ಗೋವಾ ಸರ್ಕಾರ ಕನ್ನಡಿಗರ ಬಗ್ಗೆ ಆಸಡ್ಡೆ ತೋರಿಸುತ್ತಿದೆ. ಅನವಶ್ಯಕವಾಗಿ ಕಲಾಪದ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡಬೇಕು ಎನ್ನುವ ಉದ್ದೇಶ ನಮಗಿಲ್ಲ. ಹೆಚ್ಚು ಕಲಾಪ ನಡೆಯಬೇಕು ಎಂದು ನಾವು ಬಯಸುತ್ತೇವೆ. ಮಾನ್ಯ ಸಭಾಪತಿಯವರೇ, 4 ಲಕ್ಷ ಕನ್ನಡಿಗರ ಬಗ್ಗೆ ಚಿಂತನೆ ಮಾಡದಿದ್ದರೆ ಏನು ಸಂದೇಶ ಹೋಗುತ್ತದೆ? ಅವರ ಭವಿಷ್ಯವೇನು ಎನ್ನುವುದರ ಬಗ್ಗೆ ವಿಚಾರ ಮಾಡಿ ಪ್ರಸ್ತಾಪಿಸಿದಾಗ ಸರ್ಕಾರ ಈ ಕುರಿತು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಒಪ್ಪಿತ್ತು. ನಾವೂ ಕೂಡ ಇದನ್ನು ಒಪ್ಪುವ ಸ್ಥಿತಿಯಲ್ಲಿದ್ದಾಗ ಮಾನ್ಯ ಸಚಿವರು ವಿಷಯಾಂತರ ಮಾಡಿ, ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ವೈಖರಿ ನಮಗೆ ಒಪ್ಪಿಗೆಯಾಗಲಿಲ್ಲ. ಆಗ ವಿರೋಧ ಪಕ್ಷದ ಸದಸ್ಯರು ಧರಣಿ ನಿರತರಾದರು. ನನ್ನದೊಂದು ಮನವಿ ಇದೆ. ಒಬ್ಬ ಮಂತ್ರಿಯ ನೇತೃತ್ವದಲ್ಲಿ ಗೋವಾ ರಾಜ್ಯಕ್ಕೆ ಡೆಲಿಗೇಷನ್ ಹೋಗಬೇಕು. ಇದು ಒಬ್ಬರಿಬ್ಬರ ಪ್ರಶ್ನೆಯಲ್ಲ. 4 ಲಕ್ಷ ಕನ್ನಡಿಗರು ತಮ್ಮ ಜೀವವನ್ನು ಕೈಯಲ್ಲಿಟ್ಟುಕೊಂಡು ಕುಳಿತಿದ್ದಾರೆ. ಈ ಹಿಂದೆಯೂ ಅವರ ಗುಡಿಸಲುಗಳನ್ನು, ಮನೆಗಳನ್ನು, ಶೆಡ್‌ಗಳನ್ನು ಕಿತ್ತು ಬಿಸಾಕಿದ್ದರು. ಈಗ ಅವರಿಗೆ ತಮ್ಮ ಜೀವದ ಕುರಿತು ಭಯ ಇದೆ. ಕನ್ನಡ ನಾಡಿನ ಜಲ, ನೆಲ, ಭಾಷೆ, ಕನ್ನಡ ನಾಡಿನ ಭವಿಷ್ಯದದ ಪ್ರಶ್ನೆ ಬಂದಾಗ ಪಕ್ಷಾತೀತವಾಗಿ ನಾವೆಲ್ಲರೂ ಒಂದಾಗಿ ಹೋರಾಟ ಮಾಡಬೇಕಾಗುತ್ತದೆ. ಈ ರೀತಿಯ ಹೋರಾಟ ಮಾಡಿದಂತಹ ಅನೇಕ ದೃಷ್ಟಾಂತಗಳೂ ಇವೆ. ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಗೋವಾ ರಾಜ್ಯಕ್ಕೆ ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗಿ, ಅಲ್ಲಿನ ಮುಖ್ಯಮಂತ್ರಿಗಳನ್ನು ಭೇಟಿಯಾಗಿ, ಪರಿಸ್ಥಿತಿಯನ್ನು ನಿವೇದನೆ ಮಾಡಿ, 4 ಲಕ್ಷ ಕನ್ನಡಿಗರ ದುರ್ಬರ ಬದುಕನ್ನು ಸರಳ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಹಾಗೆ ಮಾಡಬೇಕು. ಒಂದು ಡೆಲಿಗೇಷನ್ ತೆಗೆದುಕೊಂಡು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೋಗುತ್ತೇವೆ ಎನ್ನುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ, ನಮ್ಮ ಸದಸ್ಯರುಗಳು ಧರಣಿಯನ್ನು ಬಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ತೆರಳುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸಚಿವರಾದ ರವಿಯವರು ಮಾತನಾಡುತ್ತಾ, ಜಗತ್ತಿನಲ್ಲಿ ನಡೆಯುವಂಥದ್ದೆಲ್ಲವನ್ನೂ ಹೇಳಿದರು. ನಿನ್ನೆ–ಮೊನ್ನೆ ರಾಯಚೂರು ಮತ್ತು ಗದಗ ಜಿಲ್ಲೆಗಳ ಜನರನ್ನು ಹೊಡೆದು ಹೊರಗೆ ಹಾಕಿದ್ದಾರೆ. ಪೊಲೀಸರು ದೂರು ಸ್ವೀಕಾರ ಮಾಡುತ್ತಿಲ್ಲ. ಎಲ್ಲಿಯೂ ಇದರ ರೆಕಾರ್ಡ್ ಇಲ್ಲ. ಈಗ ಅಲ್ಲಿರುವ ನಮ್ಮ ಜನಕ್ಕೆ ದಿನನಿತ್ಯ ನಡೆಯುವಂತಹ ಇಂತಹ ಕೃತ್ಯಗಳನ್ನು ತಡೆಯುವ ಶಕ್ತಿ ಹೊಂದಿಲ್ಲ. ಹಿಂದೆ, ಜೆಸಿಬಿ ತಂದು ಮನೆಗಳನ್ನೆಲ್ಲಾ ಒಡೆದು ಹಾಕಿದ್ದರು. ನನಗೆ ಬೆಳಿಗ್ಗೆ ಕೂಡ ದೂರವಾಣಿ ಮಾಡಿ ಅಲ್ಲಿನ ಪರಿಸ್ಥಿತಿಯನ್ನು ಹೇಳಿದರು. ಒಬ್ಬೊಬ್ಬರೇ ಅಲ್ಲಿಂದ ಬರುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇಲ್ಲಿ ಅವರಿಗೆ ಮನೆ–ಮಠ ಇರುವುದಿಲ್ಲ, ಅವರು ಅಲ್ಲಿ ಕೆಲಸ ಮಾಡುವುದು ಅನಿವಾರ್ಯವಾಗಿರುತ್ತದೆ. ಇಲ್ಲಿಂದ ಅವರು ಸುಮಾರು 10–20–30–50–100 ವರ್ಷಗಳ ಹಿಂದೆಯೇ ಅಲ್ಲಿಗೆ ಹೋಗಿದ್ದಾರೆ. ಕೆಲವರು ಗೋವಾ ರಾಜ್ಯ ಹುಟ್ಟಿದ ಕಾಲದಿಂದ ಅಲ್ಲಿದ್ದಾರೆ. ಅವರ ಮಕ್ಕಳು, ಮೊಮ್ಮಕ್ಕಳು ಕೂಡ ಅಲ್ಲಿದ್ದಾರೆ. ಮಾನ್ಯ ಸಚಿವರಾದ ರವಿಯವರು, ಯಾರೋ ಒಬ್ಬರು ಹಾಗೆ ಮಾಡುತ್ತಾರೆ ಎನ್ನುವ ಮಾತನ್ನು ಹೇಳಿದರು. ಯಾರೋ ಒಬ್ಬರು ಹಾಗೆ ಮಾಡುವುದರಿಂದಲೇ ಗಲಾಟೆಗಳಾಗುತ್ತವೆ. ಅಲ್ಲಿ ಯಾರನ್ನೋ ದೊಡ್ಡವರನ್ನಾಗಿ ಮಾಡಬೇಕು, ಚಿಕ್ಕವರನ್ನಾಗಿ ಮಾಡಬೇಕು ಎನ್ನುವ ವಿಷಯ ನಮಗೆ ಸಂಬಂಧಪಡುವುದಿಲ್ಲ. ಅಲ್ಲಿರುವ 4 ಲಕ್ಷ ಕನ್ನಡಿಗರ ಹಿತವನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದೆ. ಮಹದಾಯಿ ಯೋಜನೆ ಏನಾಯಿತು? ಇದೇರೀತಿ ಪ್ರತಿಯೊಂದಕ್ಕೂ ಕೋರ್ಟ್‌ಗೆ ಹೋಗುವ ಹಾಗೆ ಆಗಬಾರದು. ಗೋವಾ ರಾಜ್ಯಕ್ಕೆ ಬೆಳಗಾವಿಯಿಂದ ಕಾಯಿಪಲ್ಯ ಹೋಗುತ್ತದೆ, ಹುಬ್ಬಳ್ಳಿಯಿಂದ ಹಾಲು ಹೋಗುತ್ತದೆ. ಅನೇಕ ಪದಾರ್ಥಗಳು ಕರ್ನಾಟಕದಿಂದ ಸರಬರಾಜಾದರೂ ನಮ್ಮನ್ನು ಹೆದರಿಸುಂತಹ ಕೆಲಸ ಮಾಡುತ್ತಾರೆ. ಮೂಗು ಹಿಡಿದರೆ ಬಾಯಿ ತೆಗೆಯುತ್ತಾರೆ ಎಂದು ಹೇಳುವ ಹಾಗೆ ಅಲ್ಲಿನ ಜನರಿಗೆ ತೊಂದರೆ ಕೊಡುವಂತಹ ವ್ಯವಸ್ಥೆ ನಡೆದಿದೆ. ಅವರಿಗೆ ಯಾವುದೇ ಕಾಯಿದೆ–ಕಾನೂನುಗಳು ಲೆಕ್ಕಕ್ಕಿಲ್ಲ. ನಾವು ಇಲ್ಲಿಂದ ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗಿ, ಅಲ್ಲಿನ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ವಾಸ್ತವ ಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಟ್ಟರೆ ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಒಂದು ಮಹತ್ವ ಬರುತ್ತದೆ. ನಿಮ್ಮ ನೇತೃತ್ವದಲ್ಲೇ ಒಂದು ಡೆಲಿಗೇಷನ್ ಹೋಗೋಣ. ಮಾನ್ಯ ಸಭಾನಾಯಕರ ನೇತೃತ್ವದಲ್ಲೋ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ನೇತೃತ್ವದಲ್ಲೋ ಡೆಲಿಗೇಷನ್ ತೆಗೆದುಕೊಂಡು ಹೋಗೋಣ. ಎಲ್ಲಾ ಪಕ್ಷದವರನ್ನು ಕರೆದುಕೊಂಡು ಹೋಗಿ. ಅಲ್ಲಿನ ವಸ್ತು ಸ್ಥಿತಿಯನ್ನು ನೋಡೋಣ. ಅಲ್ಲಿನ ಮುಖ್ಯಮಂತ್ರಿಗಳ ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳಿ. ಹೀಗೆ ಮಾಡುವುದರಿಂದ ಅಲ್ಲಿನ ಜನಕ್ಕೆ ಸ್ವಲ್ಪ ನೆಮ್ಮದಿ ಸಿಗುವಂತಾಗುತ್ತದೆ.

(ಮುಂದು...)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(634) 20–03–2020 2.20 ಡಿಎಸ್–ಎಕೆ
**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):–**

ಮುಂದೆ ಆಗುವಂತಹ ಅಡತಡೆಗಳು ನಿಲ್ಲುತ್ತವೆ ಎನ್ನುವ ನಮ್ಮ ಬೇಡಿಕೆಯನ್ನು ಬಿಟ್ಟರೆ ಬೇರೆ ಏನು ಇಲ್ಲ. ಅವರ ಮನಸ್ಸಿಗೆ ಸಮಾಧಾನ, ನೆಮ್ಮದಿ ಬೇಕು; ನಮ್ಮನ್ನು ಕೇಳುವವರಿದ್ದಾರೆ ಎಂದು ಅವರಿಗೆ ಅನಿಸಬೇಕು. ನಮ್ಮನ್ನು ಯಾರು ಕೇಳುವವರಿಲ್ಲವೆಂದು ಅವರು ನಿಸ್ಸಹಾಯಕರಾಗಿ ಬಂದಿದ್ದಾರೆ. ದಯಮಾಡಿ ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

ನಾವು ಹೇಳುವುದಕ್ಕೆ ಇಲ್ಲೇನು prestige ಇಲ್ಲ. ನಾವು ಹೇಳಬೇಕಾದರೆ ವಸ್ತುಸ್ಥಿತಿಯನ್ನು ನೋಡಿ ಹೇಳಿ. ಅವತ್ತು ಇಪ್ಪತ್ತು ಜನರು ಬಂದಿದ್ದರು. ಅವರು ವಿಧಾನಸಭೆ ಹತ್ತಿರವೂ ಬಂದು ನಿಂತಿದ್ದಾರೆ. ಅವತ್ತು ಬಂದು ಅವರು ನನಗೆ ವಸ್ತುಸ್ಥಿತಿಯನ್ನು ಹೇಳಿದರು, ಆಗ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ನಮ್ಮ prestige ಆಗಲಿ, ರಾಜಕಾರಣವಾಗಲಿ, ಮತ್ತೊಂದು ಏನು ಇಲ್ಲ. ನಾವು ಸಹಜವಾದ ನ್ಯಾಯ ಕೊಡುವುದಕ್ಕೆ ಕೇಳುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಸರ್ಕಾರ ದಯವಿಟ್ಟು ಇದನ್ನು prestige ಎಂದು ತೆಗೆದುಕೊಳ್ಳಬಾರದು. ಅವರೇ ಈ ಕಡೆ ಇದ್ದಾಗ ಎಷ್ಟು ಸಲ ಗೋವಾದ ಬಗ್ಗೆ ಮಾತನಾಡಿದ್ದಾರೆ, ಗೋವಾದಲ್ಲಿ ಆಗುವಂತಹ ಅನ್ಯಾಯವನ್ನು ಎಳೆಎಳೆಯಾಗಿ ಬಿಡಿಸಿ ಮಾತನಾಡಿದ್ದಾರೆ. ಅವರು ಆ ಕಡೆ ಹೋದ ತಕ್ಷಣ ಏಕೆ ಈ ರೀತಿ ಮಾಡುತ್ತಿದ್ದಾರೆ. ಅಲ್ಲಿರುವಂತಹ ನೈಜವಾದ ಸ್ಥಿತಿಯನ್ನು ಸರ್ಕಾರ ನೋಡಬೇಕು. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಕರ್ನಾಟಕದವರು ಎನ್ನುವುದು ಬಿಟ್ಟರೆ ಬೇರೆ ಏನು ಇಲ್ಲ. ಈಗ ನಾವು ಕರ್ನಾಟಕದವರನ್ನು ರಕ್ಷಣೆ ಮಾಡಬೇಕಾಗಿದೆ. ಜಗತ್ತಿನಲ್ಲಿ 'ಕೊರೊನಾ ಸೋಂಕು ಹರಡಿದೆ, ಜನರನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಂಡಿದೆ. ದಯಮಾಡಿ ಕೇಂದ್ರದ ನೆರವಿಗೆ ನಿಯೋಗವನ್ನು ತೆಗೆದುಕೊಂಡು ಹೋಗುವುದಕ್ಕೆ ಸರ್ಕಾರ ನಿರ್ಧಾರ ಮಾಡಬೇಕು. ನಿಯೋಗ ತೆಗೆದುಕೊಂಡು ಹೋಗುತ್ತೇವೆಂದು ಸರ್ಕಾರ ಪ್ರಕಟ ಮಾಡಿದರೆ, ನಾವು ಅದಕ್ಕೆ ಯಾವುದೇ ರೀತಿಯ ವ್ಯತಿರಿಕ್ತ ಪ್ರತಿಕ್ರಿಯೆ ಮಾಡುವುದಿಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಳೆದ ಹತ್ತು ದಿನಗಳಿಂದ ಹಿರಿಯ ನಾಯಕರಾಗಿರುವಂತಹ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಗೋವಾ ಕನ್ನಡಿಗರ ಸಮಸ್ಯೆ ಬಗ್ಗೆ ಏನಾದರೂ ಮಾಡಿ ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ಪಡೆಯಬೇಕೆನ್ನುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ನಮ್ಮ ಪ್ರಶ್ನೆ ಏನೆಂದರೆ, ಇವತ್ತು ಗೋವಾ ಒಂದರ್ಥದಲ್ಲಿ ಕನ್ನಡಿಗರಿಂದಲೇ ಬದುಕಿದೆ. ದೊಡ್ಡ ಪ್ರಮಾಣದಲ್ಲಿ ಪ್ರವಾಸಕ್ಕೆ ಹೋಗುವವರು ನಾವೇ. ಅಲ್ಲಿ ದುಡಿಮೆ ಮಾಡುವವರು ನಾವೇ. ಕಳೆದ ಮೂರ್ನಾಲ್ಕು ವರ್ಷಗಳಿಂದ ನಮ್ಮನ್ನು ಯಾವ ರೀತಿ ಒಕ್ಕಲೆಬ್ಬಿಸುತ್ತಿದ್ದಾರೆಂದರೆ, ಅವರ ಕಣ್ಣೀರಿನ ಘಟನೆಗಳನ್ನು ನಾವೆಲ್ಲಾ ಕೇಳಿದ್ದೇವೆಯಲ್ಲಾ ನಮ್ಮ ಮನಸ್ಸು ಕರಗಲೇಬೇಕು. ಅವರಿಗೆ ಕಾಳಜಿ ಇದೆ ನಾನು ಒಪ್ಪುತ್ತೇನೆ. ಆದರೆ ಅದು

ಅನುಷ್ಠಾನಕ್ಕೆ ಬರಬೇಕಲ್ಲವೇ, ಅವರ ರಕ್ಷಣೆಯಾಗಬೇಕಲ್ಲವೇ, ನೂರಾರು ವರ್ಷಗಳಿಂದ ಬದುಕು ಕಟ್ಟಿಕೊಂಡು ಬಂದಂಥವರ ಮನೆ–ಮಠವನ್ನು ಅವರು ಎತ್ತಂಗಡಿ ಮಾಡಿ ಸಂಪೂರ್ಣವಾಗಿ ಅವರನ್ನು ಒಕ್ಕಲೆಬ್ಬಿಸುತ್ತಿದ್ದಾರೆಂದರೆ ಅದರ ಅರ್ಥ ಏನು? ನಾವು ಯಾವಾಗ ನಮ್ಮ ಕನ್ನಡಿಗರ ರಕ್ಷಣೆಗೆ ಹೋಗುವುದು? ಸರ್ಕಾರ ಅರ್ಧಗಂಟೆ ಕಾಲಾವಧಿ ಚರ್ಚೆಗೂ ಅವಕಾಶ ಕೊಡಬೇಕು, ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಏನು ಮಾಡುತ್ತಾರೆಂಬುದನ್ನು ಹೇಳಬೇಕು, ನಿಯೋಗವೂ ಹೋಗಬೇಕು. ಕೂಡಲೇ ಕನ್ನಡಿಗರಿಗೆ ರಕ್ಷಣೆ ಕೊಡುವಂತಹ ಕೆಲಸವನ್ನು ಮಾಡಬೇಕು. ನಾವೆಲ್ಲಾ ಒಂದು ಘಳಿಗೆ ರಾಜಕಾರಣವನ್ನು ಮರೆಯೋಣ. ರಾಜಕಾರಣವನ್ನು ಮರೆತು ಅವರಿಗೆ ನ್ಯಾಯ ಕೊಡುವ ದಿಸೆಯಲ್ಲಿ ಸರ್ಕಾರ ಮುಂದಾಗಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಗೋವಾ ಕನ್ನಡಿಗರನ್ನು ರಕ್ಷಣೆ ಮಾಡುವ ವಿಚಾರದಲ್ಲಿ ಪ್ರತಿಪಕ್ಷಕ್ಕೆ ಎಷ್ಟು ಕಾಳಜಿ ಇದೆಯೋ ಸರ್ಕಾರಕ್ಕೂ ಅಷ್ಟೇ ಸಹಮತ ಇದೆ. ಆ ಕಾರಣಕ್ಕಾಗಿ ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡಿದ್ದೇನೆಂದರೆ, ಇದರ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ವಿಸ್ತಾರವಾಗಿ ಚರ್ಚೆ ಮಾಡೋಣ ಎನ್ನುವಂತಹ ಮಾತನ್ನು ಹೇಳಿದ್ದೆವು. ಅವರೂ ಕೂಡ ಒಪ್ಪಿಕೊಂಡಿದ್ದರು. ಕಡೆಗೆ ಅವರು ಕಾರಣಾಂತರದಿಂದ ಸದನದ ಬಾವಿಗೆ ಬಂದೆವು ಎಂದು ಹೇಳುತ್ತಿದ್ದಾರೆ. ಇಲ್ಲಿರುವಂಥದ್ದು ಸರ್ಕಾರದ ವತಿಯಿಂದ ಒಂದು ನಿಯೋಗ ತೆಗೆದುಕೊಂಡು ಹೋಗಬೇಕೇ ಎನ್ನುವಂತಹ ಚರ್ಚೆ. ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಯಾವ ರೂಪದಲ್ಲಿ ಇದನ್ನು ಮಾಡಬೇಕು, ಕನ್ನಡಿಗರಿಗೆ ರಕ್ಷಣೆ ಕೊಡಬೇಕೆಂದು ಯೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದು ಸೋಮವಾರ ಉಚಿತವಾದಂತಹ ಹೇಳಿಕೆಯನ್ನು ನಾವು ಇಲ್ಲಿ ಕೊಡುತ್ತೇವೆ. ಅವರು ಎಷ್ಟು ಕಾಳಜಿಯಿಂದ ಸಾರ್ವಜನಿಕ ಹಿತಾಸಕ್ತಿಯಿಂದ ಕನ್ನಡಿಗರನ್ನು ರಕ್ಷಣೆ ಮಾಡಬೇಕು ಎನ್ನುವ ಕಲ್ಪನೆಯಿಂದ ಅತ್ಯಂತ ಗಟ್ಟಿಯಾಗಿ ಈ ವಿಚಾರವನ್ನು ತೆಗೆದುಕೊಂಡು ಬಂದಿದ್ದಾರೆಯೋ ಪ್ರತಿಪಕ್ಷ ನಾಯಕರು ಮತ್ತು ಮಾನ್ಯ ಬಸವರಾಜ ಶಿಲಿಂಗಪ್ಪ ಹೊರಟ್ಟಿಯವರ ಒಟ್ಟು ಉದ್ದೇಶಕ್ಕೆ ಸರ್ಕಾರ ಪೂರ್ಣ ಸಹಮತವನ್ನು ಹೊಂದಿದೆ. ಹಾಗಾಗಿ ಸೋಮವಾರ ದಿವಸ ನಾವು ಒಂದು ಹೇಳಿಕೆಯನ್ನು ಮಾಡುತ್ತೇವೆ. ಅದರ ಆಧಾರದ ಮೇಲೆ ಏನು ಮಾಡಬೇಕೆಂದು ತೀರ್ಮಾನ ಮಾಡೋಣ. ನಮ್ಮ ತೀರ್ಮಾನ, ಅವರ ತೀರ್ಮಾನ ಒಂದೇ ಆಗಿರುತ್ತದೆ. ಅವರಿಗೆ ಆತಂಕವೇ ಬೇಡ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸೋಮವಾರ ದಿವಸ ಹೇಳಿಕೆ ಮಾಡುತ್ತೇವೆ ಎಂದು ಹೇಳಿದ್ದಾರಲ್ಲಾ, ಮಾನ್ಯ ಮುಖ್ಯಮಂತ್ರಿಗಳೇ ಸದನಕ್ಕೆ ಬಂದು ಹೇಳಿಕೆ ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ನೀವೇ ಹೇಳಿಕೆ ಮಾಡಬೇಕೆಂದು ತಿಳಿಸುತ್ತೇವೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ನಾನು ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮತ್ತು ನಮ್ಮ ಶಿಕ್ಷಣ ಸಚಿವರು ಒಟ್ಟಾಗಿ ಮಾತನಾಡಿ ವಿನಂತಿ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಯಾರ ಜೊತೆ ಮಾತನಾಡುತ್ತಾರೆಯೋ ಮಾತನಾಡಲಿ. ಆದರೆ, ಸೋಮವಾರದ ದಿವಸ ಮಾನ್ಯ ಮುಖ್ಯಮಂತ್ರಿಗಳು ಈ ಪವಿತ್ರವಾದ ಸದನಕ್ಕೆ ಬರಬೇಕು. ಇದು ನಾಲ್ಕು ಲಕ್ಷ ಕನ್ನಡಿಗರ ಬದುಕಿನ ಪ್ರಶ್ನೆ. ಅವರು ಬಂದು ಹೇಳಿಕೆಯನ್ನು ಕೊಟ್ಟುಬಿಡಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇದೇನು prestige ಅಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಬಂದು ಹೇಳಿಕೆ ಮಾಡಿದರೆ ಅದಕ್ಕೆ ಒಂದು ದೊಡ್ಡದಾಂತಹ ಸಂದೇಶ ಹೋಗುತ್ತದೆ. ಇಷ್ಟೇ ನಮ್ಮ ಉದ್ದೇಶ. ಸಭಾನಾಯಕರು ಹೇಳಿದರೂ ತಪ್ಪಲ್ಲ. ಯಾವ ಸಚಿವರೂ ಹೇಳಿದರು ತಪ್ಪಿಲ್ಲ. It's a statement given by the government. ಆದರೆ ಮುಖ್ಯಮಂತ್ರಿಗಳು ಬಂದು ಹೇಳಿದಾಗ ಅದಕ್ಕೊಂದು ತೂಕ ಇರುತ್ತದೆ, ಒಂದು ಒಳ್ಳೆಯ ಸಂದೇಶ ಹೋಗುತ್ತದೆ ಎನ್ನುವುದು ನಮ್ಮ ವಿನಂತಿ. ಅವರೇ ಬರಬೇಕೆನ್ನುವ ಹಠ ಏನು ಇಲ್ಲ. ಮುಖ್ಯಮಂತ್ರಿಗಳು ಹೇಳಿದರೆ ಒಳ್ಳೆಯದು ಎಂಬುದು ನಮ್ಮ ಭಾವನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವೇನೆಂದರೆ, ಗೋವಾದಲ್ಲಿರುವ ನಾಲ್ಕು ಲಕ್ಷ ಜನರು ಜೀವ ಕೈಯಲ್ಲಿಟ್ಟುಕೊಂಡು ಕುಳಿತಿದ್ದಾರೆ. ಯಾವಾಗ ನಮ್ಮನ್ನು ಹೊಡೆಯುತ್ತಾರೆಯೋ, ಬಡಿಯೋತಾರೆಯೋ, ಯಾವಾಗ ನಮ್ಮ ಮನೆಗಳನ್ನು ಸುಡುತ್ತಾರೆಯೋ, ಗುಡಿಸಲು ಕಿತ್ತು ಬಿಸಾಕುತ್ತಾರೆಯೋ ಎಂದು ಅವರು 24 ಗಂಟೆಯೂ ಆತಂಕದಲ್ಲಿದ್ದಾರೆ. ಅವರ ತಲೆ ಮೇಲೆ ಬೀಸುತ್ತಿರುವ ಖಡ್ಗ ಇದೆಯೇನೋ ಎನ್ನುವಷ್ಟು ಆತಂಕದಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬರುತ್ತಾರೆಂದರೆ, ಅವರ ಆತಂಕ ನಿವಾರಣೆಯಾಗುತ್ತದೆ. ಮುಖ್ಯಮಂತ್ರಿಗಳಿಗೆ ಇದಕ್ಕಿಂತ ದೊಡ್ಡ ಕೆಲಸ ಏನಿದೆ, ನಾಲ್ಕು ಲಕ್ಷ ಕನ್ನಡಿಗರ ಬದುಕಿನ ಪ್ರಶ್ನೆಗಿಂತ ದೊಡ್ಡದಾಗಿರುವಂಥದ್ದೇನು ಇದೆ. ಕನ್ನಡ ನಾಡಿನ ಮುಖ್ಯಮಂತ್ರಿಗಳು ಈ ಪವಿತ್ರವಾದ ಸದನಕ್ಕೆ ಬರಲಿ. ಸೋಮವಾರದ ದಿವಸ ಬೆಳಗ್ಗೆ ಅವರು ಒಂದು ಹೇಳಿಕೆಯನ್ನು ಮಾಡಲಿ, ನಾವು ಒಬ್ಬ ಮಂತ್ರಿಗಳ ನೇತೃತ್ವದಲ್ಲಿ ನಿಯೋಗವನ್ನು ತೆಗೆದುಕೊಂಡು ಹೋಗುತ್ತೇವೆಂದು ಹೇಳಲಿ. ಆ ನಿಯೋಗದಲ್ಲಿ ಸಭಾನಾಯಕರೇ ಬರಲಿ ನಮ್ಮದೇನೂ ಅಭ್ಯಂತರವಿಲ್ಲ. ಕನ್ನಡ ಮತ್ತು ಸಂಸ್ಕೃತಿ ಸಚಿವರು ಇರಲಿ, ಮಾನ್ಯ ಸಚಿವರಿಗೆ ಕಾಳಜಿ ಇಲ್ಲ ಎಂದು ನಾವು ಹೇಳಲಿಲ್ಲ. ಆದರೆ ಮುಖ್ಯಮಂತ್ರಿಗಳು ಬಂದು ಈ ವಿಚಾರದಲ್ಲಿ ಮಾತನಾಡಿದರೆ ಎಲ್ಲಾ ಸರಾಗವಾಗಿ, ಸುಲಲಿತವಾಗಿ ಹೋಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಮಾನ್ಯ ಶ್ರೀಕಂಠೇಗೌಡರು ಮತ್ತು ಸದನದ ಎಲ್ಲಾ ಸದಸರ ಭಾವನೆ ಒಂದೇ ಇದೆ ಎಂದು ನಾನು ಮುಂಚೆಯೇ ಹೇಳಿದ್ದೇನೆ. ಮೂರು ದಿನಗಳ ಹಿಂದೆ ಮಾನ್ಯ ಸದಸ್ಯರುಗಳು ಈ ಪ್ರಶ್ನೆಯನ್ನು ಕೇಳಿದಾಗಲೇ ನಾನು ದೂರವಾಣಿಯಲ್ಲಿ ಮಾತನಾಡಿದೆ ಎನ್ನತಕ್ಕಂಥ ಮಾತನ್ನು ಹೇಳಿದೆ. ಅವರು ಹೇಳಿರುವ ಮಾತು ಏನೆಂದರೆ, ಗೋವಾದಲ್ಲಿರುವಂತಹ ಯಾವುದೇ ಜಾತಿ, ಜನಾಂಗ, ಭಾಷೆ ಮಾತನಾಡತಕ್ಕಂಥ ಜನರ ಹಿತರಕ್ಷಣೆ ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆ ಎನ್ನುವ ಮಾತನ್ನು ಅವರು ಹೇಳಿದ್ದು, ನಾನು ಅದನ್ನು ಇಲ್ಲಿ ಪುನರುಚ್ಚಾರ ಮಾಡಿದೆ. ನಾನು ಮುಂದುವರೆದು ಹೇಳಿದ್ದೇನೆಂದರೆ, ತಪ್ಪು ಅಭಿಪ್ರಾಯಕ್ಕೆ ಹೋಗಬಾರದು. ಅಂತರ್ಯುದ್ಧದ ಸಂದರ್ಭದಲ್ಲಿ ಸಿರಿಯಾ, ಇರಾಕ್‌ನಲ್ಲಿದ್ದಂಥವರನ್ನೇ ರಕ್ಷಣೆ ಮಾಡಿ ಕರೆದುಕೊಂಡು ಬಂದಿದೆ, ಈಗ 'ಕೊರೊನಾ' ಇಂತಹ ಸಂದರ್ಭದಲ್ಲೂ ಕೂಡ ಬೇರೆ ಬೇರೆ ದೇಶಗಳಿಂದ ರಕ್ಷಣೆ ಮಾಡಿ ಕರೆದುಕೊಂಡು ಬಂದಿದೆ. ಹಾಗಾಗಿ ಈ ರಕ್ಷಣೆಗೆ ಬದ್ಧವಾಗಿದೆ ಎಂದು ನಾನು ವ್ಯಾಪ್ತಿಯನ್ನು ವಿಸ್ತರಿಸಿ ಹೇಳಿರುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಇನ್ನಾವುದೇ ತಪ್ಪು ಸಂದೇಶ ಕೊಡಬೇಕು ಎಂದಾಗಲಿ ಅಥವಾ ಕನ್ನಡಿಗರ ಹಿತರಕ್ಷಣೆಗೆ ನಾವು ಬದ್ಧರಿಲ್ಲ ಎಂದು ಹೇಳಲಿಲ್ಲ. ಅವರ ಭಾವನೆಗೂ ನಮ್ಮ ಭಾವನೆಗೂ ಯಾವುದೇ ವ್ಯತ್ಯಾಸವಿಲ್ಲ. ಕರ್ನಾಟಕದ ಹಿತಾಸಕ್ತಿಯ ಪ್ರಶ್ನೆ ಬಂದಾಗ ಬಹಳ ಸಂದರ್ಭಗಳಲ್ಲಿ ಆಡಳಿತ, ವಿಪಕ್ಷ ಎಂದು ಭೇದಭಾವ ಮಾಡದೆ ನಾವೆಲ್ಲರೂ ಒಂದಾಗಿ ನಿಂತಿದ್ದೇವೆ. ಹಾಗೆಯೇ ಕನ್ನಡಿಗರ ಹಿತಾಸಕ್ತಿ ಬಂದಾಗ ಆಡಳಿತ, ವಿರೋಧ ಪಕ್ಷದ ಪ್ರಶ್ನೆ ಎಲ್ಲಿ ಬರುತ್ತದೆ? ನಾವೆಲ್ಲರೂ ಒಂದೇ. ಹಾಗಾಗಿ ಈ ದೇಶದ ಹಿತಾಸಕ್ತಿಯ ಪ್ರಶ್ನೆ ಬಂದಾಗ ಇಲ್ಲಿ ಆಡಳಿತ, ವಿರೋಧ ಪಕ್ಷದ ಪ್ರಶ್ನೆ ಬರುತ್ತದೆ? ಅಂತಹ ಸಂದರ್ಭದಲ್ಲಿ 132 ಕೋಟಿ ಜನರ ಭಾವನೆಯೂ ಒಂದೇ ಇರುತ್ತದೆ. ನಾವು ಅದೇ ರೀತಿಯ ಭಾವನೆಯನ್ನು ತಳೆದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಿಗೆ ಅವರ ಭಾವನೆಯನ್ನು ತಿಳಿಸುತ್ತೇವೆ. ಈ ಎಲ್ಲಾ ವಿಚಾರಗಳನ್ನು ಕೇಳಿಕೊಂಡು ಅವರೇ ಬರುವಂತಹ ಸಾಧ್ಯತೆಗಳಿವೆ. ಈ ವಿಚಾರದ ಬಗ್ಗೆ ನಾವು ಅವರ ಜೊತೆಯಲ್ಲಿ ಮಾತನಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಿದ್ದಾರೆ. ಅವರಿಗೂ ಕನ್ನಡಿಗರ ಬಗ್ಗೆ ಬಹಳ ಆಸಕ್ತಿ, ಅಭಿಮಾನ ಇದೆ. ಅವರು ಇದರಲ್ಲಿ ಭಾಗಿಯಾಗಲಿ. ಬೇಕಾದರೆ ಮಾನ್ಯ ಉಪ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗವೊಂದನ್ನು ತೆಗೆದುಕೊಂಡು ಹೋಗುವುದಕ್ಕೂ ನಾವು ತಯಾರಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸೋಮವಾರದ ದಿವಸ ಇಲ್ಲಿಗೆ ಬಂದು ಹೇಳಿಕೆ ಕೊಡಬೇಕು. ಇದಕ್ಕೆ ಅವರ ಒಪ್ಪಿಗೆ ಇದೆಯಲ್ಲವೇ?

**ಶ್ರೀ ಸಿ.ಟಿ.ರವಿ:–** ನಿಮ್ಮ ಭಾವನೆಗಳನ್ನು ಅವರಿಗೆ ತಿಳಿಸುತ್ತೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ನೇರವಾಗಿ ಉತ್ತರ ಹೇಳಲಿ. ಮುಖ್ಯಮಂತ್ರಿಗಳು ಬರುವ ಸಾಧ್ಯತೆ ಇದೆ ಎಂದು ಹೇಳುತ್ತಿದ್ದಾರೆ. ಅಂದರೆ ಅವರು ಬರದೆಯೂ ಇರಬಹುದು. No, I don't want such a reply. We want a straight reply. ನಾವೇನು ದೊಡ್ಡ ಬೇಡಿಕೆಯನ್ನು ಇಟ್ಟಿಲ್ಲ. ಮುಖ್ಯಮಂತ್ರಿಗಳು ಇಲ್ಲಿ ಬಂದು ಹೇಳಿಕೆ ಕೊಡಲಿ ಎಂದು ಹೇಳುತ್ತಿದ್ದೇವೆ. ಬರುವ ಸಾಧ್ಯತೆ ಇದೆ ಎಂದರೆ ಏನರ್ಥ?

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ಸಭಾನಾಯಕರು ಇಲ್ಲಿರುತ್ತಾರೆ. ನಾನು ಹೇಳಿಕೆ ಕೊಟ್ಟರೂ ಕೂಡ ಅದು ಸರ್ಕಾರದ ಹೇಳಿಕೆ. ಅದು ವ್ಯಕ್ತಿಗತ ಹೇಳಿಕೆಯಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ನಿರ್ದಿಷ್ಟವಾಗಿ ಹೇಳುತ್ತಿಲ್ಲ. 'ಬರುವ ಸಾಧ್ಯತೆ ಇದೆ' ಎಂದರೆ, ಬರಬಹುದು ಅಥವಾ ಬರುವುದಿಲ್ಲ ಎಂದು ಎರಡೂ ರೀತಿಯ ಅರ್ಥ ಬರುತ್ತದೆ. ನಾವು ಎಲ್ಲಾ ಮಾಡಿಯೇ ಈ ಹಂತಕ್ಕೆ ಬಂದಿದ್ದೇವೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ರಾಯಚೂರಿನ ಪ್ರಕರಣದ ಬಗ್ಗೆ ವ್ಯಕ್ತಿಗಳು ಯಾರು, ಎಲ್ಲಿ ಎನ್ನುವ ವಿವರಗಳನ್ನು ಕೊಟ್ಟರೆ ಆ ಬಗ್ಗೆಯೂ ಅಲ್ಲಿನ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಯಾವ police station jurisdiction ಗೆ ಬರುತ್ತದೆ, ವ್ಯಕ್ತಿಗಳು ಯಾರು ಎಂದು ಮಾಹಿತಿಯನ್ನು ಕೊಟ್ಟರೆ ಅಲ್ಲಿನ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರ ರಕ್ಷಣೆಗೂ ಏರ್ಪಾಡು ಮಾಡುತ್ತೇವೆ. ಅವರ ಮೇಲೆ ಯಾರು ಹಲ್ಲೆ ಮಾಡಿದ್ದಾರೆ, ಅವರ ಮೇಲೆ ಪೊಲೀಸ್ ಕೇಸ್ ತೆಗೆದುಕೊಳ್ಳುವುದಕ್ಕೂ ಅವರ ಹತ್ತಿರ ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಹೇಳಿದ್ದು ಸಭಾನಾಯಕರಿಗೆ ಅರ್ಥವಾಗಿದೆಯಲ್ಲವೇ? ಮುಖ್ಯಮಂತ್ರಿಗಳನ್ನು ಇಲ್ಲಿಗೆ ಕರೆದುಕೊಂಡು ಬಂದು ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ ನಿಖರವಾಗಿ ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದಲ್ಲಿ ಏನು ಗೊಂದಲವಿದೆಯೋ ನಮಗೆ ಗೊತ್ತಿಲ್ಲ. ನಾವು ವಿನಂತಿ ಮಾಡುತ್ತೇವೆ. ಇದರ ಬಗ್ಗೆ ಮುಖ್ಯಮಂತ್ರಿಗಳಿಂದ ಹೇಳಿಕೆಯನ್ನು ಕೊಡಿಸುತ್ತೇವೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(635) 20.03.2020 02.30 ಎಸ್‌ವಿ–ಆರ್‌ಎನ್**

**ಶ್ರೀ ಎಸ್.ಆರ್.ಪಾಟೀಲ್:–** ಆಗಲಿ. ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರು ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)**

ಮಾನ್ಯ ಸಭಾಪತಿಯವರೇ, ಈಗ ವೇಳೆ ಮಧ್ಯಾಹ್ನ 02 ಗಂಟೆ 30 ನಿಮಿಷಗಳಾಗಿದೆ. ದಯಮಾಡಿ ಭೋಜನಕ್ಕಾಗಿ ವಿರಾಮವನ್ನು ಕೊಟ್ಟು ನಂತರ ಮುಂದುವರೆಸೋಣ.

**ಸಭಾಪತಿಯವರು:–** ಸದನವನ್ನು ಮಧ್ಯಾಹ್ನ 03.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 02 ಗಂಟೆ 31 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 24 ನಿಮಿಷಕ್ಕೆ ಪ್ರಾರಂಭವಾಯಿತು)**

**(ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಸಿ. ಪಾಟೀಲರು ಊರಿಗೆ ಹೋಗಬೇಕಾಗಿರುವುದರಿಂದ ಮೊದಲು ನಿಯಮ 68 ರಡಿ ಚರ್ಚಿಸಬೇಕಾದ ವಿಷಯವನ್ನು ತೆಗೆದುಕೊಳ್ಳೋಣವೆಂದು ಹೇಳಿರುತ್ತಾರೆ. ಅದರಂತೆ, ನಿಯಮ 68 ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯವನ್ನು ಚರ್ಚಿಸಲು ಅವಕಾಶ ನೀಡಬೇಕು.

**ಸಭಾಪತಿಯವರು:–** ಈಗ, ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020ರ ಚರ್ಚೆಯ ನಂತರ ಮಾನ್ಯ ಸಚಿವರ ಉತ್ತರ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**8. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020ರ ಮೇಲಿನ ಮುಂದುವರೆದ ಚರ್ಚೆ**

**ಡಾ|| ಸಿ.ಎನ್. ಅಶ್ವತ್ಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು):–** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ಈ ಕಾಯಿದೆ ತರುವಂತಹ ಉದ್ದೇಶ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸದರಿ ವಿಧೇಯಕದ ಮೇಲಿನ ಚರ್ಚೆ ಇನ್ನೂ ಮುಗಿದಿರುವುದಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ವಿಧೇಯಕ ಮೇಲೆ ಇನ್ನೂ ಚರ್ಚೆ ಮಾಡಬೇಕಾಗಿರುತ್ತದೆ.

**ಸಭಾಪತಿಯವರು:–** ವಿಧೇಯಕದ ಮೇಲೆ ಇನ್ನೂ ಯಾವ ಸದಸ್ಯರು ಚರ್ಚೆ ಮಾಡಬೇಕಾಗಿರುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, amicable ಬಂದರು ಹಾಗಾಗಿ, ಆ ಚರ್ಚೆ ಅರ್ಧಕ್ಕೆ ನಿಂತಿರುತ್ತದೆ. ಮಾನ್ಯ ಸಚಿವರು ಮಧ್ಯೆ intervene ಆಗಿದ್ದರಿಂದ ಮಾನ್ಯ ಮರಿತಿಬ್ಬೇಗೌಡರು ಹಾಗೂ ಇತರ ಸದಸ್ಯರು ಮಾತನಾಡುವುದಕ್ಕೆ ಆಗಲಿಲ್ಲ ಅಥವಾ ಈ ವಿಧೇಯಕವನ್ನು ಸರ್ಕಾರ ವಾಪಸ್ಸು ಹಿಂದಕ್ಕೆ ತೆಗೆದುಕೊಂಡಿದೆಯೇ? **(ಗೊಂದಲ)** ಮಾನ್ಯ ಮರಿತಿಬ್ಬೇಗೌಡರವರು ಮಾತನಾಡಿದ ನಂತರ ನನಗೆ ಮಾತನಾಡುವುದಕ್ಕೆ ಅವಕಾಶವೇ ಇರುವುದಿಲ್ಲವೇ?

**ಸಭಾಪತಿಯವರು:–** ಒಂದು ವಿಷಯದ ಬಗ್ಗೆ ಒಮ್ಮೆ ಮಾತನಾಡಿದ ನಂತರ ಮತ್ತೊಮ್ಮೆ ಅದೇ ಸದಸ್ಯರು ಮಾತನಾಡುವುದಕ್ಕೆ ಅವಕಾಶವಿರುವುದಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಾವು ದಯಮಾಡಿ ಅವಕಾಶ ನೀಡಿದರೆ ನಾವು ಮಾತನಾಡಬಹುದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಸದರಿ ವಿಧೇಯಕಕ್ಕೆ ಮಾನ್ಯ ಸಚಿವರು ಉತ್ತರ ನೀಡಿದ ನಂತರ, ಉತ್ತರದ ಮೇಲೆ ತಾವು ಮಾತನಾಡಬಹುದು.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ತಾವು ಸದರಿ ವಿಧೇಯಕವನ್ನು hold ಮಾಡಿದ್ದೀರಿ. ಅದರಿಂದಾಗಿ, ನಾವು ಈ ಅಧಿವೇಶನದಲ್ಲಿ ಸದರಿ ವಿಧೇಯಕ ಪುನಃ ತರುವುದಿಲ್ಲವೆಂದು ಭಾವಿಸಿದ್ದೆವು. ಆದರೆ, ಮತ್ತೆ ಆ ವಿಧೇಯಕವನ್ನು ಚರ್ಚೆಗೆ ತಂದಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪ್ರತಿಪಕ್ಷ ನಾಯಕರೇ ಒಂದು ನಿಮಿಷ. ಆ ವಿಧೇಯಕವನ್ನು ಏತಕ್ಕೆ hold ಮಾಡಲಾಗಿರುತ್ತದೆಂದು ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಶಿಕ್ಷಕರ ಪರವಾಗಿ ...

**ಸಭಾಪತಿಯವರು:–** ಮಾನ್ಯ ಪ್ರತಿಪಕ್ಷ ನಾಯಕರೇ ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಏನೆಂದರೆ, ಇದರಲ್ಲಿ ಆಗುವುದೇ ಇಲ್ಲ, ಎನ್ನುವುದು ಏನೂ ಇಲ್ಲ. ಒಂದು ಹಂತದಲ್ಲಿ, ವಿಧೇಯಕದ ಮೇಲಿನ ಚರ್ಚೆ ಈ ಹಂತಕ್ಕೆ ಬಂದಿತ್ತು. ಅಲ್ಲಿಂದ ಮುಂದುವರೆದು, ಮಾನ್ಯ ಸಚಿವರು ವಿಧೇಯಕದ ಮೇಲೆ ಉತ್ತರ ನೀಡುತ್ತಾರೆ. ಆ ಉತ್ತರವನ್ನು ತಾವು ಒಪ್ಪುತ್ತೀರೋ ಅಥವಾ ಇಲ್ಲವೋ ಅದನ್ನು ಕೇಳುವುದಕ್ಕೆ ಅವಕಾಶವಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ ಭಾವನೆಯನ್ನು ನಾವು ಹೇಳುತ್ತೇವೆ. ನಿನ್ನೆಯ ದಿವಸ ಈ ವಿಧೇಯಕವನ್ನು ತಾವು hold ಮಾಡಿದ್ದರಿಂದ, ಪುನಃ ಈ ಅಧಿವೇಶನದಲ್ಲಿ ವಿಧೇಯಕವನ್ನು ತರುವುದಿಲ್ಲವೆಂದು ನಾವು ಭಾವಿಸಿದ್ದೆವು. ಏಕೆಂದರೆ, ಈ ಸದನದಲ್ಲಿ ಪ್ರಸ್ತುತ ಶ್ರೀ ಅರುಣ ಶಹಾಪುರರವರು ಇರುವುದಿಲ್ಲ.

**ಸಭಾಪತಿಯವರು:–** ಅದಕ್ಕಾಗಿ, ವಿಧೇಯಕದ ಮೇಲಿನ ಚರ್ಚೆಗೆ ಅರ್ಧ ಗಂಟೆ ಸಮಯ ನೀಡುತ್ತೇನೆ. ಹಾಗಾಗಿ, ಮಾನ್ಯ ಮರಿತಿಬ್ಬೇಗೌಡರವರೇ ಈಗ ತಾವು ಮಾತನಾಡಿ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಏನು ಹೇಳುತ್ತೇವೆಂದರೆ, ಪಾಪ! ಬಡ ಶಿಕ್ಷಕರ ಪರವಾಗಿ,... ಅದರಲ್ಲಿಯೂ ನಿವೃತ್ತಿ ವೇತನ... ಶಿಕ್ಷಕರನ್ನು ನಾವು ರಾಷ್ಟ್ರದ ರೂವಾರಿಗಳೆಂದು ಕರೆಯುತ್ತೇವೆ. ದೇಶದ ಪ್ರಧಾನ ಮಂತ್ರಿ ಮತ್ತು ದೇಶದ ರಾಷ್ಟ್ರಪತಿಗಿಂತಲೂ ದೊಡ್ಡ ಸ್ಥಾನವನ್ನು ನಾವು ಶಿಕ್ಷಕರಿಗೆ ಕೊಟ್ಟಿರುತ್ತೇವೆ. ಅವರು ನಿವೃತ್ತಿ ಆಗುವ ಮೊದಲು... ಏಕೆಂದರೆ, ಈ ಸದನದಲ್ಲಿರುವ ಕುಳಿತಿರುವ ಕೆಲ ಬಿಜೆಪಿ ಸದಸ್ಯರು ನಿನ್ನೆಯ ದಿವಸ ವಿಧೇಯಕದ ಮೇಲೆ ಈ ಸದನದ ಮೇಲ್ಛಾವಣಿ ಹಾರುವ ರೀತಿ ಚರ್ಚೆ ಮಾಡಿರುತ್ತಾರೆ. ಆದರೆ, ಪುನಃ ಅದೇ ವಿಧೇಯಕವನ್ನು ಚರ್ಚೆಗೆ ತಂದಿರುತ್ತಾರೆ. ಅದರಿಂದಾಗಿ, ನನಗೆ ಬಹಳ ಆಶ್ಚರ್ಯವಾಗಿದೆ. ಆದರೆ, ನಿನ್ನೆಯ ದಿವಸ ನಾವು ಹೇಳಿದ್ದಕ್ಕೆ ಆಡಳಿತ ಪಕ್ಷದವರಿಗೆ ಹಿಂದೆ ಅವರು ಈ ವಿಧೇಯಕವನ್ನು ವಿರೋಧಿಸಿದ್ದು ನೆನಪಾಯಿತು ಎಂದು ನಾನು ತಿಳಿದಿದ್ದೆ. ಅದು ಅವರಿಗೆ ನೆನಪಿರಲಿಲ್ಲ. ನಾವು ಅವರಿಗೆ ನೆನಪು ಮಾಡಿದೆವು. ಅದಕ್ಕಾಗಿ, ಅವರು ಈ ವಿಧೇಯಕವನ್ನು ಕನಸು–ಮನಸ್ಸಿನಲ್ಲಿಯೂ ತರುವುದಿಲ್ಲವೆಂದು ನಾವು ಭಾವಿಸಿದ್ದೆವು. ಆದಾಗ್ಯೂ, ಈ ವಿಧೇಯಕವನ್ನು ಹೇಗೆ ತಂದಿದ್ದೀರಿ ಎಂದು ಪ್ರಶ್ನೆ ಮಾಡಿದಾಗ, ಅವರಿಗೆ ಆಶ್ಚರ್ಯವಾಗಿ ಮತ್ತು ತಮ್ಮ ತಪ್ಪಿನ ಅರಿವಾಗಿ, “ಆಯಿತು, ಈ ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆಂದು” ನಿನ್ನೆಯ ದಿವಸ ಹೇಳಿದರು. ಆದರೂ, ಪುನಃ ಈ ವಿಧೇಯಕವನ್ನು ಚರ್ಚೆಗೆ ತಂದಿರುತ್ತಾರೆ.

**ಡಾ॥ ಸಿ.ಎನ್. ಅಶ್ವತ್ಥ ನಾರಾಯಣ:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಒಂದೆರೆಡು ವಿಚಾರಗಳನ್ನು ಹೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯಾವುದೇ ನೌಕರನ ನೇಮಕಾತಿ ಆಗುವ ಸಂದರ್ಭದಲ್ಲಿಯೇ, ನೇಮಕಾತಿ ಆದೇಶದಲ್ಲಿ ಆತನ ವೇತನ, ಪಿಂಚಣಿ, ರಜೆ ಹಾಗೂ ಮತ್ತೊಂದು ಎಲ್ಲವೂ ಕೂಡ ನಿಗದಿಯಾಗಿರುತ್ತವೆ. ಅದರಂತೆ, ಅಧಿಕಾರಿಗಳು ನೇಮಕಾತಿ ಆದೇಶದಲ್ಲಿ ಎಲ್ಲವನ್ನೂ ತಿಳಿಸಿರುತ್ತಾರೆ. ಆದರೆ, ಯಾವುದೋ ದಿನಾಂಕ ತಪ್ಪಾಗಿದೆಯೆಂದು ಅವರಿಗೆ ನೀಡಬೇಕಾದ ಸವಲತ್ತುಗಳನ್ನು ನೀಡಿರುವುದಿಲ್ಲ. ಆದರೆ, ಮಾನ್ಯ ನ್ಯಾಯಾಲಯದಲ್ಲಿ ಶಿಕ್ಷಕರಿಗೆ ನೀಡಬೇಕಾದ ಸವಲತ್ತುಗಳನ್ನು ನೀಡಬೇಕೆಂದು ಸರ್ಕಾರಕ್ಕೆ ಆದೇಶ ನೀಡಿರುತ್ತದೆ. ಹಾಗಾದರೆ, ಮಾನ್ಯ ನ್ಯಾಯಾಲಯವು ಕೂಡ ನಿಯಮಗಳನ್ನು ಉಲ್ಲಂಘನೆ ಮಾಡಿ ಆದೇಶ ನೀಡಿರುತ್ತದೆಯೇ? ಸರ್ಕಾರದ ನಿಯಮಗಳು ಶಿಕ್ಷಕರಿಗೆ ಪಿಂಚಣಿ ವೇತನವನ್ನು ನಿಗದಿಗೊಳಿಸಬೇಕೆನ್ನುವಂಥದ್ದನ್ನು ಇಲಾಖಾಧಿಕಾರಿಗಳು ನಿಯಮಾವಳಿಗಳ ವ್ಯಾಪ್ತಿಯಲ್ಲಿಯೇ ತೀರ್ಮಾನ ಕೈಗೊಂಡಿದ್ದಾರೆ. ಈಗ ಅವರ ತೀರ್ಮಾನಕ್ಕೆ ವ್ಯತಿರಿಕ್ತವಾಗಿ, ಶಿಕ್ಷಕರ ಪರವಾಗಿ ಅಥವಾ ಉಪನ್ಯಾಸಕರ ಪರವಾಗಿ ಮಾನ್ಯ ನ್ಯಾಯಾಲಯ ತೀರ್ಪು ನೀಡಿರುತ್ತದೆ. ಅದರಂತೆ, ಮಾನ್ಯ ನ್ಯಾಯಾಲಯ ಶಿಕ್ಷಕರಿಗೆ ಪಿಂಚಣಿ ವೇತನ ನೀಡಬೇಕೆಂದು ತೀರ್ಪು ನೀಡಿರುತ್ತದೆ ಎನ್ನುವುದಾದರೆ ತಪ್ಪು ಮಾಡಿದವರು ಯಾರು? ಈಗ ಮಾನ್ಯ ನ್ಯಾಯಾಲಯದ ತೀರ್ಪನ್ನು ಗೌರವಿಸದೇ ನಮಗೆ 800 ಕೋಟಿ ಅಥವಾ 1000 ಕೋಟಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೂಪಾಯಿ ಹೊರೆಯಾಗುತ್ತದೆ, ಆದುದರಿಂದ ನಾವು ಕೊಡುವುದಕ್ಕಾಗುವುದಿಲ್ಲ ಎಂದು ಈ ವಿಧೇಯಕವನ್ನು ಪಾಸ್ ಮಾಡಬೇಕೆಂದು ಚರ್ಚೆಗೆ ತಂದಿರುತ್ತಾರೆ. ಇದರಿಂದ, ಯಾರು 35 ವರ್ಷ ಸೇವೆ ಸಲ್ಲಿಸತಕ್ಕಂತಹ ಉಪನ್ಯಾಸಕರುಗಳಿಗೆ ಎಷ್ಟೊಂದು ಆಘಾತವಾಗುತ್ತದೆ.

(ಮುಂದುವರೆದಿದೆ...)

(637)20.03.2020/3.30/ವೈಎಲ್–ಬಿಎನ್‌ಎಸ್

**ಶ್ರೀ ಮರಿತಿಬ್ಬೇಗೌಡ(ಮುಂದು):–**

ನಿವೃತ್ತಿ ಜೀವನದ ನಿವೃತ್ತಿ ಉಪಧನವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ, ಈಗಾಗಲೇ ತೀರ್ಮಾನವಾಗಿರುವಂತೆ ಅವರಿಗೆ ದಕ್ಕಲಿಲ್ಲವೆಂದರೆ, ಅವರು ಎಷ್ಟು ತೊಂದರೆಗೆ ಒಳಗಾಗಿದ್ದಾರೆ ಎಂಬುದನ್ನು ದಯವಿಟ್ಟು ಅರ್ಥಮಾಡಿಕೊಳ್ಳಬೇಕು. ನ್ಯಾಯಾಲಯವು ಅವರ ಪರವಾಗಿ ತೀರ್ಪು ನೀಡಿದೆ ಎಂದರೆ, ' ಸರ್ಕಾರದ ನಿಯಮಾವಳಿಯಲ್ಲಿ ಅವಕಾಶವಿಲ್ಲದೇ ನೀಡಿದೆಯೇ? ಮಾನ್ಯ ಸಚಿವರು ಸುಗ್ರೀವಾಜ್ಞೆ ತೆಗೆದುಕೊಂಡು ಬಂದು 'ಹಿಂದೆ ಅಧಿಕಾರಿಗಳು ತಪ್ಪಾಗಿ ಅರ್ಥೈಸಿದ್ದಾರೆ, ಸರ್ಕಾರದ ನಿರ್ದೇಶನಗಳು ಆದೇಶಗಳು ತಪ್ಪಾಗಿದೆ' ಎಂದು ಹೇಳುತ್ತಾ, ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಈ ವಿಧೇಯಕ ತಂದಿರುವುದು ನಿಜಕ್ಕೂ ಒಪ್ಪುವಂಥ ಮಾತಲ್ಲ. ಇದರಲ್ಲಿ ಸಾಮಾಜಿಕ ನ್ಯಾಯ ದೊರಕಿಲ್ಲ. ದಯಮಾಡಿ, ಮಾನ್ಯ ಸಚಿವರು ಈ ವಿಧೇಯಕದ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿನ್ನೆವರೆಗೆ ನ್ಯಾಯಾಲಯದ ಆದೇಶ ಇದೆ ಎನ್ನುವಂಥ ವಿಚಾರಗಳನ್ನು ಹೇಳುತ್ತಿದ್ದೆವು. ಬೆಳಿಗ್ಗೆ ಸಹ ಸಭೆಗೆ ಕರೆದು ನಮ್ಮೆಲ್ಲರೊಂದಿಗೆ ಚರ್ಚೆ ಮಾಡಲಾಗಿದೆ. ಉಚ್ಚ ನ್ಯಾಯಾಲಯದ ಆದೇಶ ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶಗಳಲ್ಲಿ ಏನು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂಬುದು ಸ್ಪಷ್ಟವಾಗಿ ನಮ್ಮ ಮುಂದೆ ಇದೆ. ಅದೇನೆಂದರೆ,

*"Paying only salary and not paying the other benefits is error on the part of the respondents and it is violation of Articles 14 and 16(1) of the Constitution of India."*

ಎಂದು ಇದೆ. ಈಗಾಗಲೇ ಒಂದು ವಾರಗಳ ಕಾಲ ನಾವು ಸಂವಿಧಾನದ ಬಗ್ಗೆ ಚರ್ಚೆ ಮಾಡಿದ್ದೇವೆ. ಈ ವಿಧೇಯಕದಲ್ಲಿ, very clear violation of Articles 14 and 16 of the Constitution ಆಗಿದ್ದು, again Article 366 (17) ನಲ್ಲಿಯೂ ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ಉಚ್ಚ ನ್ಯಾಯಾಲಯದ ಆದೇಶದ ಕೊನೆಯ ಭಾಗವನ್ನು ಓದಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಈ ಕೆಳಕಂಡಂತಿದೆ:

*"Hence, the prayer of the petitioner is considered by directing the respondents to calculate pensionary benefits, DCRG on the basis of last pay drawn taking into account the revision of pay scale from 1.1.2006 to 30.04.2008 and to pass appropriate orders. If the order of the respondent-Government provides, then he is also entitled for 6 percent interest for his arrears."*

ಜೊತೆಗೆ ಈ ಪ್ರಕರಣದಲ್ಲಿ ರೂ.50,000 ಗಳಷ್ಟು ಸರ್ಕಾರಕ್ಕೆ ದಂಡ ವಿಧಿಸಲಾಗಿದೆ. ಇಷ್ಟೆಲ್ಲಾ ಆಗಿ ನಿವೃತ್ತಿ ಸಮಯದಲ್ಲಿ ನೆಮ್ಮದಿಯಾಗಿ ಜೀವನ ಸಾಗಿಸಬೇಕೆಂದು ಮನೆಗೆ ಹೋಗುವಂಥ ಸಂದರ್ಭದಲ್ಲಿ ಸರ್ಕಾರ, ನ್ಯಾಯಾಲಯದ ಮೊರೆ ಹೋಗಿದ ಮೇಲೆ, Contempt proceeding move ಮಾಡಿದ ಮೇಲೆ Ordinance ತಂದು ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ. ದಯಮಾಡಿ ಇದನ್ನು ಸರಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಬಯಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಾನು ವಿಧೇಯಕದ ಮೇಲೆ ಮಾತನಾಡಿದಾಗ ಆಡಳಿತ ಪಕ್ಷದ ಸದಸ್ಯರು ಒಳಗೊಂಡಂತೆ, ಮಾನ್ಯ ಸಚಿವರು ಆ ವಿಧೇಯಕವನ್ನು ಮರುಚಿಂತನೆಗೆ ವಾಪಸ್ಸು ತೆಗೆದುಕೊಂಡರು. ನಾನು, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಮತ್ತೆ ಈ ವಿಧೇಯಕ ಜಾರಿಗೆ ಬರುವುದಿಲ್ಲ ಎಂದುಕೊಂಡಿದ್ದೆ. ಅದರ ಸಲುವಾಗಿ ಬೆಳಿಗ್ಗೆ ಸಭೆ ಮಾಡಿ, Ordinance ಮಾಡಿದ್ದೇವೆ, Ordinance ಗೆ ಪೂರಕವಾಗಿ,...

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ನಿಯಮ 68 ರ ವಿಷಯದ ಮೇಲೆ ಚರ್ಚೆ ಮಾಡುವುದಿಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಿಯಮ 68 ರ ಮೇಲೆ ಚರ್ಚೆ ಮಾಡುತ್ತೇನೆ. ಈ ವಿಧೇಯಕದ ಮೇಲೆ 2 ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಎರಡರ ಮೇಲೆಯು ಅವಕಾಶ ನೀಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಚಿವರು ಈಗ ಹೊರಡುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕೇವಲ 2 ಅಂಶಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಈ ದೇಶದ 20 ರಾಜ್ಯಗಳಲ್ಲಿ 2006ನೇ ಸಾಲಿನ ಹಿಂದೆ ಯಾರೆಲ್ಲಾ ಯು.ಜಿ.ಸಿ. ವೇತನವನ್ನು ಪಡೆಯುತ್ತಿದ್ದರು, ಅವರೆಲ್ಲರಿಗೂ ಯು.ಜಿ.ಸಿ. ಮಾದರಿಯಲ್ಲಿ ನಿವೃತ್ತಿ ವೇತನ ನೀಡುವ ನಿರ್ಣಯವಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಲಾಖಾಧಿಕಾರಿಗಳು ಹೇಳುವ ಹಾಗೆ ಇದು ನೂರಾರು ಕೋಟಿ ರೂಪಾಯಿಯ ವಿಚಾರವಲ್ಲ, ಕೇವಲ ರೂ.59.00 ಕೋಟಿ ರೂಪಾಯಿಯ ವಿಚಾರವಾಗಿದೆ. Notional Increment ಅನ್ನು ನೀಡಿ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. ಆದರೆ, ಉಚ್ಚ ನ್ಯಾಯಾಲಯವು ರದ್ದುಗೊಳಿಸಿತ್ತು. ಮತ್ತೆ ರದ್ದತಿ ಆಗುವ ಸಾಧ್ಯತೆ ಇರುವುದರಿಂದ ಸರ್ಕಾರ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು. ಈಗಾಗಲೇ ಅವರು ಯು.ಜಿ.ಸಿ. ಸಂಬಳ ಪಡೆದಿದ್ದು, according to UGC Scale ಅವರಿಗೆ ನಿವೃತ್ತಿಯ ಸಂದರ್ಭದಲ್ಲಿ pension and retirement amount ನ್ನು ನೀಡಬೇಕಲ್ಲವೇ? ಮಾನ್ಯ ಸಚಿವರಲ್ಲಿ ಆಗ್ರಹ ಮಾಡುವುದೇನೆಂದರೆ, ದಯವಿಟ್ಟು ಅವರಿಗೆ ನ್ಯಾಯ ದೊರಕಿಸಿಕೊಡಬೇಕು. 20 ರಾಜ್ಯಗಳಲ್ಲಿ ಯಾವ ರೀತಿ ಮಾಡಲಾಗಿದೆ, ಅದೇ ರೀತಿ ಈ ರಾಜ್ಯದಲ್ಲಿಯು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ಸದಸ್ಯರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಎಸ್.ಎಲ್.ಭೋಜೇಗೌಡರು ಹೇಳಿದ ಹಾಗೆ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ನಿರ್ಣಯವಾಗಿದೆ. ಕಾನೂನಾತ್ಮಕವಾಗಿ ಮಾತನಾಡುತ್ತೇನೆ, ಬೇರೆ ವಿಚಾರ ಹೇಳುವುದಕ್ಕೆ ಹೋಗುವುದಿಲ್ಲ. ಈ ದೇಶದ Apex Court, ಸರ್ವೋಚ್ಚ ನ್ಯಾಯಾಲಯದ ನಿರ್ಣಯವಾದ ಮೇಲೆ ಅದನ್ನು nullify ಮಾಡುವಂಥ ಅಧಿಕಾರ ಈ ರಾಜ್ಯದ ಸರ್ಕಾರದ Ordinance ಮತ್ತು ವಿಧೇಯಕದಿಂದ ಆಗುವುದಿಲ್ಲ. ಮಾನ್ಯ ಎಸ್.ಎಲ್.ಭೋಜೇಗೌಡರು ಸ್ಪಷ್ಟವಾಗಿ ಹೇಳಿದಂತೆ, ಸಂವಿಧಾನದ Articles 14 and 15 in Part III, they are the Fundamental Rights, ಮೂಲಭೂತ ಹಕ್ಕುಗಳಾಗಿವೆ. ಈ ಮೂಲಭೂತ ಹಕ್ಕುಗಳನ್ನು ಉಲ್ಲಂಘನೆಯಾಗುತ್ತಿದೆ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದ ಮೇಲೆ ಅದನ್ನು nullify ಮಾಡಬೇಕಾದರೆ, ಮೊದಲು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ pass ಆಗಬೇಕು. ಇಲ್ಲಿ Ordinance ಮಾಡಿದರೆ, it will be ultra vires and it amounts to Contempt of Court. ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ವಿರುದ್ಧ ಈ ಸದನದಲ್ಲಿ ನಾವು ಏನಾದರೂ enactment ಮಾಡಿದರೆ ಈ ಸದನದ ಮತ್ತು ರಾಜ್ಯದ ಗೌರವ ಮಣ್ಣುಪಾಲಾಗುತ್ತದೆ. ಸರ್ವೋಚ್ಚ ನ್ಯಾಯಾಲಯವು ಎಲ್ಲಾ ಸರ್ಕಾರಿ ನೌಕರರಿಗೆ ನಿವೃತ್ತಿ ವೇತನ ವರವಾಗಬೇಕೇ ವಿನಃ ಶಾಪವಾಗಬಾರದು. ಈಗಾಗಲೇ ಮಾನ್ಯ ಶ್ರೀಕಂಠೇಗೌಡರು ಹೇಳಿದಂತೆ ಈ ದೇಶದ 28 ರಾಜ್ಯಗಳಲ್ಲಿ ಶಿಕ್ಷಕ ಬಂಧುಗಳೇನಿದ್ದಾರೆ, ಅವರಿಗೆ 20 ರಾಜ್ಯಗಳಲ್ಲಿ, it is an established law ಎನ್ನುವ ಮಾತನ್ನು ಹೇಳಿದ್ದಾರೆ. ಮೂಲಭೂತವಾಗಿ ಏನೇ ಇರಲಿ. ಈ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ವಿರುದ್ಧ ಏನಾದರೂ Ordinance ತಂದರೆ. . . Ordinance ತಂದರೆ 6 ತಿಂಗಳೊಳಗೆ 2 ಸದನದಲ್ಲಿಯೂ ratify

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಬೇಕೆಂದು ಇದೆ. ಆ ರೀತಿ ಆಗದಿದ್ದರೆ ಅದು abate ಆಗುತ್ತದೆ. Abate ಆದರೆ ಅವರ ಗೌರವ ಉಳಿಯುತ್ತದೆಯೆ? Abate ಆಗದಿದ್ದರೆ, ಮುಗಿಯಿತಪ್ಪ, ನಾವು ಪಾರಾದೆವು ಎನ್ನಬಹುದು. Ordinance, ತರುವುದು, that itself is not correct. It is against the law. ತಮಗೂ ಎಲ್ಲಾ ವಿಚಾರ ಗೊತ್ತಿದೆ. ಆಡಳಿತ ಪಕ್ಷದವರು, ವಿರೋಧ ಪಕ್ಷದವರೆಲ್ಲರೂ ಸಂವಿಧಾನದ ಆಶಯಗಳು ಮತ್ತು ಮೂಲಭೂತ ಹಕ್ಕುಗಳ ಬಗ್ಗೆ 8 ದಿವಸ ಚರ್ಚೆ ಮಾಡಿದ್ದೇವೆ. ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂದು ಹೇಳಿದ್ದಾರೆ. ಆದಾಗ್ಯೂ ಅದರ ವಿರುದ್ಧ, ಅದರಲ್ಲಿಯು ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ವಿರುದ್ಧ ಈ ವಿಧೇಯಕ ತಂದಿರುವುದು, definitely, it is ultra vires and it amounts to Contempt of Court. ಮತ್ತೆ ಇದಕ್ಕೆ ಛೀಮಾರಿ ಹಾಕಿಸಿಕೊಂಡು ಈ ವಿಧೇಯಕ ಬಿದ್ದು ಹೋಗುತ್ತದೆ. ನಾವು ಹೇಳಿರುವ ವಿಚಾರವನ್ನು ತಿಳಿದುಕೊಂಡು ಈಗಲಾದರೂ ಅರ್ಥ ಮಾಡಿಕೊಂಡಿದ್ದಾರೆಂದು ಕೊಂಡೆವು. ಬೆಳಿಗ್ಗೆ ಸಹ ಸಭೆ ಮಾಡಿ, ಏನೇನು ನಿರ್ಣಯ ತೆಗೆದುಕೊಂಡಿದ್ದಾರೆ, ಯಾವ ರೀತಿ ಮಾಡಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಇಲ್ಲಿ ಹಣದ ಪ್ರಶ್ನೆ ಬರುವುದಿಲ್ಲ. ಕಾನೂನಾತ್ಮಕ ಮತ್ತು ಸಂವಿಧಾನದ ಪ್ರಶ್ನೆ ಬರುತ್ತದೆ. ಮೂಲಭೂತ ಹಕ್ಕುಗಳ ಪ್ರಶ್ನೆ ಬರುತ್ತದೆ. ಅದಕ್ಕೆ ವಿಧೇಯಕವೇನಾದರೂ ಪಾಸ್ ಆದರೆ, ನಾವು ಇದರಲ್ಲಿ ಭಾಗಿಯಾಗುವುದು ಬಹಳ ಕಷ್ಟ ಇದೆ. ಈ ವಿಧೇಯಕವೇನಾದರೂ ಪಾಸ್ ಆದರೆ ಹಣ ಬರಹವೇನಾಗುತ್ತದೆ ಎಂದರೆ, ಮತ್ತೆ ಈ ವಿಧೇಯಕ ಬಿದ್ದು ಹೋಗುತ್ತದೆ. ಅದರ ಜೊತೆಗೆ ಹೆಸರು ಕೆಡಿಸಿಕೊಳ್ಳುತ್ತಾರೆ. ಹಣದ ಜೊತೆ ಗುಣವು ಕಳೆದುಕೊಳ್ಳುತ್ತಾರೆ. It will be a disgrace to the Government.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 8 ದಿವಸಗಳಿಂದ ಸಂವಿಧಾನದ ಕುರಿತು ಚರ್ಚೆ ಮಾಡಿರುವ ವಿಚಾರವು ಮಾನ್ಯ ಸಚಿವರ ಗಮನದಲ್ಲಿದೆ ಎಂದು ಭಾವಿಸುತ್ತೇನೆ. Any Order passed by the Government in contravention of Articles 14 and 16 of the Constitution, will be intervened by the Judiciary. ಇದರಲ್ಲಿ ನ್ಯಾಯಾಲಯವು ಏತಕ್ಕೆ ಮಧ್ಯೆ ಪ್ರವೇಶಿಸುತ್ತದೆ ಎಂದರೆ, because of this reason. ಈಗಾಗಲೇ ಅದರ ಉಲ್ಲೇಖವನ್ನು ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. 2ನೇ ಸಲ ಓದಿ ಸಮಯವನ್ನು ವ್ಯಯ ಮಾಡುವುದಕ್ಕೆ ಹೋಗುವುದಿಲ್ಲ. ಇದೇ ಸದನದಲ್ಲಿ Dr. B.S. Moodithaya ಪ್ರಕರಣದಲ್ಲಿ ಈಗಾಗಲೇ ಇತ್ಯರ್ಥವಾಗಿದೆ. Same circumstances ಇದೇ ಸದನದಲ್ಲಿ raise ಆದಾಗ, ಕಾಲ್ಪನಿಕ ವೇತನದ ವಿಚಾರದಲ್ಲಿಯು ಸಹ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದ ಮೇಲೆ, I believe in 2014 Ordinance ತಂದಾಗ, that Order passed by the Karnataka Government had

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

been struck down by the High Court as well as the Supreme Court. Under these circumstances, the Bill moved by the Hon'ble Minister is not sustainable in law. ದಯಮಾಡಿ ಇದು ಕಾನೂನಿಗೆ ವಿರುದ್ಧವಾಗುತ್ತದೆ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸಲಹೆ ನೀಡುವುದಕ್ಕೆ ಬಯಸುತ್ತೇನೆ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್.(ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ಶಿಕ್ಷಕರಿಗೆ ಅನ್ಯಾಯ ಮಾಡಬೇಕು, ತಾರತಮ್ಯ ಮಾಡಬೇಕು ಅಥವಾ ಅವರಿಗೆ ಸವಲತ್ತು ನೀಡಬಾರದೆಂಬ ಉದ್ದೇಶದಿಂದ ಈ ಕಾಯ್ದೆಯನ್ನು ತಂದಿಲ್ಲ. ಈಗಾಗಲೇ ನಮ್ಮ ರಾಜ್ಯದ ಪಿಂಚಣಿ ಯೋಜನೆ ಪ್ರಕಾರ ಅವರಿಗೆ last drawn pay scale ಏನಿದೆ, ಅದರನ್ವಯ ಮೂಲ ವೇತನದ ಮೇಲೆ ಶೇಕಡಾ 50 ರಷ್ಟು ಪಿಂಚಣಿ ನಿಗದಿ ಮಾಡಲಾಗುತ್ತದೆ. ಹಾಗಾಗಿ, ಯಾವಾಗ pay scale revision ಆಗುತ್ತದೆ, ಆಗೆಲ್ಲಾ pension revision ಮಾಡುವುದಿಲ್ಲ. Pension revision ಆದಾಗ ಅವರಿಗೆ ಅದರ ಸವಲತ್ತನ್ನು ನೀಡಲಾಗುತ್ತದೆ. ಒಂದು ಸಲ last drawn pay scale ಒಂದು pay scale ಗೆ ಫಿಕ್ಸ್ ಆದಮೇಲೆ, revision ಆದಾಗೆಲ್ಲ ಅವರಿಗೆ ಪರಿಷ್ಕೃತವಾಗುವುದಿಲ್ಲ. ಯಾವಾಗ ಪಿಂಚಣಿ ಸೌಲಭ್ಯ revise ಆಗುತ್ತದೆ, ಆಗ ಅದರ ಸವಲತ್ತನ್ನು ಇವರಿಗೆ ಕೊಡಲಾಗುತ್ತದೆ. ಇದು ನಮ್ಮ ರಾಜ್ಯ ಪಿಂಚಣಿ ಯೋಜನೆಯಾಗಿದೆ. ಹಾಗಾಗಿ, ಅವರು, ಯಾವ್ಯಾವಾಗ pay scale revise ಆಗುತ್ತದೆಯೋ, ಆ revised pay scale ಆಧಾರಿತವಾಗಿ pension fix ಮಾಡಬೇಕೆಂದು ಕೇಳುತ್ತಿದ್ದಾರೆ.

(ಮುಂದು)

(638)/20.03.2020/3.40/ಎಸ್‌ಕೆ–ಬಿಎನ್‌ಎಸ್
**ಡಾ॥ ಅಶ್ವತ್ಥನಾರಾಯಣ ಸಿ.ಎನ್. (ಮುಂದು):–**

ನಮ್ಮ ರಾಜ್ಯದಲ್ಲಿರುವ ಎಲ್ಲಾ ನೌಕರರಿಗೂ ಯಾವ last pay scale draw ಮಾಡುತ್ತಾರೋ, ಅದೇ ರೀತಿಯಾಗಿ ಎಲ್ಲಾ ಸರ್ಕಾರಿ ನೌಕರರಿಗೂ last drawn pay scale ಅನ್ವಯವಾಗುತ್ತದೆ. ಹಾಗಾಗಿ, ಇದನ್ನು ನಾವು ಹೊರತುಪಡಿಸಿ, pension pay scale ನಾವು ಕೊಡುವುದಕ್ಕಾಗುವುದಿಲ್ಲ. ಇದನ್ನು ಒಂದು ಕಡೆ ಮಾಡಿದರೆ, ಎಲ್ಲಾ ಕಡೆಗಳಲ್ಲಿ ಕೊಡುವಂತಹದ್ದಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ತಮ್ಮ ನಿಲುವೇನು ಎಂಬುದನ್ನು ಹೇಳಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ಅಶ್ವತ್ಥನಾರಾಯಣ ಸಿ.ಎನ್.:–** ಇವತ್ತಿನ ಪರಿಸ್ಥಿತಿಯ ಬಗ್ಗೆ ಕಾನೂನಿನ ಬಗ್ಗೆ ಪ್ರತಿ ಪಕ್ಷದ ನಾಯಕರು ಮತ್ತು ಮಾನ್ಯ ಶರಣಪ್ಪ ಮಟ್ಟೂರು ಅವರು ಹೇಳಿದ ಹಾಗೇ, ಈ Single Bench Judgment is not in accordance with the Judgment of the Supreme Court. Akkara ಕೇಸ್‌ನಲ್ಲಿ ಬಹಳ ಸ್ಪಷ್ಟವಾಗಿ ತೀರ್ಪನ್ನು ಕೊಟ್ಟಿದ್ದಾರೆ. ಪಿಂಚಣಿ ಮತ್ತು ವೇತನ ಶ್ರೇಣಿ ನಿಗದಿಯನ್ನು ಮಾಡುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಂಪೂರ್ಣವಾದಂತಹ ಅಧಿಕಾರವಿದೆ. ಇದನ್ನು ಯಾರೂ ಕೂಡ ಯಾವುದೇ ಕಾರಣಕ್ಕೂ ಪಿಂಚಣಿ ಮತ್ತು ವೇತನ ಶ್ರೇಣಿ ನಿಗದಿ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ರಾಜ್ಯ ಸರ್ಕಾರದ ಆರ್ಥಿಕ ಸಂಪನ್ಮೂಲ ಆಧಾರಿತವಾಗಿ ಪಿಂಚಣಿ ಮತ್ತು ವೇತನ ಶ್ರೇಣಿಯನ್ನು ಕೊಡುವುದಕ್ಕೆ ಸಾಧ್ಯವಿರುತ್ತದೆ. ಎಲ್ಲಾ pay revision ಗಳನ್ನು ದೃಷ್ಟಿಕೋನದಲ್ಲಿಟ್ಟು ನೋಡಿದಾಗ, ನಿವೃತ್ತಿಯಾದವರಿಗೆ ಯುಜಿಸಿ ವೇತನ ಶ್ರೇಣಿ ಪ್ರಕಾರ; ಇವತ್ತು ಒಬ್ಬರು ನಿವೃತ್ತಿಯಾದಂತಹ teaching staff ನ ವೇತನದ ವಿವರ ನೋಡಿದಾಗ, ಅವರಿಗೆ ನಮ್ಮ ರಾಜ್ಯ ಸರ್ಕಾರದ ಪರಿಷ್ಕೃತ ವೇತನ ಶ್ರೇಣಿಯ ಪ್ರಕಾರ ಸುಮಾರು ರೂ. 60,454/– ಗಳನ್ನು ಕೊಡುತ್ತಿದ್ದೇವೆ. ಆದರೆ ಯುಜಿಸಿ ಪ್ರಕಾರ ಸುಮಾರು ರೂ.69,925/–ಗಳನ್ನು ಕೊಡಬೇಕಾಗುತ್ತದೆ. ಪ್ರತಿ ಐದು ವರ್ಷಕ್ಕೊಮ್ಮೆ pay revision ಆಗುತ್ತಿದೆ. ಯು.ಜಿ.ಸಿ. ಯಲ್ಲಿ ಹತ್ತು ವರ್ಷಕ್ಕೊಮ್ಮೆ pay revision ಆಗುತ್ತಿದೆ. ಆದರೆ ಮುಖ್ಯವಾಗಿ pension policy ವಿಚಾರವಾಗಿ ಒಂದೊಂದು ಇಲಾಖೆಯಲ್ಲಿ ಒಂದೊಂದು ಕಾನೂನನ್ನು ತರುವುದಕ್ಕಾಗುವುದಿಲ್ಲ. ಇಡೀ ರಾಜ್ಯ ಸರ್ಕಾರದ ಎಲ್ಲಾ ನೌಕರರಿಗೂ ಒಂದೇ pension policy ಅನ್ನು ಇಟ್ಟುಕೊಂಡಿದ್ದೇವೆ. ಹಾಗಾಗಿ ಇದು ಅನ್ವಯಿಸುತ್ತದೆ. 'ಇವತ್ತು ಕೋರ್ಟ್‌ನಲ್ಲಿ ಅವರು ಕೇಳಿರುವಂತಹದ್ದರ ಬಗ್ಗೆ ನಿಮಗೆ cut off date fix ಮಾಡುವ ಅಧಿಕಾರವಿಲ್ಲ. ಆ ಪ್ರಾವಿಷನ್ ಸರಿಯಿಲ್ಲ' ಎಂದು ಆ ತೀರ್ಪಿನಲ್ಲಿ ತಿಳಿಸಿರುತ್ತದೆ. ಈಗ ನಮಗೆ ಅಧಿಕಾರವಿದೆ. ಇನ್ನು ಹೆಚ್ಚಿನ ರೀತಿಯ ಸ್ಪಷ್ಟತೆಯನ್ನು ಪಡೆದುಕೊಳ್ಳುವುದಕ್ಕೆ ಇವತ್ತು ಈ ಕಾಯಿದೆಯನ್ನು ತಂದಿದ್ದೇವೆ. ಹಾಗಾಗಿ ಇದಕ್ಕೆ ಮಾನ್ಯ ಸದಸ್ಯರೆಲ್ಲರ ಸಹಕಾರ ಬೇಕು. ಎಲ್ಲೋ ಒಂದು ಕಡೆ ವ್ಯವಸ್ಥೆಯಲ್ಲಿ uniform policy ಅನ್ನು ಇಟ್ಟುಕೊಂಡು ನಾವು ಕಾರ್ಯನಿರ್ವಹಿಸುವಂತಹದ್ದಾಗಬೇಕು. ಈ ವಿಚಾರ ನಿನ್ನೆ ಮೊನ್ನೆಯದಲ್ಲ, 2009 ರಿಂದಲೂ ಬಂದಿರುವಂತಹದ್ದಾಗಿದೆ. ನಾವು ಇದನ್ನು ಗಮನದಲ್ಲಿಟ್ಟುಕೊಂಡು ಒಟ್ಟಾರೆ uniform policy ಅನ್ನು ಇಟ್ಟುಕೊಳ್ಳಬೇಕು. ಯಾವ ರೀತಿಯಾಗಿ ಎಷ್ಟು ಹಣ ಖರ್ಚಾಗುತ್ತಿದೆ ಮತ್ತು ಎಷ್ಟು financial burden ಆಗುತ್ತಿದೆ ಎಂಬುದರ ಬಗ್ಗೆ ಈಗಾಗಲೇ ತಮಗೆ ಗೊತ್ತಿದೆ. ಇದನ್ನು ಎಲ್ಲಾ ಇಲಾಖೆಗಳಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಇದು uniform policy, ತರಲು ಸಹಾಯಕವಾಗುವುದರಿಂದ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್. ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಕಾಯಿದೆಯ ಬಗ್ಗೆ ನಾವು ಕುಳಿತುಕೊಂಡಾಗೊಂದು ರೀತಿಯ ಚರ್ಚೆ ಮತ್ತು ಅವರು ಕುಳಿತುಕೊಂಡಾಗೊಂದು ರೀತಿಯ ಚರ್ಚೆ ಇವುಗಳನ್ನೆಲ್ಲಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ನೋಡಿದ್ದೇನೆ. ಶಿಕ್ಷಕರ ವಿಷಯದಲ್ಲಿ ಬಂದಾಗ ನಾವೆಲ್ಲರೂ ಜಗಳವನ್ನು ಮಾಡಿದ್ದೇವೆ. ಶಿಕ್ಷಕರ ಬಗ್ಗೆ ಅವರೇ ಮಾತನಾಡುತ್ತಾರೆ ನಾವು ಈ ಸದನದಲ್ಲಿ ಸದಸ್ಯರಾಗಿ ಕುಳಿತುಕೊಂಡಿರುವ ಮಾನ್ಯ ಆಯನೂರ ಮಂಜುನಾಥ್, ಮಾನ್ಯ ನಾರಾಯಣಸ್ವಾಮಿ, ಡಾ॥ ತೇಜಸ್ವಿನಿಯವರಿಂದ ಹಿಡಿದು ಎಲ್ಲರೂ ಇವತ್ತು ಯೋಚನೆ ಮಾಡುತ್ತಿದ್ದೇವೆ. ಇವತ್ತು ಈ ಮಸೂದೆ ಜಾರಿಗೆ ತಂದರೆ, ಎಲ್ಲರಿಗೂ ಕಷ್ಟವಾಗುತ್ತದೆಂದು ಮನವರಿಕೆ ಮಾಡಿಕೊಟ್ಟಿದ್ದಾರೆ. ಈ ಮಸೂದೆ ಜಾರಿಗೆ ಬಂದರೆ, ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತದೆ ಮತ್ತು Contempt of Court ಕೂಡ ಆಗುತ್ತದೆಂದು ಹೇಳಿದ್ದಾರೆ. ಇದನ್ನು ತಾವು Prestige ಆಗಿ ತೆಗೆದುಕೊಳ್ಳಬಾರದೆಂದು ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಹಿಂದೆ ಈ ರಾಜ್ಯದಲ್ಲಿ ವಿರೋಧ ಹೇಗೆ ಬಂತು ಎಂದು ನೋಡಿದಾಗ, ಏಕ ವ್ಯಕ್ತಿ ವಿರೋಧವನ್ನು ಕೂಡ ಮನ್ನಣೆ ಮಾಡಿರುವಂತಹ ಸರ್ಕಾರದ ನಡವಳಿಕೆಗಳನ್ನು ಕೂಡ ನಾನು ಜ್ಞಾಪಿಸಿಕೊಳ್ಳುತ್ತಿದ್ದೇನೆ. ಮಾನ್ಯ ಬಿ. ರಾಚಯ್ಯನವರು ರಾಜ್ಯದಲ್ಲಿರುವ ಅರಣ್ಯದೊಳಗೆ ಮತ್ತು ಅರಣ್ಯದ ಹೊರಗೆ ಇರುವಂತಹವರನ್ನು ಒಕ್ಕಲೆಬ್ಬಿಸಬೇಕು ಎಂದು ಅರಣ್ಯ ಮಸೂದೆಯನ್ನು ಮಂಡಿಸಿದಂತಹ ಸಂದರ್ಭದಲ್ಲಿ, ಅವೊತ್ತಿನ ದಿನ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಸದನದಲ್ಲಿ ಏಕ ವ್ಯಕ್ತಿಯಾಗಿಯೇ ವಿರೋಧ ವ್ಯಕ್ತಪಡಿಸಿ ಈ ಮಸೂದೆಯನ್ನು ತರಬೇಡಿ ಎಂದು ಹೇಳಿ, ಧರಣಿ ಕುಳಿತರು. ಆಗ ಮಾನ್ಯ ಬಿ. ರಾಚಯ್ಯನವರು ಸಮಯ ತೆಗೆದುಕೊಂಡು, ಆ ಮಸೂದೆಯನ್ನು ಹಿಂಪಡೆದುಕೊಂಡರು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಸದನದಿಂದ ಹೊರಗೆ ಹೋಗುತ್ತಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ನಾರಾಯಣಸ್ವಾಮಿಯವರೇ ಮಾತಾಡಲಿ ಎಂದು ಹೆಸರು ತೆಗೆದುಕೊಂಡಿದ್ದೇನೆ. ಈಗ ಮೂರ್ನಾಲ್ಕು ಜನ ಶಿಕ್ಷಣ ಕ್ಷೇತ್ರದ ಸದಸ್ಯರು ಆಡಳಿತ ಪಕ್ಷದ ಕಡೆಯಿಂದ ಎದ್ದೆದ್ದು ನಿಂತುಕೊಂಡು ಮಾತನಾಡುತ್ತಿದ್ದರು. ಇವತ್ತು ಅವರ್ಯಾಕೋ ಎದ್ದುನಿಂತುಕೊಂಡು ಮಾತನಾಡುತ್ತಿಲ್ಲ ಮತ್ತು ಅವರು ಎದ್ದು ನಿಲ್ಲುವುದು ಬೇಡ. ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಈ ತರಹ ಒಂದೇ ಸಾರಿ ಮಾಡಿಲ್ಲ. ಆ ತರಹ ಎಷ್ಟೋ ಬಾರಿ ಮಾಡಿದ್ದಾರೆ. ಅಂತಹವರು ಈಗ ಮುಖ್ಯಮಂತ್ರಿಗಳಾಗಿದ್ದಾರೆ. ಈ ಮಸೂದೆ ಮಂಡಿಸಿದ್ದೇವೆ ಎನ್ನುವುದೊಂದೇ ದೊಡ್ಡದಲ್ಲ; ಅದಕ್ಕಾಗಿ ದಯಮಾಡಿ, ಆ ನಿದರ್ಶನವನ್ನು ನೋಡಿ, ಮಾನ್ಯ ಬಿ.ಎಸ್ ಯಡಿಯೂರಪ್ಪನವರ ಏಕ ವ್ಯಕ್ತಿತ್ವದ ವಿಷಯಕ್ಕೂ ಕೂಡ ಮನ್ನಣೆ ಕೊಟ್ಟಿರುವಂತಹದ್ದು ಈ ಸದನವಾಗಿದೆ. ಮಾನ್ಯ ಬಿ.ರಾಚಯ್ಯನವರು ಆ ಮಸೂದೆಯನ್ನು ಒಪ್ಪಿಕೊಂಡು ವಾಪಸ್ಸು ತೆಗೆದುಕೊಂಡಿರುವುದನ್ನು ನಾವು ಕೂಡ ಈ ಸಂದರ್ಭದಲ್ಲಿ ಮೆಚ್ಚುವಂತಹದ್ದಾಗಿದೆ. ಉಪ ಮುಖ್ಯಮಂತ್ರಿಯಾದಂತಹ ಡಾ॥ ಸಿ.ಎನ್. ಅಶ್ವತ್ಥನಾರಾಯಣರವರ ಬಗ್ಗೆ ಬಹಳ ಗೌರವವಿದೆ ಮತ್ತು ನನಗೆ ಸಂತೋಷವೇನೆಂದರೆ, ನಮ್ಮೂರಿನವರು ಮತ್ತು ನಮ್ಮ ಮಾಗಡಿ ತಾಲ್ಲೂಕಿನಿಂದ ಬಂದವರು. ಮಾಗಡಿ ಕೆಂಪೇಗೌಡರು ಬೆಂಗಳೂರು ನಾಡನ್ನು ಕಟ್ಟಿದವರು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಇದನ್ನು ಹೇಳಿದರೆ ಅವರು ಏನಾದರೂ ಬದಲಾವಣೆಯಾಗುತ್ತಾರಾ?

**ಶ್ರೀ ಹೆಚ್.ಎಂ.ರೇವಣ್ಣ:–** ಅದೂ ಆಗಬಾರದು. ಮಾಗಡಿ ಕೆಂಪೇಗೌಡರ ಹೆಸರನ್ನು ತಾವು ಉಳಿಸಬೇಕು. ಮುಂದೆ ಭವಿಷ್ಯವಿದೆ. ಇದರ ಬಗ್ಗೆ ಯೋಚನೆ ಮಾಡಿ, ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಉಚ್ಚ ನ್ಯಾಯಾಲಯದ ನಿರ್ಣಯ, violation of Articles 14 and 16 of the Constitution, ಹಾಗೂ ಕೆಲವಾರು ವಿಷಯಗಳನ್ನು ಹೇಳಿದ್ದೇವೆ. ಇವರು ಬಹುತೇಕವಾಗಿ ಹಿಂಪಡೆದುಕೊಳ್ಳುವುದಕ್ಕೆ ಎದ್ದು ನಿಂತುಕೊಂಡಿದ್ದಾರೆಯೋ ಏನೋ ಗೊತ್ತಿಲ್ಲ. ಇದನ್ನು ಹಿಂಪಡೆದುಕೊಳ್ಳುತ್ತೀರೋ ಅಥವಾ ಅದನ್ನೇ ಮುಂದುವರೆಸುತ್ತೀರೋ? ಇದನ್ನು ಹಿಂಪಡೆದುಕೊಳ್ಳುವುದಿಲ್ಲವೆಂದರೆ, ನಿಮಗೆ ಕಾನೂನಿನ ಪರಿಜ್ಞಾನವಿಲ್ಲ ಮತ್ತು ಶಿಕ್ಷಕರ ಬಗ್ಗೆ ಗೌರವವಿಲ್ಲ. ಆಮೇಲೆ ನಿಮ್ಮ ನಿಲುವೇನಿದೆ ಹೇಳಿ? ಹನ್ನೆರಡನೇ ಶತಮಾನದಲ್ಲಿ 'ನುಡಿದಂತೆ ನಡೆಯಬೇಕು, ನಡೆದಂತೆ ನುಡಿಯಬೇಕೆಂದು' ಜಗಜ್ಯೋತಿ ಬಸವಣ್ಣನವರು ಹೇಳಿದ್ದಾರೆ. ಆ ನಡೆ–ನುಡಿ ಒಂದೂ ಇಲ್ಲ. ನಿಮ್ಮ ಮೊಂಡತನ, ಕಾನೂನಿಗೆ ವಿರೋಧವಾಗಿ, ಉಚ್ಚ ನ್ಯಾಯಾಲಯದ ನಿರ್ಣಯಕ್ಕೆ ವಿರುದ್ಧವಾಗಿ, ಶಿಕ್ಷಕರ ವಿರುದ್ಧವಾಗಿ ಈ ಬಿಲ್‌ನ್ನು ಏನು ಮಂಡಿಸುವುದಕ್ಕೆ ಹೊರಟಿದ್ದೀರಿ, ನಾವು ಇದನ್ನು protest ಮಾಡಿ, boycott ಮಾಡುತ್ತೇವೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ boycott ಮಾಡಿ, ಸದನದಿಂದ ಹೊರಗೆ ಹೋದರು)**

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಶಿಕ್ಷಕರ ಕ್ಷೇತ್ರದಿಂದ ಯಾರು ಚುನಾಯಿತರಾಗಿದ್ದಾರೋ, ಅವರೇ boycott ಮಾಡಿ ಆಚೆಗೆ ಹೋಗಿರಬೇಕು.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಶಿಕ್ಷಕರ ವಿರೋಧಿ ನೀತಿಗೆ ಧಿಕ್ಕಾರ ಧಿಕ್ಕಾರ ಎಂದು ಕೂಗಿದರು)**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 15 ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 15ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 15ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ॥ ಅಶ್ವತ್ಥನಾರಾಯಣ ಸಿ.ಎನ್ (ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, 2020ರ ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನಕ್ಕೆ ಹಿಂತಿರುಗಿದರು)

**9. ನಿಯಮ 68ರ ಅಡಿಯಲ್ಲಿ ಚರ್ಚೆ**

> "ಮಂಡ್ಯ ಜಿಲ್ಲೆಯಲ್ಲಿ ಪರವಾನಗಿ ಪಡೆಯದೆ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿರುವುದಲ್ಲದೆ, ನ್ಯಾಯಸಮ್ಮತವಾಗಿ ಗಣಿಗಾರಿಕೆ ನಡೆಸುತ್ತಿರುವವರಿಗೆ ನೋಟಿಸ್ ಜಾರಿ ಮಾಡಿ ಘಟಕಗಳನ್ನು ಸ್ಥಗಿತಗೊಳಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕುರಿತು."

~~~~~~~

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮ 68 ರಡಿಯಲ್ಲಿ ಒಂದು ಅತ್ಯಂತ ಮಹತ್ವವಾದ ಜರೂರು ವಿಚಾರವನ್ನು ಚರ್ಚೆಗೆ ಕೈಗೆತ್ತಿಕೊಳ್ಳಬೇಕೆಂದು ಹೇಳಿ, ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ವಿಚಾರದಲ್ಲಿ ಒಂದು ದೊಡ್ಡ ವ್ಯತ್ಯಯ ಪ್ರಾರಂಭವಾಗಿದೆ. ಅಲ್ಲಿ ಸುಮಾರು 743 ಕ್ಕೂ ಹೆಚ್ಚು ಗಣಿಗಾರಿಕಾ ಘಟಕಗಳಿವೆ.

(ಮುಂದು...)

(639) 20.03.2020 3.50 ಟಿಸಿಹೆಚ್–ಜಿಆರ್
**ಶ್ರೀ ಕೆ.ಟಿ.ಶ್ರೀಕಂಠೇಗೌಡ**(ಮುಂದು):–

ಮಂಡ್ಯ ಜಿಲ್ಲೆಯಲ್ಲಿ ಈ ನಾಡಿನ ಜನರು ಮನೆ ಕಟ್ಟುವ ವಿಚಾರದಲ್ಲಿ ರಸ್ತೆ ನಿರ್ಮಾಣದ ವಿಚಾರದಲ್ಲಿ ಅಗತ್ಯವಾದಂತಹ ಮೂಲ ಸಾಮಗ್ರಿಗಳನ್ನು ಪೂರೈಕೆ ಮಾಡತಕ್ಕಂಥ ಕೆಲಸವನ್ನು ಸ್ವಾತಂತ್ರ್ಯ ಪೂರ್ವದಿಂದಲೂ ಮಾಡಿಕೊಂಡು ಬಂದಿದೆ. ವಿಶೇಷವಾಗಿ ಮೈಸೂರು ಅರಮನೆಯಿಂದ ಕನ್ನಂಬಾಡಿ ಕಟ್ಟೆ ನಿರ್ಮಾಣದಿಂದ ಹಿಡಿದು, ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ತುಮಕೂರು ಮತ್ತು ಎಲ್ಲಾ ಜಿಲ್ಲೆಗಳಿಗೆ ಈ ಕಟ್ಟಡದ ಸಾಮಗ್ರಿಗಳನ್ನು ಪೂರೈಕೆ ಮಾಡುವಂತಹ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ಮಾಡುತ್ತಾ ಬಂದಿದೆ. ಆದರೆ ಇವತ್ತಿನ ದಿವಸ ಅಲ್ಲಿ ಏನಾಗಿದೆಯೆಂದರೆ, ಶೇಕಡಾ 50ಕ್ಕೂ ಹೆಚ್ಚು ಯಾವುದೇ ಒಪ್ಪಿಗೆ ಇಲ್ಲದೇ, ಕಾನೂನು ಬಾಹಿರವಾಗಿ ಯಾರಿಗೂ ಹೇಳದೇ, ಕೇಳದೇ ಅಹೋರಾತ್ರಿ ಶೇ.70 ಭಾಗ ಸರ್ಕಾರಕ್ಕೆ ಕೊಡಬೇಕಾದ ರಾಜಧನವು ಸೇರಿದಂತೆ, ಎಲ್ಲವನ್ನೂ ವ್ಯತ್ಯಯ ಮಾಡಿ, ಅವರು ರಾಜಾರೋಷವಾಗಿ ಉದ್ಯಮ ನಡೆಸುತ್ತಿದ್ದಾರೆ. ಶೇ.30ರಷ್ಟು ಭಾಗ ಮಾತ್ರ ಕಾನೂನುಬದ್ಧವಾಗಿ ಕ್ರಷಿಂಗ್ ಘಟಕ ನಡೆಸುತ್ತಿರುವುದು ಇವತ್ತಿನ ದಿವಸ ಸಂಬಂಧಪಟ್ಟ ಇಲಾಖೆಗೆ ಹಾಗೂ ಸರ್ಕಾರಕ್ಕೆ ಗೊತ್ತಿದೆ. ಇತ್ತೀಚಿನ ದಿನಗಳಲ್ಲಿ ಮರಳು ಸಿಗುತ್ತಿಲ್ಲ. ಜನ ತಾವು ವಾಸ ಮಾಡಲು ಮನೆಯನ್ನು ಕಟ್ಟಿಕೊಳ್ಳಲೇಬೇಕು. ವಿಶೇಷವಾಗಿ ಆ ಮರಳಿಗೆ ಪರ್ಯಾಯವಾಗಿ ಎಂ–ಸ್ಯಾಂಡ್ ಅನ್ನು ಉತ್ಪತ್ತಿ ಮಾಡಿ, ಮನೆ ಕಟ್ಟಡಕ್ಕೆ ಸಣ್ಣ ಸಣ್ಣ ಜೆಲ್ಲಿಗಳನ್ನು ಪೂರೈಕೆ ಮಾಡುವಂತಹ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~

ಘಟಕಗಳಾಗಿವೆ. ವಿಶೇಷವಾಗಿ ಇವು ಕೃಷ್ಣರಾಜಪೇಟೆ ಮತ್ತು ಪಾಂಡವಪುರ ತಾಲ್ಲೂಕಿನ ಸರಹದ್ದಿನಲ್ಲಿ ಮೈಸೂರು ಜಿಲ್ಲೆಗೆ ಹೊಂದಿಕೊಂಡಂತೆ ನಡೆಯುತ್ತಿದೆ. ಈಗ ಎರಡು ದೊಡ್ಡ ವ್ಯತ್ಯಾಸಗಳಾಗಿವೆ. ಮೊದಲನೆಯದಾಗಿ, ಪಾಂಡವಪುರ ತಾಲ್ಲೂಕಿನ ಬೇಬಿ ಬೆಟ್ಟದ ಕಾವಲ್ ನಲ್ಲಿ ಸುಮಾರು 400 ವರ್ಷಗಳಿಂದ ಈ ರೀತಿಯ ಅವ್ಯಾಹತಗಳು ನಡೆಯುತ್ತಾ ಬಂದಿದೆ. 3 ರಿಂದ 4 ಕಲ್ಲುಗಣಿಗಾರಿಕೆಗಳು ಕಾನೂನುಬದ್ಧವಾಗಿವೆ. ಕನ್ನಂಬಾಡಿ ಕಟ್ಟುವುದಕ್ಕೆ ಅವರೇ ಹೆಚ್ಚು ಕಲ್ಲುಗಳನ್ನು ಪೂರೈಕೆ ಮಾಡಿದ್ದಾರೆ. ಆದರೆ ಕನ್ನಂಬಾಡಿ ಕಟ್ಟೆಗೆ ಯಾವುದೇ ಅಪಾಯವಿಲ್ಲ. 200 ಮೀಟರ್ ಅಂತರದಲ್ಲಿರುವ ಗಣಿಗಾರಿಕೆಗಳು ಮಾಡಬಹುದು ಎಂದು ಈಗಾಗಲೇ ಸಂಶೋಧನಾ ಸಂಸ್ಥೆಗಳು ಹೇಳಿವೆ. ದೆಹಲಿ ಸಂಶೋಧನಾ ಸಂಸ್ಥೆ ಕೂಡ ಹೇಳಿದೆ. ಆದರೆ, 12 ಕಿಲೋ ಮೀಟರ್ ದೂರ ಇರತಕ್ಕಂಥ ಕಲ್ಲು ಗಣಿಗಾರಿಕೆಗಳನ್ನು ರಾಜಕೀಯ ಉದ್ದೇಶದ ಕಾರಣದಿಂದಾಗಿ ಅದನ್ನು 2 ರಿಂದ 3 ತಿಂಗಳಿನಿಂದ ನಿಲ್ಲಿಸಿದ್ದಾರೆ. ಆ ಕಾರಣಕ್ಕಾಗಿ ಎಲ್ಲಾ ಕಾಮಗಾರಿಗಳು ಹಾಗೂ ಮನೆ ಕಟ್ಟುವಂತಹ ಕಾಮಗಾರಿಗಳು ಸೇರಿದಂತೆ, ಆ ಕಲ್ಲುಗಣಿಗಾರಿಕೆ ಸ್ಥಗಿತಗೊಂಡಿರುತ್ತದೆ. ಇನ್ನೊಂದು M/s *T. J. Stone Crushing Industries* ಕೃಷ್ಣರಾಜ ಪೇಟೆಯಲ್ಲಿದೆ. ಈ ದುರಂತ ಎಲ್ಲಿಯವರೆಗೆ ಹೋಯಿತು ಎಂದರೆ, ಒಬ್ಬರು ನಿರುದ್ಯೋಗಿ ಪದವೀಧರರು ಆರಂಭದಲ್ಲಿ ಬಹಳ ಸಣ್ಣ ಪ್ರಮಾಣದಲ್ಲಿ ಎರಡು ಎಕರೆ ಜಮೀನನ್ನು lease ಗೆ ಪಡೆದು, ಸರ್ಕಾರದ ಎಲ್ಲಾ ಇಲಾಖೆಗಳಿಂದ ಎನ್.ಓ.ಸಿ., ಪಡೆದುಕೊಂಡು, 2008ರಿಂದ 2012ರವರೆಗೆ *crushing industry* ಯನ್ನು ನಡೆಸುತ್ತಿದ್ದರು. ಆನಂತರ ಅವರು 2012ರಲ್ಲಿ ಕ್ರಷಿಂಗ್ ಮಾಡುವುದನ್ನು ನಿಲ್ಲಿಸಿಬಿಟ್ಟರು. 20016ರಲ್ಲಿ ದೊಡ್ಡ ಪ್ರಮಾಣದಲ್ಲಿ ಸುಮಾರು 21 ಕೋಟಿ ಬಂಡವಾಳವನ್ನು ಹೂಡಿ, ಮತ್ತೆ ಅನುಮತಿಯ ರಿನೀವಲ್‌ಗೆ ಹಾಕಿಕೊಂಡು ಅನುಮತಿಯನ್ನು ಪಡೆದುಕೊಳ್ಳುತ್ತಾರೆ. ಪರಿಸರ ಇಲಾಖೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಅನುಮತಿ ಪಡೆದುಕೊಂಡು ನವೆಂಬರ್ 17, 2018 ರಂದು ಅವರು ಈ ಒಂದು ಉದ್ಯಮವನ್ನು ಚಾಲನೆ ಮಾಡುತ್ತಾರೆ. ಅಲ್ಲಿಂದ ಒಂಬತ್ತು ತಿಂಗಳ ಕಾಲ ಅದು ಅವ್ಯಾಹಿತವಾಗಿ ನಡೆದುಕೊಂಡು ಬರುತ್ತದೆ. ಅವರು ಸುಮಾರು 68 ಲಕ್ಷ ರೂಪಾಯಿಗಳು ಸಂದಾಯ ಮತ್ತು ವಿವಿಧ ಬಾಬ್ತುಗಳ ಪ್ರಕಾರ ಪಾವತಿ ಮಾಡಿದ್ದಾರೆ. ಈ ನಡುವೆ ಕೃಷ್ಣರಾಜಪೇಟೆ ಉಪ ಚುನಾವಣೆಯಾದ ಮೇಲೆ ರಾಜಕೀಯ ಕಾರಣಕ್ಕಾಗಿ, ಈ *crushing industry* ಗೆ ಒಂದು ದಾಳಿ ನಡೆಯುತ್ತದೆ. ಆ ದಾಳಿ ಮಾಡಿದವರು ಅದನ್ನು ಏಕಾಏಕಿ ಬಂದ್ ಮಾಡಿ, ಅದನ್ನು ನೀವು ನಡೆಸಬಾರದು ಎಂದು ಹೇಳುತ್ತಾರೆ. ನಮ್ಮಿಂದ ಏನು ಲೋಪವಾಗಿದೆ ಎಂದು ಹೇಳಿ ಪ್ರಶ್ನೆ ಮಾಡುತ್ತಾರೆ, ನಾವು ಸರ್ಕಾರಕ್ಕೆ ಟ್ಯಾಕ್ಸ್ ಕಟ್ಟಿಲ್ಲವೇ, ಸರ್ಕಾರದಿಂದ ಲೈಸೆನ್ಸ್ ತೆಗೆದುಕೊಂಡಿಲ್ಲವೇ, ಎನ್.ಓ.ಸಿ., ತೆಗೆದುಕೊಂಡಿಲ್ಲವೇ? ಇದನ್ನು ಯಾವ ಕಾರಣಕ್ಕಾಗಿ ನಿಲ್ಲಿಸುತ್ತಿದ್ದೀರಾ ಎಂದು ಪ್ರಶ್ನೆ ಮಾಡುತ್ತಾರೆ. ನಾವು ಅದನ್ನೇನೂ ಹೇಳುವುದಕ್ಕೆ ಆಗುವುದಿಲ್ಲ; ಮೊದಲು ನೀವು ನಿಲ್ಲಿಸಿ ಎನ್ನುತ್ತಾರೆ. ಅದನ್ನು ಪ್ರಶ್ನೆ ಮಾಡಿ ಅವರು ಹೈಕೋರ್ಟ್‌ಗೆ ಹೋಗುತ್ತಾರೆ. ಹೈಕೋರ್ಟ್‌ನಲ್ಲಿ ಮುಖ್ಯ ನ್ಯಾಯಾಧೀಶರನ್ನೊಳಗೊಂಡ ಬೆಂಚ್ ದಿನಾಂಕ 24.09.2019ರಂದು ಈ ರಾಜ್ಯದ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು, 'ನೀವು ಆ ಉದ್ದಿಮೆಯನ್ನು ನಿಲುಗಡೆ ಮಾಡಿರುವುದು ತಪ್ಪು ನಿಲುಗಡೆ ಮಾಡುವುದಕ್ಕೆ ನೀಡಿರುವ

ನೋಟಿಸ್ ಅನ್ನು ನಾವು ಸ್ಟೇ ಮಾಡುತ್ತೇವೆ, ಅವರು ಅದನ್ನು ನಡೆಸಲಿ' ಎಂದು ತೀರ್ಪು ನೀಡಿ ಸೂಚನೆಯನ್ನು ಕೊಡುತ್ತಾರೆ. ಆತಂಕಪಡಬೇಡಿ ನಾನು ಆ ಭಾಗವನ್ನು ಉಲ್ಲೇಖ ಮಾಡುತ್ತೇನೆ. ನಾವು ಎಲ್ಲಾ ಜಡ್ಜ್‌ಮೆಂಟ್ ಅನ್ನು ತಂದಿದ್ದೇವೆ. *Chief Justice himself* ಕೊಡುತ್ತಾರೆ. ಆದರೆ, ಅವರು ಒಪ್ಪುವುದಿಲ್ಲ. ಅವರು ಒಪ್ಪದೇ ಇದ್ದಾಗ, ಮತ್ತೆ ಅವರು ಹೈಕೋರ್ಟ್‌ಗೆ ಹೋಗುತ್ತಾರೆ. ಆಗ ಹೈಕೋರ್ಟ್ ನೇರವಾಗಿ ದಿನಾಂಕ 31.10.2019ರಲ್ಲಿ *Deputy Commissioner and Senior Geologist, Mandya District,* ಅವರಿಬ್ಬರಿಗೆ ನೇರವಾಗಿ *direction* ಕೊಡುತ್ತಾರೆ. *'No, you are not following the High Court's Judgment,* ನೀವು ತಕ್ಷಣ ಹೈಕೋರ್ಟ್‌ನ ಆದೇಶವನ್ನು ಪಾಲನೆ ಮಾಡಿ, ಅವರು ಆ ಉದ್ಯಮವನ್ನು ಚಾಲನೆ ಮಾಡುವುದಕ್ಕೆ ಬಿಡಿ' ಎಂದು *specific* ಆಗಿ ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಹಿರಿಯ ಭೂವಿಜ್ಞಾನಿಗೆ ನಿರ್ದೇಶನ ಕೊಡುತ್ತಾರೆ. ಅದಕ್ಕೂ ಅವರು ಕೇರ್ ಮಾಡುವುದಿಲ್ಲ. ಇದು 200 ಮೀಟರ್‌ನಿಂದ ದೂರದಲ್ಲಿ ಇಲ್ಲ. 200 ಮೀಟರ್ ರಸ್ತೆಯಿಂದ ಒಳಗೆ ಇರಬೇಕೆಂದು ಮತ್ತೆ ಜಿಲ್ಲಾಧಿಕಾರಿಗಳೇ ಹೈಕೋರ್ಟ್‌ಗೆ ಹೋಗುತ್ತಾರೆ. ಆಗ ಅಲ್ಲಿನ ಹಿಂದಿನ ಅಧಿಕಾರಿಗಳು ಒಂದು ವರದಿ ನೀಡಿರುತ್ತಾರೆ. ಅಲ್ಲಿನ ಜಿಲ್ಲಾಧಿಕಾರಿ ಮತ್ತು ಭೂ ವಿಜ್ಞಾನಿಗಳು ಹಾಗೂ ಇತರೆ ಇಲಾಖೆಯವರು ಹೋಗಿ ಇದು 200 ಮೀಟರ್ ಒಳಗೆ ಇದೆ ಎಂದು ವರದಿ ಕೊಟ್ಟಿರುತ್ತಾರೆ. ಆ ವರದಿಯನ್ನು ಕೊಟ್ಟ ಮೇಲೆ ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ಹೈಕೋರ್ಟ್‌ಗೆ ಬರುತ್ತಾರೆ. ಆಗ ಹೈಕೋರ್ಟ್ ದಿನಾಂಕ 27.11.2019ರಂದು ಅವರ ಅರ್ಜಿಯನ್ನೇ ವಜಾ ಮಾಡುತ್ತದೆ. ಮತ್ತೆ ಇಲಾಖೆಯವರು ಅನುಮತಿ ಕೊಡುವುದಿಲ್ಲ. ಅವರು ಮತ್ತೆ ಹೈಕೋರ್ಟ್‌ಗೆ ಹೋಗುತ್ತಾರೆ. ಅಲ್ಲಿನ ಮುಖ್ಯ ನ್ಯಾಯಾಧೀಶರು ದಿನಾಂಕ 17.01.2020ರಂದು ನೀವು ನಮ್ಮ ಆದೇಶವನ್ನು *obey* ಮಾಡುತ್ತಿಲ್ಲ, ನೀವು *obey* ಮಾಡಲೇಬೇಕು, ಅವರು ಉದ್ಯಮವನ್ನು ನಡೆಸುವುದಕ್ಕೆ ಬಿಡಬೇಕು ಎಂದು ಹೇಳುತ್ತಾರೆ. ಈ ನಡುವೆ ಸಭಾಪತಿಗಳೆ, ಒಂದು ರೈಡ್ ಮಾಡಿ, 68 ಲಕ್ಷ ರೂಪಾಯಿಗಳನ್ನು ಕಟ್ಟಲು ಹೇಳಿದ್ದರು, ಅದನ್ನು ಕಟ್ಟಿಕೊಂಡು ಬಂದಿದ್ದರು. ಮತ್ತೆ ಅವರಿಗೆ 48 ಲಕ್ಷ ದಂಡ ಹಾಕುತ್ತಾರೆ. ಅದಕ್ಕೆ ಅವರು ಸುಮ್ಮನಾಗುತ್ತಾರೆ. ಅಮೇಲೆ ಮತ್ತೊಂದು ಡ್ರೋನ್ ಸರ್ವೆ ಮಾಡಿಸುತ್ತಾರೆ. ಆ ಡ್ರೋನ್ ಸರ್ವೆಯಲ್ಲಿ 93.87 ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕಟ್ಟಬೇಕೆಂದು ಹೇಳುತ್ತಾರೆ. ಇವರು ಹಳೆಯವರು ಯಾರೋ ಆ ಜಾಗದಲ್ಲಿ ತೆಗೆದಿರುವುದನ್ನೂ ಲೆಕ್ಕಹಾಕಿಕೊಂಡು ಡ್ರೋನ್ ಸರ್ವೆಯಲ್ಲಿ ಕೊಡುತ್ತಾರೆ. ಅದಕ್ಕೂ ಇವರು ಚಿಂತೆ ಮಾಡುವುದಿಲ್ಲ. ಇವರು ಬಂದ್ ಮಾಡಿದ ಮೇಲೆ ಸುಮಾರು ಎರಡು ತಿಂಗಳಿಗೆ ಸುಮಾರು 11.5 ಕೋಟಿ ರೂಪಾಯಿಗಳ ದಂಡವನ್ನು ಹಾಕುತ್ತಾರೆ. ಆದರೆ, ಅಲ್ಲಿ ಉದ್ಯಮ ನಡೆದಿಲ್ಲ, ಉದ್ಯಮ ನಡೆದ ಅವಧಿಗೆ ಸುಮಾರು 68 ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿದ್ದಾರೆ. ನಡೆಯದೇ ಇರುವಂತಹ ಎರಡು ತಿಂಗಳ ಅವಧಿಗೆ, 11.5 ಕೋಟಿ ರೂಪಾಯಿಗಳ ದಂಡವನ್ನು ಹಾಕಿದ್ದಾರೆ. ಅವರು ಆ ಹಣವನ್ನು ಎಣಿಸುವುದಕ್ಕೆ ಸಾಧ್ಯವಿಲ್ಲ. ಆ ಉದ್ದಿಮೆಯವರಿಗೆ ದಂಡ ಹಾಕಿ, ನೀವು ಉದ್ಯಮವನ್ನು ನಡೆಸಬಾರದು ಎನ್ನುತ್ತಾರೆ. ನಾನು ಇಲ್ಲಿ ಅತ್ಯಂತ ಮಹತ್ವವಾದ ವಿಚಾರವನ್ನು ಈ ಸದನದ ಮುಖಾಂತರ ರಾಜ್ಯದ ಗಮನಕ್ಕೆ ತರುವುದಕ್ಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಷ್ಟಪಡುತ್ತೇನೆ. ಅಲ್ಲಿಗೆ ಒಂದು *Squad* ದಿನಾಂಕ ಮಾರ್ಚ್ 31ರಂದು ಹೋಗುತ್ತಾರೆ. ದಿನಾಂಕ 31.03.2024ರವರೆಗೆ ಲೈಸನ್ಸ್ ನವೀಕರಣವಾಗಿದೆ. ಈ *squad* ಹೋದಾಗ ಏನಾಗುತ್ತದೆಂದರೆ, ಸ್ಕ್ವಾಡ್ ನವರು ಸ್ಥಳಕ್ಕೆ ಹೋಗಿ " ಕೆ.ಆರ್.ಪೇಟೆ ತಾಲ್ಲೂಕು, ಅರನಹಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂಬರ್ 222, ವಿಸ್ತೀರ್ಣ 1 ಎಕರೆ 20 ಗುಂಟೆ ಪ್ರದೇಶದಲ್ಲಿ M/s *T. J. Stone Crushing Industries* ಹೆಸರಿನಲ್ಲಿ *crushing* ಘಟಕವನ್ನು ಹೊಂದಿದ್ದು, ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳಲ್ಲಿ, ಲೈಸನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರ, ಮಂಡ್ಯ, ದಿನಾಂಕ.31.03.2024ಕ್ಕೆ ಲೈಸನ್ಸ್ 'ಫಾರ್ಮ್–ಸಿ' ಅನುಬಂಧದಲ್ಲಿ ಸೇರಿಸಿ ಅದನ್ನು ನೀಡಲಾಗಿರುತ್ತದೆ. ಸದರಿ *crushing* ಘಟಕಗಳಲ್ಲಿ ಜಲ್ಲಿಕಲ್ಲು ಸೇರಿದಂತೆ, ಉತ್ತಮ ಗುಣಮಟ್ಟದ ಎಂ–ಸ್ಯಾಂಡ್ ಅನ್ನು ಉತ್ಪಾದಿಸಲಾಗುತ್ತಿದೆ ಎಂದು ವರದಿ ಕೊಡುತ್ತಾರೆ. ಈ ವರದಿಯನ್ನು ಬೆಂಗಳೂರಿನಿಂದ ಹೋದಂತಹ *squad* ನವರು ಕೊಟ್ಟಿದ್ದಾರೆ. ಕೇಂದ್ರ ಕಚೇರಿಯ ಇಬ್ಬರು ಹಿರಿಯ ಭೂವಿಜ್ಞಾನಿಗಳು ಅಲ್ಲಿಗೆ ಹೋಗುತ್ತಾರೆ. ಆ ಹಿರಿಯ ಭೂವಿಜ್ಞಾನಿಗಳು ಹೋಗಿ ಈ ವರದಿಯನ್ನು ಕೊಡುತ್ತಾರೆ. ಅವರ ಹೆಸರುಗಳೆಂದರೆ; ಶ್ರೀ ವಿಜಯ್ ವಿಕ್ರಮ್ ಆರ್.ಜಿ., ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೇಂದ್ರ ಕಚೇರಿ, ಬೆಂಗಳೂರು ಮತ್ತು ಶ್ರೀ ಯುವರಾಜ ಡಿ.ಬಿ., ಭೂ ವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೇಂದ್ರ ಕಚೇರಿ, ಬೆಂಗಳೂರು ಈ ಇಬ್ಬರು ಅಲ್ಲಿಗೆ ಹೋಗಿ, "ಈ ಕ್ರಷಿಂಗ್ ಘಟಕದ ಸುತ್ತಲೂ ಸುಮಾರು 15 ರಿಂದ 20 ಅಡಿ ಎತ್ತರದ ಜಿ.ಐ.ಶೀಟ್‌ಗಳನ್ನು ಧೂಳು ಹಾರದಂತೆ ಸ್ಪ್ರಿಂಕ್ಲರ್ಸ್ ಗಳನ್ನು ಅಳವಡಿಸಿರುತ್ತಾರೆ. ಕ್ರಷಿಂಗ್ ಘಟಕದ ಸುತ್ತಲೂ ಗಿಡ ಮರಗಳನ್ನು ಬೆಳೆಸಿರುತ್ತಾರೆ. ಮುಂದುವರೆದು ಕ್ರಷಿಂಗ್ ಘಟಕದಲ್ಲಿ ವೇಬ್ರಿಡ್ಜ್ ಅನ್ನು ಅಳವಡಿಸಿರುತ್ತಾರೆ. ಇದು Vigilance Squad ಹೋಗಿ, ದಿನಾಂಕ 14.02.2019ರಲ್ಲಿ ಸಂಚಾರಿ ದಳ ಕೊಟ್ಟಂತಹ ವರದಿಯ ಪ್ರಮಾಣ ಪತ್ರ. ಇವರು ಚುನಾವಣೆಯಲ್ಲಿ ಸಹಾಯ ಮಾಡಲಿಲ್ಲ ಎನ್ನುವ ಒಂದೇ ಕಾರಣಕ್ಕಾಗಿ, ಸ್ಥಳೀಯ ಶಾಸಕರ ವಿರೋಧದಿಂದಾಗಿ, ಇವತ್ತು ಸುಮಾರು 21 ಕೋಟಿ ರೂಪಾಯಿ ಬಂಡವಾಳ ಹೂಡಿರುವಂತಹ ಒಬ್ಬ ನಿರುದ್ಯೋಗಿ ಪದವೀಧರನ ಇಡೀ ಉದ್ಯಮವನ್ನು ಬಂದ್ ಮಾಡಿದ್ದಾರೆ. ಇವತ್ತು ಅವ್ಯಾಹತವಾಗಿ ಒಪ್ಪಿಗೆಯೇ ಇಲ್ಲದೆ, ಯಾವುದೇ ಎನ್.ಓ.ಸಿ., ಇಲ್ಲದೆ, ಅಲ್ಲಿ ನೂರಾರು ಉದ್ಯಮಗಳು ನಡೆಯುತ್ತಿವೆ. ಅದರಿಂದ ಸರ್ಕಾರಕ್ಕೆ ಕೋಟಿ ಕೋಟಿ ಹಣ ನಷ್ಟವಾಗುತ್ತಿದೆ. ಪಾಂಡವಪುರದಲ್ಲಿನ ಬೇಬಿ ಕಾವಲ್ ಮತ್ತು ಕೆ.ಆರ್.ಪೇಟೆಯಲ್ಲಿ ಈ ಉದ್ಯಮಗಳು ನಿಂತು, ಸರ್ಕಾರಕ್ಕೆ ಬರುವಂತಹ ಆದಾಯ ನಷ್ಟವಾಗುತ್ತಿದೆ. ಅಲ್ಲಿ ಒಂದು ಕಡೆ ರಾಜಕೀಯ ಶೋಷಣೆ ಪ್ರಾರಂಭವಾಗಿದೆ. ನನಗೆ ಒಂದು ಸಮಾಧಾನ ಇದೆ.

**(ಮುಂದು...)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(640)20.3.2020/4.00/ಎಂ.ಎಂ–ಜಿ.ಆರ್**
**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದು):–**

ಈ ರಾಜ್ಯದ ಗಣಿ ಇಲಾಖೆಯ ಉನ್ನತ ಅಧಿಕಾರಿಯಿಂದ 'You follow the direction of the High Court' ಎಂದು ನಿರ್ದೇಶನ ಹೋಗುತ್ತದೆ. ಹೈಕೋರ್ಟ್ ಹೇಳಿದ ಹಾಗೆ ಕೇಳಿ ಹಾಗೆ ಕೆಲಸ ಮಾಡಿ ಎಂದು ಹೇಳುತ್ತಾರೆ. ಆದರೆ ಅಲ್ಲಿನ ಜಿಲ್ಲಾಧಿಕಾರಿಯವರು ಕೇಳುತ್ತಾ ಇಲ್ಲ. ಜಿಲ್ಲಾಧಿಕಾರಿಯವರು ಎಲ್ಲೋ ಒಂದು ಕಡೆಯಿಂದ ತಮಗೆ ಫೋನ್ ಬರಬೇಕೆಂದು ಹೇಳುತ್ತಾರೆ. ಏನಿದರ ಅರ್ಥ? ನಾನು ಸದನಕ್ಕೆ ಅತ್ಯಂತ ಜಾಗೃತವಾಗಿ ಹೇಳುತ್ತಿದ್ದೇನೆ, ಜಿಲ್ಲಾಧಿಕಾರಿಯವರು ಒಂದು ಕಡೆಯಿಂದ ಫೋನ್ ಬಂದರೆ ನನ್ನದು ಅಡ್ಡಿಯಿಲ್ಲ ಎಂದು ಹೇಳುತ್ತಾರೆ. ಹಾಗಾದರೆ C.J., Bench ನ 3–4 ಹೈಕೋರ್ಟ್ ಆದೇಶಗಳ ಗತಿ ಏನು? ಈ ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆಗೆ ಬೆಲೆ ಇಲ್ಲವೇ? ಕಾನೂನು ಕಟ್ಟಳೆಗಳಿಗೆ ಬೆಲೆ ಇಲ್ಲವೇ? ಏನಾದರೂ ಅಪರಾಧ ಮಾಡಿದ್ದರೆ, ತಪ್ಪು ಮಾಡಿದ್ದರೆ ಅವರು ಹೇಳಲಿ. ಆ ವ್ಯಾಪ್ತಿಯ 06 ಎಕರೆಗೆ 11 ಕೋಟಿ 5 ಲಕ್ಷ ರೂಪಾಯಿಗಳ ದಂಡ ಹಾಕಿದರೆ ಏನರ್ಥ? ದಯಮಾಡಿ, ಈ ವಿಚಾರದಲ್ಲಿ ರಾಜಕಾರಣ ಮಾಡುವುದು ಬೇಡ. ಇವತ್ತು ನಾವು ಉದ್ಯೋಗವನ್ನೇ ಕೊಡುವುದಕ್ಕೆ ಆಗುತ್ತಿಲ್ಲ. ಸ್ವಯಂ ಉದ್ಯೋಗಗಳನ್ನು ನಿರ್ಮಾಣ ಮಾಡುತ್ತಿದ್ದಾರೆ, ಕಟ್ಟಡಗಳ ನಿರ್ಮಾಣ ಆಗಬೇಕಾಗಿದೆ, ರಸ್ತೆಗಳು ಆಗಬೇಕಾಗಿದೆ. ಇಂತಹ ಕಾನೂನುಬದ್ಧ ವ್ಯವಸ್ಥೆಯ; ಒಂದು ಕಡೆ 200 ಮೀಟರ್ ಹೋಗಿದೆಯೆಂದು ನಿಮ್ಮ ಇಲಾಖೆಯೇ ವರದಿ ಕೊಡುತ್ತದೆ. ಇನ್ನೊಂದು ಕಡೆ ಬಹಳ ಯಶಸ್ವಿಯಾಗಿ ನಡೆಸುತ್ತಿದ್ದಾರೆ ಎಂದು ನಿಮ್ಮ squad ಹೇಳುತ್ತದೆ. ಬಹುಶಃ ಮಂಡ್ಯ ಜಿಲ್ಲೆಯಲ್ಲಿ ಅಷ್ಟೊಂದು ಉತ್ತಮವಾದ ಮತ್ತೊಂದು ಉದ್ಯಮ ಘಟಕ ಇಲ್ಲ. ಅವರು ಬಹಳ ಆಧುನಿಕವಾಗಿ, ಹೈಟೆಕ್ ಆಗಿ ಬಹಳ ಹಣವನ್ನು ಹೂಡಿಕೆ ಮಾಡಿಟ್ಟಿದ್ದಾರೆ. ಈಗ ಅದನ್ನು ತೆಗೆದರೆ, 21 ಕೋಟಿ ಸಾಲಕ್ಕೆ ಬಡ್ಡಿ ಕಟ್ಟುವುದು ಹೇಗೆ? ಆ ಮನುಷ್ಯ ಬದುಕುವುದು ಹೇಗೆ? ಅಕ್ಷರಶಃ ಆ ಮನುಷ್ಯ ಆತ್ಮಹತ್ಯೆಯ ಹಾದಿಯಲ್ಲಿದ್ದಾನೆ. ಇವತ್ತು ಮಾಜಿ ಪ್ರಧಾನಮಂತ್ರಿಯವರು ಅಲ್ಲಿ ಧರಣಿ ಮಾಡುತ್ತಾರೆ; ಏಕೆ ಹೇಳಬಾರದು? ನ್ಯಾಯಯುತವಾಗಿ ಇಲ್ಲದೇ ಇರುವವರು ಹೋಗುವುದಿಲ್ಲ; 100ಕ್ಕೆ 1000 ಭಾಗ ಅದು ಕಾನೂನುಬದ್ಧವಾಗಿರುವುದರಿಂದ; ಉಸ್ತುವಾರಿ ಸಚಿವರು ಅನುಮತಿ ಕೊಡಿ ಎಂದು ಜಿಲ್ಲಾಧಿಕಾರಿಯವರಿಗೆ ಹೇಳುತ್ತಾರೆ, ಆದರೆ ಅವರು ಅನುಮತಿ ಕೊಡುತ್ತಾ ಇಲ್ಲ. ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರು ಹೇಳಿದರೂ ಕೊಡುತ್ತಿಲ್ಲ. ಏನಿದರ ಅರ್ಥ? ನಾವು ಎಲ್ಲಿ ನಿಂತಿದ್ದೇವೆ? ನಾವು ನಾಗರೀಕ ರಾಜ್ಯದಲ್ಲಿದ್ದೇವೆಯೇ? ಒಂದು ಕಾನೂನುಬದ್ಧ ಸರ್ಕಾರದಲ್ಲಿದ್ದೇವೆಯೇ? ದಯಮಾಡಿ ಸಚಿವರು ಈ ಕೂಡಲೇ ಅವರಿಗೆ ನ್ಯಾಯ ಕೊಡಿಸಬೇಕೆಂದು, ಘೋಷಣೆ ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಂಡ್ಯ ಕ್ಷೇತ್ರದಲ್ಲಿ;

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಷ್ಟು ಹೊತ್ತಿನತನಕ ಹೇಳಿದರು, ಇದರಲ್ಲಿ ರಾಜಕಾರಣ ಬಿಟ್ಟು ಬೇರೆ ಏನೂ ಆಗಿಲ್ಲ. ಅಲ್ಲಿನ ಸಚಿವರಾದ ಮಾನ್ಯ ನಾರಾಯಣಗೌಡರು ಅವರು ಅಲ್ಲಿ ಮೊದಲಿಗೆ ಶಾಸಕರಾಗಿದ್ದಾಗ ದಿನಾಂಕ 17–9–2014ರಂದು ಒಂದು ಪತ್ರ ಬರೆದಿದ್ದಾರೆ. ಅದು ಹೀಗಿದೆ *"ಆಯುಕ್ತರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು. ಕೆ.ಆರ್. ಪೇಟೆ ತಾಲ್ಲೂಕು, ಚೀರನಹಳ್ಳಿ, ಶಿವಪುರ ಗ್ರಾಮದ ಸರ್ವೆ ನಂ.10ರಲ್ಲಿ ದಿನಾಂಕ 01–8–2008ರಲ್ಲಿ ಗಣಿ ಗುತ್ತಿಗೆ ಅರ್ಜಿಯನ್ನು ಪರಿಗಣಿಸಿ ಎಂ–ಸ್ಯಾಂಡ್ ಉತ್ಪಾದನೆ ಗಣಿ ಗುತ್ತಿಗೆಯನ್ನು ಮಂಜೂರು ಮಾಡಿಕೊಡುವ ಬಗ್ಗೆ; ಅನುಮತಿ ಕೋರಿ ದಿನಾಂಕ 11–5–2014 ರಂದು ಅರ್ಜಿ ಸಲ್ಲಿಸಿರುತ್ತಾರೆ. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಮತ ಕ್ಷೇತ್ರ ಕೆ.ಆರ್. ಪೇಟೆ ತಾಲ್ಲೂಕಿನ ಹರಳಹಳ್ಳಿ ಗ್ರಾಮದ ನಿವಾಸಿಯಾದ ಶ್ರೀ ಹೆಚ್.ಟಿ. ಮಂಜು ಬಿನ್ ತಿಮ್ಮೇಗೌಡ ಇವರು ನನಗೆ ತೀರ ಪರಿಚಿತರಾಗಿದ್ದು, ಇವರು ಶಿವಪುರ ಗ್ರಾಮದ ಸರ್ವೇ ನಂ.10ರಲ್ಲಿ ನಾಲ್ಕು ಎಕರೆ ಗಣಿ ಗುತ್ತಿಗೆಯನ್ನು ದಿನಾಂಕ 01–8–2012ರಂದು ಅರ್ಜಿ ಸಲ್ಲಿಸಿದ್ದರು. ಈಗಾಗಲೇ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ದೊರೆತಿದೆ. ದಿನಾಂಕ 10–5–2016ರಂದು ಎಂ.ಸ್ಯಾಂಡ್ ಉತ್ಪಾದನೆಗೆ ಜಿಲ್ಲಾ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿಯವರು ಮತ್ತು ಕಾರ್ಯದರ್ಶಿಗಳು, ಹಿರಿಯ ಭೂ ವಿಜ್ಞಾನಿ, ಗಣಿ ಇಲಾಖೆ, ಮಂಡ್ಯ ಹಾಗೂ ಉಪವಿಭಾಗಾಧಿಕಾರಿ, ಪಾಂಡವಪುರ ಇವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿ ಸಲ್ಲಿಸಿದ ದಿನಾಂಕ 01–8–2012ರಿಂದ ಗುತ್ತಿಗೆ ಅರ್ಜಿಯನ್ನು ಪರಿಗಣಿಸಿ ಗಣಿ ಗುತ್ತಿಗೆ ಮಾಡಿಕೊಟ್ಟು ನಮ್ಮ ತಾಲ್ಲೂಕಿನಲ್ಲಿ ಮರಳಿನ ಅಭಾವವಿರುವುದರಿಂದ ಕೃತಕ ಮರಳು ಉತ್ಪಾದನಾ ಘಟಕವನ್ನು ಸ್ಥಾಪನೆ ಮಾಡಿಕೊಟ್ಟು ಸಾರ್ವಜನಿಕರ ಕೆಲಸಗಳಿಗೆ ಅನುಕೂಲ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕಾಗಿ ತಮ್ಮಲ್ಲಿ ಕೋರುತ್ತೇನೆ"* ಈ ಪತ್ರಕ್ಕೆ ಸಂಬಂಧಿಸಿದ ದಾಖಲೆಗಳ ನಕಲು ಇಟ್ಟಿದ್ದೇನೆ ಎಂದು ಹೇಳಿದರು. ಮುಂದೆ, ಏನು ಮಾಡಿದರು ಎಂದರೆ, ರಾಜಕಾರಣದಲ್ಲಿ ಬದಲಾವಣೆಯಾದ ನಂತರ ದಿನಾಂಕ 23–2–2020ರಂದು ಶಾಸಕರಾದ ಡಾ॥ ನಾರಾಯಣಗೌಡರು ಈ ರೀತಿ ಪತ್ರ ಬರೆದಿದ್ದಾರೆ. *"ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೆ.ಆರ್. ಪೇಟೆ ತಾಲ್ಲೂಕಿನ ಶೀಳನೆರೆ ಹೋಬಳಿಯಲ್ಲಿ* M/s *T. J. Stone Crushing Industries ರವರು ಅಕ್ರಮವಾಗಿ ಮಂಜೂರಾಗಿರುವ ಸ್ಥಳವನ್ನು ಬಿಟ್ಟು ಅರಣ್ಯ ಇಲಾಖೆ ಜಾಗದಲ್ಲಿ ಜಲ್ಲಿ ಕ್ರಷರನ್ನು ನಡೆಸುತ್ತಿದ್ದಾರೆ. ಈ ವಿಷಯವಾಗಿ ಹಿಂದೆ ಸಿ.ಬಿ.ಐ/ಎ.ಸಿ.ಬಿ., ತನಿಖೆಗೆ ನಡೆಸುವಂತೆ ಅಂದಿನ ಜಿಲ್ಲಾಧಿಕಾರಿಗಳು ಆದೇಶಿಸಿದ್ದರು. ಈವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ರಾಜಕೀಯ ಪ್ರಭಾವ ಬೀರಿ ಹಾಗೂ ಹಣದ ಬಲವನ್ನು ಪ್ರದರ್ಶಿಸಿ ಇವರು ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಇದರಿಂದ ಅಲ್ಲಿನ ಸ್ಥಳೀಯವಾಗಿ ಸಾರ್ವಜನಿಕರಿಗೆ, ಜನ ಜಾನುವಾರುಗಳಿಗೆ ತೊಂದರೆಯಾಗುತ್ತಿದ್ದು, ಇತಿಹಾಸ ಪ್ರಸಿದ್ಧವಾದ ಸಾಹುಕಾರ್ ಚನ್ನಯ್ಯರವರ ನಾಲೆಯಿದು. ಇವರು ಸ್ಫೋಟಕ ವಸ್ತುಗಳನ್ನು ಗಣಿಗಾರಿಕೆಗೆ ಉಪಯೋಗಿಸಿ ನಾಲೆಗಳೆಲ್ಲ ಮುಚ್ಚುವ ಸ್ಥಿತಿಗೆ ಬಂದಿರುತ್ತದೆ. ಈ ಬಗ್ಗೆ ಸಾರ್ವಜನಿಕರಿಂದ ಅನೇಕ ದೂರುಗಳು ಬಂದಿದ್ದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಅಲ್ಲದೆ ವ್ಯವಸಾಯ ಮಾಡುವ ರೈತರಿಗೆ ನೀರು ಸಿಗದೆ*

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*ತೊಂದರೆಯಾಗಿರುತ್ತದೆ. ಈ ಪರವಾನಗಿಯನ್ನು ಕೂಡಲೇ ರದ್ದುಪಡಿಸುವ ಬಗ್ಗೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ತಮ್ಮನ್ನು ಕೋರುತ್ತೇನೆ"* ಎಂದು ಪತ್ರ ಬರೆದರು. ಇದೇ ನಾರಾಯಣಗೌಡರು ನಮ್ಮ ಪಕ್ಷದಲ್ಲಿದ್ದಾಗ 'ಮಂಜು' ಎನ್ನುವವರು ಅವರ ಶಿಷ್ಯರಾಗಿದ್ದರು. 'ಮಂಜು'ರವರೇ ಚುನಾವಣೆಗೆ ನಿಲ್ಲಬೇಕಾಗಿತ್ತು. ಅವರನ್ನೇ ಚುನಾವಣೆಗೆ ನಿಲ್ಲಿಸುವುದಕ್ಕೆ ಮಾಡಿದರು, ಅವರಿಗೆಲ್ಲಾ ಬೆಂಬಲ ಕೊಟ್ಟರು ನಂತರ ಮುಂಬೈಗೆ ಹೋಗಿ ಇವರನ್ನು ಕರೆದುಕೊಂಡು ಬಂದರು. ಎಲ್ಲಾ ಮಾಡಿದರು, ಮಾನ್ಯ ನಾರಾಯಣಗೌಡರು 'ಮಂಜು'ಗೆ ಬಿ.ಜೆ.ಪಿ.ಗೆ ಬರುವಂತೆ ಕರೆದರು ಅವರು ಆ ಪಕ್ಷಕ್ಕೆ ಹೋಗಲಿಲ್ಲ. ಸುತ್ತಿ ಬಳಸಿ ಹೇಳುವುದಾದರೆ ಇದು ರಾಜಕಾರಣ. ಮಂತ್ರಿಯಾದ ನಂತರ ಅಧಿಕಾರ ದುರುಪಯೋಗ ಮಾಡಿಕೊಂಡರು ಅವರಿಗೆ 15 ಕೋಟಿ, 11 ಕೋಟಿ ರೂಪಾಯಿಗಳನ್ನು ದಂಡ ಹಾಕಿದರು. ಇದನ್ನು ಈ ಜಗತ್ತಿನಲ್ಲಿಯೇ ನಾನು ಎಲ್ಲಿಯೂ ನೋಡಿಲ್ಲ. ಇದು ರಾಜಕಾರಣವಾಗಿದೆ, ದಯಮಾಡಿ, ಸರ್ಕಾರವು; ನೀವು ಏನೇನೋ ಮಾಡಿದ್ದೀರಿ, ಈಗ ನಿಮ್ಮ ಸರ್ಕಾರ ಬಂದಿದೆ, ನಿಮ್ಮ ಸರ್ಕಾರ ಸ್ವಲ್ಪ ಸರಿಯಾಗಿ ನಡೆದುಕೊಳ್ಳಲಿ ಎಂದು ಹೇಳುತ್ತೇನೆ. ಆ ಹಿನ್ನೆಲೆಯಲ್ಲಿ;

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಬಸವರಾಜ ಹೊರಟ್ಟಿಯವರೇ, ಸರಿಯಾಗಿ ನಡೆದುಕೊಳ್ಳುತ್ತೇವೆಂದೇ 15 ಜನರೊಳಗೆ 12 ಜನರನ್ನು ನಮಗೆ ಆರಿಸಿ ಕಳುಹಿಸಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಅದರ ಕತೆಯನ್ನು ಹೇಳುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು):–** ಯಾವ ರೀತಿ ಆರಿಸಿದ್ದಾರೆ ಎಂಬುದನ್ನು ಹೇಳಿ ನೋಡೋಣ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ನಾರಾಯಣಸ್ವಾಮಿಯವರೇ, ವಿಷಯಾಂತರ ಆಗುವುದು ಬೇಡ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಕಾಂಗ್ರೆಸ್, ಜೆ.ಡಿ(ಎಸ್) ಸಮ್ಮಿಶ್ರ ಸರ್ಕಾರ ಇತ್ತು. ಬಿ.ಜೆ.ಪಿ ಮತ್ತು ಜೆ.ಡಿ(ಎಸ್) ಸಮ್ಮಿಶ್ರ ಸರ್ಕಾರವೂ ಇತ್ತು. ಈಗ ಮೂರು ಪಕ್ಷಗಳ ಸಮ್ಮಿಶ್ರ ಸರ್ಕಾರವಿದೆ, ಅಲ್ಲಿ ಎಲ್ಲಾ ನಮ್ಮವರೇ ಇದ್ದಾರೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಹಾಗಿದ್ದಾಗ ರಾಜಕೀಯ ದುರುದ್ದೇಶ ಹೇಗಾಗುತ್ತದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ತಪ್ಪು ಮಾಡಿದಾಗ ನಾವು ಕಿವಿಯನ್ನು ಹಿಂಡಬೇಕಾಗುತ್ತದೆ. ಸುಮ್ಮನೇ ಹೇಳುವುದು ಬೇಡ, ತಾವು ಈಗ ಮಂತ್ರಿಯಾಗಿದ್ದೀರಿ. ನಾನು ಹೇಳುವುದೇನೆಂದರೆ, ಇದು ಕೇವಲ ರಾಜಕೀಯವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಗಳು ಹೋಗುತ್ತವೆ, ಬರುತ್ತವೆ. ಅಧಿಕಾರ ದುರುಪಯೋಗ ಮಾಡಿಕೊಳ್ಳುವುದು ಸರಿಯಲ್ಲ, ಕೇವಲ ಮಂತ್ರಿಗಳ ಕುಮ್ಮಕ್ಕಿನಿಂದ, ರಾಜಕಾರಣದಿಂದ ಆಗಿದೆ. ಒಬ್ಬ ಮನುಷ್ಯ 11 ಕೋಟಿ, 15 ಕೋಟಿ ಕೊಟ್ಟಿರುವುದು ಜಗತ್ತಿನಲ್ಲಿ ಎಲ್ಲಾದರೂ ಇದೆಯೇ? ಆದ್ದರಿಂದ, ತಕ್ಷಣವೇ ಸರ್ಕಾರ ಕ್ರಮ ತೆಗೆದುಕೊಂಡು ನ್ಯಾಯವಾಗಿ ಮಾಡುವವರಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಪುನರಾವರ್ತನೆ ಮಾಡುವುದು ಬೇಡ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಷ್ಟೊಂದು ಗಂಭೀರವಾಗಿ ಚರ್ಚೆಯಾಗುತ್ತಿದೆ, ಆಡಳಿತ ಪಕ್ಷದಲ್ಲಿ ಒಬ್ಬರೇ ಮಂತ್ರಿ ಕುಳಿತಿದ್ದಾರೆ. ಆಡಳಿತ ಪಕ್ಷದ ನಾಯಕರಿಲ್ಲ, ಬೇರೆ ಮಂತ್ರಿಗಳಿಲ್ಲ, ಯಾರು ಕೂಡ ಇಲ್ಲ. ನಾವು ಇಲ್ಲಿ ಯಾರಿಗೆ ಭಾಷಣ ಮಾಡಬೇಕು? ಈ ವ್ಯವಸ್ಥೆ ಸರಿಯಲ್ಲ. ಎಷ್ಟು ನಿರ್ಲಕ್ಷ್ಯತನ ಇದೆ ಎನ್ನುವುದನ್ನು ಸ್ವಲ್ಪ ನೋಡಿ.

**ಸಭಾಪತಿಯವರು:–** ಈಗ ಮಾನ್ಯ ಭೋಜೇಗೌಡರು;

**ಶ್ರೀ ಎಂ. ನಾರಾಯಣಸ್ವಾಮಿ:–** ಯಾರಿಗೆ ಮಾತನಾಡಬೇಕು? ಮುಖ್ಯ ಸಚೇತಕರು ಇಲ್ಲ, ಆಡಳಿತಪಕ್ಷದ ನಾಯಕರು ಇಲ್ಲ, ಸಚಿವರು ಇಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಇದರಲ್ಲಿ ಯಾವ ವಿಚಾರವನ್ನೂ ರಿಪೀಟ್ ಮಾಡುವುದಿಲ್ಲ. Relevant portion ಹಾಗೂ ಕಾನೂನಿನಲ್ಲಿ ಏನಿದೆ ಎನ್ನುವ ವಿಚಾರವನ್ನು ಮಾತ್ರ ಹೇಳುತ್ತೇನೆ. ಮಾನ್ಯ ಸಚಿವರು ಕೂಡ ತಿಳಿದುಕೊಳ್ಳಬೇಕು, ನಮ್ಮ ಅಧಿಕಾರಿಗಳು ಹೇಗಿದ್ದಾರೆ ಎಂದರೆ, ಸರ್ಕಾರ ನಡೆಸುವಂತಹವರು ಮುಖ್ಯಮಂತ್ರಿಗಳನ್ನು ಬಿಟ್ಟರೆ ನಂತರ ಇರುವಂತಹ ಅಧಿಕಾರಿ ವಲಯದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ. ಮುಖ್ಯ ಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಕೊಟ್ಟಾಗ, ದಯಮಾಡಿ ತಾವು ಗಮನಹರಿಸಬೇಕು, ಅಧಿಕಾರಿಗಳು ಎಷ್ಟರ ಮಟ್ಟಿಗೆ ಒತ್ತಡದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ ಎನ್ನುವ ವಿಚಾರಕ್ಕೆ; ನಾವೇನಾದರೂ ಮುಖ್ಯ ಕಾರ್ಯದರ್ಶಿಯವರಿಗೆ ಒಂದು ಪತ್ರ ಕೊಟ್ಟರೆ 'Call for a report' ಎಂದಾದರೂ ಹೇಳಬೇಕು, 'get the

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

opinion' ಎಂದು ಹೇಳಬೇಕು ಏನಿಲ್ಲ straight away, ಇಲ್ಲಿ 'ಕೂಡಲೇ ಗಣಿಗಾರಿಕೆಯನ್ನು ನಿಲ್ಲಿಸುವುದು' ಎಂಬ ಮುಖ್ಯ ಕಾರ್ಯದರ್ಶಿಯವರ ಒಕ್ಕಣೆ ಇದೆ. On what basis? Is there any document produced by the Complainant? Not even a single document has been produced. Based on a mere letter, the Chief Secretary of the Government has written: "Forthwith go and stop the quarry.' How much pressure is there on the Chief Secretary, please imagine. After two Court Judgments, the Chief Secretary is writing this. ಎಲ್ಲಿದ್ದೇವೆ ಸ್ವಾಮಿ ನಾವು? ಸರ್ಕಾರ ನಡೆಸುವಂತಹ ಒಬ್ಬ ಮುಖ್ಯ ಕಾರ್ಯದರ್ಶಿಗಳು ಮಂತ್ರಿಗಳು ಒಂದು ಪತ್ರ ಕೊಟ್ಟರೆ ಈ ರೀತಿ ಬರೆಯುತ್ತಾರೆ ಎಂದರೆ ಒಬ್ಬ ಸಾಮಾನ್ಯನ ಪರಿಸ್ಥಿತಿ ಏನಾಗಬೇಕು? ಎರಡು ತೀರ್ಪುಗಳಿವೆ. ದಿನಾಂಕ 24–9–2019, 27–11–2019, 17–1–2000 ಈ ದಿನಾಂಕಗಳಂದು ಮೂರು ಹೈಕೋರ್ಟ್ ತೀರ್ಪುಗಳು ಮುಖ್ಯ ನ್ಯಾಯಮೂರ್ತಿಯವರ ಪೀಠದಿಂದ ಬರುತ್ತವೆ. I will only go to the relevant portion of the Judgment. ನಾನು ಹೇಳುತ್ತೇನೆ. ಆ ತೀರ್ಪಿನಲ್ಲಿ ( Order dated 24.09.2019 in Writ Petition No.40082/2019 (GM-MM-S) & 40993-40994/2019 ) ಆದೇಶದಲ್ಲಿ ಏನು ಬರೆಯುತ್ತಾರೆಂದರೆ, *"We also make it clear that on the basis of two documents, the quarrying activities on the basis of the quarry lease at Annexure G shall not be prevented."* ಇದನ್ನು ಸರ್ಕಾರಕ್ಕೆ ಹೇಳುವುದು *'shall not be prevented,* ಯಾವುದೇ ಕಾರಣಕ್ಕೂ ತಡೆಯಬಾರದು ಎಂದು ದಿನಾಂಕ 24.09.2019 ರ ತೀರ್ಪಿನಲ್ಲಿ ಹೇಳುತ್ತಾರೆ. Again there is one more judgment. ಇದೆಲ್ಲಾ ಆದ ಮೇಲೆ Task Force ದಂಡ ಹಾಕಿದರು ಎಂದು ಹೇಳಿದಾಗ ಸಾಮಾನ್ಯ ಜನರ ಪರಿಸ್ಥಿತಿ ಏನಾಗಬೇಕು?

(ಮುಂದು)

(641) 20–03–2020/ 04–10/ ಕೆಹೆಚ್–ಎಂಡಿ
**ಶ್ರೀ ಭೋಜೇಗೌಡ (ಮುಂದು):–**

ಆ ಪರಿಸ್ಥಿತಿಯ ಮೇಲೆ, again he went to the High Court. ಆಗ ಏನು ಹೇಳುತ್ತಾರೆ ಎಂದರೆ, again in one more order we find that the District Task Force Committee has no power to take any such action to stop crushing activities. ಎಂದು ಹೇಳುತ್ತಾರೆ. No power ಉಚ್ಚ ನ್ಯಾಯಾಲಯ ಯಾರಿಗೆ ಹೇಳಿದೆ ಎಂದರೆ, District Task Force Committee ಹೇಳಿದೆ. District Task Force Committee ಗೆ ಹೋಗಿ ನಿಲ್ಲಿಸುತ್ತಾರೆ. ಈಗ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವೆಲ್ಲಿದ್ದೇವೆ, ಸಂವಿಧಾನದ ಬಗ್ಗೆ ಈಗಾಗಲೇ 8 ದಿವಸಗಳ ಕಾಲ ಚರ್ಚೆ ಮಾಡಿದ್ದೇವೆ. ಮತ್ತೆ ಈ ಎರಡು ಜಡ್ಜ್‌ಮೆಂಟ್‌ಗಳು ಆದ ಮೇಲೆ ಮುಖ್ಯ ಕಾರ್ಯದರ್ಶಿಯವರು ಬರೆಯುತ್ತಾರೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಆ ಪತ್ರಗಳನ್ನೆಲ್ಲಾ ಓದಿದ್ದಾರೆ. ಮಾನ್ಯ ಸಚಿವರು ಯಾವ ಮಟ್ಟದಲ್ಲಿ ಪತ್ರವನ್ನು ಬರೆದರು, ಯಾವ ರೀತಿಯಲ್ಲಿ ಕೊಟ್ಟರು. ಒಂದು ಸಾರಿ ಹೇಗೆ ಮಾಡಿದರು, I don't want to comment on that. ಇವತ್ತಿನ ದಿವಸ ಉಚ್ಚ ನ್ಯಾಯಾಲಯದ ಆದೇಶಗಳಿಗೆ ಬೆಲೆ ಇಲ್ಲದಂತಾದರೆ, ಅಧಿಕಾರಿ ವರ್ಗದವರ ಮೇಲೆ ಇಷ್ಟೊಂದು ಒತ್ತಡವನ್ನು ಹಾಕಿ ಕೆಲಸ ಆಗುತ್ತಿದೆ ಎಂದರೆ, ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ. ಇವತ್ತು 17ನೇ ಆದೇಶದಲ್ಲಿ ಹೇಳುತ್ತಾರೆ. ಎರಡು ಆದೇಶಗಳು ಆದಮೇಲೆ ಮುಖ್ಯ ಕಾರ್ಯದರ್ಶಿಯವರು ಈ ರೀತಿ ಬರೆಯುತ್ತಾರೆ ಎಂದು ಅರ್ಜಿದಾರರು ನ್ಯಾಯಾಲಯಕ್ಕೆ ಹೋದರೆ, ನ್ಯಾಯಾಲಯದಲ್ಲಿ ಏನು ಹೇಳುತ್ತಾರೆ ಎಂದರೆ,

> *"...Therefore, the impugned order cannot be sustained and the same will have to be set aside and the petitioner cannot be prevented from carrying on the activities on the basis of the license granted (Annexure-C"..."*

This license has been given by our State Government. Forest and Revenue department clearance is required for this. ಸದನಕ್ಕೆ ಇವತ್ತು ಕಂದಾಯ ಸಚಿವರು ಹಾಜರಾಗಿಲ್ಲ. ದಯಮಾಡಿ, ಕಂದಾಯ ಸಚಿವರು ಇಲ್ಲಿಗೆ ಬರಬೇಕಾಗುತ್ತದೆ. ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಕೆಲಸವನ್ನು ಮಾಡಿರುವಂತಹದ್ದು.

*"... so long as the same is in subsistence. Accordingly, we pass the following order:*

*(i) The impugned order dated 31st December 2019(Annexure-A) is set aside only on the ground that the respondents had no power to issue such an order.*

*(ii) This order will not prevent he respondents from initiating proceedings in accordance with law.*

ಸರ್ಕಾರಕ್ಕೆ ಉಪಲೋಕಾಯುಕ್ತರು ಹೇಳಿರುವಂತಹದ್ದು, ಇಂತಹ ಆದೇಶಗಳು ಇದ್ದಾಗಲೂ ಕೂಡ ದಯಮಾಡಿ, ಇದೆಲ್ಲಾ ಗೊತ್ತಿದ್ದರೂ ಕೂಡ ಮಾನ್ಯ ಸಚಿವರು ಇಲ್ಲಿ ಕುಳಿತುಕೊಂಡಿದ್ದೀರಿ. ಈ ರೀತಿಯ 3 ಉಚ್ಚ ನ್ಯಾಯಾಲಯದ ಆದೇಶಗಳು ಇದ್ದರೂ ಕೂಡ, ಆ ಕಂದಾಯ ಇಲಾಖೆಯ ಜಿಲ್ಲಾಧಿಕಾರಿಯವರು ನಡವಳಿಕೆ ಯಾವ ರೀತಿಯಲ್ಲಿ ಇದೆ, ದಯಮಾಡಿ, ಇದರ ಬಗ್ಗೆ ಮಾನ್ಯ ಸಚಿವರು ಕೂಡಲೇ ಗಮನಹರಿಸಬೇಕು. I want to force... ಕಂದಾಯ ಇಲಾಖೆಯ ಜಿಲ್ಲಾಧಿಕಾರಿಯವರನ್ನು ಕೂಡಲೇ ಅಮಾನತುಗೊಳಿಸಬೇಕೆಂದು ಮತ್ತು forthwith ಅಲ್ಲಿಂದ ಎತ್ತಂಗಡಿ ಮಾಡಬೇಕೆಂದು ಈ ವಿಚಾರದಲ್ಲಿ ನಾನು ಒತ್ತಾಯಿಸುತ್ತೇನೆ. ನಾನು ಇಲ್ಲಿ ಯಾರನ್ನೂ ಕೂಡ ಮುಲಾಜು ನೋಡಬೇಡಿ. ನಾನು ಯಾರದು ರಕ್ಷಣ ಮತ್ತು ರಾಜಕೀಯದ ಬಗ್ಗೆ ಮಾತನಾಡುತ್ತಿಲ್ಲ. ಮಾನ್ಯ ಮಂತ್ರಿಯಾಗಿ ಇದ್ದುಕೊಂಡು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

double standard ಯಾವ ರೀತಿ ಮಾಡುತ್ತಾರೆ. ನಮ್ಮ ಅಧಿಕಾರ ಇದ್ದಾಗ ಯಾವ ರೀತಿ ಮಾಡುತ್ತಾರೆ. ನಮ್ಮ ಅಧಿಕಾರಿ ಇಲ್ಲದಿದ್ದಾಗ ಯಾವ ರೀತಿ ಮಾಡುತ್ತಾರೆ ಎನ್ನುವ ವಿಚಾರಗಳ ಬಗ್ಗೆ ಸ್ಪಷ್ಟವಾಗಿ ಪತ್ರಗಳನ್ನು ಕೊಟ್ಟಿದ್ದಾರೆ. ಹಾಗಾಗಿ ಮಾನ್ಯ ಮಂತ್ರಿಗಳ behaviour ಬಗ್ಗೆ ನಾನು comment ಮಾಡುವುದಿಲ್ಲ. ಸದನದಲ್ಲಿ ಚರ್ಚೆಯಾಗುವ ವಿಚಾರಗಳ ಬಗ್ಗೆ ಗಮನಿಸಲಿ. ಕೂಡಲೇ ಕಂದಾಯ ಇಲಾಖೆಯ ಜಿಲ್ಲಾಧಿಕಾರಿಯವರನ್ನು ಕೂಡಲೇ ಅಮಾನತುಗೊಳಿಸಬೇಕು ಮತ್ತು ಎತ್ತಂಗಡಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ Crusher ಅನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಮಾನ್ಯ ಟಿ.ಎ.ಶರವಣರವರೇ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ ಮಾನ್ಯ ಟಿ.ಎ.ಶರವಣರವರೇ ಮಾತನಾಡಲಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಟಿ.ಎ.ಶರವಣರವರೇ ಮಾತನಾಡಿ. ನಾನು ನಂತರ ಮಾತನಾಡುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರು ಸ್ವಲ್ಪ ಸ್ವಲ್ಪ ಮಾತನಾಡಿ, ಇಲ್ಲವೆಂದರೆ ಯಾರು ಮಾತನಾಡಿಲ್ಲವೆಂದರೆ ನೋಟ್ ಆಗುತ್ತದೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆರವರೇ ಹಾಸ್ಯ ಮಾಡಬೇಡಿ. ನಾವು ಗಂಭೀರವಾಗಿ burning issue ಮಾತನಾಡುತ್ತಿದ್ದೇವೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಟಿ.ಎ.ಶರವಣರವರೇ ನಾನು ಎಲ್ಲರೂ ಮಾತನಾಡಿ ಎಂದು ಹೇಳಿದ್ದಷ್ಟೇ. ಇದರ ಬಗ್ಗೆ ಜಗತ್ತಿಗೆ ಗೊತ್ತು.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ 3 ದಿನಗಳಿಂದ ಕೇಳಿಕೊಂಡಿದ್ದೇವೆ. ಇವತ್ತು ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಇದರ ಜೊತೆಗೆ ರಾಜಕೀಯ ಎನ್ನುವುದು ಯಾರಿಗೂ ಶಾಶ್ವತ ಅಲ್ಲ. ಚುನಾವಣೆ ಬಂದಾಗ ನಾವೆಲ್ಲಾ ರಾಜಕೀಯವನ್ನು ಮಾಡೋಣ. ಬೇರೆ ಸಂದರ್ಭದಲ್ಲಿ mandate ಅನ್ನು ಜನರು ಕೊಟ್ಟಮೇಲೆ ಒಂದು ಸರ್ಕಾರ ರಚನೆಯಾದ ಮೇಲೆ ನ್ಯಾಯಬದ್ಧವಾಗಿ ಜನರಿಗೋಸ್ಕರ, ಜನರಿಗಾಗಿ ಕೆಲಸ ಮಾಡುವಂತಹ ವ್ಯವಸ್ಥೆಯಲ್ಲಿ ನಾವೆಲ್ಲಾ ಇದ್ದೇವೆ. ಮಾನ್ಯ ಸದಸ್ಯರಾದ ಎಸ್.ಎಲ್.ಭೋಜೇಗೌಡರವರು ಆಗಲೇ ಮಾತನಾಡುವಾಗ ಸಂವಿಧಾನದ ಬಗ್ಗೆ 8 ದಿವಸಗಳಿಂದ 37 ಮಾನ್ಯ ಸದಸ್ಯರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾತನಾಡಿದ್ದಾರೆ ಎಂದು ಬಹಳ ಚೆನ್ನಾಗಿ ಹೇಳಿದರು. ಇದರ ಬಗ್ಗೆ ತಾವು ಕೂಡ ಹೇಳಿದ್ದಿರಿ. ಆ ವಿಚಾರದಲ್ಲಿ ನಮಗೆ ಬಹಳ ಖುಷಿ ಇದೆ. ಆದರೆ, ಇವತ್ತು ನ್ಯಾಯಬದ್ಧವಾಗಿ, ಕಾನೂನುಬದ್ಧವಾಗಿ ಅದರಲ್ಲಿ ಏನೇನು ಸರ್ಕಾರದ ಮಾನದಂಡಗಳಿವೆ, ಅದೆಲ್ಲವನ್ನೂ ಕೂಡ ಅನುಸರಿಸಿಕೊಂಡು ಮಾಡುವಂತಹ ಒಂದು Crusher ಅನ್ನು ಉದ್ದಿಮೆಗಳಲ್ಲಿ ಪಾಲನೆ ಮಾಡಿಕೊಂಡು, ಇದರ ಜೊತೆಗೆ ನ್ಯಾಯಾಲಯವು ಏನು ಆದೇಶವನ್ನು ಕೊಟ್ಟಿದೆ. ಎಲ್ಲವನ್ನೂ ಕೂಡ ಪಾಲನೆ ಮಾಡಿಕೊಂಡು, ಇವತ್ತು ಯಾವ ಉದ್ದೇಶಕ್ಕೋಸ್ಕರ ಅದನ್ನು ನಿಲ್ಲಿಸಿದ್ದಾರೆ ಎಂದು ಸರ್ಕಾರ ನಮಗೆ ಹೇಳಬೇಕಾಗುತ್ತದೆ. ಎರಡನೆಯದಾಗಿ, ಇದೇ ಮಾನ್ಯ ಸಚಿವರು ನಮ್ಮ ಪಕ್ಷದಲ್ಲಿದ್ದಾಗ recommend ಅನ್ನು ಪ್ರಾರಂಭ ಮಾಡುವುದಕ್ಕೆ ಅವರೇ ಪತ್ರವನ್ನು ಬರೆಯುತ್ತಾರೆ. ಅವರೇ ಶಿಫಾರಸ್ಸು ಮಾಡುತ್ತಾರೆ. ಉದ್ಘಾಟನೆಯನ್ನು ಕೂಡ ಮಾಡಿಸುತ್ತಾರೆ. ಈಗ ಪಕ್ಷ ಬದಲಾವಣೆಯಾದ ಮೇಲೆ ಯಾವ ಉದ್ದೇಶಕ್ಕೋಸ್ಕರ ಇಷ್ಟೊಂದು ಒತ್ತಡ ಹಾಕಿ, ದ್ವೇಷದ ರಾಜಕಾರಣ ಏಕೆ ಮಾಡುತ್ತಾರೆ ಎನ್ನುವುದನ್ನು ಇವತ್ತಿವ ದಿವಸ ಜನಜಾಗೃತಿಯಾಗುತ್ತಿರುವಂತಹದ್ದು. ಎಲ್ಲಾ ಮಾಹಿತಿಗಳನ್ನು ನಾವು ಇಟ್ಟುಕೊಂಡು ಮಾತನಾಡುತ್ತಿದ್ದೇವೆ. ದಯಮಾಡಿ, ಮಾನ್ಯ ಸಚಿವರು ಇದಕ್ಕೆ ನ್ಯಾಯ ಕೊಡಿಸದೇ ಹೋದರೆ ನಾವು ಯಾವ ಮಟ್ಟಕ್ಕೆ ಬೇಕಾದರೂ ಹೋರಾಟಕ್ಕೆ ಸಿದ್ಧರಾಗುತ್ತೇವೆ. ಇದರ ಬಗ್ಗೆ ನಮ್ಮ ಪಕ್ಷದ ಮಾನ್ಯ ಸದಸ್ಯರೆಲ್ಲಾ ಮಾತನಾಡಿದ್ದೇವೆ. ದಯಮಾಡಿ, ತಮಗೇನಾದರೂ ವಿಶ್ವಾಸವಿಲ್ಲವೆಂದರೆ, ತಾವು ಒಂದು ಕೆಲಸವನ್ನು ಮಾಡಿ, ತಮ್ಮ ಸರ್ಕಾರದ ಮಂಡ್ಯ ಉಸ್ತುವಾರಿ ಸಚಿವರು ಅವರೇ ಬಂದರೆ . . .

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಟಿ.ಎ.ಶರವಣರವರೇ ಮಾನ್ಯ ಮಂತ್ರಿಗಳು ಏನು ಮಾಡಬೇಕೆಂಬುದರ ಬಗ್ಗೆ ತಾವೇ ಡಿಕ್ಲೈರ್ ಮಾಡುತ್ತೀರಾ.

**ಶ್ರೀ ಟಿ.ಎ.ಶರವಣ:–** ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆ ಒಂದು ನಿಮಿಷ. ಮಂಡ್ಯ ಉಸ್ತುವಾರಿ ಸಚಿವರು, ನಮ್ಮ ಪಕ್ಷದ ಒಬ್ಬ ಹಿರಿಯ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ ಒಬ್ಬ ಸದಸ್ಯರು ಈ ಮೂರು ಸದಸ್ಯರನ್ನು ಕರೆದುಕೊಂಡು ಆ ಪ್ರದೇಶಕ್ಕೆ ಭೇಟಿ ಕೊಡಿ. ಅಲ್ಲಿ ಏನೇನು ತಪ್ಪು ನಡೆದಿದೆ ಎಂಬುದನ್ನು ತಾವೇ ಕಣ್ಣಾರೆ ನೋಡಿ. ನಂತರ ವರದಿಯನ್ನು ಕೊಡಿ. ಆ ವರದಿಯನ್ನು ಇನ್ನು 2 ದಿವಸಗಳಲ್ಲಿ ಕೊಡಬೇಕು. ಮಾನ್ಯ ಸಭಾಪತಿಯವರಲ್ಲಿ ನಾನು ಮನವಿ ಮಾಡುವುದೇನೆಂದರೆ, ಸೋಮವಾರದ ಒಳಗೆ ಈ ವರದಿಯನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕು. ಇದರಲ್ಲಿ ಏನಾದರೂ ತಪ್ಪಾಗಿದ್ದರೆ ಶಿಕ್ಷೆಯನ್ನು ಕೊಡಿ. ಇದರಲ್ಲಿ ಅಮಾಯಕರಿಗೆ ಶಿಕ್ಷೆ ಕೊಡುವಂತಹ ಕೆಲಸ ಆಗಬಾರದು. ಇದು ನಿಜವಾಗಿಯೂ ಕೂಡ ಅತ್ಯಂತ ಖಂಡನೀಯ. ಇದು ದ್ವೇಷದ ರಾಜಕಾರಣವನ್ನು ಸಾಧಿಸುವುದು ಅಲ್ಲ. ಇದರಲ್ಲಿ ರಾಜಕೀಯ ಮಾಡುವುದಕ್ಕೆ ಹೋಗಬೇಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸದನ ಮಧ್ಯಾಹ್ನ ಮುಗಿಯುತ್ತದೆ ಎಂದುಕೊಂಡಿದ್ದೆವು. ಆದರೂ ಪರವಾಗಿಲ್ಲ. ಇದಕ್ಕೆ ಮಾನ್ಯ ಸಚಿವರು ಬೇಡವೇ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಇವರು ಏಕೆ ಹೀಗೆ ಮಾಡುತ್ತಾರೆ?

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಇವತ್ತು ಮೂರು ಜನ ಮಾನ್ಯ ಸಚಿವರು ಸದನದಲ್ಲಿ ಇರಬೇಕು. ಮಾನ್ಯ ಉಪ ಮುಖ್ಯಮಂತ್ರಿಯಾದ ಗೋವಿಂದ ಎಂ.ಕಾರಜೋಳರವರು ಸದನದಲ್ಲಿ ಇರಬೇಕಾಗಿತ್ತು. ಅವರು ಸದನದಲ್ಲಿ ಹಾಜರಾಗಿಲ್ಲ. ತಮ್ಮ ಪಕ್ಷದ ನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಸದನದಲ್ಲಿ ಇಲ್ಲ. ಮಾನ್ಯ ಸಚಿವರಾದ ಅರಬೈಲು ಹೆಬ್ಬಾರ ಶಿವರಾಮ್ ರವರು ಸದನದಲ್ಲಿ ಇಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಕರೋನಾ ಬಗ್ಗೆ Video Conference ಇದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಎನ್.ರವಿಕುಮಾರ್‌ರವರೇ, ಕರೋನಾ Video Conference ಮಾನ್ಯ ಸಚಿವರಾದ ಅರಬೈಲು ಹೆಬ್ಬಾರ ಶಿವರಾಮ್‌ರವರಿಗೆ ಇದೆಯೋ, ಅವರಿಗೇನೂ ಇಲ್ಲ ಸ್ವಾಮಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಹೆಚ್.ಎಂ.ರೇವಣ್ಣರವರೇ, ಮಾನ್ಯ ಸಚಿವರಾದ ಅರಬೈಲು ಹೆಬ್ಬಾರ ಶಿವರಾಮ್‌ರವರಿಗೆ Video Conference ಇಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಎನ್.ರವಿಕುಮಾರ್‌ರವರೇ, ಮಾನ್ಯ ಸಚಿವರಾದ ಅರಬೈಲು ಹೆಬ್ಬಾರ ಶಿವರಾಮ್‌ರವರಿಗೆ ಮತ್ತು ಮಾನ್ಯ ಉಪಮುಖ್ಯಮಂತ್ರಿಯವರಾದ ಗೋವಿಂದ ಎಂ.ಕಾರಜೋಳರವರಿಗೂ ಸಹ ವೀಡಿಯೋ ಕಾನ್ಫರೆನ್ಸ್ ಇಲ್ಲ. ಈ ಪಟ್ಟಿಯಲ್ಲಿ ಯಾರಿದ್ದಾರೆ ಎಂಬುದು ನಮಗೆ ಗೊತ್ತಿದೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಹೆಚ್.ಎಂ.ರೇವಣ್ಣರವರೇ, ಇಬ್ಬರು ಮಾನ್ಯ ಉಪ ಮುಖ್ಯಮಂತ್ರಿಯವರು . . .

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಎನ್.ರವಿಕುಮಾರ್‌ರವರೇ, ನೀವು ಏಕೆ ಉತ್ತರವನ್ನು ಕೊಡುತ್ತೀರಿ. ಈ ರೀತಿ ಮಾಡಿ ಈಗಾಗಲೇ ತಗಲು ಹಾಕಿಕೊಂಡಿದ್ದೀರಾ, ಅಧಿಕಾರಿಗಳಾದ ಶ್ರೀ ಎ.ಬಿ.ಇಬ್ರಾಹಿಂ, ಸರ್ಕಾರದ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯವರನ್ನು ನಾನು ಮಧ್ಯಾಹ್ನದ ಮೇಲೆ ನೋಡುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿಗಳ ಗ್ಯಾಲರಿಯಲ್ಲಿ ಶ್ರೀ ಜಗದೀಶ್‌ರವರು ಇರುವುದು ಕಾಣಿಸುತ್ತಿದೆ. ಈ ಸದನವನ್ನು ನಡೆಸಬೇಕೇ ಅಥವಾ ಬೇಡವೇ, ಇದು ಯಾರಿಗಾಗಿ ಮಾಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರೇವಣ್ಣನವರೇ, ನಾನು ಸದನವನ್ನು ಮಂದುವರಿಸಲೇ,

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾವು ಏನು ಮಾಡಬೇಕೆಂದು ತಾವೇ ಹೇಳಿ. ಅವರು ನೋಡಿದರೆ ನಮ್ಮ ಪಾರ್ಟಿಯವರು ಮಾತ್ರ ಮಾತನಾಡುತ್ತಾರೆ ಎಂದು ಹೇಳುತ್ತಾರೆ. ನಿಮ್ಮ ಜೊತೆಯಲ್ಲಿ ನಾವು ಇನ್ನೂ ಮಾತನಾಡಬೇಕೆಂದು ಇದ್ದೇವೆ.

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರೇವಣ್ಣನವರೇ, ಮಾತನಾಡಿ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ತಮ್ಮ ಪಾರ್ಟಿ ಎಂದು ತೆಗೆದುಕೊಂಡಿದ್ದು,

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಹೆಚ್.ಎಂ.ರೇವಣ್ಣನವರೇ, ಮಾನ್ಯ ಸಭಾಪತಿಯವರು ನನ್ನ ಹೆಸರನ್ನು ಕರೆದಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ ಒಂದು ನಿಮಿಷ. ಸರ್ಕಾರದಲ್ಲಿ ಅನ್ಯಾಯ ಆಗಿದೆ ಎನ್ನುವಾಗ ನಮ್ಮ ಪಾರ್ಟಿ, ನಿಮ್ಮ ಪಾರ್ಟಿ ಎಂದರೆ ಹೇಗೆ. ಎಲ್ಲರೂ ಸಹ ಒಂದೇ. ಇದರಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ನೀವು ಮಾತನಾಡಿದ ಮೇಲೆ ನಾವು ಮಾತನಾಡುತ್ತೇವೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಇದರ ಬಗ್ಗೆ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕೂಲಂಕುಷವಾಗಿ ಹೇಳಿದ್ದಾರೆ.

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ, ಆ ವಿಚಾರವನ್ನೇ ಪುನಃ ಹೇಳುವ ಆಗಿದ್ದರೆ ಬೇಡ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ನಾನು ಪುನಃ ಅದನ್ನೇ ಹೇಳುವುದಿಲ್ಲ. ಸುಮಾರು 10 ಪುಟಗಳು ಇವೆ, ಇದನ್ನು ನಾನು ಪುನಃ ಹೇಳುವುದಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಅಲ್ಲಿನ ಮಾನ್ಯ ಸಚಿವರು ಮಾನ್ಯ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೆ.ಸಿ.ನಾರಾಯಣಗೌಡರವರು ಮತ್ತು ಅಲ್ಲಿನ ಜಿಲ್ಲಾಧಿಕಾರಿಯಾದ ವೆಂಕಟೇಶ್ ರವರು ನಮ್ಮ ಪಕ್ಷದಲ್ಲಿದಂತಹ ಮಾನ್ಯ ಕೆ.ಸಿ.ನಾರಾಯಣಗೌಡರವರು ಪಕ್ಷಾಂತರ ಮಾಡಿ ಬಿಜೆಪಿ ಪಕ್ಷಕ್ಕೆ ಹೋಗಿ ಏನು ಮಾನ್ಯ ಸಚಿವರಾಗಿದ್ದಾರೆ. ಅವರು ರಾಗ–ದ್ವೇಷ ಇಲ್ಲದೆ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದಾರೆಯಲ್ಲವೇ, ಆ ರೀತಿ ಅವರು ಕರ್ತವ್ಯ ನಿರ್ವಹಣೆ ಮಾಡುತ್ತಿಲ್ಲ. ಅವರು ದುರುದ್ದೇಶದಿಂದ ಅಲ್ಲಿ ಯಾರು ಚುನಾವಣೆಗೆ ಸಹಕಾರ ಕೊಡಲಿಲ್ಲವೋ, ಅಂತಹವರ ವಿರುದ್ಧವಾಗಿ ಇವರು ದ್ವೇಷದ ರಾಜಕಾರಣವನ್ನು ಮಾಡಿ, ಅಲ್ಲಿ Crusher ಮಾಲೀಕರು ಯಾರಿದ್ದಾರೆ, ಅಲ್ಲಿ ಜೆ.ಡಿ.(ಎಸ್) ನ ನಿಷ್ಠಾವಂತ ಪಂಚಾಯಿತಿ ಸದಸ್ಯರುಗಳು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳು ಇದ್ದಾರೆ. ಅವರ ಮೇಲೆ ನಿರಂತರವಾಗಿ, ಜಿಲ್ಲಾಧಿಕಾರಿಗಳ ಮೇಲೆ ಒತ್ತಡ ತಂದು, ಜಿಲ್ಲಾಧಿಕಾರಿಗಳ ಮುಖಾಂತರ ದಿನಕ್ಕೊಂದು ಪ್ರಕರಣವನ್ನು ಹಾಕಿಸುತ್ತಿದ್ದಾರೆ. ಅವರು ಯಾವುದೇ ಕಾನೂನುಬದ್ಧವಾಗಿ ಸರ್ಕಾರಕ್ಕೆ ತೆರಿಗೆಯನ್ನು ಕಟ್ಟಬೇಕೋ, ಆ ತೆರಿಗೆ ಹಣವನ್ನೆಲ್ಲಾ ಪಾವತಿ ಮಾಡಿ, ದಿನನಿತ್ಯ ಯಾವ ರೀತಿ ವ್ಯವಹಾರವನ್ನು ಮಾಡಬೇಕೋ ಆ ರೀತಿ ಮಾಡುತ್ತಿದ್ದಾರೆ.

(ಮುಂದು)

**(642) 20/03/2020/4:20/ಎಸ್‌ಪಿಆರ್/ಎಂಡಿ**
**ಶ್ರೀ ಹೆಚ್.ಎಂ.ರಮೇಶ ಗೌಡ(ಮುಂದು):–**

ಅಲ್ಲಿನ ಜಿಲ್ಲಾಧಿಕಾರಿ ವೆಂಕಟೇಶ್‌ರವರು ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಆ ಜಿಲ್ಲಾಧಿಕಾರಿಯನ್ನು ಅಮಾನತ್ತು ಮಾಡದಿದ್ದರೆ ಅಥವಾ ಅವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ, ಮಂತ್ರಿಗಳಾದ ಶ್ರೀ ನಾರಾಯಣ ಗೌಡರವರು ಈ ಸದನಕ್ಕೆ ಬಂದರೆ ನಾವು ಬಾವಿಯಲ್ಲಿ ಕುಳಿತು ಧರಣಿಯನ್ನು ಮಾಡಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಏಕೆಂದರೆ. . .

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಸರ್ಕಾರವು ಉತ್ತರ ಕೊಡುವ ಮುನ್ನವೇ ಮುಂದೆ ಏನು ಮಾಡುತ್ತೇವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದರೆ ನಾನು ಅದನ್ನು ಏನೆಂದು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳಾದ ಶ್ರೀ ಕೆ.ಸಿ.ನಾರಾಯಣಗೌಡರು ...

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರ ಅನಿಸಿಕೆ ...

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಆ ರೀತಿಯಾಗಿ ನಡೆದುಕೊಳ್ಳುತ್ತಿದ್ದಾರೆ. ಅವರು ಕನಿಷ್ಠ ಸೌಜನ್ಯ ...

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಮಾನ್ಯ ಸಚಿವರಿಗೆ threat ಕೊಡುತ್ತಾರೆ ಎಂದರೆ, ಜಿಲ್ಲಾಧಿಕಾರಿಯನ್ನು ಅಮಾನತ್ತುಗೊಳಿಸಿ ಎಂದು ಆದೇಶ ಮಾಡುತ್ತಾರೆಂದರೆ ...

**(ಗೊಂದಲ)**

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಂತ್ರಿ ಕಡೆಯಿಂದ ಹೀಗೆ ಉತ್ತರ ಕೊಡಿ ಎಂದು ನಿರೀಕ್ಷೆ ಮಾಡುವುದು ಹಾಗೂ ಒತ್ತಡ ಹಾಕುವುದು ಎಷ್ಟರಮಟ್ಟಿಗೆ ಸರಿ?

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯಲ್ಲಿ ಎಲ್ಲರಿಗೂ ನ್ಯಾಯ ಕೊಡಿಸಿ. ಈ ಬಗ್ಗೆ ಮಂತ್ರಿಗಳು ಉತ್ತರದಲ್ಲಿ ಹೇಳಿದರೂ ಪರವಾಗಿಲ್ಲ; ಅನ್ಯಾಯವಾಗಿರುವವರಿಗೆ ನ್ಯಾಯ ಕೊಡಿಸಿ. ಅನ್ಯಾಯವಾಗಿರುವುದಕ್ಕೆ ನಾವು ಆ ವಿಚಾರವನ್ನು ಹೇಳಿದ್ದೇವೆ. **(ಗೊಂದಲ)** ಈ ವಿಚಾರದಲ್ಲಿ ಏನೇನು ಬೇಕೋ ಅದನ್ನು ಸರ್ಕಾರ ಮಾಡಬೇಕು.

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ರವರೇ, ಅಲ್ಲಿ ನೀವು ಹೇಳುವಂತಹ ಪರಿಸ್ಥಿತಿ ಆಗಿಲ್ಲ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳಾದ ನಾರಾಯಣಗೌಡರಿಗೆ ಸದನಕ್ಕೆ ಉತ್ತರ ಕೊಡುವ ಯೋಗ್ಯತೆ ಇಲ್ಲ. ಅಲ್ಲಿ ಮಾಡಬಾರದ್ದನ್ನೆಲ್ಲಾ ಮಂತ್ರಿಗಳು ಮಾಡುತ್ತಿದ್ದಾರೆ. ಆದ್ದರಿಂದ ನಾವು ಆ ರೀತಿಯಾಗಿಯೇ ಹೇಳಬೇಕು.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೋ ಎಂದು ಕೇಳಬೇಕು.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾರನ್ನೋ ಸಂತೋಷಪಡಿಸಲು ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ನಾನು ಯಾರನ್ನೂ ಸಂತೋಷಪಡಿಸುತ್ತಿಲ್ಲ ಹಾಗೂ ಸಂತೋಷ ಪಡಿಸಬೇಕಾಗಿಲ್ಲ. ಅಲ್ಲಿನ ವಾಸ್ತವಾಂಶಗಳನ್ನು ಹೇಳಿದ್ದೇನೆ. ನಾನು ಮಾನ್ಯ ಸಚಿವರಾದ ನಾರಾಯಣ ಗೌಡರ ಬಳಿ ಹೋಗಿ ಅವರ ಶಿಫಾರಸ್ಸು ಪಡೆದು ಯಾವುದೇ ಕೆಲಸಕ್ಕೆ ಅರ್ಜಿ ಹಾಕುವುದಿಲ್ಲ. ಮಂತ್ರಿಗಳು ಅಲ್ಲಿ ನೀಚ ಕೆಲಸವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಮರಿತಿಬ್ಬೇಗೌಡ ಮತ್ತು ಶ್ರೀ ಎಸ್.ಎಲ್.ಭೋಜೇಗೌಡ ರವರುಗಳೆಲ್ಲರೂ ಈ ವಿಷಯದ ಮೇಲೆ ಮಾತನಾಡಿರುವ ಸಂದರ್ಭದಲ್ಲಿ ನಾನು ಸಹ ಮಾತನಾಡಲು ಇಚ್ಛಿಸುತ್ತೇನೆ. ಈಗ ಪ್ರಸ್ತಾಪಿಸಿರುವ ವಿಷಯವನ್ನು ನಾನು ನೋಡುತ್ತಿದ್ದೆನು. ಇದಕ್ಕೆ ನಾನು signatory ಅಲ್ಲದಿದ್ದರೂ ಕೂಡ ಅಲ್ಲಿ ನಡೆದಿರುವ ವಿಷಯಗಳನ್ನು ಗಮನಿಸಿದಾಗ, ಇದರಲ್ಲಿ ನಿಜವಾಗಿಯೂ ಸಹ ದ್ವೇಷದ ರಾಜಕಾರಣ ಕಾಣುತ್ತಿದೆ. ಅದು ಹೇಗೆಂದರೆ, ಈಗಿನ ಮಂತ್ರಿಗಳು ಈ ಹಿಂದೆ ಆ ಭಾಗದ ಶಾಸಕರಾಗಿದ್ದ ಸಂದರ್ಭದಲ್ಲಿ, ಪ್ರಶ್ನಿತ Crusher ಕಂಪೆನಿಯು ಉತ್ತಮವಾಗಿದ್ದು, ಅವರು ಕೆಲಸವನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಾರೆ ಎಂದು ಹೇಳಿ ಅವರಿಗೆ ಪರವಾನಿಗೆಯನ್ನು ಕೊಡಿಸಿದ್ದರು. ತದನಂತರದ ದಿನಗಳಲ್ಲಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ತನ್ನ ಜೊತೆಗೆ ಆ ವ್ಯಕ್ತಿಯು ಬರಲಿಲ್ಲ ಎನ್ನುವ ಒಂದೇ ಉದ್ದೇಶಕ್ಕಾಗಿ ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡು ಆತನಿಗೆ ಬಹಳಷ್ಟು ಕಷ್ಟಗಳನ್ನು ಕೊಟ್ಟಿರುತ್ತಾರೆ. ಮಂತ್ರಿಗಳು ಪಕ್ಷಾಂತರ ಮಾಡಿದ್ದರಿಂದ ಅವರು ಸರ್ಕಾರದಲ್ಲಿದ್ದಾರೆ. ಇಂತಹ ಸನ್ನಿವೇಶವನ್ನು ಉಪಯೋಗಿಸಿಕೊಂಡು, ಸನ್ನಿವೇಶದ ಕೂಸಾಗಿರುವ ಪಾಪಿ Crusher ಮಾಲೀಕನಿಗೆ ಎಂತೆಂತಹ ಕಷ್ಟ ಕೊಟ್ಟಿದ್ದಾರೆ ಎಂದರೆ, ನ್ಯಾಯಾಲಯದಲ್ಲಿ ಆ ವ್ಯಕ್ತಿಗೆ ರಕ್ಷಣೆ ದೊರೆತಿದ್ದರೂ ಸಹ, ಕಾರ್ಯಾಂಗದ ಅಧಿಕಾರಿಗಳಿಂದ ತೊಂದರೆಯಾಗುತ್ತಿದೆ. ಕಾರ್ಯಾಂಗ ವ್ಯವಸ್ಥೆಯಲ್ಲಿ ಒಳ್ಳೊಳ್ಳೆಯ ಅಧಿಕಾರಿಗಳಿದ್ದಾರೆ. ಈ ಮೊದಲು ಆ ವ್ಯಕ್ತಿಗೆ ಪರವಾನಿಗೆ ನೀಡುವ ಸಂದರ್ಭದಲ್ಲಿ ಅವರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅಧಿಕಾರಿಗಳು ಅಲ್ಲಿನ ವಾಸ್ತವಾಂಶಗಳನ್ನು ತಿಳಿಸಿದ್ದರು. ಇಲಾಖೆಗಳಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ, ಇಲ್ಲವೆಂದಲ್ಲ. ಆದರೆ ಕೆಲವೊಂದು ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿರುವ ಪರಿಸ್ಥಿತಿಯನ್ನು ನೋಡಿದರೆ... ಮುಖ್ಯಮಂತ್ರಿಗಳು ತಾವು ದ್ವೇಷದ ರಾಜಕಾರಣ ಮಾಡುವುದಿಲ್ಲವೆಂದು ತಿಳಿಸಿದ್ದಾರೆ. ಮುಖ್ಯಮಂತ್ರಿಗಳು ದ್ವೇಷದ ರಾಜಕಾರಣ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಅಲ್ಲಿ ನಡೆದ ಘಟನೆಯನ್ನು ಮತ್ತು ಈಗಿನ ಸನ್ನಿವೇಶವನ್ನು ನೋಡಿದರೆ ನಮಗೆ ಏನನ್ನಿಸುತ್ತದೆ ಎಂದರೆ, ಈಗ ಮಂತ್ರಿಗಳಾಗಿರುವ ನಮ್ಮ ಸ್ನೇಹಿತರು ಮಾಡಿರುವ ಕೆಲಸವು ಸರಿಯಾಗಿದೆಯೇ? ಯಾರೇ ಆಗಲೀ ಜನಪ್ರತಿನಿಧಿಯಾದವರು ಒಬ್ಬರಿಗೆ ಸಹಾಯ ಮಾಡಬೇಕೇ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೊರತು ಒಬ್ಬರಿಗೆ ಅನ್ಯಾಯ ಮಾಡುವಂತಹದ್ದು ಎಷ್ಟರ ಮಟ್ಟಿಗೆ ಸರಿಯಾದುದು? ವೈಯಕ್ತಿಕ ದ್ವೇಷಕ್ಕಾಗಿ... ನ್ಯಾಯಾಲಯಗಳು ಉಲ್ಲೇಖಗಳನ್ನು ಮಾಡಿ ಆ ವ್ಯಕ್ತಿಯ ಪರವಾಗಿ ಇವೆ. ಈ ವಿಚಾರದಲ್ಲಿ ಮೂರು ಆದೇಶಗಳಿವೆ. ಆದರೆ ಅವುಗಳನ್ನು ಕಾರ್ಯಗತಗೊಳಿಸುವುದಿಲ್ಲ. ಸ್ಥಳೀಯ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆ. ಇದಕ್ಕೂ ಸಹ ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಂಡಿಲ್ಲ. ಆ ವ್ಯಕ್ತಿಗೆ ಯಾವ ರೀತಿಯಾಗಿ ದಂಡವನ್ನು ಹಾಕಿದ್ದಾರೆ ಎನ್ನುವ ವಿಷಯವನ್ನು ಪ್ರಸ್ತಾಪಿಸಬಯಸುತ್ತೇನೆ. ಶ್ರೀ ನಾಗಭೂಷಣ, ಹಿರಿಯ ಭೂ ವಿಜ್ಞಾನಿ ಮತ್ತು ಶ್ರೀಮತಿ ಮಮತಾ ರಾಣಿ, ವಾಣಿಜ್ಯ ಅಧಿಕಾರಿ ರವರುಗಳು ದಿನಾಂಕ 03/07/2019 ರಲ್ಲಿ ಡ್ರೋಣ್ ಮೂಲಕ ಸರ್ವೆಯನ್ನು ಮಾಡಿಸಿ, 93.87 ಲಕ್ಷ ರೂಪಾಯಿಗಳು ರಾಜ ಧನ ವರ್ಜಿತವಾಗಿದೆ ಎಂದು ತಿಳಿಸಿದ್ದಾರೆ. ದಿನಾಂಕ 19/08/2019 ಕ್ಕೆ ಅಂದರೆ ಕೇವಲ ಒಂದು ತಿಂಗಳ ನಂತರ ಆ ವ್ಯಕ್ತಿಯ ಕ್ರಷಿಂಗ್ ಕಂಪೆನಿಯ ಮೇಲೆ ಒತ್ತಾಯಪೂರ್ವಕವಾಗಿ 11 ಕೋಟಿ 2 ಲಕ್ಷ ರೂಪಾಯಿಗಳ ದಂಡ ಹಾಕಿದ್ದಾರೆ. 11 ಕೋಟಿ 2 ಲಕ್ಷದಲ್ಲಿ ಆಗುತ್ತದೆ ಎಂದರೆ ಇದರಲ್ಲಿ ಏನಿದೆ? I am not a signatory for this, and I have not gone through everything. ನನಗೆ ತಿಳಿದ ಮಾಹಿತಿ ಹಾಗೂ ನಾನು ನೋಡಿದ ಸಮಯದಲ್ಲಿ ಬಹಳಷ್ಟು ವ್ಯತ್ಯಾಸಗಳು ಗೋಚರಿಸುತ್ತಿವೆ. ಮಂಡ್ಯ ಜಿಲ್ಲೆಯಲ್ಲಿ ಯಾವ ಸರ್ಕಾರ ನಡೆಯುತ್ತಿದೆ? ಶ್ರೀ ಬಿ.ಎಸ್.ಯಡಿಯೂರಪ್ಪನವರ ಉತ್ತಮವಾದ ಸರ್ಕಾರ ನಡೆಯುತ್ತಿದೆಯೇ ಅಥವಾ ಮಂತ್ರಿಗಳಾದ ಶ್ರೀ ಕೆ.ಸಿ.ನಾರಾಯಣ ಗೌಡರವರ ಸರ್ಕಾರ ನಡೆಯುತ್ತಿದೆಯೇ? ಈ ಅಂಶವು ರಾಜ್ಯಕ್ಕೆ ತಿಳಿಯಬೇಕೆಂದು ನಾನು ಈ ಸದನದ ಮೂಲಕ ಗಮನ ಸೆಳೆಯಲು ಇಷ್ಟಪಡುತ್ತೇನೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರಿಗೆ ಮಾತನಾಡಲು ಒಳ್ಳೆಯ ಅವಕಾಶ ದೊರೆಯಿತು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಶ್ರೀ ಶರವಣರವರು ತಾವು ಅದೇ ರಾಜಕೀಯ ಪಕ್ಷಕ್ಕೆ ಸೇರಿದವರಾಗಿರುವುದರಿಂದ ಅವರು ಈ ವಿಷಯದ ಮೇಲೆ ಮಾತನಾಡುತ್ತೇನೆಂದು ತಿಳಿಸಿದರು. ಪಕ್ಷದ ವಿಷಯ ಬಂದಾಗ ಪಕ್ಷದವರು ಮಾತನಾಡುತ್ತಾರೆ. ಸದನದಲ್ಲಿ ಸಾರ್ವಜನಿಕ ವಿಷಯಗಳು ಬಂದಾಗ ಪಕ್ಷಾತೀತವಾಗಿ ಮಾತನಾಡಬೇಕು. Crusher ಮಾಲೀಕ ನನ್ನ ನಂಟನೇನಲ್ಲ. ಆದರೆ ಅವನಿಗೆ ಅನ್ಯಾಯವಾಗಿರುವ ಸಂದರ್ಭದಲ್ಲಿ ಧ್ವನಿಯನ್ನು ಎತ್ತದಿದ್ದರೆ... ನನ್ನ ಸಹೋದರಿಯಾದ ಡಾ॥ ತೇಜಸ್ವಿನಿಯವರು SFI (Students' Federation of India) ನಿಂದ ಬಂದಿರುವವರು. ಅವರು ಮೊದಲು Communist ಪಾರ್ಟಿಯವರಾಗಿದ್ದು, ನಂತರದಲ್ಲಿ ಇಲ್ಲಿಗೆ ಬಂದಿದ್ದಾರೆ. ಅವರನ್ನು ಲೋಕಸಭೆಗೆ ಕಾರಣಕರ್ತನಾದವನು ನಾನು ಇಲ್ಲಿದ್ದೇನೆ. ಇಲ್ಲವೆಂದು ನನ್ನ ಸಹೋದರಿ ಹೇಳಲಿ. ನಮ್ಮ ಊರಲ್ಲಿ ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರೇ, 'ಪರಿವರ್ತನೆ ಜಗದ ನಿಯಮ' ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಈಗಿನ ಕಾಲದಲ್ಲಿ Socialist ಗಳೆಲ್ಲಾ Capitalist ಹಾಗೂ ಇನ್ನೇನೋ ಆಗುತ್ತಿದ್ದಾರೆ. ನಾನು ಆ ವಿಚಾರಕ್ಕೆ ಹೋಗುವುದಿಲ್ಲ. ನನ್ನ ಸಹೋದರಿ ಡಾ॥ ತೇಜಸ್ವಿನಿಗೌಡರವರ ಬಗ್ಗೆ ಏನು ಹೇಳುವುದಕ್ಕೆ ಇಷ್ಟ ಪಟ್ಟಿದ್ದೇನೆಂದರೆ, ...

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಯಾವುದೋ ಒಂದು ನೋವಿನ ಸಂದರ್ಭದಲ್ಲಿ ಜೆ.ಡಿ.(ಎಸ್) ಪಕ್ಷಕ್ಕೆ ಹೋಗಲು ತೀರ್ಮಾನಿಸಿದಾಗ ಪಕ್ಷದ ಹಿರಿಯರು ಮನವೊಲಿಸಿದರು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯೆಯವರು ಯಾರ ಬಗ್ಗೆ ಹೇಳುತ್ತಿದ್ದಾರೆ?

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಒಂದು ಸಂದರ್ಭದಲ್ಲಿ ತಾವು ಪಕ್ಷವನ್ನು ಬಿಡುವ ನಿರ್ಧಾರ ಮಾಡಿದಾಗ ನಿಮ್ಮನ್ನು ಮನವೊಲಿಸಿ..., ನನಗೆ ನೆನಪು ಹೋಗಿಲ್ಲ. I will produce all the documents. ನೋವಿನ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಅಂತಹ ಸನ್ನಿವೇಶಗಳು ಎಲ್ಲರಿಗೂ ಬರುತ್ತವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯೆಯವರು ಇಲ್ಲದ ಆಪಾದನೆಯನ್ನು ಮಾಡಬಾರದು, ಏಕೆಂದರೆ ಎಲ್ಲವೂ ದಾಖಲೆಗೆ ಹೋಗುತ್ತದೆ. ಮಾನ್ಯ ಸದಸ್ಯರು ಹೇಗೆ ಮತ್ತು ಏನು ಎನ್ನುವುದು ನನಗೆ ಗೊತ್ತಿದೆ. ಅದರ ಸುದ್ದಿ ಮಾತನಾಡುವುದು ಬೇಡ. ವೈಯಕ್ತಿಕವಾಗಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನೇ ಅವರನ್ನು ಗೆಲ್ಲಿಸಿದ್ದೇನೆ. ಅವರು ನನ್ನ ಜೊತೆಯಲ್ಲಿದ್ದುಕೊಂಡು ಚುನಾವಣೆಯನ್ನು ಎದುರಿಸಿದ್ದಾರೆ, ಅವರು ಗೆದ್ದಿದ್ದಾರೆ. ಈಗ ಆ ವಿಷಯವೇಕೆ, ಬಿಡಿ. ಈಗ ಮಾನ್ಯ ಸದಸ್ಯರು ಆಡಳಿತ ಪಕ್ಷದಲ್ಲಿದ್ದಾರೆ. ಹೀಗಾಗಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಈಗಿನ ಸನ್ನಿವೇಶವು ಏನನ್ನು ತೋರಿಸುತ್ತದೆ. ಈ ವಿಷಯದಲ್ಲಿ ಮೇಲ್ನೋಟಕ್ಕೆ ಎನ್ನುವ ಪದದ ಬದಲಾಗಿ ನಿಶ್ಚಿತವಾಗಿ ಕಾಣುತ್ತಿರುವುದರಿಂದ ಇದು ದ್ವೇಷದ ರಾಜಕೀಯವಾಗಿದೆ. ಆದ್ದರಿಂದ ಸರ್ಕಾರ ಇಂತಹುದಕ್ಕೆ ಅವಕಾಶ ನೀಡುವುದು ಬೇಡ. ಆ Crusher ಮಾಲೀಕನಿಗೆ ನ್ಯಾಯವನ್ನು ಒದಗಿಸಿಕೊಡಬೇಕು ಮತ್ತು ಆ ಕ್ರಷರ್‌ಗೆ ವಿಧಿಸಿರುವ ದಂಡವನ್ನು ಹಿಂಪಡೆಯಬೇಕು. ಆ ವ್ಯಕ್ತಿಗೆ ಪುನಃ Crusher ನ್ನು ನಡೆಸುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬೇಕು. ಇಷ್ಟು ಸಂಗತಿಗಳನ್ನು ಹೇಳಲು ನನಗೆ ಸಮಯಾವಕಾಶ ನೀಡಿದ್ದಕ್ಕಾಗಿ ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇದು ಬಹಳ ಜ್ವಲಂತ ಸಮಸ್ಯೆಯಾಗಿದೆ. ಇದರಲ್ಲಿನ ಮುಖ್ಯವಾದ ಅಂಶವೇನೆಂದರೆ, 65–85 ಲಕ್ಷ ರೂಪಾಯಿಗಳಷ್ಟು ದಂಡವನ್ನು ವಿಧಿಸಿದ ಅಧಿಕಾರಿಗಳು ಯಾವ ಆಧಾರದ ಮೇಲೆ ಸುಮಾರು 11 ಕೋಟಿ ರೂಪಾಯಿಗಳಷ್ಟು ದಂಡವನ್ನು ವಿಧಿಸಿದರು? ದಂಡವನ್ನು ವಿಧಿಸಲು ಇರುವ ಮಾನದಂಡವೇನು? ಅದೇ ರೀತಿಯಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಈ ರೀತಿಯಾಗಿ ಸರ್ಕಾರ ದಂಡವನ್ನು ವಿಧಿಸಿದರೆ, ಸಾವಿರಾರು ಕೋಟಿ ರೂಪಾಯಿಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಬರುತ್ತದೆ? ಇಲ್ಲಿ ಯಾವುದಾದರೂ ಮಾನದಂಡವಿದೆಯೇ ಅಥವಾ ಅಧಿಕಾರಿಗಳು ಅವರವರ ಇಷ್ಟಾನುಸಾರ ದಂಡವನ್ನು ವಿಧಿಸಲಿಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ? ಇದು ಕೆ.ಆರ್.ಪೇಟೆ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯವಾದರೂ ಕೂಡ ಬಹಳ ಸೂಕ್ಷ್ಮವಾದ ವಿಷಯವಾಗಿದೆ. ಪ್ರಾಯಶಃ ಕಲ್ಲುಗಣಿಗಾರಿಕೆಯಂತಹ ದೊಡ್ಡ ಮಾಫಿಯಾ ಯಾವುದೂ ಇಲ್ಲ. ನಾನು ಕೇವಲ ಕೆಲವು ವ್ಯಕ್ತಿಗಳ ಬಗ್ಗೆ ಮಾತ್ರವೇ ಹೇಳುತ್ತೇನೆ. ನಾನು ಎಲ್ಲರ ಬಗ್ಗೆ ಹೇಳುವುದಿಲ್ಲ. ಯಾವ್ಯಾವ ಕಲ್ಲುಗಣಿಗಾರಿಕೆಗಳು ನ್ಯಾಯವಾಗಿ ನಡೆಯುತ್ತಿವೆ ಅಲ್ಲಿಯೂ ಕೂಡ ಅಧಿಕಾರಿಗಳ ಇಚ್ಛೆಯಿಂದ ಅವರಿಗೆ ಕೊಡಬೇಕಾದ ಸವಲತ್ತು ಕೊಟ್ಟರೆ ಮಾತ್ರವೇ ಗಣಿಗಾರಿಕೆ ನಡೆಯುತ್ತದೆ. ಇಲ್ಲದಿದ್ದರೆ ಯಾವುದೇ ವಿಧವಾದ ಕಾನೂನಿನಲ್ಲಿ ಅನುಮೋದನೆ ಸಿಗದೇ ಇದ್ದರೂ ಸಹ ಕೆಲವು ಪ್ರದೇಶಗಳಲ್ಲಿ ಗಣಿಗಾರಿಕೆ ಬಹಳ ಸಾಂಗೋಪವಾಗಿ ನಡೆಯುತ್ತಿದೆ. ಇದಕ್ಕೆ ಉದಾಹರಣೆಯೊಂದನ್ನು ನೀಡಲಿಚ್ಛಿಸುತ್ತೇನೆ. ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 35 ಗಣಿಗಾರಿಕೆಗಳು ನಡೆಯುತ್ತಿವೆ. ಆ ಪೈಕಿ ಕೇವಲ ಮೂರ್‍ನಾಲ್ಕು ಗಣಿಗಾರಿಕೆಗಳು ಮಾತ್ರವೇ ಸರ್ಕಾರದಿಂದ ಅನುಮೋದನೆಯನ್ನು ಪಡೆದುಕೊಂಡಿವೆ. ಉಳಿದೆಲ್ಲವೂ ಸರ್ಕಾರದ ಅನುಮೋದನೆ ಇಲ್ಲದಿದ್ದರೂ ಸಹ ರಾಜಾರೋಷವಾಗಿ ನಡೆಯುತ್ತಿವೆ. ಕೆಲವು ಒಳ್ಳೆಯ ಹಾಗೂ ದಕ್ಷ ಅಧಿಕಾರಿಗಳು ಕಾರ್ಯಾಂಗ ವ್ಯವಸ್ಥೆಯಲ್ಲಿದ್ದಾರೆ, ಅಂತಹವರನ್ನು ನಾವು ನೋಡುತ್ತಿದ್ದೇವೆ. ಈಗ ಅಂತಹ ಅಧಿಕಾರಿಗಳು ಅಧಿಕಾರಿಗಳ ಗ್ಯಾಲರಿಯಲ್ಲಿ ಕುಳಿತಿದ್ದಾರೆ. ನಾವು ಎಲ್ಲಾ ಅಧಿಕಾರಿಗಳ ಮೇಲೆ ಸಾರಾಸಗಟಾಗಿ ದೋಷಾರೋಪ ಮಾಡುವುದಕ್ಕಾಗುವುದಿಲ್ಲ. ಆ ರೀತಿಯಾಗಿ ಮಾಡುವುದು ತಪ್ಪಾಗುತ್ತದೆ.

**(ಮುಂದು)**

(643)/20–3–2020/4–30/ಎಲ್‌ಎಂ/ಎಕೆ

**ಶೀ ಎನ್.ಅಪ್ಪಾಜಿಗೌಡ(ಮುಂದು):–**

ಆದರೆ ಮುಖ್ಯವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪ್ರತಿ ತಿಂಗಳು ಏನು ಸಲ್ಲಬೇಕು, ಅದು ಸಲ್ಲದೆ ಇದ್ದರೆ, ಯಾರು ಗಣಿಗಾರಿಕೆಯನ್ನು ನಡೆಸಲು ಆಗುವುದಿಲ್ಲ. ಇಲ್ಲಿ ಸಚಿವರು ಇದ್ದಾರೆ, ಅಧಿಕಾರಿಗಳು ಇದ್ದಾರೆ. ತಮ್ಮ ಮುಖಾಂತರ ಹೇಳುವುದೇನೆಂದರೆ, ಇದೇ ದಂಡವನ್ನು ರಾಜ್ಯದಲ್ಲಿ ಎಲ್ಲೆಲಿ ಹಾಕಿದ್ದಾರೆ, ಎಷ್ಟು ದಂಡವನ್ನು ಹಾಕಿದ್ದಾರೆ. ಎಷ್ಟು ಜನ ಮಾಲೀಕರು ದಂಡ ಕಟ್ಟಿದ್ದಾರೆ ಎನ್ನುವ ಮಾಹಿತಿಯನ್ನು ತರಿಸಿಕೊಂಡರೆ, ಈಗ ಅಭಿವೃದ್ಧಿ ಕೆಲಸಗಳಿಗೆ ಹಣ ಇಲ್ಲದೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಷ್ಟಪಡುತ್ತಿರುವ ಸರ್ಕಾರಕ್ಕೆ ಸ್ವಲ್ಪಮಟ್ಟಿಗಾದರೂ ಸಮಸ್ಯೆ ಬಗೆಹರಿಯುತ್ತದೆ. ಯಾರ್‍ಯಾರು rules and regulations ಇಲ್ಲದೆ ಗಣಿಗಾರಿಕೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ ಅದನ್ನು ಒಂದು ತಂಡ ರಚನೆ ಮಾಡಿ verification ಮಾಡಲಿ, ಎಲ್ಲವನ್ನು ground survey ಮಾಡಿ ಯಾರ್‍ಯಾರು ದಂಡವನ್ನು ಕಟ್ಟಿರುವುದಿಲ್ಲ ಅವರಿಂದ ದಂಡವನ್ನು ವಸೂಲಿ ಮಾಡಲಿ. ಜೊತೆಗೆ ಯಾರ್‍ಯಾರು ಕಾನೂನು ರೀತಿ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ ಅವರಿಗೆ ತೊಂದರೆ ಕೊಡುವುದು ಸರಿಯಲ್ಲ. ಗಣಿಗಾರಿಕೆಯನ್ನು ಇವರು ಸರ್ಕಾರದಿಂದ ಸುಮಾರು 15 ರಿಂದ 20 ಕೋಟಿ ರೂ.ಗಳ ಸಾಲವನ್ನು ತೆಗೆದುಕೊಂಡು ನಡೆಸುತ್ತಿದ್ದಾರೆ. ಆದ್ದರಿಂದ ಅವರು ಗಣಿಗಾರಿಕೆಯನ್ನು ನಡೆಸಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:– ಮಾನ್ಯ ಸಭಾಪತಿಗಳೇ, ಜನತಾ ದಳದ ನನ್ನ ಸ್ನೇಹಿತರು ಈ ವಿಚಾರವನ್ನು ನಿಯಮ 59ರಲ್ಲಿ ತಂದಿದ್ದರು. ಅದನ್ನು ತಾವು ನಿಯಮ 68ರಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟಿದ್ದೀರಿ. ಇದಕ್ಕೆ ಸಹಿ ಮಾಡಿರುವುದಿಲ್ಲ. ಆದರೂ ನಿಯಮ 68ರಲ್ಲಿ ತಂದ ವಿಷಯಗಳ ಮೇಲೆ ಸದನದ ಎಲ್ಲಾ ಸದಸ್ಯರು ಮಾತನಾಡಲು ಅಧಿಕಾರವಿದೆ. ಈ ಅವಕಾಶವನ್ನು ತಾವು ಒದಗಿಸಿಕೊಟಿದ್ದೀರಿ ತಮಗೆ ಧನ್ಯವಾದಗಳು. Stone Crushing ಇದು ಒಂದು ಉದ್ಯಮ. ಕನ್ನಂಬಾಡಿ ಅಣ್ಣೆಕಟ್ಟನ್ನು ಕಟ್ಟಿದ ಭಾರತ ರತ್ನ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು ಒಂದು ಮಾತನ್ನು ಹೇಳುತ್ತಾರೆ, 'Industrialize or Perish', ಅಂದರೆ 'ಉದ್ಯಮೀಕರಣ ಮಾಡಿ ಇಲ್ಲದಿದ್ದರೆ ನಶಿಸಿ ಹೋಗಿ'. ಒಂದು ಕೈಗಾರಿಕೆಯನ್ನು ನಡೆಸಬೇಕಾದರೆ, ನಾನು ಸಕ್ಕರೆ ಉದ್ಯಮವನ್ನು ನಡೆಸುತ್ತಿರುವವನು. ಉದ್ಯಮದಲ್ಲಿ ಬಹಳ ಕಷ್ಟವಿದೆ, ನಷ್ಟವಿದೆ. ಉದ್ಯಮ ನಡೆಸುವ ವ್ಯಕ್ತಿಯ ಆಯುಸ್ಸು 5 ವರ್ಷವಾದರೂ ಕಡಿಮೆಯಾಗುತ್ತದೆ. ಇದು ನನ್ನ ಸ್ವಂತ ಅನುಭವ. ಮಾನ್ಯ ನಿರಾಣಿಯವರಿಗೆ ಅದರ ಕಷ್ಟ ಗೊತ್ತಿದೆ. ಅವರು ಬಹಳ ದೊಡ್ಡ ಉದ್ಯಮಪತಿಗಳು.

ರಾಜಕಾರಣ ವಿಚಾರದಲ್ಲಿ ನಮ್ಮ ಪರ ಬರಲಿಲ್ಲ. ನಮಗೆ ಚುನಾವಣೆಯಲ್ಲಿ ಸಹಾಯ ಮಾಡಲಿಲ್ಲ ಎಂದು ಇವರ ಉದ್ಯಮವನ್ನು ಹೇಗಾದರೂ ಮಾಡಿ ನಿಲ್ಲಸಬೇಕು ಎಂದು ಈ ರೀತಿ ಮಾಡಿದ್ದಾರೆ. ಇದು ವ್ಯಕ್ತಿಗೆ ಮಾಡಿರುವ ತೊಂದರೆಯಲ್ಲ. ಉದ್ಯಮಿಯಾಗಿರುವ ಮಂಜು ಅವರಿಗೆ ಮಾತ್ರ ತೊಂದರೆಯಲ್ಲ, ಆ Stone Crushing Unit ನಲ್ಲಿ ನೂರಾರು ಜನರು ಕೆಲಸ ಮಾಡುತ್ತಿರುತ್ತಾರೆ. ಒಂದು ಉದ್ಯಮದ ಅಕ್ಕ–ಪಕ್ಕ indirect employment ಇರುತ್ತದೆ. ಕನಿಷ್ಠ 500 ಜನರು ಇದರಿಂದ ಹೊಟ್ಟೆ ತುಂಬಿಕೊಳ್ಳುತ್ತಾರೆ. ಒಂದು ಉದ್ಯಮವನ್ನು ನಿಲ್ಲಿಸುವುದರಿಂದ ಎದುರಾಳಿಗೆ ತೊಂದರೆ ಕೊಟ್ಟೆ ಎಂದು ಬೆನ್ನುಚಪ್ಪರಿಸಿಕೊಳ್ಳಬಹುದು. ಆದರೆ ಉದ್ಯಮಪತಿಗೆ ಅಷ್ಟೆ ಅಲ್ಲ, direct and indirect employment ಕನಿಷ್ಠ 500 ಜನರ ಹೊಟ್ಟೆ ಮೇಲೆ ಹೊಡೆದ ಹಾಗೆ. ಇಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನೇಕ ಉದ್ಯಮಗಳನ್ನು ನಾನು ನಮ್ಮ ಬಾಗಲಕೋಟಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಬಹಳ ನೋಡಿದ್ದೇನೆ. ಈ ರೀತಿ ಮಾಡಲು ಇವರಿಗೆ ಬುದ್ಧಿಯಾದರೂ ಹೇಗೆ ಬಂತು? ಈ ತೊಂದರೆ ಮಾಡಿರುವವರು ಶಾಸಕರಾಗಿದ್ದಾಗ ಈ ಉದ್ಯಮವನ್ನು ಪ್ರಾರಂಭ ಮಾಡಬೇಕು ಇದಕ್ಕೆ ತ್ವರಿತವಾಗಿ ಸಹಾಯ–ಸಹಕಾರ ಮಾಡಬೇಕು ಎರಡು ಪತ್ರವನ್ನು ಸರ್ಕಾರಕ್ಕೆ ಬರೆದಿದ್ದಾರೆ. ಮುಂದೆ ಚುನಾವಣೆ ಸಮಯದಲ್ಲಿ ಆ ಗಣಿ ಉದ್ಯಮಿ ಇವರ ಪರ ನಿಲ್ಲಲಿಲ್ಲ ಎನ್ನುವ ಒಂದೇ ಕಾರಣಕ್ಕೆ ಈ ರೀತಿ ಮಾಡಿದ್ದಾರೆ. ಚುನಾವಣೆಗೆ ನಿಂತವರು ಗೆದ್ದರು, ಮಂತ್ರಿಗಳಾದರೂ, ಉಸ್ತುವಾರಿ ಮಂತ್ರಿಗಳಾಗಿದ್ದರು. ಅವರಿಗೆ ಅಧಿಕಾರ ಬಂತು ಅಂದರೆ, opportunity knocks once at our door. ಹಗಲೆಲ್ಲಾ ಸಿಗುವುದಿಲ. ಒಂದು ಸಾರಿ ಅವಕಾಶ ಸಿಕ್ಕಾಗ ಅದರ ಸದ್ಬಳಕೆಯನ್ನು ಹೇಗೆ ಮಾಡಬೇಕು ಎನ್ನುವುದನ್ನು ತಿಳಿದುಕೊಂಡು, ಜನಪರ ಉಪಯೋಗವಾಗುವ ಹಾಗೆ ಬಳಕೆ ಮಾಡಬೇಕು. ಇಂತಹ ಕೆಟ್ಟ ಕೆಲಸಗಳಿಗೆ ಉಪಯೋಗ ಮಾಡಬಾರದು. ರಾಜಕಾರಣಿಗಳು ಎಂದರೆ ನಮ್ಮ ಕಡೆಗೆ ಏನು ಅನ್ನುತ್ತಾರೆ ಎಂದರೆ, 'ಇವರು ನಮಗೆ ಒಳ್ಳೆಯದನ್ನು ಮಾಡದಿದ್ದರೂ ಪರವಾಗಿಲ್ಲ, ನಮ್ಮ ಸಹವಾಸಕ್ಕೆ ಬರದೆ ಇದ್ದರೆ ಸಾಕು' ಎಂದು ಜನರು ಹೇಳುವ ಮಟ್ಟಿಗೆ ನಾವು ಬಂದಿದ್ದೇವೆ. ತೊಂದರೆ ಕೊಡದೆ ಇರುವವನ್ನೆ ಬಹಳ ಒಳ್ಳೆಯ ರಾಜಕಾರಣಿ ಎಂದು ಹೇಳುವಂತೆ ಆಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೂರು–ನಾಲ್ಕು ದಶಕಗಳ ಹಿಂದೆ ರಾಜಕಾರಣಿಗಳು ಎಂದರೆ ಸಾಕ್ಷಾತಾ ದೇವರು ಎಂದು ಹೇಳಿ ಕಾಲಿಗೆ ಬಿದ್ದು ನಮಸ್ಕಾರ ಮಾಡುತ್ತಿದ್ದರು. ಆದರೆ, ಇವತ್ತು ಮಣ್ಣು ತೆಗೆದುಕೊಂಡು ಕಣ್ಣಿಗೆ ಹಾಕುತ್ತಿದ್ದಾರೆ. ಮೊನ್ನೆ 8–10 ದಿನಗಳಿಂದ ಸಂವಿಧಾನದ ಮೇಲೆ, ಸಂವಿಧಾನದ ಆಶಯಗಳ ಮೇಲೆ ಚರ್ಚೆ ನಡೆಯಿತು. ಸಂವಿಧಾನದ ಸಿದ್ಧಾಂತಗಳ ಮೇಲೆ, ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳ ಬಗ್ಗೆ, ನ್ಯಾಯಂಗದ ಬಗ್ಗೆ ಯಾವ ಒಂದು ಕ್ಷೇತ್ರವನ್ನು ಬಿಡದ ಹಾಗೆ, no stone is left unturned. ಅಷ್ಟು ಸುಧೀರ್ಘವಾಗಿ ಚರ್ಚೆ ಮಾಡಲಾಯಿತು. ಇಂತಹ ಜನರು ಇದ್ದಾರೆ ಎಂದೇ ಇವತ್ತು ನಮ್ಮ ಸಂವಿಧಾನದ ಆಶಯಗಳು ವಿಫಲವಾಗಿವೆ. ಸಂವಿಧಾನದ ತತ್ವ ಸಿದ್ಧಾಂತಗಳನ್ನು ಗಾಳಿಗೆ ತೂರಲಾಗಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗುವಂತಹದು. ಕೆಆರ್‌ಎಸ್ ಕಟ್ಟಿದ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯನವರನ್ನು ಮಂಡ್ಯ ಜಿಲ್ಲೆಯ ಜನರು ನೆನಪಿಸಿಕೊಳ್ಳುತ್ತಾರೆ. ನಾನು ಮೈಸೂರಿಗೆ ಹೋಗುವಾಗ ಮದ್ದೂರಿನಲ್ಲಿರುವ ನನ್ನ ಸ್ನೇಹಿತ ನಾಗೇಶ್ ಎನ್ನುವವರು ನನ್ನನು breakfast ಗೆ ಕರೆದಿದರು. ಅದಕ್ಕಾಗಿ ಅವರ ಮನೆಗೆ ಹೋಗಿದೆ. ಅಲ್ಲಿ ಅವರು ಒಂದು ಫೋಟೋಗೆ ಊದಿನಕಡ್ಡಿ ಹಚ್ಚಿ ಪೂಜೆ ಮಾಡಿದರು. ಆ ಫೋಟೋ ನೋಡಿದರೆ ದೇವರ ಫೋಟೋದ ಹಾಗೆ ಕಾಣಲಿಲ್ಲ. ಅದಕ್ಕೆ ನಾನು ಹತ್ತಿರ ಹೋಗಿ ನೋಡಿದೆ, ಅದು ಮೈಸೂರು ಮಹಾರಾಜರ ಮತ್ತು ಡಾ: ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಫೋಟೋ ಆಗಿತ್ತು. ಇದು ಏಕೆ ಎಂದು ನಾನು ಕೇಳಿದೆ, ಅದಕ್ಕೆ ನನ್ನ ಸ್ನೇಹಿತರು, ಮೈಸೂರು ಮಹಾರಾಜರಿಂದ ನಾವು ಉದ್ಧಾರವಾಗಿದ್ದೇವೆ. ಕನ್ನಂಬಾಡಿ ಕಟ್ಟುವಾಗ ಹಣವಿಲ್ಲದೆ ಅರ್ಧಕ್ಕೆ ನಿಂತಿತ್ತು, ಆಗ ಮಹಾರಾಜರು ತಮ್ಮ ಅರಮನೆಯಲ್ಲಿರುವ ವಜ್ರ, ವೈಢ್ಯೂರ, ಬಂಗಾರ ಎಲ್ಲವನ್ನು ತೆಗೆದುಕೊಂಡು ಬ್ಯಾಂಕ್‌ನಲ್ಲಿ ಒತ್ತಿ ಇಟ್ಟು ಹಣ ತಂದು ಕನ್ನಂಬಾಡಿ ಆಣೆಕಟ್ಟನ್ನು ಕಟ್ಟಿಸಿದರು. ಅದರ ಶಿಲ್ಪಿ ಡಾ: ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಇವರನ್ನು ಪೂಜೆ ಮಾಡದಿದ್ದರೆ ಹೇಗೆ ಪ್ರತಿಯೊಂದು ಮನೆಯಲ್ಲಿ ಅವರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಫೋಟೋವನ್ನು ಇಟ್ಟು ಪೂಜೆ ಮಾಡುತ್ತೇವೆ ಎಂದು ಹೇಳಿದರು. ಇದನ್ನು ಕೇಳಿ ನನಗೆ ಬಹಳ ಮೆಚ್ಚುಗೆಯಾಯಿತು. ನಮ್ಮ ಜಿಲ್ಲೆಯಲ್ಲಿ ಶ್ರೀ ಪಿ.ಎಂ.ನಾಡಗೌಡರು ಸಹಕಾರಿ ಸಚಿವರಾಗಿದ್ದರು. ನಮ್ಮ ಜಿಲ್ಲೆಯಲ್ಲಿ ಅವರ ಸಹಾಯವನ್ನು ತೆಗೆದುಕೊಳ್ಳದಿರುವವರು ಒಬ್ಬರೂ ಇಲ್ಲ, ಅಂತಹ ಒಳ್ಳೆಯ ನಾಯಕರಾಗಿದ್ದರು. ಈ ಮನೆಯ ಸದಸ್ಯರಾಗಿದ್ದ ಡಾ: ಎಂ.ಪಿ.ನಾಡಗೌಡರು ಶ್ರೀ ಪಿ.ಎಂ.ನಾಡಗೌಡರ ಮಗ. ಡಾ: ಎಂ.ಪಿ.ನಾಡಗೌಡರು, ನಾಲ್ಕು ಬಾರಿ ಮೇಲ್ಮನೆ ಸದಸ್ಯರಾಗಿ ಆಯ್ಕೆಯಾದವರು. ಶ್ರೀ ಕೋಲೂರು ಮಲ್ಲಪ್ಪ ಇವರು ಸಹ ಬಹಳ ದೊಡ್ಡ ರಾಜಕಾರಣಿ. ಆಗಿನ ಕಾಲದ ರಾಜಕಾರಣಿಗಳು ಹೆಸರನ್ನು ಹೇಳಿ ಎಲ್ಲರೂ ಒಳ್ಳೆಯ ಕೆಲಸವನ್ನೇ ಮಾಡಿದ್ದರು. ಆದರೆ ಅವರಿಗೆ ತದ್ವಿರುದ್ಧವಾಗಿ ಈಗಿನ ರಾಜಕಾರಣಿಗಳು;

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ವಿರೋಧ ಪಕ್ಷದ ನಾಯಕರು ವಿಷಯವನ್ನು ಬಿಟ್ಟು ಕನ್ನಂಬಾಡಿಗೆ ಹೋದರು. ಯಾವುದೆ ವಿಷಯವನ್ನು ಕೊಟ್ಟರು ಅಭ್ಯಾಸ ಮಾಡದೆಯೇ ಮಾತನಾಡುತ್ತಾರೆ. ಇದನ್ನು ಕೇಳಿ ನಮಗೆ ಅಭ್ಯಾಸವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ನಾನು ಕನ್ನಂಬಾಡಿಗೆ ಹೋಗಲು ಕಾರಣವಿದೆ. ಇಷ್ಟು ದಿನ ಈ ಸರ್ಕಾರಕ್ಕೆ ಏನಾದರೂ ಹೇಳಿದರೆ ತಿಳಿದುಕೊಳ್ಳುತ್ತದೆ ಎಂದು ತಿಳಿದುಕೊಂಡಿದೆ. ಆದರೆ ಎದು ಗೋರ್ಕಲ್ಲ ಮೇಲೆ ನೀರು ಸುರಿದ ಹಾಗೆ ಎನ್ನುವುದು ಗೊತ್ತಾಯಿತು. ಶತಮಾನಗಳಿಂದ ನೀರು ಸುರಿದರು ಅದು ಕಲ್ಲಾಗಿಯೇ ಇರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಅವರು ಹೇಳುವುದು ಸರಿ, ಕಲ್ಲಿನ ಮೇಲೆ ನೀರು ಸುರಿಯುತ್ತಿದ್ದಾರೆ, ಅದು ಕಲ್ಲೋ, ಮಣ್ಣೋ ನೀರು ಸುರಿದರೆ ಬೆಳೆ ಬರುತ್ತದೆಯೇ ಇಲ್ಲವೇ ಎಂದು ನೋಡದೆ ಕಲ್ಲಿನ ಮೇಲೆ ನೀರು ಸುರಿಯುತ್ತಾರೆ, ಅವರಿಗೆ ವಿಷಯಕ್ಕೆ ಬರಲು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ನಿಮ್ಮ ಸಭಾನಾಯಕರೆ ನನಗೆ ಅಡ್ಡಿಪಡಿಸುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಅದ್ಭುತವಾಗಿ ವಿಷಯವನ್ನು ಮಂಡನೆ ಮಾಡುತ್ತೀರಿ ಎಂದು ನನಗೆ ಗೊತ್ತು. ಆದರೆ ವಿಷಯಕ್ಕೆ ಬರುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ನಾನು ಏಕೆ ಹೇಳುತ್ತಿದ್ದೇನೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಅರ್ಥ ಮಾಡಿಕೊಂಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ನಾನು ಏಕೆ ಹೇಳುತ್ತೇನೆ ಎನ್ನುವುದನ್ನು ಮಾನ್ಯ ಸಭಾನಾಯಕರು ಅರ್ಥ ಮಾಡಿಕೊಳ್ಳಬೇಕು. ಇದು ಯಾರು ಹಾದಿಯಲ್ಲಿ ಹೋಗುವವರು ಹೇಳಿರುವ ಮಾತಲ್ಲ. ಭಾರತ ರತ್ನ ಡಾ:ವಿಶ್ವೇಶ್ವರಯ್ಯನವರು ಉದ್ಯಮಗಳ ಬಗ್ಗೆ 'Industrialize or Perish', ಉದ್ಯಮವನ್ನು ಮಾಡಿ ಇಲ್ಲಾ ನಶಿಸಿ ಹೋಗಿ ಎಂದು ಹೇಳಿದರು. ಅಂದರೆ ಅದು employment generation ಮಾಡುತ್ತದೆ. ರಾಷ್ಟ್ರೀಯ output ಹೆಚ್ಚು ಮಾಡುತ್ತದೆ.

**(ಮುಂದು)**

**(644)20–03–2020(04–40)ಬಿಎಸ್‌ಡಿ–ಎಕೆ**
**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಅಲ್ಲಿಯ ಉಸ್ತುವಾರಿ ಮಂತ್ರಿಗಳು ಮನೆಯಲ್ಲಿಟ್ಟು ಪೂಜೆ ಮಾಡುತ್ತಾರೆ ಎಂದು ಲಕ್ಷ್ಯದಿಂದ ಹೇಳಿದ ಮಾತುಗಳನ್ನು ಪಾಲನೆ ಮಾಡಿದಿದ್ದರೆ ಹೇಗೆ? ಉದ್ಯಮಗಳನ್ನು ಹಾಳು ಮಾಡುತ್ತಿದ್ದಾರೆಂದರೆ ಇದಕ್ಕಿಂತ ಪಾಪದ ಕೆಲಸ ಯಾವುದೂ ಇಲ್ಲ. ಶಾಸಕರಿದ್ದಾಗ ಎರಡು ಪತ್ರ ......

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಚರ್ಚೆ ಮಾಡಲು ಸಿದ್ಧವಿದೆ ಮತ್ತು ಸಮಸ್ಯೆಯನ್ನು ಕೇಳುತ್ತದೆ. ನಾನು ವಿಷಯಕ್ಕೆ ಬನ್ನಿ ಎಂದಷ್ಟೇ ಹೇಳಿದೆ, ಅವರು ಏನು ಬೇಕಾದರೂ ಮಾತನಾಡಲಿ. ಆದರೆ ವಿಷಯಕ್ಕೆ ಬರಬೇಕೆಂದು ನನ್ನ ವಿನಂತಿ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರು ನಿರ್ಧಾರವನ್ನೇ ಮಾಡಿಬಿಟ್ಟರಾ? ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಮುನ್ನ ಪೀಠಿಕೆಯನ್ನು ಹಾಕಬಾರದೇ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಮಾತನಾಡಿ ಎಂದರೆ ನಾನು ಮಾತನಾಡುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ:–** ಅವರು ಉತ್ತರ ಕರ್ನಾಟಕದಿಂದ ಬರುತ್ತಿದ್ದಾರೆ, ಈ ರೀತಿ ಅವರು ಅಡ್ಡ ಬಂದರೆ ಏನು ಮಾಡುವುದು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ...... ಅದಕ್ಕೆ ನನ್ನದೇನು ವಾದ ಇದೆ.

**ಶ್ರೀ ಎಸ್.ಆರ್. ಪಾಟೀಲ್:–** ನಾನು ಮಾನ್ಯ ಸಭಾನಾಯಕರಿಂದ ಕಲಿಯಬೇಕಾದ್ದು ಏನೂ ಇಲ್ಲ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಇಲ್ಲ, ಕಲಿಯಬಾರದು.

**ಶ್ರೀ ಎಸ್.ಆರ್. ಪಾಟೀಲ್ಃ–** ನನ್ನ ಮಾತುಗಳಿಂದ ಅವರಿಗೆ ನೋವಾಗುತ್ತದೆಯೇ ಅಥವಾ ನನ್ನ ಮಾತುಗಳು ಚುಚ್ಚಿದಂತೆ ಆಗುತ್ತದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಏನೂ ಆಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ತುಂಬಾ ಹಿರಿಯರು. ಅವರು ಯಾರಿಂದಲೂ ಕಲಿಯುವವರಲ್ಲ.

**ಶ್ರೀ ಎಸ್.ಆರ್. ಪಾಟೀಲ್ಃ–** ಮಾನ್ಯ ಸಭಾನಾಯಕರೆಂದರೆ ಅವಶ್ಯಕತೆ ಇರುವಾಗ ಮಾತ್ರ ಮಾತನಾಡಲು ಏಳಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮನಸ್ಸಿಗೆ ಬಂದ ಹಾಗೆ ಮಾತನಾಡುವುದಕ್ಕಾಗುವುದಿಲ್ಲ. ಅದೇರೀತಿ ಮನಸ್ಸಿಗೆ ಬಂದಷ್ಟು ಸಮಯ ಮಾತನಾಡುವುದಲ್ಲ.

**ಶ್ರೀ ಎಸ್.ಆರ್. ಪಾಟೀಲ್ಃ–** ಮೈಸೂರು ರಾಜ್ಯದಲ್ಲಿ ಅನುಕೂಲ ಕಲ್ಪಿಸಿರುವ ಮೋಕ್ಷಗುಂಡಂ ಶ್ರೀಮಾನ್ ವಿಶ್ವೇಶ್ವರಯ್ಯನವರ ಹೆಸರನ್ನು ಪ್ರಸ್ತಾಪ ಮಾಡಿದರೆ ಮಾನ್ಯ ಸಭಾನಾಯಕರು ಮನಸ್ಸಿಗೆ ಬಂದ ಹಾಗೆ ಎಂದು ಹೇಳುತ್ತಿದ್ದಾರೆ. ಅಂದರೆ ಅವರ ಬಗ್ಗೆ ಎಷ್ಟು ಗೌರವ ಇದೆ ಎಂಬುದನ್ನು ತಿಳಿದುಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಮಾನ್ಯ ಸಭಾಪತಿಯವರೇ, ನಾನು ವಿಷಯಕ್ಕೆ ಬನ್ನಿ ಎಂದಷ್ಟೇ ಹೇಳಿದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಮಾನ್ಯ ಸಭಾನಾಯಕರ ಮನಸ್ಥಿತಿ ಹೇಗಿದೆ ಎಂಬುದನ್ನು ನೋಡಬೇಕು. ಕನ್ನಂಬಾಡಿ ಅಣೆಕಟ್ಟು ನಿರ್ಮಿಸಿದ ಭಾರತರತ್ನ ಡಾ॥ ರುವ ಮೋಕ್ಷಗುಂಡಂ ಶ್ರೀಮಾನ್ ವಿಶ್ವೇಶ್ವರಯ್ಯನವರು ಹಾಗೂ ಸನ್ಮಾನ್ಯ ನಾಲ್ವಡಿ ಕೃಷ್ಣರಾಜ ಒಡೆಯರ ಬಗೆಗಿನ ಮಾತು ಅವರಿಗೆ ಪಥ್ಯವಾಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಗಣಿ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡುವಾಗ ಇಡೀ ಪ್ರಪಂಚದ ಬಗ್ಗೆ ಮಾತನಾಡಬೇಕು ಎಂಬ ನಿಯಮ ಇದ್ದರೆ ನನ್ನ ಆಕ್ಷೇಪವೇನೂ ಇಲ್ಲ. ಸಭಾನಾಯಕನಾಗಿ ದಯವಿಟ್ಟು ವಿಷಯಕ್ಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬನ್ನಿ ಎಂದು ನಾನು ಹಿರಿಯರಾದ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿದ್ದೆನು. ಇಷ್ಟೇ ಮಾತನಾಡಬೇಕೆಂದು ನಿಯಮ ಇದ್ದರೆ ನನ್ನದೇನೂ ಆಕ್ಷೇಪ ಇಲ್ಲ.

**Sri S.R PATIL:** The Leader of the House can't dictate me. ಹೀಗೆ ಮಾತನಾಡಬೇಕು ಎಂದು ಹೇಳುವ ಹಕ್ಕು ಮಾನ್ಯ ಸಭಾನಾಯಕರಿಗೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಅವರಿಗೆ ಹೀಗೆ ಮಾತನಾಡಿ ಎಂದು ಹೇಳಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಇನ್ನು ನಾನು ಬೇರೆ ಭಾಷೆಯನ್ನು ಉಪಯೋಗ ಮಾಡಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರಿಗೆ ಉತ್ತರ ಕೊಡಲು ನಮಗೂ ಬರುತ್ತದೆ. ಅವರೊಬ್ಬರು ಮಾತನಾಡಲು ಸ್ವಾತಂತ್ರ್ಯ ಹೊಂದಿಲ್ಲ. ಮಾತನಾಡಲು ನನಗೂ ಬರುತ್ತದೆ. ನಾನೂ ಕೂಡ ಅದೇ ಸ್ಥಾನದಲ್ಲಿ ನಿಂತು ಕೆಲಸ ಮಾಡಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ನಾನು ಬೇರೆ ಭಾಷೆಯನ್ನು ಉಪಯೋಗ ಮಾಡಬೇಕಾಗುತ್ತದೆ. ಹೀಗೆ ಮಾತನಾಡಿ ಎಂದು ಹೇಳಲು ಅವರ್ಯಾರು? He can't dictate me. Who is he to tell me that 'you have to talk like this'? ಮಾನ್ಯ ಸಭಾಪತಿಯವರು ಹೇಳಬೇಕು. ತಮ್ಮ ಆದೇಶ ಪಾಲನೆ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ ಹೇಳಲಿ, ಅವರ ಆದೇಶವನ್ನು ನಾನೂ ಪಾಲನೆ ಮಾಡುತ್ತೇನೆ.

**Sri S.R PATIL:** Who is he to dictate me? ಅವರು ಹೀಗೆ ಮಾತನಾಡಬೇಕು, ಇದನ್ನೇ ಮಾತನಾಡಬೇಕು ಎಂದು ಹೇಳಲು ಅವರ್ಯಾರು? Who is he? After all what is he?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ವಿರೋಧ ಪಕ್ಷದ ನಾಯಕರೆಂದರೆ ಸರ್ವಾಧಿಕಾರಿಗಳಲ್ಲ! ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಮಾನ್ಯ ಬಸವರಾಜ ಹೊರಟ್ಟಿಯವರು ಸಭಾನಾಯಕರಾಗಿದ್ದರು. ಆಗ ನಾನು ಮಾತನಾಡುವಾಗ ವಿಷಯದ ಚೌಕಟ್ಟನ್ನು ಬಿಟ್ಟು ಹೋದಾಗ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾನ್ಯ ಸಭಾಪತಿಯವರು ಹೇಳುತ್ತಿದ್ದರು. ನಾನು ಮನವಿ ಮಾಡಿದ್ದೇನೆ, ಅದರಿಂದ ಅವರಿಗೆ ಏನು ತೊಂದರೆ? ನಾನು ವಿನಂತಿ ಮಾಡಿದ್ದಕ್ಕೆ ಈ ರೀತಿ ಮಾತನಾಡುವುದೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ನನ್ನ ವಿನಂತಿ ವಿಷಯಕ್ಕೆ ಬನ್ನಿ ಎಂದು ಇದೆ, ಅದನ್ನು ಬಿಟ್ಟು ಬೇರೆ ಏನೂ ಹೇಳಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸದನದ ಸದಸ್ಯರಿಗೆ ಮಾತನಾಡಲು ತಾವು ಅನುಮತಿ ಕೊಟ್ಟಾಗ ಯಾವುದೇ ರೀತಿ ಇನ್ನೊಬ್ಬರಿಗೆ ಚ್ಯುತಿಯಾಗದಂತೆ ಅಥವಾ ಸರ್ಕಾರದಲ್ಲಿರುವ ಜನರಿಗೆ ನಿಂದನೆಯಾಗದಂತೆ ಮಾತನಾಡಲು ಎಲ್ಲಾ ಹಕ್ಕು ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಮಾನ್ಯ ಸಭಾಪತಿಯವರೇ, ಅವರು ಪೀಠದಲ್ಲಿ ಕುಳಿತಿರಬೇಕಾದರೆ ನಾನು ವಿರೋಧ ಪಕ್ಷದ ನಾಯಕನಾಗಿದ್ದೆನು. ಅವರು ದಯವಿಟ್ಟು ವಿಷಯಕ್ಕೆ ಬನ್ನಿ ಎಂದು ಹೇಳುತ್ತಿದ್ದರು. ನಾನು ಅದನ್ನು ಗೌರವದಿಂದ ಕೇಳಿ ಮುಂದುವರೆಸಿದ್ದೇನೆ. ನಾನು ಮಾನ್ಯ ಸಭಾಪತಿಯವರಿಗೆ, ದಯವಿಟ್ಟು ವಿಷಯಕ್ಕೆ ಬರುವಂತೆ ಹೇಳಿ ಎಂದು ಮನವಿ ಮಾಡಿದೆನು. ಇದರಲ್ಲಿ ತಪ್ಪೇನಿದೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಆಯಿತು, ಮಾನ್ಯ ಸಭಾಪತಿಯವರು ಪೀಠದಲ್ಲಿದ್ದು, ಅವರು ಆದೇಶ ಕೊಡುತ್ತಾರೆ. ಆದರೆ ನಾವುಗಳು ಏಕೆ ಗುದ್ದಾಡಬೇಕು? ಕೆಲವೊಂದು ಸಾರಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬೇಕೆಂದರೆ ಒಮ್ಮೆಗೆ ವಿಷಯಕ್ಕೆ ಬರುವುದಕ್ಕೆ ಆಗುವುದಿಲ್ಲ. ಮೊದಲು preamble ಗೆ ಬಂದು ನಂತರ ವಿಷಯ ಮಂಡಿಸಬೇಕಾಗುತ್ತದೆ. ದಯಮಾಡಿ ಮಾನ್ಯ ಪಾಟೀಲರು ಮಾತನಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್ಃ–** ಮಾನ್ಯ ಸಭಾನಾಯಕರು ಮಧ್ಯೆ ಏಳುವುದಿಲ್ಲ ಎಂದರೆ ಮಾತ್ರ ಮಾತನಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ತಮ್ಮ ಆದೇಶವನ್ನು ಸ್ವೀಕಾರ ಮಾಡುತ್ತೇನೆ, ತಾವು ಮಾತನಾಡಲು ತಿಳಿಸಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಮಾನ್ಯ ಸಭಾಪತಿಯವರೇ, ತಾವು ಹೇಳಿ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:–** ಮಾತನಾಡಿ. ಇದು ಹೇಗಾಗಿದೆ ಎಂದರೆ ಮಾತನಾಡುವುದೇ ನನ್ನ ಹಕ್ಕು, ಅವರು ಹೇಳುತ್ತಾರೆ.......

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ 22 ವರ್ಷ ಈ ಸದನದಲ್ಲಿ ಅನೇಕ debate ಗಳಲ್ಲಿ ಭಾಗವಹಿಸಿದ್ದೇನೆ. ಪ್ರತಿಪಕ್ಷದ ನಾಯಕರು ಮಾತನಾಡುವ ಮುನ್ನ ಮಾನ್ಯ ಸಭಾನಾಯಕರು ಹೀಗೆ ಮಾತನಾಡಬೇಕು ಎಂದು ಹೇಳುವುದು ನನಗೆ ಸರಿ ಕಾಣುವುದಿಲ್ಲ. ಇನ್ನು ಅವರಿಗೆ ಬಿಟ್ಟ ವಿಚಾರ, ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದಲ್ಲದೇ ಮಧ್ಯೆ ಮಧ್ಯೆ interfere ಆದರೆ ನನಗೂ ಮಾತನಾಡುವುದಕ್ಕೆ ಆಗುವುದಿಲ್ಲ. ಅವರು interfere ಆಗುತ್ತಾರೆ ಎಂದರೆ ನಾನು ಮಾತನಾಡದೇ ಕುಳಿತುಕೊಳ್ಳುತ್ತೇನೆ. I have no objection. ಉದ್ಯಮದ ಬಗ್ಗೆ ಮಾತನಾಡಿರುವುದರಿಂದ ನಾನು ಏಕೆ ಅವರ ಹೆಸರನ್ನು ಬಳಕೆ ಮಾಡಿದೆ ಎಂದರೆ, ಇದು ಉದ್ಯಮವನ್ನು ನಿಲ್ಲಿಸುವಂತಹದ್ದಾಗಿದೆ. ಒಬ್ಬ ಶಾಸಕರು ಶಾಸಕರಾಗಿದ್ದಾಗ ಈ ಉದ್ಯಮವನ್ನು ಪ್ರಾರಂಭ ಮಾಡಬೇಕೆಂದು ಎರಡು ಪತ್ರಗಳನ್ನು ನೀಡಿದ್ದು, ತದನಂತರ ಅದೇ ಶಾಸಕರು ಬೇರೆ ಪಕ್ಷಕ್ಕೆ ಹೋಗಿ, ಅಲ್ಲಿ ಮಂತ್ರಿಯಾಗಿ ಆ ಜಿಲ್ಲೆಯ ಉಸ್ತುವಾರಿ ಸಚಿವರಾದ ಕೂಡಲೇ ನಿಲ್ಲಿಸುವ ಬಗ್ಗೆ ಹೇಳುತ್ತಿದ್ದಾರೆ. ಅಂದರೆ political vengeance ನಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ನಾಡಿಗೆ ಒಳ್ಳೆಯದಾಗುವುದಿಲ್ಲ ಮತ್ತು ಅವರಿಗೂ ಭೂಷಣವಲ್ಲ. ಇದರಿಂದ indirect employment ಎನ್ನುವಂತೆ ಕನಿಷ್ಠ 500 ಜನರಿಗೆ ಉದ್ಯೋಗವಿಲ್ಲದೇ ಅವರ ಹೊಟ್ಟೆ ಮೇಲೆ ಹೊಡೆದಂತೆ ಆಗುತ್ತದೆ. ಅವರಿಗೆ ಉದ್ಯೋಗ ನಿಲ್ಲಿಸುವ ಪಾಪದ ಕೆಲಸ ಮಾಡಬಾರದು. ಮಾನ್ಯ ಸಭಾಪತಿಯವರು ಉಚ್ಚ ನ್ಯಾಯಾಲಯದವರು ಈ ಉದ್ಯಮವನ್ನು ನಿಲ್ಲಿಸದೆ ಮುಂದುವರೆಸಬೇಕು ಎಂದು ಮೂರು ಆದೇಶಗಳನ್ನು ಮಾಡಿದ್ದಾರೆ. ಉಚ್ಚ ನ್ಯಾಯಾಲಯ ಆದೇಶದ ಬಗ್ಗೆಯೂ ಕಾಳಜಿ ಇಲ್ಲ. ಆ ಜಿಲ್ಲಾಧಿಕಾರಿಯು he might be dancing according to the tune of the care-taking minister of that district. ಆ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದಂತೆ ಜಿಲ್ಲಾಧಿಕಾರಿ ವರ್ತನೆ ಮಾಡಿದರೆ ಹೇಗೆ? ಮಾನ್ಯ ಸಚಿವರು ಬೇಕಾದ್ದು ಹೇಳಬಹುದು. ಆದರೆ ಕಾನೂನು ಚೌಕಟ್ಟಿನಲ್ಲಿ ಇದ್ದರೆ ಮಾತ್ರ ಪಾಲನೆ ಮಾಡಬೇಕು. ಇಲ್ಲದಿದ್ದರೆ ಕಾನೂನು ಮತ್ತು ಉಚ್ಚ ನ್ಯಾಯಾಲಯದ ಆದೇಶಕ್ಕೆ ವ್ಯತಿರಿಕ್ತವಾಗುತ್ತದೆ ಎಂದು ಹೇಳಬೇಕು. ಮಾನ್ಯ ರೇವಣ್ಣನವರು ಮಾತನಾಡಿದರು. ಆ ಉದ್ಯಮದ ಮೇಲೆ ರೂ.11.05 ಕೋಟಿ ದಂಡ ಹಾಕಿದ್ದಾರೆ. ಆ ಉದ್ಯಮವನ್ನು ಸ್ಥಾಪನೆ ಮಾಡುವುದಕ್ಕೆ ರೂ.20 ಕೋಟಿಗಳಾದರೆ, ಇದರ ಅರ್ಧಕ್ಕಿಂತ ಹೆಚ್ಚು ದಂಡ ಹಾಕಿದ್ದಾರೆ. ಈ ರೀತಿ ನಾನು ಎಲ್ಲಿಯೂ ಕೇಳಿಲ್ಲ. ಈ ಉದ್ಯಮದಿಂದ 9 ತಿಂಗಳಲ್ಲಿ ರಾಜ್ಯಕ್ಕೆ ಇಷ್ಟು ಹಾನಿಯಾಗುತ್ತದೆ ಎಂದಾಯಿತಲ್ಲವೇ? ಮಾನ್ಯ ಸಭಾಪತಿಯವರೇ, Vigilance Committee ಯವರು favourable report ಕೊಟ್ಟಿದ್ದಾರೆ. The Vigilance Committee has not given a report against them. Vigilance

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Committee ಯವರು favourable report ಕೊಟ್ಟಿದ್ದಾರೆ. ಉಚ್ಚ ನ್ಯಾಯಾಲಯ ಮೂರು ಸಾರಿ ಆದೇಶ ಮಾಡಿದೆ. ಆ ಉದ್ಯಮದ ಸುತ್ತಲೂ water sprinkling ಮಾಡಿದ್ದಾರೆ. ಅಂದರೆ ಇದರಿಂದ dust settle ಆಗಬೇಕು ಎಂದು ಮಾಡಿದ್ದಾರೆ. ನಮ್ಮ ಬಾಗಲಕೋಟೆಯಲ್ಲಿನ ಒಂದು cement factory ಯಲ್ಲಿನ dust ಬಹಳ ತೊಂದರೆ ಮಾಡುತ್ತಿತ್ತು. ಅಲ್ಲಿಯೂ ಇಂತಹ ಒಂದು ಅವಕಾಶ ಕಲ್ಪಿಸಿದರು. Crusher ಸುತ್ತಲೂ dust ದೂರ ಹೋಗಬಾರದೆಂದು ನೀರನ್ನು sprinkle ಮಾಡಿದರೆ dust ಅಲ್ಲಿಯೇ ಕೆಳಗೆ settle ಆಗುತ್ತದೆ. ಅಷ್ಟೇ ಅಲ್ಲದೇ ಪರಿಸರ ಮಾಲಿನ್ಯವಾಗಬಾರದೆಂದು ಸುತ್ತಲೂ ಗಿಡ–ಮರಗಳನ್ನು ಹಾಕಿದ್ದಾರೆ. ನಾನು ಬಹಳಷ್ಟು Crusher ಗಳನ್ನು ನೋಡಿದ್ದೇನೆ. ಏಕೆಂದರೆ ಮಾನ್ಯ ಗೋವಿಂದ ಕಾರಜೋಳರವರ ಬಿಜಾಪುರ ಜಿಲ್ಲೆಯಲ್ಲಿ ನೋಡಿದ್ದೇನೆ. ಇಷ್ಟು caution ತೆಗೆದುಕೊಂಡಿರುವ industry ಯನ್ನು ನಾನು ನೋಡಿಲ್ಲ. ಕಾನೂನುಬದ್ಧವಾಗಿರುವ environmental condition ಗಳನ್ನು beyond reasonable doubt fulfill ಮಾಡಿದ್ದಾರೆ. ಅನೇಕ financial institution ಗಳಿಂದ ರೂ.20 ಕೋಟಿ ಸಾಲ ತಂದಿರುತ್ತಾರೆ. ಮನೆಯಲ್ಲಿ ಯಾರಲ್ಲಿಯೂ ರೂ.20 ಕೋಟಿ ಇರುವುದಿಲ್ಲ, ಇದನ್ನು ಸಾಲ ತಂದು ಬಡ್ಡಿ ಕಟ್ಟಬೇಕು. ನನಗೆ ಅನಿಸಿದಂತೆ 500 ಮಂದಿ ಉದ್ಯೋಗ ಹೋಗುವುದಲ್ಲದೇ, ಇದಕ್ಕೆ ಯಾವ bank finance ಮಾಡಿದೆ, it will become a bad debt. ಆ ಉದ್ಯಮ ಕೆಲಸ ನಿಲ್ಲಿಸಿದರೆ ಅದರ ಪರಿಸ್ಥಿತಿ ಏನಾಗುತ್ತದೆ? ಉತ್ಪಾದನೆ ನಿಂತುಹೋಗುತ್ತದೆ, ಉತ್ಪಾದನೆ ನಿಂತು ಹೋದರೆ ತಂದಂತಹ ಸಾಲಕ್ಕೆ ಬಡ್ಡಿ ಗಂಟು ಕಟ್ಟಬೇಕಲ್ಲವೇ? He can't repay the principal as well as the interest. Ultimately, it will become a bad debt. It will become NPA of the bank. ಇದರ ಪರಿಣಾಮ ಉದ್ಯಮದ ಮಾಲೀಕನ ಮೇಲೆ ಮಾತ್ರವಲ್ಲದೇ ಬಹುತೇಕವಾಗಿ ಇಡೀ ಉದ್ಯಮದ ಇತಿಹಾಸದಲ್ಲಿಯೇ ಇದೊಂದು ಕಪ್ಪು ಚುಕ್ಕೆ. ಕರ್ನಾಟಕ ರಾಜ್ಯದ ಔದ್ಯಮಿಕ ಇತಿಹಾಸದಲ್ಲಿಯೇ ಇದೊಂದು ಕಪ್ಪು ಚುಕ್ಕೆ ಆದಂತೆ ಆಗುತ್ತದೆ. ಇಡೀ ಕರ್ನಾಟಕ ರಾಜ್ಯದಲ್ಲಿ vengeance politics ಮಾಡಿರುವುದಕ್ಕೆ ಇದೊಂದು ಜೀವಂತ ಉದಾಹರಣೆಯಾಗಿದೆ. ನಾವು ದಂತಕತೆ ಎಂದು ಏನು ಹೇಳುತ್ತೇವೆ, ಇವತ್ತಿನ ರಾಜಕಾರಣದಲ್ಲಿ ಅದರಲ್ಲೂ ಬಿಜೆಪಿ ಯವರು ಈ ರೀತಿಯಾದ ರಾಜಕೀಯ ದ್ವೇಷದ ರಾಜಕಾರಣ ಮಾಡುತ್ತಾರೆ ಎನ್ನುವ ಮಾತು ಕೂಡ ಬರುತ್ತದೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(645)/20.03.2020/4.50/ಹೆಚ್‌ವಿ–ಆರ್‌ಎನ್
**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಈ ರೀತಿಯ ರಾಜಕೀಯ ದ್ವೇಷ ಸಾಧಿಸಬಾರದು. ಏಕೆಂದರೆ, ನಮ್ಮ ರಾಜಕೀಯ ವೈರಿಯಾಗಿರಲಿ ಅಥವಾ ಬೇರೆ ರೀತಿಯಲ್ಲಿ ಕಡು ವೈರಿಗಳಾಗಿರುವವರು ಒಂದು ಉದ್ಯಮವನ್ನು ಪ್ರಾರಂಭ ಮಾಡುತ್ತಾರೆಂದರೆ, ಆ ಉದ್ಯಮದಿಂದ ಆ ಜಿಲ್ಲೆಯ ಅಭಿವೃದ್ಧಿಯಾಗುತ್ತದೆ ಆ ಹಿನ್ನೆಲೆಯಲ್ಲಿ ನಾವು ಆ ಉದ್ಯಮವನ್ನು ಸ್ವಾಗತಿಸಬೇಕಾಗುತ್ತದೆ ಮತ್ತು ಸಹಕರಿಸಬೇಕಾಗುತ್ತದೆ. ಆ ಮುಖಾಂತರ ಉದ್ಯೋಗ ಸೃಷ್ಟಿಯಾಗುತ್ತದೆ ಹಾಗೂ ರಾಜ್ಯದ ಔಟ್‌ಪುಟ್ ಹೆಚ್ಚಾಗುತ್ತದೆ. ಒಳ್ಳೆಯ ಕೆಲಸ ಮಾಡುವವರಿಗೆ ನಾವು ಶಹಭಾಷ್‌ಗಿರಿಯನ್ನು ಕೊಡಬೇಕಾಗುತ್ತದೆ. ಸಾಲಸೋಲಾ ಮಾಡಿ, ತಮ್ಮ ಜೀವವನ್ನು ಒತ್ತೆಯಿಟ್ಟು ಬ್ಯಾಂಕ್‌ನಿಂದ 20 ಕೋಟಿ ರೂಪಾಯಿಗಳಷ್ಟು ಸಾಲ ತಂದು ಉದ್ಯಮ ಪ್ರಾರಂಭ ಮಾಡಿದವರಿಗೆ, ಚುನಾವಣೆ ಸಮಯದಲ್ಲಿ ನಮಗೆ ಚಿಕ್ಕ ಸಹಾಯ ಮಾಡಲಿಲ್ಲ, ಚುನಾವಣೆಯಲ್ಲಿ ನಮ್ಮನ್ನು ವಿರೋಧಿಸಿದರು ಎನ್ನುವ ಕಾರಣದಿಂದಾಗಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದಾಗ ಅವರ ಪರವಾಗಿರುವ ಉದ್ಯಮಗಳನ್ನು ಮುಚ್ಚಿಸುವುದು, ಅವರ ಪಕ್ಷ ಅಧಿಕಾರಕ್ಕೆ ಬಂದಾಗ ನಮ್ಮ ಪರವಾಗಿರುವ ಉದ್ಯಮಗಳನ್ನು ಮುಚ್ಚಿಸುವಂತಹ ಕೆಲಸ ಮಾಡಿದರೆ, ಕೊನೆಗೆ ಯಾವ ಉದ್ಯಮವೂ ಉಳಿಯುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಚುನಾವಣೆಯ ವೇಳೆಯಲ್ಲಿ 'ಭಾರತೀಯ ಜನತಾ ಪಕ್ಷಕ್ಕೆ ಬಾ' ಎಂದು ಇವರು ಕರೆದಾಗ ಅವರು ಹೋಗಿಲ್ಲ, ಅದಕ್ಕಾಗಿ ಇವರು ಈ ರೀತಿಯ ರಾಜಕೀಯ ದ್ವೇಷ ಸಾಧಿಸುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಮಗೆ ಇಂತಹವುಗಳೆಲ್ಲ ಗೊತ್ತಿಲ್ಲ. ಒಳ್ಳೆಯ ಕೆಲಸ ಮಾಡುವವರಿಗೆ ನಾವು ಶಹಭಾಷ್‌ಗಿರಿ ಕೊಡಬೇಕು. ರಾಜಕಾರಣ ಮಾಡುವ ವಿಚಾರದಲ್ಲಿ ನಾವು ರಾಜಕಾರಣ ಮಾಡೋಣ. ಚುನಾವಣೆಯಲ್ಲಿ ಸೌಹಾರ್ದಯುತವಾಗಿ ಸೆಣಸಬೇಕು. ಅಭಿವೃದ್ಧಿ ಕೆಲಸದ ವಿಚಾರ ಬಂದಾಗ, ನಾವೆಲ್ಲರೂ ಒಂದಾಗಿರಬೇಕಾಗುತ್ತದೆ. ಪಕ್ಷಾತೀತವಾಗಿ ಕೆಲಸ ಮಾಡಿದಾಗ ಮಾತ್ರ ರಾಜ್ಯದ ಅಭಿವೃದ್ಧಿಯಾಗುತ್ತದೆ. ಪಕ್ಷದ ಪರವಾಗಿರುವುದು ಅಭಿವೃದ್ಧಿಯಲ್ಲ. ಯಾವುದೇ ಪಕ್ಷ–ಪಂಗಡ ಇರಲಿ, ಯಾವುದೇ ಜಾತಿ ಧರ್ಮದವರಾಗಿರಲಿ, ನಾವೆಲ್ಲರೂ ಒಟ್ಟಾರೆಯಾಗಿ ಕೆಲಸ ಮಾಡಿದರೆ, ಆ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಯಾಗುತ್ತದೆ. ನಮಗೆ ಸಹಾಯ ಮಾಡಲಿಲ್ಲ, ನಮಗೆ ವಿರೋಧ ವ್ಯಕ್ತಪಡಿಸಿದರು ಮತ್ತು ನಮ್ಮ ಪರವಾಗಿ ಬರಲಿಲ್ಲ ಎಂದು ಕಿರುಕುಳ ಕೊಡುವುದಕ್ಕೆ ಅವರು ಊಳಿಗದ ಆಳುಗಳೇ? ಆ ಜಿಲ್ಲೆಯಲ್ಲಿರುವವರೆಲ್ಲರೂ ಉಸ್ತುವಾರಿ ಮಂತ್ರಿಗಳಿಗೆ ಗುಲಾಮರೇ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವ ಮಾನ್ಯ ಆರ್.ಅಶೋಕ್‌ರವರಿಂದ ಏನು ತೊಂದರೆಯಾಗಿಲ್ಲ, ಅವರು ಫೋನ್ ಮಾಡಿ ಹೇಳಿದ್ದಾರೆ. ನಮ್ಮ ಜಿಲ್ಲೆಯ ಸಚಿವರಾದ ಮಾನ್ಯ ನಾರಾಯಣಗೌಡರಿಂದ ಅವರಿಗೆ ತೊಂದರೆಯಾಗಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿಃ–** ಮಾನ್ಯ ಶ್ರೀಕಂಠೇಗೌಡರೇ, ತಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸರಿಯಾಗಿ ಮಾಹಿತಿಯನ್ನು ಕೊಟ್ಟಿಲ್ಲ. ಅದಕ್ಕಾಗಿಯೇ ಅವರು ಗೊಂದಲದಲ್ಲಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಉಸ್ತುವಾರಿ ಸಚಿವರು ಫೋನ್ ಮಾಡಿ ಹೇಳಿದ್ದರೂ ಸಹ ಜಿಲ್ಲೆಯ ಮಂತ್ರಿಗಳು ಕೇಳುತ್ತಿಲ್ಲ. 'His words have not fall on your deaf ears' ಉಸ್ತುವಾರಿ ಸಚಿವರಿಗೇ ಬೆಲೆಯೇ ಇಲ್ಲವೇ? ಈ ರೀತಿಯಾದ ವ್ಯವಸ್ಥೆ ಇದ್ದರೆ ಈ ಕರ್ನಾಟಕ ರಾಜ್ಯದ ಅಭಿವೃದ್ಧಿ ನಿಶ್ಚಿತವಾಗಿಯೂ ಕುಂಠಿತವಾಗುತ್ತದೆ. ಸೇಡಿನ ರಾಜಕಾರಣವನ್ನು ನಿಲ್ಲಿಸಿದರೆ ಅವರಿಗಷ್ಟೇ ಅಲ್ಲ, ಈ ರಾಜ್ಯದ ಆರೂವರೆ ಕೋಟಿ ಜನರಿಗೂ ಒಳ್ಳೆಯದಾಗುತ್ತದೆ. ಅವರ ಅಧಿಕಾರಾವಧಿ ಇನ್ನೂ ಮೂರೂವರೆ ವರ್ಷ ಇದೆ. ಆದ್ದರಿಂದ ಅವರು ಒಳ್ಳೆಯ ಕೆಲಸ ಮಾಡಬೇಕಾಗಿದೆ. ಒಬ್ಬ ಉದ್ಯಮಿ ಸಾಲ ಮಾಡಿ ಕಷ್ಟದಲ್ಲಿರುವಂತಹ ಸಂದರ್ಭದಲ್ಲಿ ರಾಜಕೀಯ ದುರುದ್ದೇಶದಿಂದ ಇಂತಹ ಕೆಲಸಗಳನ್ನು ಮಾಡಬಾರದು. ಉದ್ಯಮಿಗೆ ತೊಂದರೆ ಕೊಡಲಾರದಂತಹ ಒಳ್ಳೆಯ ಬುದ್ಧಿಯನ್ನು ಅವರಿಗೆ ದೇವರು ದಯಪಾಲಿಸಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

## 10. <u>ಪ್ರಕಟಣೆಗಳು</u>

**ಸಭಾಪತಿಯವರುಃ–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ;

ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕಃ20.03.2020ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ನಗರಪಾಲಿಕೆಗಳ(ತಿದ್ದುಪಡಿ) ವಿಧೇಯಕ, 2020
2. ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು(ತಿದ್ದುಪಡಿ) ವಿಧೇಯಕ, 2020
3. ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ(ತಿದುಪಡಿ ವಿಧೇಯಕ, 2020
4. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಗಳ (ತಿದ್ದುಪಡಿ) ವಿಧೇಯಕ, 2020

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆ) ಸ್ವಾಮಿ ವಿವೇಕಾನಂದ ಯೋಗ ಅನುಷ್ಠಾನ ವತಿಯಿಂದ ವಿಧಾನ ಮಂಡಲದ ಮಾನ್ಯ ಶಾಸಕರುಗಳಿಗೆ ಶಾಸಕರ ಭವನ–2ರ ಸಮ್ಮೇಳನಾ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ "ಆರೋಗ್ಯಕ್ಕಾಗಿ ಯೋಗ" ಶಿಬಿರವನ್ನು ದಿನಾಂಕ:23.03.2020ರಿಂದ 31.03.2020ರವರೆಗೆ ಅಧಿವೇಶನ ನಡೆಯುವ ದಿನಗಳಲ್ಲಿ ಮಾತ್ರ ಮುಂದುವರೆಸಲಾಗಿರುತ್ತದೆ. ಸದರಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಾನ್ಯ ಶಾಸಕರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**11. ನಿಯಮ 68ರ ಅಡಿಯಲ್ಲಿ ಮುಂದುವರೆದ ಚರ್ಚೆ**

"ಮಂಡ್ಯ ಜಿಲ್ಲೆಯಲ್ಲಿ ಪರವಾನಗಿ ಪಡೆಯದೆ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿರುವುದಲ್ಲದೆ, ನ್ಯಾಯಸಮ್ಮತವಾಗಿ ಗಣಿಗಾರಿಕೆ ನಡೆಸುತ್ತಿರುವವರಿಗೆ ನೋಟಿಸ್ ಜಾರಿ ಮಾಡಿ ಘಟಕಗಳನ್ನು ಸ್ಥಗಿತಗೊಳಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕುರಿತು."

~~~~~~

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಬಸವರಾಜ ಹೊರಟ್ಟಿಯವರು ಈ ವಿಚಾರದ ಮೇಲೆ ಸಾಕಷ್ಟು ಚರ್ಚೆ ಮಾಡಿ, ಸಚಿವರಾದ ಶ್ರೀ ಸಿ.ಸಿ.ಪಾಟೀಲ್‌ರವರ ಗಮನವನ್ನು ಸೆಳೆದಿದ್ದಾರೆ. ಸರ್ಕಾರ ಬದಲಾವಣೆಯಾದ ಮೇಲೆ ಕಳೆದ ಆರು ತಿಂಗಳುಗಳಿಂದ ಈ ಸಮಸ್ಯೆ ಪ್ರಾರಂಭವಾಗಿದೆ. ಈತ ನಮ್ಮ ಪಕ್ಷದ ಕಾರ್ಯಕರ್ತ, 2008ನೇ ಸಾಲಿನಿಂದ ಸಣ್ಣ ಪ್ರಮಾಣದಲ್ಲಿ ಗಣಿಗಾರಿಕೆ ನಡೆಸುತ್ತಿದ್ದ. ನಂತರ 2018ನೇ ಸಾಲಿನಲ್ಲಿ ಅವರ ಎಲ್ಲ ಆಸ್ತಿಯನ್ನು ಅಡಮಾನವಿಟ್ಟು ಬ್ಯಾಂಕ್‌ನಿಂದ 15 ಕೋಟಿ ರೂಪಾಯಿಗಳ ಸಾಲ ಪಡೆದು ಗಣಿಗಾರಿಕೆಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಣೆ ಮಾಡಿದ್ದಾರೆ. ಇಲ್ಲಿಯವರೆಗೆ ಹಾಲಿ ಸಚಿವರಾಗಿರುವಂತಹ ಮಾನ್ಯ ನಾರಾಯಣಗೌಡರ ಕೃಪಾಕಟಾಕ್ಷ ಉದ್ಯಮಿ ಮಂಜುನಾಥನ ಮೇಲಿತ್ತು. ಈ ಮಂಜುನಾಥ್ ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದಾನೆ. ಮಂಜುನಾಥ್ ಮತ್ತು ಮಾನ್ಯ ನಾರಾಯಣಗೌಡರು ಪರಮಾಪ್ತ ಮಿತ್ರರಾಗಿದ್ದರು. ಬೆಳಗಿನಿಂದ ರಾತ್ರಿಯವರೆವಿಗೂ ಇಬ್ಬರೂ ಒಟ್ಟಿಗೆ ಇರುತ್ತಿದ್ದರು. ಬಾಂಬೆಯಲ್ಲಿ ಮತ್ತು ಇಲ್ಲಿ ಇಬ್ಬರೂ ಒಟ್ಟಿಗೆ ವ್ಯವಹಾರವನ್ನು ಮಾಡಿರಬಹುದು, ಅಷ್ಟು ಆತ್ಮೀಯರು. ಮಾನ್ಯ ನಾರಾಯಣಗೌಡರು 2018ರಿಂದ ಈ ಉದ್ಯಮಿಯ ಉದ್ಯಮಕ್ಕೆ ಉತ್ತೇಜನ ನೀಡುತ್ತಾ ಬಂದಿದ್ದರು. ಸರ್ಕಾರ ಬಿದ್ದು ಹೋಗಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಸಮಸ್ಯೆ ಪಾರಂಭವಾಗಿದೆ. ಇದು ಎಂತಹವರಲ್ಲಿಯೂ ಅನುಮಾನವನ್ನುಂಟು ಮಾಡುತ್ತದೆ. ಮಂಜುನಾಥ್‌ರವರು ಕಾನೂನು ಉಲ್ಲಂಘನೆ ಮಾಡಿದ್ದಾರೆಯೇ ಎಂದರೆ, ಇಲ್ಲ. ಗಣಿ ಇಲಾಖೆಯವರಿಗೆ, ಕಂದಾಯ ಇಲಾಖೆಯವರಿಗೆ ಮತ್ತು ಪೊಲೀಸ್ ಇಲಾಖೆಯವರಿಗೆ ಏನು ತೆರಿಗೆ ಸಂದಾಯ ಮಾಡಬೇಕೋ ಅದನ್ನು ಮಾಡಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~

ಪ್ರತಿ ವರ್ಷ ಆಡಿಟ್ ಮಾಡಿದ್ದಾರೆ. 2008ರಿಂದ ತೆರಿಗೆಯನ್ನು ಕಟ್ಟಿಕೊಂಡು ಬಂದಿದ್ದಾರೆ. ಯಾವುದೂ ಬಾಕಿ ಇಲ್ಲ. ಇಲಾಖಾ ನಿಯಮಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. 2019ರ ಕೊನೆಯ ಭಾಗದಲ್ಲಿ ಈ ಸಮಸ್ಯೆ ಪ್ರಾರಂಭವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನವರು. ಇತಿಹಾಸದಲ್ಲಿ ಇದನ್ನು ಯಾರೂ ಅಳಿಸುವುದಕ್ಕೆ ಆಗುವುದಿಲ್ಲ. ಇವತ್ತು 'ಅವರಾಡಿ ಇವರಾಡಿ ಮಾರಿ ಗುಡಿಗೆ ಬೆಂಕಿ' ಎನ್ನುವ ಗಾದೆ ಮಾತಿನಂತೆ ಇದು ಮಾನ್ಯ ಯಡಿಯೂರಪ್ಪನವರ ತಲೆಗೆ ಬರುತ್ತದೆ. ನನ್ನ ಮೇಲೋ ಅಥವಾ ಇನ್ಯಾರೋ ಮೇಲೆ ಬರುವುದಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಸುಮಾರು ಎರಡು ಸಾವಿರ ಗಣಿಗಾರಿಕೆ ನಡೆಯುತ್ತಿದೆ. ಯಾವ ರೀತಿಯಲ್ಲಿ ಗಣಿಗಾರಿಕೆ ನಡೆಯುತ್ತಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಇಲಾಖಾ ನಿಯಮವನ್ನು ಪಾಲನೆ ಮಾಡದೇ ಪೊಲೀಸ್ ಪರ್ಮಿಟ್ ಮೇಲೆ, ಕಂದಾಯ ಇಲಾಖಾಧಿಕಾರಿಗಳ ಪರ್ಮಿಟ್ ಮೇಲೆ, ಗಣಿ ಇಲಾಖೆಯವರ ಪರ್ಮಿಟ್ ಮೇಲೆ, ಶಾಸಕರ ಪರ್ಮಿಟ್ ಮೇಲೆ ಮತ್ತು ಪಂಚಾಯಿತಿ ಛೇರ್ಮನ್‌ರವರ ಪರ್ಮಿಟ್ ಮೇಲೆ ಗಣಿಗಾರಿಕೆ ನಡೆಯುತ್ತಿದೆ. ಇವರೆಲ್ಲರೂ ರಾಜ್ಯ ಸರ್ಕಾರಕ್ಕೆ ಕೊಡಬೇಕಾಗಿರುವ ರಾಜಧನವನ್ನು ಮೋಸ ಮಾಡುತ್ತಿರುವವರು ಬಹಳಷ್ಟು ಮಂದಿ ಇದ್ದಾರೆ. ಗಣಿ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ ನಡುವೆ ಸಮನ್ವಯತೆ ಎನ್ನುವುದು ಇಲ್ಲ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಚರಿತ್ರೆ ಮಾತನಾಡಬೇಕಾದರೆ, ಈ ಸದನದಲ್ಲಿ 5 ಗಂಟೆಗಳ ಕಾಲ ಬೇಕಾದರೆ ಮಾತನಾಡುತ್ತೇನೆ. ಈಗ ಮಾತನಾಡುವುದಿಲ್ಲ. ಇದು ಬಹಳ ಭ್ರಷ್ಟ ಇಲಾಖೆಯಾಗಿದೆ. ಮೇಲಿನ ನಾಲ್ಕು ಇಲಾಖೆಗಳಲ್ಲಿ ಪ್ರಾಮಾಣಿಕ ಅಧಿಕಾರಿಗಳ ಸಂಖ್ಯೆ ಕಡಿಮೆಯಿದೆ. ಭ್ರಷ್ಟ ಅಧಿಕಾರಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಈ ಇಲಾಖೆಗಳಲ್ಲಿದ್ದಾರೆ. ಇರುವಂತಹ ಒಂದಿಬ್ಬರು ಪ್ರಾಮಾಣಿಕ ಅಧಿಕಾರಿಗಳು ಉಸಿರಾಡುವುದಕ್ಕೆ ಸಾಧ್ಯವಿಲ್ಲದಂತೆ ಮಾಡಿದ್ದಾರೆ. ಗಣಿಗಾರಿಕೆಯಿಂದ ರಾಜ್ಯ ಸರ್ಕಾರಕ್ಕೆ ಜಿ.ಎಸ್.ಟಿ. ಅಲ್ಲದೇ ಬಡ್ಡಿ, ಬಾಡಿಗೆ ಮತ್ತು ರಾಜಧನದ ರೂಪದಲ್ಲಿ ಕೋಟ್ಯಾಂತರ ರೂಪಾಯಿಗಳು ಬರುತ್ತದೆ. ಇದರಲ್ಲಿ ಶೇಕಡಾ 70ರಷ್ಟನ್ನು ಈ ಇಲಾಖೆಯಲ್ಲಿರುವ ಕೆಲವು ಕೆಟ್ಟ ಅಧಿಕಾರಿಗಳು ತಿಂದು ಉಡಾಯಿಸುತ್ತಿದ್ದಾರೆ. ಸರ್ಕಾರಕ್ಕೆ ಈ ಹಣ ದೊರೆಯುತ್ತಿಲ್ಲ.

(ಮುಂದುವರೆದಿದೆ)

(646) 20.3.2020 5.00 ಪಿಕೆ:ಆರ್‌ಎನ್

**ಶ್ರೀ ಮರಿತಿಬ್ಬೇಗೌಡ (ಮುಂದುವರೆದಿದೆ)**

ಸರ್ಕಾರಕ್ಕೆ ಬರುತ್ತಿಲ್ಲ. ಶೇಕಡ 30 ರಷ್ಟು ಮಾತ್ರ ಸರ್ಕಾರಕ್ಕೆ ಬರುತ್ತಿದೆ. ಅಂಥದ್ದು ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಇದು ಮಂಡ್ಯ ಜಿಲ್ಲೆಯಲ್ಲೂ ಕೂಡ ಇದೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ಏನಾಗಿದೆ ಎಂದರೆ, ಅಲ್ಪಸ್ವಲ್ಪ ಬಂದ್ ಮಾಡಿ ಹಿಡಿದು ನಿಲ್ಲಿಸಿದ್ದರೆ, 6 ತಿಂಗಳ ಹಿಂದೆ ಮಂಡ್ಯದಲ್ಲಿ ಏನು ಚುನಾವಣೆ ಬಂತೋ ಅಲ್ಲಿಂದೀಚೆಗೆ ಈ ಗಣಿಗಾರಿಕೆಗೆ ದೊಡ್ಡ ಹಿಂಸೆ–ಕಿರುಕುಳ ಪ್ರಾರಂಭವಾಗಿದೆ. ಮಂಡ್ಯ, ಮೈಸೂರು ಭಾಗದಲ್ಲಿ ನಡೆಯತಕ್ಕಂಥ ಸರ್ಕಾರಿ ಕಾಮಗಾರಿಗಳು ಮತ್ತು ಇತರ ಕಾಮಗಾರಿಗಳು, ಸಾಮಾನ್ಯ ಬಡವ ಕಟ್ಟುವ ಮನೆ ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸಗಳೂ ಕೂಡ ಚಿತ್ರ ಹಿಂಸೆಗೆ ಒಳಗಾಗಿವೆ. ಇದರ ಬಗ್ಗೆ ಸರ್ಕಾರ ಕಾನೂನುರೀತ್ಯ ಕ್ರಮ ಕೈಗೊಳ್ಳಲಿ. ಆದರೆ, ಈ ಕೇಸ್‌ನಲ್ಲಿ ಇವರು ಇಲಾಖೆಯ ಎಲ್ಲಾ ನಿಯಮಗಳನ್ನು ಪಾಲಿಸಿದ್ದಾರೆ. ಮೂರು ತಿಂಗಳ ಅವಧಿಯಲ್ಲಿ ರಾಜ್ಯ ಉಚ್ಚನ್ಯಾಯಾಲಯ 3 ಆದೇಶಗಳನ್ನು ಮಾಡುತ್ತದೆ. ಇಲಾಖೆಯವರು ಕೊಟ್ಟ ನೋಟಿಸ್‌ಗೆಲ್ಲಾ ತಡೆಯಾಜ್ಞೆ ನೀಡಲಾಗುತ್ತದೆ. ಮತ್ತೆ ಅದನ್ನು ಇಲಾಖೆಯವರು ತೆರವುಗೊಳಿಸುತ್ತಾರೆ. ಕ್ರಷರ್ ಅನ್ನು ಬಂದ್ ಮಾಡುವಾಗ ಯಾವುದೇ ನೋಟಿಸ್ ಕೊಡುವುದಿಲ್ಲ. 2 ಗಂಟೆ ರಾತ್ರಿಯಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳು ಬಂದು, ಅಲ್ಲಿನ ನೌಕರರನ್ನು ಎಬ್ಬಿಸಿ, ಮೆಷಿನ್‌ಗಳನ್ನು ಮುಟ್ಟಿ ಮುಟ್ಟಿ ನೋಡುತ್ತಾರಂತೆ. ಏಕೆ ಎಂದು ಕೇಳಿದರೆ, ನೀವು ಜನರೇಟರ್‌ನಿಂದ ಮೆಷಿನ್ ರನ್ ಮಾಡಿರಬಹುದು ಎಂದು ನಾವು ಚೆಕ್ ಮಾಡುತ್ತಿದ್ದೇವೆ ಎಂದು ಹೇಳುತ್ತಾರಂತೆ. ಮಂಡ್ಯದಲ್ಲೇ ಕಾನೂನುಬಾಹಿರವಾಗಿ ನಡೆಯುತ್ತಿರುವ ಎಷ್ಟೋ ಗಣಿಗಾರಿಕೆಗಳಿದ್ದು ಅಲ್ಲಿಗೆ ಪೊಲೀಸ್ ಅಧಿಕಾರಿಗಳು ಹೋಗುವುದಿಲ್ಲ. ಆ ಕುಟುಂಬದವರು ತಮ್ಮೆಲ್ಲಾ ಆಸ್ತಿಯನ್ನು ಅಡ ಇಟ್ಟು 15 ಕೋಟಿ ಸಾಲ ತೆಗೆದುಕೊಂಡಿದ್ದಾರೆ. ಇಡೀ ಕುಟುಂಬದ ಸದಸ್ಯರೆಲ್ಲಾ ಈಗ ಇದೇ ಕ್ರಷರ್‌ಗೆ ನೇಣು ಹಾಕಿಕೊಳ್ಳುವುದು ಬಾಕಿ ಇದೆ. ಇಂತಹ ಪರಿಸ್ಥಿತಿ ಬಂದಾಗ ಸನ್ಮಾನ್ಯ ದೇವೇಗೌಡರು ಅಲ್ಲಿಗೆ ಹೋಗುವುದಕ್ಕೆ ಮುಂಚೆ ದೂರವಾಣಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದಾರೆ. ಆಗ ಮಾನ್ಯ ಮುಖ್ಯಮಂತ್ರಿಗಳು, ನಾನು ಬಜೆಟ್‌ಗೆ ಪ್ರಿಪೇರ್ ಆಗುತ್ತಿದ್ದೇನೆ, ಸದ್ಯದಲ್ಲೇ ಅದೆಲ್ಲವನ್ನೂ ಪರಿಶೀಲಿಸುತ್ತೇನೆ ಎಂದು ಹೇಳಿದ್ದಾರೆ. ಇದಾದ ಒಂದು ವಾರದ ನಂತರ ಮಾನ್ಯ ದೇವೇಗೌಡರು ಅಲ್ಲಿ ಬಂದರು, ನಾವೂ ಕೂಡ ಹೋಗಿದ್ದೆವು. ಅಲ್ಲಿನ ಕ್ರಷರ್ ನೋಡಿ, ಅಲ್ಲಿನ ಜನರಿಗೆ ಸಮಾಧಾನ ಹೇಳಿ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೇವೆ, ಎಲ್ಲಾ ಒಳ್ಳೆಯದಾಗುತ್ತದೆ ಎಂದು ಮಾನ್ಯ ದೇವೇಗೌಡರು ಹೇಳಿದರು. ಇಷ್ಟೆಲ್ಲಾ ಆದರೂ ಅದರ ಬಗ್ಗೆ ಮಾನ್ಯ ಸಿ.ಸಿ.ಪಾಟೀಲ್ ಅವರಾಗಲಿ, ಮಾನ್ಯ ಮುಖ್ಯಮಂತ್ರಿಗಳಾಗಲಿ ಏನೂ ಕ್ರಮ ಕೈಗೊಂಡಿಲ್ಲ. ಇದು ನೋವಿನ ಸಂಗತಿಯಾಗಿದೆ. ನನಗೆ ನಿಮ್ಮ ಬಗ್ಗೆ ಗೌರವ ಇದೆ. ರಾಜಕೀಯದಲ್ಲಿ ಅಧಿಕಾರ ಎನ್ನುವುದು ಯಾರಿಗೂ ಶಾಶ್ವತವಲ್ಲ. ಕೋವಿಡ್–19ಕ್ಕೆ ರಾಜ ಮಹಾರಾಜರು ಅವಿತುಕೊಂಡು ಕುಳಿತುಕೊಂಡಿದ್ದಾರೆ. ನಾಳೆ ನಮ್ಮದೇನೋ ಯಾರಿಗೆ ಗೊತ್ತು? ದ್ವೇಷ–ಅಸೂಯೆಯ ರಾಜಕಾರಣ ಯಾರೂ ಮಾಡಬಾರದು. ಈ ಕೈಗಾರಿಕೆ ಬಗ್ಗೆ ಏನಾದರೂ ರಾಜಕೀಯ ಮಾಡಿ ಚೌಕಸಿ ಮಾಡಿದರೆ ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬೀದಿಗೆ ಬರುತ್ತಾರೆ. ಇದು ಕೋವಿಡ್–19 ಕ್ಕಿಂತ ಹೆಚ್ಚಾಗುತ್ತದೆ. ದಯವಿಟ್ಟು ಹೀಗಾಗುವುದಕ್ಕೆ ಕೊಡಬಾರದು. ಏನೇ ಆಗಲಿ ಜನಾದೇಶವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಿಮ್ಮಲ್ಲಿ ನಾನು ಇಷ್ಟನ್ನೇ ವಿನಂತಿ ಮಾಡಿಕೊಳ್ಳುತ್ತೇನೆ. ಎರಡೇ ತಿಂಗಳಿಗೆ ರೂ. 93 ಲಕ್ಷ ತೆರಿಗೆ ಕಟ್ಟಬೇಕು ಎಂದು ನೋಟಿಸ್ ಕೊಡುತ್ತಾರೆ. ಅದಾದ ಎರಡು ತಿಂಗಳ ನಂತರ, ಕೆಲಸ ನಿಂತು ಹೋಗಿದ್ದರೂ ನೋಟಿಸ್ ಬದಲಾಯಿಸಿ ರೂ. 11 ಕೋಟಿ ತೆರಿಗೆ ಕಟ್ಟಬೇಕು ಎಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ಅದ್ಯಾವುದೋ ಡ್ರೋನ್ ಸರ್ವೆಯಂತೆ. ಎಂಥೆಂಥ ಸರ್ವೆ ಇದೆ? ಮ್ಯಾನ್ಯುಯಲ್ ಸರ್ವೆ ಒಂದು, ಡ್ರೋನ್ ಸರ್ವೆ ಒಂದು. ಈ ರೀತಿ ಡ್ರೋನ್ ಸರ್ವೆ ಮಾಡಿಸಿ ರೂ. 11 ಕೋಟಿ ವಸೂಲಿ ಮಾಡುವುದಾದರೆ ...

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಡ್ರೋನ್ ಸರ್ವೆ ಮಾಡಿದ ನಂತರ ರೂ. 1 ಕೋಟಿ 3 ಲಕ್ಷ ಕಟ್ಟಬೇಕು ಎಂದು ಹೇಳಿದ್ದರು ಅಷ್ಟೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಗಣಿಗಾರಿಕೆಗೆ ಸಂಬಂಧಪಟ್ಟಂತೆ ಈ ರೀತಿ ಡ್ರೋನ್ ಸರ್ವೆ ಮಾಡಿ ರಾಜಧನವನ್ನು ವಸೂಲಿ ಮಾಡಿದರೆ, ನಾಳೆಯೇ ಅಬಕಾರಿ ಇಲಾಖೆಯನ್ನು ಬಂದ್ ಮಾಡಬಹುದು. ಸರ್ಕಾರಕ್ಕೆ ಇದರಿಂದ 10 ಪಟ್ಟು ಜಾಸ್ತಿ ಹಣ ಬಂದುಬಿಡುತ್ತದೆ. ಈ ಸರ್ಕಾರಕ್ಕೆ ಹೆಚ್ಚು ರಾಜಧನವನ್ನು ತಂದುಕೊಡುವ, ರೆವಿನ್ಯೂ ತಂದು ಕೊಡುವ ಇಲಾಖೆ ಎಂದರೆ ಅದು ಗಣಿ ಇಲಾಖೆ. ಈ ಇಲಾಖೆ ಈಗ ನಮ್ಮ ಮಾನ್ಯ ಸಿ.ಸಿ.ಪಾಟೀಲ್‌ರ ಕೈಗೆ ಬಂದಿದೆ. ಇವರ ಬಗ್ಗೆ ನಮಗೆ ವಿಶ್ವಾಸ ಇದೆ, ನಂಬಿಕೆ ಇದೆ. ನಿಮ್ಮ ಇಲಾಖೆಯ ಕಡೆಯಿಂದ ನೀವು ಸರ್ಕಾರಕ್ಕೆ ಹೆಚ್ಚಿನ ರಾಜಧನ ಬರುವ ಹಾಗೆ ಮಾಡಿ. ನಾವು ಖುಷಿ ಪಡುತ್ತೇವೆ. ಯಾರ್‍ಯಾರು ಕಳ್ಳರಿದ್ದಾರೋ ಅವರನ್ನು ಬಲಿ ಹಾಕಿ, ಸ್ಟ್ರೀಮ್‌ಲೈನ್ ಮಾಡಿ. ಯಾರು ಇಲಾಖೆಯ ನಿಯಮಗಳನ್ನು ಪಾಲಿಸುತ್ತಾರೋ ಅವರಿಗೆ ಪ್ರೋತ್ಸಾಹ ಕೊಡಿ. ಈ ನಾಲ್ಕು ಇಲಾಖೆಗಳಲ್ಲಿರುವ ಭ್ರಷ್ಟ ಅಧಿಕಾರಿಗಳನ್ನು ತಾವು ಸದೆ ಬಡಿಯಬೇಕು. ಇಲ್ಲದೇ ಇದ್ದರೆ ಈ ಉದ್ಯಮದಿಂದ ಶೇಕಡ 70 ರಷ್ಟು ಬರುವ ಎಲ್ಲಾ ರಾಜಧನ ಕೆಲವು ಅಧಿಕಾರಿಗಳ ಜೇಬಿಗೆ ಹೋಗುತ್ತದೆ. ಈ ಪ್ರಕರಣದಲ್ಲಿ ರೂ. 11 ಕೋಟಿಯ ನೋಟೀಸ್ ಏನು ಕೊಟ್ಟಿದ್ದಾರೋ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಿಯಮಾನುಸಾರ ಅವರು ಕಾರ್ಖಾನೆ ಪ್ರಾರಂಭ ಮಾಡುವ ವ್ಯವಸ್ಥೆ ಮಾಡಿಕೊಡಿ. ರಾಜಕೀಯ ದ್ವೇಷವನ್ನು ಇಲ್ಲಿಗೆ ಕೊನೆ ಮಾಡೋಣ. ನಮ್ಮ ಜಿಲ್ಲೆಯವರಾದ, ನಮ್ಮ ತಾಲ್ಲೂಕಿನವರಾದ ಮಾನ್ಯ ಮುಖ್ಯಮಂತ್ರಿಗಳಿಗೆ ಇದರಿಂದ ಒಳ್ಳೆಯ ಹೆಸರು ಬರುತ್ತದೆ. ನೀವೂ ಕೂಡ ತುಂಬಾ ಚೆನ್ನಾಗಿ ನಿರ್ವಹಿಸುತಿದ್ದೀರಿ. ನಾವು ಕೂಡ ಸಹಕಾರ ಕೊಡುತ್ತೇವೆ. ದಯವಿಟ್ಟು ದ್ವೇಷದ ರಾಜಕಾರಣ ಮಾಡುವುದು ಬೇಡ. ಇದರಿಂದ ಅಲ್ಲಿನ ಡಿಸಿ ಬಲಿಪಶು ಆಗುತ್ತಿದ್ದಾರೆ. ಹೈಕೋರ್ಟ್‌ನ ಮೂರು ಆದೇಗಳಿದ್ದರೂ ಜಿಲ್ಲಾಧಿಕಾರಿಯವರು ಕೆಲಸ ಮಾಡುವುದಕ್ಕೆ ಬಿಡದೇ ಪೊಲೀಸರನ್ನು ಹಾಕಿಸುತ್ತಾರೆ, ರೆವಿನ್ಯೂ ಇಲಾಖೆಯ ಅಧಿಕಾರಿಗಳನ್ನು ವಸೂಲಿಗೆ ಕಳುಹಿಸುತ್ತಾರೆ. ಬಂದ್ ಮಾಡಿಸುತ್ತಾರೆ. ಈ ಕಾರ್ಖಾನೆಯಲ್ಲಿ ಸುಮಾರು 250 ಮಂದಿ ಕಾರ್ಮಿಕರು 2008ರಿಂದ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲ ಹೊಟ್ಟೆಪಾಡಿಗೆ ಏನು ಮಾಡಬೇಕು? ಕೆಲಸಕ್ಕೆ ತೆಗೆದುಕೊಳ್ಳುವಾಗ ಅವರೆಲ್ಲರಿಗೂ ಅಡ್ವಾನ್ಸ್ ಆಗಿ ರೂ. 8 ಲಕ್ಷ, 10 ಲಕ್ಷ, 5 ಲಕ್ಷ ಕೊಡಬೇಕಾಗುತ್ತದೆ; ಒಂದು ಸಲ ಕ್ರಷರ್ ನಿಂತು ಹೋದರೆ ಅವರು ಹೊರಟು ಹೋಗುತ್ತಾರೆ. ಇವತ್ತು ಅವರೆಲ್ಲರನ್ನು ಮತ್ತೆ ಕರೆದುಕೊಂಡು ಬರುವುದು ತ್ರಾಸಿನ ಕೆಲಸವಾಗಿದೆ. ಸದರಿಯವರು ಪ್ರತಿಯೊಂದು ನಿಯಮಗಳನ್ನು ಪಾಲನೆ ಮಾಡಿದ್ದಾರೆ, ಪ್ರತಿಯೊಂದು ತೆರಿಗೆಗಳನ್ನು ಕಟ್ಟಿದ್ದಾರೆ. ಎಲ್ಲಾ ರೀತಿಯ ಲೈಸನ್ಸ್‌ಗಳನ್ನು ಪಡೆದಿದ್ದಾರೆ. ಆದಕಾರಣ, ಇಂಥವರ ಬಗ್ಗೆ ದ್ವೇಷದ ರಾಜಕಾರಣ ಮಾಡಬಾರದು. ಇದು ಈ ಸದನದಿಂದಲೇ ಕೊನೆಯಾಗುವಂತೆ ಕ್ರಮ ವಹಿಸಬೇಕು. ಮಾನ್ಯ ಸಚಿವರ ಬಗ್ಗೆ ನಮಗೆ ಬಹಳ ಭರವಸೆ ಇದೆ. ಮುಖ್ಯಮಂತ್ರಿಗಳಿಗೆ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಕೆಟ್ಟ ಹೆಸರು ಬರಬಾರದು. ಈ ದ್ವೇಷದ ರಾಜಕಾರಣ ಬೇಡ. ಆ ಕಾರ್ಖಾನೆ ಪ್ರಾರಂಭವಾಗಬೇಕು. ಇಲಾಖೆಯ ಅಧಿಕಾರಿಗಳು ನಿಯಮಗಳನ್ನು ಪಾಲಿಸಲಿ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದಂತಹ ಸನ್ಮಾನ್ಯ ಬಸವರಾಜ ಹೊರಟ್ಟಿಯವರು, ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಶ್ರೀಕಂಠೇಗೌಡರು, ಮಾನ್ಯ ಚೌಡರೆಡ್ಡಿ ತೂಪಲ್ಲಿಯವರು, ಮಾನ್ಯ ತಿಪ್ಪೇಸ್ವಾಮಿಯವರು ಸಲ್ಲಿಸಿದಂತಹ ಪ್ರಸ್ತಾವನೆಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಕೇಳಿದ ಪ್ರಶ್ನೆ ಈ ಮಟ್ಟಕ್ಕೆ ಬರುತ್ತದೆ ಎನ್ನುವ ಮಾಹಿತಿ ನಮಗಿತ್ತು. ಪ್ರಶ್ನೆ ಕೇಳಿದ್ದು ವೇಗವಾಗಿದೆ; ಅದು concentration ಆಗಿ ಇಲ್ಲಿಗೆ ಬರುತ್ತದೆ ಎನ್ನುವ ಮಾಹಿತಿ ನಮಗಿತ್ತು. I have mentally prepared for it. ಅದರ ಜೊತೆಗೆ, ಮಾನ್ಯ ಶಾಸಕ ಮಿತ್ರರಿಗೆ ಬೇಗ ಉತ್ತರ ಪಡೆಯಬೇಕು ಎನ್ನುವ ತವಕ, ಇನ್ನೊಂದು ಕಡೆ ಮಾನ್ಯ ಎಸ್.ಆರ್.ಪಾಟೀಲರು ದೀರ್ಘವಾಗಿ ಮಾತನಾಡುತ್ತಾ ಹೋದರು. ಅವರಿಗೆ ಲಘು ಉತ್ತರ ಬೇಕಾಗಿತ್ತು.

ಮಾನ್ಯ ಎಸ್.ಆರ್.ಪಾಟೀಲರು ನಮ್ಮ ಭಾಗದವರು. ಅವರ ಬಗ್ಗೆ ಬಹಳ ಗೌರವ ಇದೆ. ಮಾನ್ಯ ಸಭಾಪತಿಯವರೇ, ಇತಿಹಾಸಕ್ಕೆ ಸಂಬಂಧಪಟ್ಟಂತೆ, 'ಭೀಮ ದುರ್ಯೋಧನನನ್ನು ಹೇಗೆ ಕೊಂದನು?' ಒಂದು ಪುಟವನ್ನು ಮೀರದಂತೆ ಸೀಮಿತವಾಗಿ ಉತ್ತರ ಬರೆಯಿರಿ ಎಂಬ ಪ್ರಶ್ನೆಗೆ ವಿದ್ಯಾರ್ಥಿ, 'ಭೀಮ ದುರ್ಯೋಧನನನ್ನು ಗುದ್ದಿ–ಗುದ್ದಿ–ಗುದ್ದಿ–ಗುದ್ದಿ–ಗುದ್ದಿ ಕಡೆಗೆ ಕೊಂದನು' ಎಂದು ಉತ್ತರ ಬರೆದನಂತೆ.

(ಮುಂದು...)

(647) 20–03–2020 5.10 ಡಿಎಸ್–ವಿಕೆ
**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್**(ಮುಂದು):–

ನಮ್ಮದು ದುರ್ಯೋಧನನ ರೀತಿ ಆಗಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಸರ್ಕಾರಕ್ಕೆ ಆದಾಯವನ್ನು ತಂದು ಕೊಡತಕ್ಕಂಥ ಇಲಾಖೆ. ಈ ಬಾರಿ ಸರ್ಕಾರ ನಿಗದಿ ಮಾಡಿದಂತಹ ಮೂರೂವರೆ ಸಾವಿರ ಕೋಟಿ ರೂಪಾಯಿಗಳ ಗುರಿಯನ್ನು ನಾವು ತಲುಪಿದ್ದೇವೆ. ಅದಕ್ಕೆ ನಮ್ಮ ಇಲಾಖೆಗೆ ಹೆಮ್ಮೆ ಇದೆ, ನಮ್ಮ ಅಧಿಕಾರಿಗಳ ಬಗ್ಗೆ ನನಗೆ ಗೌರವ ಇದೆ. ಇಂತಹ ಮೂರೂವರೆ ಸಾವಿರ ಕೋಟಿ ರೂಪಾಯಿ ರಾಜಧನ ಬರಬೇಕು, ರಾಯಲ್ಟಿ ಬರಬೇಕೆಂದರೆ ಅದಕ್ಕೆ bread and butter ನಮ್ಮ ಉದ್ದಿಮೆದಾರರು. ಕ್ರಷರ್ ಇರಬಹುದು, ಗಣಿ ಮಾಲೀಕರು ಇರಬಹುದು, ಇನ್ನಿತರ ರಸ್ತೆ, ಭೂಮಿ, ಕಟ್ಟಡಗಳನ್ನು ಕಟ್ಟುವುದಕ್ಕೆ ಬೇಕಾಗುವಂತಹ ಜೆಲ್ಲಿ ಮತ್ತು ಕಡಿಗಳನ್ನು ಉತ್ಪಾದನೆ ಮಾಡುವಂತಹ ಘಟಕಗಳು, ಅಂತಹ ಘಟಕಗಳಿಗೆ ದ್ವೇಷ ರಾಜಕಾರಣ ಮಾಡಿ ತೊಂದರೆ ಕೊಟ್ಟರೆ ನಮ್ಮ ಸರ್ಕಾರಕ್ಕೆ ಬರುವ ಆದಾಯ ಕುಂಠಿತಗೊಳ್ಳುತ್ತದೆನ್ನುವ ಪರಿಕಲ್ಪನೆ ಸನ್ಮಾನ್ಯ ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ, ನಮ್ಮೆಲ್ಲರಿಗೂ ಇದೆ. ಮೇಲ್ನೋಟಕ್ಕೆ ಕೆಲವು ಮಂದಿಗೆ ಇದು ದ್ವೇಷದ ರಾಜಕಾರಣ ಎಂದು ಅನಿಸಿರಬಹುದು. ಸರ್ಕಾರ ಬದಲಿಯಾದ ತಕ್ಷಣ ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಾಗಿದೆ ಎನ್ನುವ ಮೇಲ್ನೋಟ ಇರಬಹುದು. ಆದರೆ ನಮ್ಮ ನಾಯಕರಾಗಿರುವಂತಹ ಮಾನ್ಯ ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ತಕ್ಷಣವೇ ದ್ವೇಷ ರಾಜಕಾರಣವನ್ನು ನಾವು ಮಾಡುವುದಿಲ್ಲವೆಂದು ಹೇಳಿದ್ದಾರೆ. ಬಹಳ ಜನರು ಟಿ.ಜೆ.ಸ್ಟೋನ್ಸ್ ಎನ್ನುವ ಕಂಪನಿ, ಇವರೊಬ್ಬರ ಮೇಲೆ ಈ ಪ್ರಮಾಣದ ಕರವನ್ನು ವಿಧಿಸಿದ್ದಾರೆ, ಇದರಲ್ಲಿ ಆ ಜಿಲ್ಲೆಯ ಸಚಿವರ ಕೈವಾಡವಿದೆ ಎಂದು ನೇರವಾದ ಆರೋಪವನ್ನು ನಮ್ಮ ಶಾಸಕ ಮಿತ್ರರು ಮಾಡಿದ್ದಾರೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಏನು drone survey ಮಾಡಿ ಆ ತೆರಿಗೆಗೆ ಐದು ಪಟ್ಟು ತೆರಿಗೆ ಹಾಕುವಂತಹ ಕಾನೂನನ್ನು ಮಾಡಿದ್ದು ಹಿಂದಿನ ಸರ್ಕಾರ, ಮಾನ್ಯ ಯಡಿಯೂರಪ್ಪನವರ ಸರ್ಕಾರ ಅಲ್ಲ. 1:5 penalty ವಿಧಿಸಬೇಕೆಂದು ಆದೇಶ ಆಗಿರುವುದು ಹಿಂದಿನ ಸರ್ಕಾರದಲ್ಲಿ ಎಂಬ ವಿಷಯವನ್ನು ಮಾನ್ಯ ಶಾಸಕ ಮಿತ್ರರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಾನ್ಯ ಭೋಜೇಗೌಡರು ಎತ್ತಿರುವಂತಹ ಉಚ್ಚ ನ್ಯಾಯಾಲಯದ ಮಾಹಿತಿ ನನ್ನ ಕಡೆ ಇಲ್ಲ. ಅದನ್ನು ನಾನು ತರಿಸಿಕೊಡುತ್ತೇನೆ. ಬಹಳ ಜನ ನನ್ನ ಶಾಸಕ ಮಿತ್ರರು ರಾಜ್ಯ ಉಚ್ಚನ್ಯಾಯಾಲಯದ ಆದೇಶವನ್ನು ಕೊಟ್ಟರು. ತಹಸೀಲ್ದಾರರು ಮತ್ತು ಅಸಿಸ್ಟೆಂಟ್ ಕಮೀಷನರ್‌ರವರು ಈ ಕ್ರಷರ್ ಸ್ಟೋನ್ ಅನ್ನು ಬಂದ್ ಮಾಡಬೇಕೆಂದು ಎ ಮತ್ತು ಬಿ ನೋಟಿಸ್ ಕೊಟ್ಟಿದ್ದಾರೆ. ಈ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯ ತಡೆಯಾಜ್ಞೆಯನ್ನು ಕೊಟ್ಟಿರುವುದು ನಿಜ. Further in that order; ಸಕ್ಷಮ ಪ್ರಾಧಿಕಾರವು ಕಾನೂನು ರೀತ್ಯಾ ಕ್ರಮ ವಹಿಸಲು ಯಾವುದೇ ಅಭ್ಯಂತರವಿರುವುದಿಲ್ಲ ಎನ್ನುವಂತಹ ಆದೇಶವೂ ಅದೇ ಆದೇಶದಲ್ಲಿದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ ನಮ್ಮ bread and butters ಎಂದರೆ ನಮ್ಮ Entrepreneurs, ಮಂಡ್ಯ ಜಿಲ್ಲೆಯಲ್ಲಿ ಇವರೊಬ್ಬರಿಗೆ ವಿಧಿಸಿರುವಂಥದ್ದಲ್ಲ. ಇಡೀ ರಾಜ್ಯದಲ್ಲಿ ಜಿಲ್ಲಾವಾರು 30 ಜಿಲ್ಲೆಗಳಲ್ಲಿ 1:5 ವಿಧಿಸಿದಂತಹ ಕರ ಮಾನ್ಯ ಶ್ರೀಕಂಠೇಗೌಡರು ಹೇಳಿದ ಹಾಗೆ 6,105 ಕೋಟಿ ರೂಪಾಯಿ ಆಗುತ್ತದೆ. ಇದರ ಬಗ್ಗೆ ಸರ್ಕಾರ ಸೂಕ್ತವಾದಂತಹ ನಿಲುವನ್ನು ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ 153 ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಈ ಪೈಕಿ 97 ಕಲ್ಲು ಗಣಿ ಗುತ್ತಿಗೆಗಳು ಚಾಲ್ತಿಯಲ್ಲಿದ್ದು, 33 ಕಲ್ಲು ಗಣಿ ಗುತ್ತಿಗೆಗಳನ್ನು ರದ್ದುಪಡಿಸಲಾಗಿರುತ್ತದೆ ಮತ್ತು ಉಳಿದ 23 ಕಲ್ಲು ಗಣಿ ಗುತ್ತಿಗೆಗಳು ಪರಿಸರ ಅನುಮತಿ ಪತ್ರ, ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ ಮತ್ತು ಇತರೆ ಕಾರಣಗಳಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತವೆ. So, it is very much clear. ನಾವು ಕೇವಲ ಇಂದೊಂದೇ ಕಾರ್ಖಾನೆಯನ್ನು ನಿಲ್ಲಿಸಿಲ್ಲ. ಇದರ ಜೊತೆಗೆ ಸುಮಾರು ಕಾರ್ಖಾನೆಗಳನ್ನು ಮಂಡ್ಯ ಜಿಲ್ಲೆಯಲ್ಲಿ ಮತ್ತು ರಾಜ್ಯದಾದ್ಯಂತ ನಿಯಮ ಮೀರಿದಂಥವರನ್ನು ತಾತ್ಕಾಲಿಕವಾಗಿ ತಡೆ ನೀಡಿದ್ದೇವೆ. ತೀರಾ ನಿಯಮವನ್ನು ಉಲ್ಲಂಘನೆ ಮಾಡಿದಂಥವರಿಗೆ D-Form ಕೊಟ್ಟು ಕ್ಲೋಸ್ ಮಾಡುವುದಕ್ಕೆ ಆದೇಶವನ್ನು ಕೊಡಲಾಗಿದೆ. ಪಾಂಡವಪುರ ತಾಲ್ಲೂಕಿನ ಬೇಬಿಬೆಟ್ಟದ ಕಾವಲಿನಲ್ಲಿ 30 ಹಾಗೂ ಮದ್ದೂರು ತಾಲ್ಲೂಕು ವ್ಯಾಪ್ತಿಯಲ್ಲಿ 1 ಕಲ್ಲು ಗಣಿ ಗುತ್ತಿಗೆಯನ್ನು ಪರಿಸರ ಅನುಮತಿ ಪತ್ರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲದೇ ಗಣಿಗಾರಿಕೆ ಮಾಡುತ್ತಿದ್ದ ಉದ್ದೇಶಕ್ಕೆ ಮತ್ತು ಮದ್ದೂರು ತಾಲ್ಲೂಕು ವ್ಯಾಪ್ತಿಯಲ್ಲಿ 1 ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಭಾರಿ ಸ್ಫೋಟಕ ಬಳಸಿದ ಉದ್ದೇಶಕ್ಕಾಗಿ ಹಾಗೂ ನಾಗಮಂಗಲ ತಾಲ್ಲೂಕಿನಲ್ಲಿ ಕಲ್ಲು ಗಣಿ ಗುತ್ತಿಗೆದಾರರು ದಂಡ ಪಾವತಿಸದ ಕಾರಣಕ್ಕಾಗಿ 1 ಕಲ್ಲು ಗಣಿ ಗುತ್ತಿಗೆ ಸೇರಿ ಒಟ್ಟು 33 ಕಲ್ಲು ಗಣಿ ಗುತ್ತಿಗೆಗಳನ್ನು ರದ್ದುಪಡಿಸಲಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇದೊಂದೇ ಕಂಪನಿಯ ಕಲ್ಲು ಗಣಿ ಗುತ್ತಿಗೆಯನ್ನು ನಾವು ರದ್ದು ಮಾಡಿಲ್ಲ. ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 43 ಕ್ರಷರ್ ಘಟಕಗಳು ಲೈಸೆನ್ಸ್ ಹೊಂದಿದ್ದು, ಕಾರ್ಯ ನಿರ್ವಹಿಸುತ್ತಿರುತ್ತವೆ. ಮಂಡ್ಯ ಜಿಲ್ಲೆಯಲ್ಲಿ ಗಣಿಗಾರಿಕೆಯಿಂದ 2018–19ನೇ ಸಾಲಿನಲ್ಲಿ ರೂ.1729.46 ಲಕ್ಷ ರಾಜಧನ ಸಂಗ್ರಹವಾಗಿದ್ದು, 2019–20ನೇ ಸಾಲಿನಲ್ಲಿ ರೂ.2166.60 ಲಕ್ಷ ರಾಜಧನ ಸಂಗ್ರಹಣೆಯಾಗಿರುತ್ತದೆ. ಮಾನ್ಯ ಸದಸ್ಯರಿಗೆ ಮಂಡ್ಯ ಜಿಲ್ಲಾ ವ್ಯಾಪ್ತಿಯಿಂದ ವಸೂಲಿಯಾದಂತಹ ರಾಯಲ್ಟಿಯನ್ನು ಅಕ್ರಮವಾಗಿ ಮಾಡುತ್ತಿರತಕ್ಕಂಥವರ ಮೇಲೆ ಹಾಕಿರುವ ದಂಡದ ಮಾಹಿತಿಯನ್ನು ತಮಗೆ ಕೊಟ್ಟಿದ್ದೇನೆ. 2017–18ನೇ ಸಾಲಿನಲ್ಲಿ ಅನಧಿಕೃತ ಗಣಿಗಾರಿಕೆ ಪ್ರಕರಣಗಳು 52, ಸಂಬಂಧಿಸಿದ ನ್ಯಾಯಾಲಯದಲ್ಲಿ ಮೊಕದ್ದಮೆ/ಎಫ್.ಐ.ಆರ್. 8, ಒಟ್ಟು ದಂಡ ವಸೂಲಿ ರೂ.38.01 ಲಕ್ಷಗಳು. ಅನಧಿಕೃತ ಸಾಗಾಣಿಕೆ ಪ್ರಕರಣಗಳು 384, ಒಟ್ಟು ದಂಡ ವಸೂಲಿ 40.85 ಲಕ್ಷಗಳು. 2018–2019ನೇ ಸಾಲಿನಲ್ಲಿ ಅನಧಿಕೃತ ಸಾಗಾಣಿಕೆ ಪ್ರಕರಣಗಳು 67, ಸಂಬಂಧಿಸಿದ ನ್ಯಾಯಾಲಯದಲ್ಲಿ ಮೊಕದ್ದಮೆ/ಎಫ್.ಐ.ಆರ್ 23, ಒಟ್ಟು ದಂಡ ವಸೂಲಿ ರೂ.3.31 ಲಕ್ಷಗಳು. 2019–20ನೇ ಸಾಲಿನಲ್ಲಿ ಅನಧಿಕೃತ ಗಣಿಗಾರಿಕೆ ಪ್ರಕರಣಗಳು 18, ಸಂಬಂಧಿಸಿದ ನ್ಯಾಯಾಲಯದಲ್ಲಿ ಮೊಕದ್ದಮೆ/ಎಫ್.ಐ.ಆರ್. 18, ಅನಧಿಕೃತ ಸಾಗಾಣಿಕೆ ಪ್ರಕರಣಗಳು 129, ಸಂಬಂಧಿಸಿದ ನ್ಯಾಯಾಲಯದಲ್ಲಿ ಮೊಕದ್ದಮೆ/ಎಫ್.ಐ.ಆರ್. 2, ಒಟ್ಟು ದಂಡ ವಸೂಲಿ 45.69 ಲಕ್ಷಗಳು.

2018–19ನೇ ಸಾಲಿನ ಮಂಡ್ಯ ಜಿಲ್ಲೆಯ ವಾರ್ಷಿಕ ಆಡಿಟ್ ವರದಿಯಂತೆ, ಮಂಡ್ಯ ಜಿಲ್ಲೆಯಲ್ಲಿ ಒಟ್ಟು 116 ಕಲ್ಲು ಗಣಿ ಗುತ್ತಿಗೆ ಪ್ರದೇಶಗಳ ಸರ್ವೆ ಕಾರ್ಯ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ 57,60,368 ಮೆಟ್ರಿಕ್ ಟನ್ ಪ್ರಮಾಣದ ಕಟ್ಟಡ ಕಲ್ಲು ಉತ್ಪಾದಿಸಿ ಹಾಗೂ ಕಲ್ಲು ಗಣಿ ಗುತ್ತಿಗೆ ಪ್ರದೇಶವನ್ನು ಒತ್ತುವರಿ ಮಾಡಿ 49,10,731 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಗಣಿಗಾರಿಕೆ ನಡೆಸಿ, ನಿಯಮ ಉಲ್ಲಂಘಿಸಿ ಸಾಗಾಣಿಕೆ ಮಾಡಿದ್ದರಿಂದ ರೂ.320 ಕೋಟಿ ದಂಡ ವಿಧಿಸಲಾಗಿರುತ್ತದೆ. ಮಂಡ್ಯ ಜಿಲ್ಲೆಯಲ್ಲಿ ನಿಯಮಾನುಸಾರ ಗಣಿಗಾರಿಕೆ ಮತ್ತು ಕ್ರಷರ್‌ಗಳನ್ನು ನಡೆಸಲು ಯಾವುದೇ ತೊಂದರೆ ಇರುವುದಿಲ್ಲ. ಈ ರೀತಿಯ ತೊಂದರೆಗಳಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಜರುಗಿಸಲಾಗುತ್ತಿದೆ.

ಆ ಕಾರಣಕ್ಕಾಗಿ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕು ಶಿವಪುರ ಗ್ರಾಮದ ಸರ್ವೆ ನಂ.10/ಪಿ3 ನಲ್ಲಿರುವ 4 ಎಕರೆ ಪ್ರದೇಶದಲ್ಲಿ ಮಂಜೂರಾಗಿರುವ ಕಲ್ಲು ಗಣಿ ಗುತ್ತಿಗೆಗೆ ಸಂಖ್ಯೆ:1061 ದಿನಾಂಕ18–06–2018 ರಿಂದ 20 ವರ್ಷಗಳ ಅವಧಿವರೆಗೆ ಮಂಜೂರು ಮಾಡಲಾಗಿರುತ್ತದೆ. ಸದರಿ ಗುತ್ತಿಗೆ ಪ್ರದೇಶ 200 ಮೀಟರ್ ವ್ಯಾಪ್ತಿಯೊಳಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಾಹುಕಾರ್ ಚೆನ್ನಯ್ಯ ನಾಲೆ ಇರುತ್ತದೆ. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994 ನಿಯಮ 6/2 ರ ಕಲ್ಲು ಗಣಗಾರಿಕೆಯಲ್ಲಿ ಸ್ಫೋಟಕ ಉಪಯೋಗಿಸಬೇಕಿದ್ದರೆ ಕಲ್ಲು ಗಣಿ ಪ್ರದೇಶದಿಂದ ಎರಡೂವರೆ ಮೀಟರ್ ವ್ಯಾಪ್ತಿಯಲ್ಲಿ ನಾಲೆ, ರಸ್ತೆ, ಕೆರೆ, ಸಾರ್ವಜನಿಕ ರಚನೆ ಇರತಕ್ಕದ್ದಲ್ಲ ಎನ್ನುವಂತಹ ನಿಯಮಾವಳಿ ಇದೆ. ಈ ಕಾರಣದಿಂದ ಒಂದು ಗಣಿ ಗುತ್ತಿಗೆಯನ್ನು ನೋಟೀಸ್ ನೀಡಿ ಜಾರಿ ಮಾಡಿರುತ್ತದೆ. ಈಗ ಅದು 200 ಮೀಟರ್ ಇದೆ ಎಂದು ಕೆಲವು ಮಂದಿ ಹೇಳುತ್ತಾರೆ. 200 ಮೀಟರ್ ಇಲ್ಲ, ಅದರೊಳಗೆ ಇದೆ ಎಂದು ಕೆಲವು ಮಂದಿ ಹೇಳುತ್ತಾರೆ. It is not a major issue, ನದಿಯೂ ಅಲ್ಲೇ ಇದೆ, ಕ್ವಾರಿಯೂ ಅಲ್ಲೇ ಇದೆ. ಬೇಕಾದರೆ ಮತ್ತೊಮ್ಮೆ ಅದನ್ನು ಮರು ಸರ್ವೆ ಮಾಡಬಹುದು. ಹಿಂದಕ್ಕಿಂತ most authenticated ಆಗಿ ನಾವು ಇಲ್ಲೇ ಕುಳಿತುಕೊಂಡು Google ನಲ್ಲಿ ಅದರ ಅಂತರವನ್ನು ಪಡೆಯಬಹುದು. ಅದಕ್ಕೇನು ಸರ್ಕಾರದ ಅಭ್ಯಂತರವಿಲ್ಲ. ದಿನಾಂಕ:31–01–2020 ರಂದು ಹಿರಿಯ ಉಪ ವಿಭಾಗಾಧಿಕಾರಿಗಳು, ಪಾಂಡವಪುರ, ಕೆ.ಆರ್.ಪೇಟೆ ತಾಲ್ಲೂಕು ಹರಳಹಳ್ಳಿ ಗ್ರಾಮ ಸರ್ವೆ ನಂಬರ್ ಇರುವ ಸ್ಟೋನ್ ಕ್ರಷರ್ಸ್ ಸುತ್ತಮುತ್ತ ಕಲ್ಲು ಕ್ವಾರೆ ನಡೆಯುತ್ತಿರುವ ದೂರು ಬಂದಿರುವ ಹಿನ್ನಲೆಯಲ್ಲಿ ಪರಿಶೀಲನೆ ನಡೆಸಿ ಅಭಿಪ್ರಾಯ ನೀಡಲು ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಹೇಮಾವತಿ ಎಡದಂಡೆ ನಾಲೆ ವಿಭಾಗ ಕೃಷರಾಜ ಪೇಟೆಯವರಿಗೆ ಪತ್ರ ಬರೆದಿರುತ್ತಾರೆ. ಕಾರ್ಯಪಾಲಕ ಇಂಜಿನಿಯರ್ ಹೇಮಾವತಿ ಎಡದಂಡೆ ನಾಲಾ ವಿಭಾಗ ಕೃಷ್ಣರಾಜ ಪೇಟೆ ಇವರು ದಿನಾಂಕ:29–02–2020 ರಂದು ಉಪ ವಿಭಾಗಾಧಿಕಾರಿಗಳು, ಪಾಂಡವಪುರ ವಿಭಾಗ, ಪಾಂಡವಪುರ, ಇವರಿಗೆ ಪತ್ರ ಬರೆದು ಶಿವಪುರ ಗ್ರಾಮದಲ್ಲಿನ ಕಲ್ಲು ಗಣಿ ಗುತ್ತಿಗೆ ಪ್ರದೇಶಗಳ ಸಾಹುಕಾರ್ ಚೆನ್ನಯ್ಯ ನಾಲೆ 215 ಮೀಟರ್ ಅಂತರದಲ್ಲಿದ್ದು, ನಿರಂತರ ಗಣಿಗಾರಿಕೆಯಲ್ಲಿ ಸ್ಫೋಟಕ ಬಳಸಿ ಗಣಿಗಾರಿಕೆ ಮಾಡುವುದರಿಂದ ನಾಲೆ ಮತ್ತು ನಾಲೆಗೆ ಸಂಬಂಧಿಸಿದ ಕಟ್ಟಡಗಳು ಹಾನಿಯಾಗುವ ಸಂಭವವಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಸದರಿ ಪತ್ರದಲ್ಲಿ ಕರ್ನಾಟಕ ನೀರಾವರಿ ಕಾಯ್ದೆ 1965 ಕಲಂ 49 ರಂತೆ ನೀರಾವರಿ ಕಾಮಗಾರಿಯ ಸಮೀಪ ಕಲ್ಲು ಗಣಿಗಾರಿಕೆ ಅಥವಾ ಕಲ್ಲು ಗಣಿ ಕಾರ್ಯಾಚರಣೆ ವ್ಯಾಪ್ತಿಯು ನೀರಾವರಿ ಅಧಿಕಾರಿಯ ಲಿಖಿತ ಅನುಮತಿ ಇಲ್ಲದೆ ನೀರಾವರಿ ಕಾಮಗಾರಿಗಳು ಒಂದು ಕಿ.ಮೀ. ಅಂತರದೊಳಗೆ ಸ್ಫೋಟಕಗಳನ್ನು ಉಪಯೋಗಿಸ ಬೇಕಾದ ಅಗತ್ಯ ಇರುವುದರಿಂದ ಗಣಿಗಾರಿಕೆ ಅಥವಾ ಕಲ್ಲು ಗಣಿ ಕಾರ್ಯಾಚರಣೆಯನ್ನು ನಡೆಸತಕ್ಕದ್ದಲ್ಲ ಎಂಬ ನಿಯಮದ ಉದ್ಧೃತ್ತ ಭಾಗವನ್ನು ಉಲ್ಲೇಖಿಸಿ ದೀರ್ಘಕಾಲಿಕ ಕಂಪನದಿಂದ ನಾಲೆ ಮತ್ತು ನಾಲೆಗೆ ಸಂಬಂಧಿಸಿದ ಕಟ್ಟಡಗಳು ಹಾನಿಯಾಗುವ ಸಂಭವವಿದೆ ಎಂದು ಅಭಿಪ್ರಾಯಿಸಿದ ಹಿನ್ನೆಲೆಯಲ್ಲಿ ಸದರಿ ಕಲ್ಲು ಗಣಿ ಗುತ್ತಿಗೆಗಳ ಕಾರ್ಯವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(648) 20.03.2020 05.20 ಎಸ್‌ವಿ–ವಿಕೆ**
**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್(ಮುಂದು):–**

ಈ ಬಗ್ಗೆ ಮಂಡ್ಯ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ಕೂಡ ಚರ್ಚೆಯಾಗಿದೆ. ಜಿ.ಟಿ.ಸ್ಟೋನ್ಸ್ ಮತ್ತು ಕ್ರಷರ್ಸ್ ಅವರ ಮೂರು ಕ್ವಾರಿಗಳಿವೆ. ಒಂದು ಕೆ.ಆರ್.ಪೇಟೆ ತಾಲ್ಲೂಕಿನ ಬೊಮ್ಮನಾಯಕನಹಳ್ಳಿ ಗ್ರಾಮ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಚಿವರೇ, ಕಲ್ಲು ತೆಗೆಯುವುದಕ್ಕೆ ಒಂದು ಎರಡು ಎಕರೆ, ಮತ್ತೊಂದು ನಾಲ್ಕು ಎಕರೆ ಇದೆ. Crusher unit ಒಂದೇ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಕೆ.ಆರ್.ಪೇಟೆ ತಾಲ್ಲೂಕಿನ ಬೊಮ್ಮನಾಯಕನಹಳ್ಳಿಯ ಸರ್ವೆ ಸಂಖ್ಯೆ 4ರಲ್ಲಿ ಎರಡು ಎಕರೆಯನ್ನು ಇವರಿಗೆ ಮಂಜೂರು ಮಾಡಲಾಗಿತ್ತು. ಟಿ.ಜೆ.ಸ್ಟೋನ್ಸ್‌ನವರು ಅತ್ಯಂತ ನಿಯಮಬದ್ಧವಾಗಿ ಮಾಡಿರುವುದಿಲ್ಲ. ಇದು ಸತ್ಯ.

ನಾನು ಆಗಲೇ ಪ್ರಾರಂಭದಲ್ಲಿ ಹೇಳಿದ್ದೇನೆ. ನಮ್ಮ ಇಲಾಖೆಯಿಂದ ಕಾನೂನುಬದ್ಧವಾಗಿ ನಡೆಸುವಂತಹ ಉದ್ದಿಮೆದಾರರಿಗೆ ತೊಂದರೆಯನ್ನು ಕೊಡುವಂತಹ ಉದ್ದೇಶ ಸರ್ಕಾರಕ್ಕೆ ಇಲ್ಲ. ನಾನು ಪ್ರಾರಂಭದಲ್ಲಿ preamble ಹಾಕಿ ಈ ಉದ್ದೇಶವನ್ನು ಸ್ಪಷ್ಟ ಮಾಡಿದ್ದೇನೆ. ಮಾನ್ಯ ಸದಸ್ಯರು ಮಾತನಾಡುವಾಗ, ಅವರು ಹೇಳುವುದನ್ನು ನಾವು ಶಾಂತರೀತಿಯಿಂದ ಕೇಳಿದ್ದೇವೆ. ನಾನು ಉತ್ತರ ಕೊಡುವವರೆವಿಗೂ ಅವರು ಶಾಂತಚಿತ್ತರಾಗಿ ಕುಳಿತುಕೊಳ್ಳಬೇಕು.

ನಾಲೆ ಇರುವುದರಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಇವರು ಹಲವಾರು violations ಅನ್ನು ಮಾಡಿದ್ದಾರೆ. Five times penalty ಎಂಬುದು ಹಿಂದಿನ ಸರ್ಕಾರದ ಬಳುವಳಿ. ಈಗ ನಾವು ಹಾಕಿರುವುದಲ್ಲ. ಮೇಲ್ನೋಟಕ್ಕೆ ಅದು ಹೆಚ್ಚು ಎಂದು ಸ್ವಾಭಾವಿಕವಾಗಿ ಎಲ್ಲರಿಗೂ ಅನಿಸುತ್ತದೆ. ಅದರ ಬಗ್ಗೆ ಸರ್ಕಾರದ ಉನ್ನತ ಮಟ್ಟದಲ್ಲಿ ಚರ್ಚೆಯಾಗಬೇಕಾಗಿದೆ. ಇದರ ಬಗ್ಗೆ ಅಷ್ಟು ದೊಡ್ಡ ಪ್ರಮಾಣದಲ್ಲಿ ಚಿಂತೆಯನ್ನು ಮಾಡಬೇಕಾಗಿಲ್ಲ. ಹಿಂದಿನ್ನ ಸರ್ಕಾರದಲ್ಲಿ ಐದು ಪಟ್ಟು ದಂಡವನ್ನು ವಿಧಿಸಲು ಕೆ.ಎಂ.ಎಂ.ಸಿ.ಆರ್. ನ ಅಡಿಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಆ ಕಾರಣಕ್ಕಾಗಿ ಇವರು ನಿಯಮಬಾಹಿರವಾಗಿ ಮಾಡಿರುವುದು ಸತ್ಯ. ತಮಗೆ ಕೊಟ್ಟಂತಹ ಎರಡು ಎಕರೆ ಜಮೀನನ್ನು ದಾಟಿ ಹೆಚ್ಚಿನ ಪ್ರಮಾಣದಲ್ಲಿ ಗಣಿಗಾರಿಕೆಯನ್ನು ಮಾಡಿದ್ದಾರೆ. ಆದರೂ ಕೂಡ in the interest of Industries. ಸರ್ಕಾರಕ್ಕೆ ಒಂದು royalty ಬರಬೇಕು. ಯಾವುದೇ ವ್ಯಕ್ತಿ ಅಥವಾ ಕಂಪನಿಗೆ ಉದ್ದೇಶಪೂರ್ವಕವಾಗಿ ರಾಜಕೀಯ ದುರುದ್ದೇಶದಿಂದ ತೊಂದರೆ ಕೊಡುವ ಇರಾದೆ ಈ ಸರ್ಕಾರಕ್ಕೆ ಇಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಳಮನೆಯಲ್ಲಿಯೂ ಕೂಡ ಮಾನ್ಯ ರೇವಣ್ಣನವರು ಇದೇ ಪ್ರಶ್ನೆಯನ್ನು ಎತ್ತಿದ್ದಾರೆ. ಅದನ್ನು ಸೋಮವಾರ ತೆಗೆದುಕೊಳ್ಳುವುದಾಗಿ ಸಭಾಧ್ಯಕ್ಷರು ಹೇಳಿದ್ದು, ಬಹುತೇಕ ಸೋಮವಾರ ಅಲ್ಲಿಯೂ ಪ್ರಸ್ತಾಪವಾಗುತ್ತದೆ. ಹಾಗೇನಾದರೂ ಅವರಿಗೆ ಸಮಾಧಾನವಾಗದಿದ್ದ ಪಕ್ಷದಲ್ಲಿ ನಮ್ಮ ಅಧಿಕಾರಿಗಳು ತಪ್ಪು ಮಾಡಿದ್ದಾರೆನ್ನುವಂತಹ ಪೂರ್ವಾಗ್ರಹ ಪೀಡಿತವಾದ ಭಾವನೆ ಸದಸ್ಯರಲ್ಲಿ ಇದ್ದರೆ, ಹಿರಿಯ ಸದಸ್ಯರನ್ನು, ಅಧಿಕಾರಿಗಳನ್ನು ಕರೆದುಕೊಂಡು ಕಾನೂನಿನ ಚೌಕಟ್ಟಿನೊಳಗೆ ಆ ಕಂಪನಿಯನ್ನು ಪುನರ್ ಸ್ಥಾಪನೆ ಮಾಡಲಿಕ್ಕೆ ಏನೆಲ್ಲಾ ಸಾಧ್ಯತೆಗಳಿವೆಯೋ, ಆ ಸಾಧ್ಯತೆಗಳ ಉಪಯೋಗವನ್ನು ಪಡೆದುಕೊಳ್ಳಲು ಈ ಸರ್ಕಾರ ಮುಕ್ತ ಅವಕಾಶವನ್ನು ನೀಡುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಾಖಲೆಗೆ ತಪ್ಪು ಮಾಹಿತಿ ಹೋಗಬಾರದೆಂಬ ಉದ್ದೇಶದಿಂದ ಎರಡು ಮಾಹಿತಿಗಳನ್ನು ಹೇಳಬಯಸುತ್ತೇನೆ. ಮಾನ್ಯ ಸಚಿವರು ಮಾಹಿತಿಯನ್ನು ನೀಡಿದ್ದಾರೆ. ಬಹುಶಃ ಇಲಾಖೆಯಿಂದ ತಪ್ಪು ಮಾಹಿತಿಯು ಬಂದಿದೆಯೆನಿಸುತ್ತದೆ. ಇದು 2008ರಲ್ಲಿ ಪ್ರಾರಂಭವಾಗಿ 2012ರಲ್ಲಿ ನಿಂತು ಹೋಯಿತು. ಅದು ಚಿಕ್ಕ ಪ್ರಮಾಣದ್ದಾಗಿರುತ್ತದೆ. ಪುನಃ ಆಗಸ್ಟ್ 2018ರಲ್ಲಿ ದೊಡ್ಡ ಪ್ರಮಾಣದಲ್ಲಿ ರೂ.16 ಕೋಟಿ ಸಾಲವನ್ನು ಪಡೆದು ಒಟ್ಟು ರೂ.21 ಕೋಟಿಗಳನ್ನು ಹೂಡಿ ಪ್ರಾರಂಭ ಮಾಡಲಾಯಿತು. ಇಲ್ಲಿಯವರೆಗೆ 9 ತಿಂಗಳು ನಡೆದಿದೆ. ನಿಂತು ಹೋಗಿರುವುದು 3 ತಿಂಗಳು. 9 ತಿಂಗಳುಗಳಿಗೆ ರೂ.60 ಲಕ್ಷ ರಾಜಧನವನ್ನು ಅವರು ಕಟ್ಟಿದ್ದಾರೆ. ಆಗ ಇದ್ದ ದರ ರೂ.9. ನಂತರ ಸರ್ಕಾರ squad ಅನ್ನು ಕಳುಹಿಸಿತು. ಅವರು ರೂ.60ರಂತೆ ಲೆಕ್ಕ ಹಾಕಿ ರೂ.93,48,000 ಎಂದು ಹೇಳಿದರು. Drone survey report ನನ್ನ ಬಳಿಯಿದೆ. ಅದನ್ನು ಮಾನ್ಯ ಸಭಾಪತಿಯವರ ಮುಖಾಂತರ ತಮಗೆ ಕಳುಹಿಸಿಕೊಡುತ್ತೇನೆ. ಮಾರ್ಚ್ 8, 2019ರಂದು ಡ್ರೋಣ್ ಸರ್ವೆ ಮಾಡಲಾಗುತ್ತದೆ. ಅವರು ರೂ.9 ಮತ್ತು ರೂ.60 ಎರಡನ್ನೂ ಬಿಟ್ಟು ರೂ.70ರಂತೆ ಲೆಕ್ಕವನ್ನು ಹಾಕಿ ರೂ.1,36,04,280 ಎಂದು ಹೇಳುತ್ತಾರೆ. ಮೂರು ತಿಂಗಳು ನಡೆದೇ ಇಲ್ಲ. ನಡೆದಿರುವುದಕ್ಕೆ ರೂ.93 ಲಕ್ಷಗಳನ್ನು ಹೇಳಿದರು. ನಿಂತ ಅವಧಿಗೆ ಒಟ್ಟು ರೂ.1,36,04,280 ಎಂದು ಹೇಳುತ್ತಾರೆ. Drone survey ಯಲ್ಲಿ ಐದು ಪಟ್ಟು ದಂಡವನ್ನು ವಿಧಿಸಲಾಯಿತು. ಈಗ ರೂ.11,05,00,000 ಹಾಕುವುದಕ್ಕೆ ಏನು ಕಾರಣ? ಇದು ಯಾವ ಲೆಕ್ಕಾಚಾರ? Drone survey ಯನ್ನು ಮೀರಿ ಈ ದಂಡವನ್ನು ವಿಧಿಸಲಾಗಿದೆ. Drone survey ವರದಿ ನನ್ನ ಬಳಿಯಿದೆ. ಸರ್ಕಾರ ಮಾಡಿಸಿದ squad survey ರೂ.93,00,000 ಎಂದು ಹೇಳುತ್ತದೆ. ಆಮೇಲೆ ಡ್ರೋಣ್ ಸರ್ವೆಯಲ್ಲಿ ಕೆಲಸ ಮಾಡದಿದ್ದ ಅವಧಿಯನ್ನು ಲೆಕ್ಕ ಹಾಕಲಾಗಿದೆ. ರೂ.9 ಮತ್ತು ರೂ.60 ಬಿಟ್ಟು, ರೂ.80 ರಂತೆ ಲೆಕ್ಕ ಹಾಕಿದರೂ ರೂ.1,36,04,280 ಆಗುತ್ತದೆ. ಆದರೆ ನಿಂತು ಹೋದ ಸಂದರ್ಭದಲ್ಲಿ ರೂ.11,05,00,000 ಹೇಗೆ ಬಂದಿತೆಂದು ನನಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿಳಿಸಬೇಕು. ಇದು ಯಾವ Drone survey ಲೆಕ್ಕವೆಂದು ಮಾನ್ಯ ಸಚಿವರು ಹೇಳಬೇಕು. ನಡೆದಿರುವುದು ಒಟ್ಟು 9 ತಿಂಗಳು. ನಿಂತು ಹೋಗಿರುವುದು 3 ತಿಂಗಳು. 60 ಲಕ್ಷವನ್ನು ಕಟ್ಟಿದ್ದಾರೆ. 93 ಲಕ್ಷವೆಂದು squad survey ಹೇಳುತ್ತದೆ. Drone survey ಲೆಕ್ಕಾಚಾರದಲ್ಲಿ 1,36,00,000 ಎಂದು ಹೇಳುತ್ತದೆ. ರೂ.11,05,00,000 ಎಂದು ಸರ್ಕಾರ ಹೇಳುತ್ತದೆ. ರೂ.11,05,00,000 ಅವೈಜ್ಞಾನಿಕವಾಗಿ, ಉದ್ದೇಶಪೂರ್ವಕವಾಗಿ ಮಾಡಿದ್ದು, ರೂ.5 ಲಕ್ಷಗಳನ್ನು ವಾಪಸ್ ತೆಗೆಯಬೇಕೆಂಬುದು ಮತ್ತು ಅವರಿಗೆ ಅನುಮತಿ ನೀಡಲಾಗುತ್ತದೆ ಎಂದು ಘೋಷಣೆ ಮಾಡಬೇಕು ಎಂಬುದು ನಮ್ಮ ಆಗ್ರಹವಾಗಿದೆ. ಉದ್ಯಮ ನಡೆಯಬೇಕು. ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ಆದೇಶವನ್ನು ನಾವು ಗೌರವಿಸಬೇಕು.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲಿ ನಡೆದ ಚರ್ಚೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿ, ಶ್ರೀ ಶ್ರೀಕಂಠೇಗೌಡ, ಶ್ರೀ ಅಪ್ಪಾಜಿ ಗೌಡ, ಶ್ರೀ ಭೋಜೇಗೌಡ, ಶ್ರೀ ಎಸ್.ಆರ್.ಪಾಟೀಲ್ ಮತ್ತು ಶ್ರೀ ರೇವಣ್ಣನವರು ಹೀಗೆ ಎಲ್ಲರೂ ಮಾತನಾಡಿದ್ದಾರೆ. ಎಲ್ಲರ ಮಾತಿನ ಸಾರಾಂಶ "ಈ ವಿಷಯದಲ್ಲಿ ರಾಜಕಾರಣ ಬೆರೆತಿದೆ, ಒಬ್ಬ ಶಾಸಕರಾಗಿದ್ದವರು ಪತ್ರವನ್ನು ಕೊಟ್ಟು ಈ ಉದ್ಯಮವನ್ನು ನಡೆಸಲು ಅವಕಾಶ ಕೊಟ್ಟರು, ತದನಂತರ ನಡೆದಂತಹ ವಿದ್ಯಮಾನಗಳ ಹಿನ್ನೆಲೆಯಲ್ಲಿ ಪಕ್ಷ ಬದಲಾವಣೆ ಮಾಡಿ ಶಾಸಕರು ಹಾಗೂ ಸಚಿವರಾದಂತಹವರು ಪುನಃ ಪತ್ರವನ್ನು ಕೊಟ್ಟು ದ್ವೇಷದ ರಾಜಕಾರಣವನ್ನು ಮಾಡುತ್ತಿದ್ದಾರೆ." ಎಂಬುದಾಗಿದೆ. ಪತ್ರವನ್ನು ಕೂಡ ತೋರಿಸಲಾಯಿತು. ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಬಹಳ ಜಾಣತನದಿಂದ ಉತ್ತರವನ್ನು ನೀಡಿದ್ದು, ನಾನು ಸಹ ಕೇಳಿಸಿಕೊಂಡಿದ್ದೇನೆ. ಇವುಗಳಿಗೆ ಯಾವುದಕ್ಕೂ ಮಾನ್ಯ ಸಚಿವರು ಉತ್ತರವನ್ನು ನೀಡಲೇ ಇಲ್ಲ. "ರಾಜ್ಯದಲ್ಲಿ ಮತ್ತು ಜಿಲ್ಲೆಯಲ್ಲಿ ಇಷ್ಟು ಗಣಿಗಾರಿಕೆಯನ್ನು ನಿಲ್ಲಿಸಿದ್ದೇವೆ. ಅವರಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪ್ರಮಾಣಪತ್ರ ಸಿಕ್ಕಿರುವುದಿಲ್ಲ. ಅದಕ್ಕಾಗಿ 30 ನಿಲ್ಲಿಸಿದ್ದೇವೆ. ಮತ್ತೊಂದು ಕಡೆ ಸಿಕ್ಕಿಲ್ಲ. ಅದಕ್ಕಾಗಿ ನಿಲ್ಲಿಸಿದ್ದೇವೆ." ಎಂದು ಹೇಳಿದರು.

ಈ ಇಲಾಖೆಯಲ್ಲಿ ಪ್ರತಿದಿನ ನಡೆಯುವಂತಹ ಇಲಾಖಾ ಸರ್ವೆ ಇರುತ್ತದೆ. ಯಾರು ಪರವಾನಗಿಯನ್ನು ಹೊಂದಿರುವುದಿಲ್ಲವೋ ಅವರ ಉದ್ಯಮವನ್ನು ಸ್ಥಗಿತಗೊಳಿಸುವಂತಹ ಅಧಿಕಾರ ಇಲಾಖೆಗೆ ಕಾನೂನಿನಡಿಯಲ್ಲಿ ಇರುತ್ತದೆ. ಆ ಕೆಲಸವನ್ನು ಅವರು ಮಾಡಿಕೊಂಡು ಹೋಗಿದ್ದಾರೆ. ಅದರ ಬಗ್ಗೆ ನಾವು ಚಕಾರವನ್ನು ಎತ್ತಿರುವುದಿಲ್ಲ. ಆದರೆ ನಾವು "ಇದು ದ್ವೇಷದ ರಾಜಕಾರಣದಿಂದ ನಿಂತಿದೆ. ಐದು ಪಟ್ಟು ದಂಡವನ್ನು ಹಾಕಿದರೂ ಇಷ್ಟು ಕೋಟಿ ಆಗುವುದಿಲ್ಲ. ನಡೆದಿರುವಂತಹ ಒಂಭತ್ತು ತಿಂಗಳುಗಳಲ್ಲಿ ನೀವು ರೂ.93 ಲಕ್ಷ ಎಂದು ಹೇಳಿ ರೂ.11 ಕೋಟಿ ಕೊಟ್ಟಿದ್ದೀರಿ." ಎಂದು ಹೇಳಿದ್ದೇವೆ. ಇದಕ್ಕೆ ಮಾನ್ಯ ಸಚಿವರಿಂದ ನಮಗೆ ಉತ್ತರವೇ ಸಿಗಲಿಲ್ಲ. ಈ ರೀತಿಯಾದ ಗಣಿಗಾರಿಕೆಯನ್ನು ಅನುಮತಿಯಿಲ್ಲದೆ illegal ಆಗಿ ನಡೆಸುತ್ತಿದ್ದಾರೆಂದು ನ್ಯಾಯಾಲಯವು ಮೂರು ಬಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದೇಶವನ್ನು ಕೊಟ್ಟಾಗ ನ್ಯಾಯಾಲಯಕ್ಕೆ ಇವರು ಮಾಹಿತಿಯನ್ನು ಕೊಡಲಿಲ್ಲವೇ? ನ್ಯಾಯಾಧೀಶರು ಕೊಟ್ಟಂತಹ ಆದೇಶಕ್ಕೆ ಬೆಲೆಯಿಲ್ಲವೇ? ಈ ರೀತಿ ಮಾಹಿತಿಯನ್ನು ನ್ಯಾಯಾಧೀಶರಿಗೆ ಕೊಟ್ಟು, ನ್ಯಾಯಾಲಯವು ಸ್ಥಗಿತಗೊಳಿಸಿ ಎಂದು ಆದೇಶವನ್ನು ನೀಡಿದ್ದರೆ ಸ್ಥಗಿತಗೊಳಿಸಬಹುದಿತ್ತಲ್ಲವೆ?

ಮಾನ್ಯ ಸಚಿವರು ದಯವಿಟ್ಟು ಇಷ್ಟೊಂದು ನುಣುಚಿಕೊಳ್ಳಬಾರದು. ಒಬ್ಬ ಉದ್ದಿಮೆದಾರನಿಗೆ ನ್ಯಾಯವನ್ನು ಕೊಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಚೌಡರೆಡ್ಡಿಯವರೇ, ನಾನು ನನ್ನ ಹೇಳಿಕೆಯನ್ನು ಪ್ರಾರಂಭ ಮಾಡುವಾಗ ನೀವು ಇರಲಿಲ್ಲವೇ? ಅದಕ್ಕೆ ನಿಮಗೆ ಮಾಹಿತಿ ಇಲ್ಲ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಚಿವರೇ, ನಾನು ಪ್ರಾರಂಭದಿಂದಲೂ ಇಲ್ಲಿಯೇ ಕುಳಿತು ತಮ್ಮ ಮಾತನ್ನು ಆಲಿಸುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):–** ಮಾನ್ಯ ಸಚಿವರೇ, Facts ಏನಿದೆಯೆಂದರೆ ಬೊಮ್ಮನಾಯಕನಹಳ್ಳಿಯಲ್ಲಿ ಎರಡು ಎಕರೆ ಭೂಮಿಯನ್ನು ಗಣಿಗಾರಿಕೆಗೆ ಗುತ್ತಿಗೆ ನೀಡಲಾಗಿದೆ. ಅದು 22.03.2007ರಿಂದ 20 ವರ್ಷಗಳಿಗಾಗಿ ನೀಡಲಾಗಿದೆ ಎಂದು ಸರ್ಕಾರದ ದಾಖಲೆಗಳಲ್ಲಿದೆ.

**(ಮುಂದು)**

(649) 20–03–2020 (5–30) ಕೆಜಿ–ಬಿಎನ್ಎಸ್
**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):–**

Actually, Agreement end ಆಗಿರುವಂಥದ್ದು ದಿನಾಂಕ 22.03.2000 ರಿಂದ 20.12.2005 ರವರೆಗೆ 5 ವರ್ಷಗಳಿಗೆ ಮಾತ್ರ ಆಗಿತ್ತು. ತದನಂತರ 2017 ರಿಂದ 20 ವರ್ಷಗಳವರೆಗೆ ಮಾಡಲಾಗಿದೆ. ಈ gap period ನಲ್ಲಿ ನಡೆಸಿಕೊಂಡಿದ್ದೀರಿ ಎಂದು ನೀವು unauthorised ಆಗಿ quarrying ಮಾಡಿದ್ದೀರಿ, crusher ನಡೆಸಿದ್ದೀರಿ ಎಂದು ದಂಡ ವಿಧಿಸಿದ್ದೀರಿ. ಅದು ತಪ್ಪು. ಇದು ಒಂದು.

ಎರಡನೆಯದಾಗಿ, ಅದೇ ಊರಿನಲ್ಲಿ ಒಂದು ಎಕರೆ 31 ಗುಂಟೆ ಪ್ರದೇಶದಲ್ಲಿ unauthorised ಆಗಿ quarrying ಮಾಡುತ್ತಿದ್ದೀರಿ, crusher ನಡೆಸಿದ್ದೀರಿ ಎಂದು ಹೇಳಿದ್ದಾರೆ. Actually, ಇದನ್ನು ಸಹ 2007 ರಿಂದ 20 ವರ್ಷಕ್ಕೆ ಲೆಕ್ಕ ಹಾಕಿಕೊಂಡಿದ್ದಾರೆ. 2006 ರಲ್ಲಿ ತೆಗೆದುಕೊಂಡ Google map ನಲ್ಲಿ ಸಹ ಇದು ಇದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆ ಏರಿಯಾದಲ್ಲಿ ಹಿಂದೆಯೇ quarrying ಆಗಿದೆ. ಬಹುಶಃ ಯಾರಾದರೂ ಮಾಡಿರಬಹುದು. ಈತನ contention ಏನೆಂದರೆ, ನನಗೆ quarrying ಗೆ ಕೊಡಬೇಕಾದರೆ, unauthorised quarrying ಅನ್ನು ಬಿಡಿಸಿ ನನಗೆ ಕೊಟ್ಟರು. ಹಿಂದೆ ಆಗಿರುವಂತಹ quarrying ಗೆ ನಾನು ಜವಬ್ದಾರನಲ್ಲ. ನನ್ನ ಮೇಲೆ ಏಕೆ unauthorised quarrying ಆರೋಪ ಹಾಕುತ್ತಿದ್ದೀರಿ. ದಯಮಾಡಿ ಈ ದಾಖಲೆಗಳನ್ನು ತೆಗೆದು ನೋಡಿದರೆ clarification ಸಿಗುತ್ತದೆ.

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಅವರು ನಮ್ಮನ್ನು ಇದು ದ್ವೇಷದ ರಾಜಕಾರಣ ಎಂದು ಭಾವಿಸುತ್ತೀದ್ದೀರಾ ಎಂದು ಹೇಳುತ್ತಾರೆ. ನಾವು ದ್ವೇಷದ ರಾಜಕಾರಣವನ್ನು ಮಾಡುತ್ತಿಲ್ಲ. ಅವರು ಅಲ್ಲಿ ದ್ವೇಷದ ರಾಜಕಾರಣವನ್ನೇ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳುತ್ತೇನೆ. ಈ ಹಿಂದಿನ ಸರ್ಕಾರದವರು ಐದು ಪಟ್ಟು ಹಾಕುವುದನ್ನು ಮಾಡಿದರು ಎಂದು ಹೇಳಿದ್ದಾರೆ. ಹಿಂದಿನ ಸರ್ಕಾರದವರು ಹೆಚ್ಚು ಮಾಡುವುದಕ್ಕೆ ಅವರೇ ತೀರ್ಮಾನ ತೆಗೆದುಕೊಂಡಿದ್ದು ಎಂದು ಹೇಳಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಭಾರತೀಯ ದಂಡ ಸಂಹಿತೆಯಲ್ಲಿ ಕಲಂ 302, 307 ಇದೆ. ಇತರೆ ಬೇರೆ ಬೇರೆ ಕಲಂಗಳು ಇವೆ. ಆದರೆ, ಅಪರಾಧಿ ಆಗಬೇಕಲ್ಲ. ಅದಾಗದೆ ದಂಡ ಹಾಕಿದರೆ ತಪ್ಪು ಆಗುತ್ತದೆ. ತಪ್ಪು ಮಾಡಿದಾಗ ದಂಡ ಹಾಕಬೇಕು. ನಮ್ಮ ಹಳ್ಳಿಗಳ ಕಡೆ "ದೆವ್ವ ಹಿಡಿದವರನ್ನು ಕೆರದಲ್ಲಿ ಹೊಡೆಯಬೇಕೆಂದು" ಹೇಳುತ್ತಾರೆ. ಸುಮ್ಮ ಸುಮ್ಮನೆ ಹೊಡೆದರೆ ಆ ಪಾಪಿ ಒದೆಗಳನ್ನು ತಿನ್ನುತ್ತಾನೆ. ದೆವ್ವಕ್ಕೆ ಹೊಡೆದಂತೆ ಆಗುತ್ತದೆ. ಈ ಕಥೆ ನೋಡಿದರೆ, ಬಹಳ ತಪ್ಪಾಗುತ್ತಿದೆ. Drone Survey ಆಗಿರುವುದು ಒಂದೇ ತಿಂಗಳಿನಲ್ಲಿ. ಮುಚ್ಚಿದ್ದಕ್ಕೆ ಇಷ್ಟು ಜಾಸ್ತಿಯಾಗಿದೆ. Drone Survey ಯನ್ನು ಒಪ್ಪುತ್ತೇವೆ. ಐದು ಪಟ್ಟು ಹೆಚ್ಚಿಗೆ ಹಾಕಿರುವುದಕ್ಕೂ ಒಪ್ಪುತ್ತೇವೆ. ಬೇರೆವುಗಳಿಗೆ, ಎಲ್ಲಿ ತಪ್ಪಾಗಿದೆಯೋ ಅಲ್ಲಿ ಹಾಕಿರುವುದಕ್ಕೆ ಒಪ್ಪುತ್ತೇವೆ. ಆದರೆ, ಇಲ್ಲಿ ಎಲ್ಲಿ ತಪ್ಪಾಗಿದೆ? ಇದಕ್ಕೆ ಸಂಬಂಧಪಡುವಂತಹ ಉತ್ತರವನ್ನು ನಮಗೆ ಕೊಡಿ. ಇಡೀ ರಾಜ್ಯದ್ದು ಹೇಳಿದರೆ ನಮಗೆ ಮಾಹಿತಿ ಸಿಗುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಅದು ಏನಾದರೂ ಕಾಲುವೆಯಿಂದ 200 ಮೀಟರ್ ಒಳಗೆ ಇದೆ ಎಂದರೆ, ದಯವಿಟ್ಟು ಅದನ್ನು cut ಮಾಡಬಹುದು. ಆ ಪ್ರದೇಶವನ್ನು cut ಮಾಡಿ ಕೊಡಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಾನೂನು ಮೀರಿ ಮಾಡಿದ್ದರೆ ಖಂಡಿತ ನಾವು ಅವರ ಜೊತೆಗೆ ಇದ್ದೇವೆ. ಖಂಡಿತ ಅವರು ಮಾಡಲಿ.

“ಮಾನವ ಜನ್ಮ ಬಹು ದೊಡ್ಡದು
ಇದ ಹಾನಿಗೊಳಿಸಬೇಡಿ ಹುಚ್ಚಪ್ಪಗಳಿರಾ॥
84 ಲಕ್ಷ ಜೀವರಾಶಿಗಳ ದಾಟಿ ಬಂದ ವೀರ
ತಾನಲ್ಲ, ತನ್ನದಲ್ಲ”

ಎಂದು ಶ್ರೀ ಪುರಂದರದಾಸರು ಬಹಳ ಸೊಗಸಾಗಿ ಹೇಳಿದ್ದಾರೆ.

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಂಡ್ಯ ನಮ್ಮ ಜಿಲ್ಲೆ. ಈ ಜಿಲ್ಲೆ ರಾಜಕೀಯವಾಗಿ ಅತ್ಯಂತ ಸೂಕ್ಷ್ಮ ಜಿಲ್ಲೆ ಸಹ ಹೌದು. ಅನೇಕ ಮಾನ್ಯ ಹಿರಿಯ ಸದಸ್ಯರುಗಳಾದ ಶ್ರೀ ಬಸವರಾಜ ಹೊರಟ್ಟಿಯವರಿಂದ ಹಿಡಿದು ಶ್ರೀ ಎಸ್.ಆರ್.ಪಾಟೀಲ್‌ರವರೆಗೂ ಒಂದು ಪ್ರಕರಣವನ್ನು ಹಿಡಿದು ದ್ವೇಷ ರಾಜಕಾರಣದ ಹಿನ್ನೆಲೆಯಲ್ಲಿ ಒಬ್ಬ ಉದ್ಯಮಿಗೆ ತೊಂದರೆಯಾಗಿದೆ ಎನ್ನುವ ಬಗ್ಗೆ ಬಹಳ ಪರಿಣಾಮಕಾರಿಯಾಗಿ ಹೇಳಿದರು. ಮಾನ್ಯ ಸಚಿವರ ಉತ್ತರವನ್ನು ಸಹ ನಾವು ಕೇಳಿದ್ದೇವೆ. ಅನೇಕ ವಿಷಯಗಳು ಸಹ ನಮಗೂ ಗೊತ್ತು. ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಹಸಿರು ಪೀಠ ಇದೆ. ಅರಣ್ಯವನ್ನು, ನದಿಗಳನ್ನು ಮತ್ತು ನೀರಿನ ಸೆಲೆಗಳನ್ನು ರಕ್ಷಣೆ ಮಾಡದಿದ್ದರೆ ರಾಜಕಾರಣಿಗಳು ಜೈಲಿಗೆ ಹೋಗುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಜೈಲಿಗೆ ಹೋಗಬೇಕಾಗುತ್ತದೆ. ಮಾನ್ಯ ಸದಸ್ಯರಾದಂತಹ ಶ್ರೀ ತಿಪ್ಪೇಸ್ವಾಮಿಯವರು ಅಧಿಕಾರಿಯಾಗಿದ್ದಂತಹವರು ಅವರು ನಾಲೆಗಳಿಂದ 200 ಮೀಟರ್ ನಿರ್ಭಂದಿತ ಇದೆ ಎಂದು ಹೇಳಿದ್ದಾರೆ. ನಾನು ಅವರು ಹೇಳಿದ್ದನ್ನು ಮೆಚ್ಚುತ್ತೇನೆ, ಅಂತಹ violation ಅನ್ನು ಮಾಡಿದಿದ್ದರೆ ಯಾರು ಬಂದರೂ ಸಹ ರಕ್ಷಣೆ ಕೊಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇದು ಕೇವಲ ಮಂಡ್ಯ ಜಿಲ್ಲೆಯದ್ದು ಮಾತ್ರವಲ್ಲ. ನಮ್ಮ ರಾಜ್ಯದಲ್ಲಿರುವ ಕಲ್ಲು ಗಣಿಗಳ ಸಮಸ್ಯೆಯನ್ನು ನಾವು ನೋಡುತ್ತಿದ್ದೇವೆ. The Karnataka Regulation of Stone Crushers Act ಅನ್ನು ಎಷ್ಟು ಜನರು violate ಮಾಡುತ್ತಿದ್ದಾರೆ, Forest land ನಿಂದ ಆ ಒಂದು distance ಅನ್ನು ಎಷ್ಟು ಜನರು violate ಮಾಡುತ್ತಿದ್ದಾರೆ;

ಮಾನ್ಯ ಸಭಾಪತಿಯವರೇ, ತಾವು ನಮಗೆ ಸಂವಿಧಾನದ ಮೇಲೆ ಮಾತನಾಡಲು ಅವಕಾಶ ಕೊಟ್ಟಂತಹ ಸಂದರ್ಭದಲ್ಲಿ ನಾವೆಲ್ಲರೂ ಮಾತನಾಡಿದ್ದೇವೆ. Policy makers ಆದ ನಾವೇ ಇದರ ಬಗ್ಗೆ ವ್ಯತಿರಿಕ್ತ ಭಾವನೆಯನ್ನು ತಾಳಿದರೆ, Executives, implement ಮಾಡಬೇಕಾದವರಿಗೆ ನಾವು ಮನ್ನಿಸದೇ ಹೋದರೆ Judicial intervention ಏಕೆ ಬಂತು? Judicial intervention ಆದ ಮೇಲೂ ಸಹ ಮಾನ್ಯ ಸಚಿವರು ಅದರಲ್ಲಿ ಆ ಒಂದೂ ಅವಕಾಶ ಇದ್ದಿದರಿಂದಲೇ ಕೊಟ್ಟಿದ್ದು ಎಂದು ಹೇಳಿದ್ದಾರೆ. ನಾನು ಸಹ ಚುನಾವಣೆಯ incharge ಆಗಿದ್ದೆ. Beauty of democracy, ನಾವು ಹೊಡೆದಾಡಿದೆವು, ಬಡಿದಾಡಿದೆವು. ಅಲ್ಲಿ ಮಾನ್ಯ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಚಿವರಾದ ಶ್ರೀ ನಾರಾಯಣಗೌಡರವರು ಅಲ್ಲಿ ಸೋತಿದ್ದರೆ ಇಲ್ಲಿ ಇತಿಹಾಸವಾಗುತ್ತಿದ್ದರು. ಆದರೆ, ಮಾನ್ಯ ನಾರಾಯಣಗೌಡರು ಗೆದ್ದಿದ್ದಾರೆ. ಹೌದು ಅಲ್ಲಿ ಇದ್ದರು. ಏಕೆ ಲೆಟರ್ ಕೊಟ್ಟರು, ಯಾವ ಸಂದರ್ಭದಲ್ಲಿ ಪಕ್ಷವನ್ನು ಬಿಟ್ಟರು ಎಂಬುದನ್ನು ಅವರೇ ಹೇಳಿದ್ದಾರೆ. ನಾನು ಅದನ್ನು ಹೇಳುವುದಿಲ್ಲ. ಅವರಿಗೆ inconvenience ಆಗಿದ್ದರಿಂದಲೇ ಅವರ ಶಾಸಕ ಸ್ಥಾನಕ್ಕೆ ಕೆಲಸ ಮಾಡಲು ಮುಕ್ತ ಸ್ವಾತಂತ್ರ್ಯ ಇಲ್ಲದ ಕಾರಣದಿಂದಲೇ ನಾನು ಆ ಪಕ್ಷವನ್ನು ಬಿಟ್ಟೆ ಎಂದು ಅವರೇ ಹೇಳಿದ್ದಾರೆ. ಇದು ನನ್ನ ಹೇಳಿಕೆ ಅಲ್ಲ. ತಾವು ಅದನ್ನು ಮನ್ನಿಸುವುದಾದರೆ, ಇವತ್ತು ಸಚಿವರಾಗಿ involve ಆಗಿದ್ದಾರೆಂಬ ಮಾತನ್ನು ಹೇಳುತ್ತಿದ್ದಾರೆ, ಆದರೆ, ಮಾನ್ಯ ನಾರಾಯಣಗೌಡರು ಈಗ ಸದನದಲ್ಲಿ ಇಲ್ಲ. ಹಾಗಾಗಿ ಈ ರೀತಿ ಹೇಳುವುದು ಬಹಳ ತಪ್ಪಾಗುತ್ತದೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಪ್ರದೇಶದವರು. ಕೆ.ಆರ್.ಪೇಟೆ ತಾಲ್ಲೂಕಿನವರು. ಆ ಕ್ಷೇತ್ರದಲ್ಲಿ ಜೆಡಿ(ಎಸ್) ನಾಯಕರ ನಿರೀಕ್ಷೆಗೂ ಮೀರಿ ವ್ಯತಿರಿಕ್ತವಾಗಿ ಫಲಿತಾಂಶ ಬಂದಿದೆ. ಮಂಡ್ಯ ಜಿಲ್ಲೆಯಲ್ಲಿಯೂ ಸಹ ಒಂದು ವ್ಯತಿರಿಕ್ತ ಫಲಿತಾಂಶ ಬಂದಿದ್ದು ಹೌದು. ಆದರೆ, ಬೇಬಿ ಬೆಟ್ಟ, ಅಮೃತ ಮಹಲ್ ಕಾವಲ್ ಇದರ ಬಗ್ಗೆ ಚರ್ಚೆ ಆಗಿದೆ. ಕೆ.ಆರ್. ಪೇಟೆ ಡ್ಯಾಂಗೆ ಸ್ಫೋಟಕಗಳಿಂದ ಎಷ್ಟು ಹಾನಿಯಾಗುತ್ತಿದೆ ಎಂಬುದುನ್ನು serious ಆಗಿ ಅನೇಕ ಪತ್ರಿಕೆಯ ಮಿತ್ರರು ಬರೆದಿದ್ದಾರೆ. ಸಂಶೋಧಕರು ಸಂಶೋಧನೆ ಮಾಡಿದ್ದಾರೆ. ಅದರ ಬಗ್ಗೆ Geologist ರವರು ಕೊಟ್ಟಿದ್ದಾರೆ. ನಮ್ಮೆಲ್ಲರ ಮುಖ್ಯ ಉದ್ದೇಶ, ಈ ನೀರನ ಸೆಲೆಗಳನ್ನು, ಕಾನೂನನ್ನು violate ಮಾಡುವವರ ಪರ ಇರಬಾರದು. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನನ್ನದೊಂದು ವಿನಂತಿ ಇದೆ. ಪಂಚಗಿರಿಗಳು ನಂದಿಗಿರಿಧಾಮದ ಸುತ್ತ ಸ್ಫೋಟಕಗಳನ್ನು ಹೇಗೆ ಮಾಡುತ್ತಿದ್ದಾರೆ..,

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** If it is illegal, please close down ಎಂದು ನಾವು ಪ್ರಮಾಣಿಕವಾಗಿ ಹೇಳಿದ್ದೇವೆ.

(ಗೊಂದಲ)

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಇದ್ದಾರೆ. ರಸ್ತೆಗಳಲ್ಲಿ 18 ಟನ್ ಬಾರಮಿತಿಯನ್ನು ಓಡಿಸಬೇಕಾದ ಲಾರಿಗಳು 30 ಟನ್‌ಗಳನ್ನು ಹಾಕಿಕೊಂಡು ಓಡಿಸಿ, ನಿಯಮವನ್ನು violate ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಅವರು ದ್ವೇಷದ ರಾಜಕಾರಣವನ್ನು ಮಾಡುತ್ತಿದ್ದಾರೆ.,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಡಾ||ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅವರು ರಾಜಕಾರಣದ ಬಗ್ಗೆ ಮಾತನಾಡಿದರೆ, ನಾನು ರಾಜಕಾರಣದ ಬಗ್ಗೆ ಮಾತನಾಡುತ್ತೇನೆ. ಆದರೆ, ಈಗ ನಾನು ರಾಜಕಾರಣದ ಬಗ್ಗೆ ಮಾತನಾಡುತ್ತಿಲ್ಲ.,

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಆ ಜಾಗವನ್ನು ನೋಡಿಲ್ಲ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪತ್ರ ಕೊಟ್ಟಿರುವುದನ್ನು ಹೇಳಬಾರದೇ?

(ಗೊಂದಲ)

**ಡಾ||ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ರಾಜಕಾರಣದಲ್ಲಿ ಇವತ್ತು ಮಾನ್ಯ ನಾರಾಯಣಗೌಡರ ಬಗ್ಗೆ ವ್ಯಕ್ತಿಗತವಾಗಿ ನಿಂದನೆ ಮಾಡುವಂಥದ್ದು ಶೋಭೆಯಲ್ಲ. ವಿಷಯದ ಬಗ್ಗೆ ಮಾತಾನಾಡೋಣ.

(ಗೊಂದಲ)

**ಸಭಾಪತಿಯವರು:–** ದಯವಿಟ್ಟು ಎಲ್ಲಾ ಸದಸ್ಯರು ಕುಳಿತುಕೊಳ್ಳಿ.

(ಗೊಂದಲ)

**ಡಾ||ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಯಾವುದೇ ಒತ್ತಡಕ್ಕೂ ಮಣಿಯದೇ ಈ ರಾಜ್ಯದ ನೆಲ, ಜಲ, ಸಂಪತ್ತನ್ನು ರಕ್ಷಣೆ ಮಾಡುವುದಕ್ಕೆ ಈ ಸರ್ಕಾರ ಬದ್ದವಾಗಿದೆ., ಯಾವುದೇ ಕಾರಣಕ್ಕೂ ಈ ರಾಜ್ಯದ ಸಂಪತ್ತನ್ನು ಲೂಟಿ ಮಾಡುವವರಿಗೆ ರಕ್ಷಣೆ ಕೊಡವುದಿಲ್ಲ.

(ಗೊಂದಲ)

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ನನಗೆ ಎರಡು ಮಾತುಗಳನ್ನು ಹೇಳಲು ಅವಕಾಶ ಕೊಡಿ.,

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ ನಡೆಯುತ್ತಿದೆ. ಹಾಗಾಗಿ, ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಅಧಿಕಾರ ಇದೆ. ಬೇಕಾದರೆ ಪುನಃ ಮಾತನಾಡಲು ಅವಕಾಶಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರ ಲೆಟರ್‌ಗಳಿದ್ದರೂ ಸಹ ನಾವು provoke ಮಾಡುವಂತಹ ಮಾತನ್ನು ಆಡಿಲ್ಲ. ನಾವು ಯಾರನ್ನು provoke ಮಾಡಲಿಲ್ಲ., ಅದು illegal ಆಗಿ ಇದ್ದರೆ ಇವತ್ತೆ ಅದನ್ನು ಬಂದ್ ಮಾಡಿ. ನಾವು ಏಕೆ ಮಾಡಿಲ್ಲ; ಇರುವಂತಹ ಪ್ರಸ್ತುಸ್ಥಿತಿಯನ್ನು. ...

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಸಚಿವರಾಗಿ ಈ ತರಹ ಪತ್ರ ಕೊಟ್ಟಿದ್ದಾರೆಂದರೆ, ನಾವು ಮಾತನಾಡಬಾರದಾ; ನಾವು ಪ್ರಮಾಣಿಕವಾಗಿ ಹೇಳಿದ್ದೇವೆ. ಅದು illegal ಇದ್ದರೆ, ಏನೂ ಬೇಕಾದರು ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ.,

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಐದು ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗುತ್ತಿತ್ತು. ನಂತರ 2017 ರಲ್ಲಿ ಗುತ್ತಿಗೆ ನೀಡಿದ ದಿನಾಂಕದಿಂದ ಅನ್ವಯವಾಗುವಂತೆ 20 ವರ್ಷಗಳ ಕಾಲ ಗುತ್ತಿಗೆಯನ್ನು ವಿಸ್ತರಿಸಲಾಗಿದೆ.

(ಮುಂದು.,)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(650) 20–03–2020(5–40)ಎಂವಿ–ಬಿಎನ್‌ಎಸ್
**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಮುಂದು...):–**

ಗುತ್ತಿಗೆ ನೀಡಿದ ದಿನಾಂಕದಿಂದ ತೆಗೆದ ಖನಿಜದ quantity ಯ ಲೆಕ್ಕದ ಮೇಲೆ, royalty ಪಾವತಿಸಿದ quantity ಗೆ ಐದು ಪಟ್ಟು ದಂಡವನ್ನು ವಿಧಿಸುವಂತಹ ನಿಯಮ ಸರ್ಕಾರದ ಮುಂದೆ ಇದ್ದಿದ್ದು ನಿಜ. ಈಗ ಗಣಿ ಪ್ರಾರಂಭವಾದಾಗಿನಿಂದ ತೆಗೆದಿರುವ ಖನಿಜದ ಒಟ್ಟು quantity ಯಲ್ಲಿ permit ತೆಗೆದುಕೊಂಡಿರುವ quantity ಯನ್ನು ಹೊರತುಪಡಿಸಿ, ಉಳಿದ quantity ಮೇಲೆ ಐದು ಪಟ್ಟು ದಂಡವನ್ನು ವಿಧಿಸಿದೆ. ಏನು ಮೈನಿಂಗ್ ಮಾಡಿ excavate ಮಾಡುತ್ತೇವೆಯಲ್ಲಾ, ಈಗ ನಾವು ಎಷ್ಟು metric ton excavate ಮಾಡಿದ್ದೇವೆ, ಎಷ್ಟು metric ton ಗೆ permit ಅನ್ನು ತೆಗೆದುಕೊಂಡಿದ್ದೇವೆ ಈ ಎರಡು ಅಂಶಗಳು equal ಇದ್ದರೆ ದಂಡ ವಿಧಿಸುವ ಪ್ರಶ್ನೆಯೇ ಬರುವುದಿಲ್ಲ. Quantity of excavation is more and permission taken quantity is very less ಎಂದಾಗ ಆ difference, illegal transport.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೇವಲ ಸಮರ್ಥನೆ ಮಾಡುವಂತಹ ಉತ್ತರವನ್ನು ಮಾತ್ರ ಹೇಳುತ್ತಿದ್ದಾರೆ. ಅದು ಬಿಟ್ಟು ಅವರು ಬೇರೆ ಏನನ್ನು ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅದನ್ನು ಮಾತ್ರ ಹಾಕಿರುವುದು, ಜಾಸ್ತಿ ಹಾಕಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಟ್ಟು excavate ಮಾಡಿದ quantity ಯಲ್ಲಿ royalty ಅಥವಾ permit ಕೊಟ್ಟಿರುವುದನ್ನು ಹೊರತುಪಡಿಸಿ, excess ಆದವುಗಳಿಗೆ royalty ಮತ್ತು permit ಇರುವುದಕ್ಕೆ ದಂಡ ಎಂದು ಹೇಳುತ್ತಾರೆ. ಅವು ಏನು excess quantity other than permit; quantity other than payment of royalty ಯನ್ನು ಹೊರತುಪಡಿಸಿ.

**ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೇ ಇದನ್ನು conclude ಮಾಡೋಣವೆ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, permit ಅನ್ನು ತೆಗೆದುಕೊಂಡ ಮೇಲೆ royalty ಕಟ್ಟಲೇಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 'or' ಎಂದು ಹೇಳಿದರು.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, either permit or royalty, both are same.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, royalty ಕೊಡಲಾರದಂತಹ quantity ಗೆ ಏನು ಅವರು five times penalty ಹಾಕುತ್ತಾರಲ್ಲ, ಅದರಲ್ಲಿ wastage ಇರುತ್ತದೆ. Entire quantity ಇರುವುದಿಲ್ಲ. I know the law. Other than permit quantity ಯಲ್ಲಿ wastage ಇದ್ದರೆ, ಅದಕ್ಕೆ royalty ಕೊಡುವಂತಹ ಪ್ರಶ್ನೆಯೇ ಇಲ್ಲ. ಆ wastage ಅನ್ನು ಹಿಡಿದರೆ, ನೀವು royalty ಕೊಟ್ಟಿಲ್ಲ, ಅದಕ್ಕೆ permit ತೆಗೆದುಕೊಳ್ಳದೆ ಕೊಟ್ಟಿದ್ದರೆ ಏನಾಗುತ್ತದೆಂದರೆ, ಅದನ್ನು ದಮನಿಸಿದಂತೆ ಆಗುತ್ತದೆ.

**(ಗೊಂದಲ)**

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಲ್ಲಿ ನಾವು ಏನು ಮಾಡಿಲ್ಲ. ಅದು ಸರ್ಕಾರದ ಗಮನದಲ್ಲಿ ಇದೆ ಎಂದು ಹೇಳಿದ್ದೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದಕ್ಕೆ ಸದನ ಸಮಿತಿ ರಚನೆ ಮಾಡಿ. ನಡೆಯಿರಿ ಹೋಗೋಣ, ಇಲಾಖೆಯ ಸರ್ವೇ ಮತ್ತು ಹಾಕಿರುವಂತಹ ತೆರಿಗೆ ಇವುಗಳೆಲ್ಲಾ ಕೂಡ ಆ Drone Survey ಯಲ್ಲಿ ಸರಿ ಇದೆಯೇ? ಅವರು ಪ್ರಾಮಾಣಿಕವಾಗಿದ್ದರೆ ಮತ್ತು ಇಲಾಖೆಯ ಅಧಿಕಾರಿಗಳು ಕೊಟ್ಟಿರುವಂತಹ ಅಂಕಿ–ಅಂಶ ಸರಿಯಿದೆ ಎನ್ನುವುದಾದರೆ ಇದಕ್ಕೆ ಸದನ ಸಮಿತಿ ರಚನೆ ಮಾಡಲಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಪ್ರಾಮಾಣಿಕವಾಗಿದ್ದಾರೆ. ಅಧಿಕಾರಿಗಳು ಮಾಡಿರುವಂಥದ್ದು ಶೇಕಡಾ 100ರಷ್ಟು ಸರಿಯಿದೆ. ಅವರು ಏನನ್ನು ಸಹ ಮುಚ್ಚಿಟ್ಟಿಲ್ಲ. ಈಗ ನಾನು ನನ್ನಲ್ಲಿರುವ ನಾಲ್ಕು ಸಾಲುಗಳನ್ನು ಓದುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರನ್ನು ಸುಮ್ಮನಿರುವುದಕ್ಕೆ ಹೇಳಿ. ಈಗ ಇದು ಮೇಲ್ನೋಟಕ್ಕೆ ಎಲ್ಲಾ ಗೊತ್ತಾಗುತ್ತಿದೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಈ ಉದ್ದಿಮೆಯನ್ನು ಪ್ರೋತ್ಸಾಹ ಮಾಡಬೇಕು ಎಂಬ ಮಾತನ್ನು ಹೇಳುತ್ತಾರೆ. ಸುಮ್ಮನೆ ಯಾವುದಕ್ಕೂ ಅಧಿಕಾರಿಗಳು ಕೊಡುತ್ತಾರೆ. ಈಗ ಅಧಿಕಾರಿಗಳು ನಾವು ಹೇಳಿದರು ಕೊಡುತ್ತಾರೆ, ನೀವು ಹೇಳಿದರು ಸಹ ಕೊಡುತ್ತಾರೆ. ಇದು ಸರಿಯಲ್ಲ. ಈಗ ದೊಡ್ಡಸ್ತನವನ್ನು ನೀವು ಮಾಡಬೇಕು ಅಥವಾ ನಾವು ಮಾಡಬೇಕು. ಹಾಗಾಗಿ ಈಗ ಯೋಗ್ಯವಾಗಿ ಕೆಲಸ ಮಾಡುವವರಿಗೆ ಸಣ್ಣಪುಟ್ಟ lapses ಬಿಟ್ಟು, ಪ್ರೋತ್ಸಾಹ ಕೊಟ್ಟು ಮಾಡುವಂತಹ ಕೆಲಸ ಬಿಟ್ಟು, ಇದಕ್ಕೆ argument ಮಾಡುವುದರಲ್ಲಿ ಅರ್ಥವೇನಿದೆ? ಇದು ಮೇಲ್ನೋಟಕ್ಕೆ ನಮಗೂ ಮತ್ತು ನಿಮಗೂ ಗೊತ್ತಾಗುತ್ತದೆ. ನಿಮಗೆ ಗೊತ್ತಿದ್ದರು ಸಹ ನೀವು ಆಡಳಿತ ಪಕ್ಷದ ಸ್ಥಳದಲ್ಲಿ ಕುಳಿತುಕೊಂಡಿದ್ದೀರಿ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ನಾವು ಈ ಸ್ಥಳದಲ್ಲಿ ಕುಳಿತುಕೊಂಡಿದ್ದೇವೆ ಅದನ್ನು ಹೇಳುತ್ತೇವೆ. ಈಗ ನಾನು ಏನು ಹೇಳುತ್ತೇನೆಂದರೆ, ಇವತ್ತು ನೀವು ನ್ಯಾಯಕ್ಕಾಗಿ ಬೆಂಬಲ ಕೊಡಬೇಕಾಗುತ್ತದೆ. ಸದಸ್ಯರಾದ ಮಾನ್ಯ ಮರಿತಿಬ್ಬೇಗೌಡರು ಹೇಳಿದರು. ಅದರಂತೆ ನಿಮಗೆ ಸರಿಯಿಲ್ಲವೆಂದರೆ, ನಾಲ್ಕೈದು ಜನರ ಸಮಿತಿ ಮಾಡಿ. ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ತಪ್ಪಿದ್ದರೆ 20 ಕೋಟಿ ಹಾಕಿ. ಈಗ ನಾವು ಹೇಳುತ್ತೇವೆ ತಪ್ಪಿದ್ದರೆ ಅದನ್ನು close ಮಾಡಿ. ಈಗ ಕಾನೂನು ಪ್ರಕಾರವಿದ್ದಾಗ ಮಾಡುವುದು ಬೇಡ ಎನ್ನುವುದು ನಮ್ಮ ವಿನಂತಿ. ಇದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಇದರ ಬಗ್ಗೆ ಸ್ಪಷ್ಟತೆಯನ್ನು ಮಾಡಿದ್ದೇನೆ. ಡ್ರೋನ್ ಸರ್ವೇಯ ಪ್ರಕಾರ ಕಲ್ಲು ಗಣಿಗಾರಿಕೆಯಲ್ಲಿ wastage ಇರುವುದಿಲ್ಲ. It is a crusher. ಇದರಲ್ಲಿ wastage ಇರುವುದಿಲ್ಲ. ಆ ಕಾರಣಕ್ಕಾಗಿ ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ measurement ನಲ್ಲೂ ಬಹಳ variation ಆಗುತ್ತದೆ. Exactly, how much volume of the stone has been excavated, ಅದರ ಎಲ್ಲಾ measurement ಕೇವಲ ಡ್ರೋನ್‌ನಿಂದ finalize ಆಗುವುದಿಲ್ಲ. It is a

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

delicate matter. ಈಗ ನೋಡಿ ನಮಗೆ ಇದು discretionary power ಇದ್ದ ಹಾಗೆ. ಇಷ್ಟು quantity ಇದಕ್ಕೆ permit ಇಲ್ಲದೇ ಹೋಗಿದೆ ಎಂದು ಬೇಕಾದ ಹಾಗೆ ಹಾಕಬಹುದು. ಅದನ್ನೆ exact measurement ಮಾಡುವ ಸಹಿತ volume, ಏನು cavity ಇರುತ್ತದೆಯಲ್ಲಾ ಆ cavity ಎಷ್ಟು ಇದೆ, ಎಷ್ಟು volume ಇದೆ ಎಂದು calculate ಮಾಡುವುದು it is very difficult. Definitely ಅದರಲ್ಲಿ powder ಹೊರಡುತ್ತದೆ. ಅದರಲ್ಲಿ ಜಲ್ಲಿಕಲ್ಲು ಮಾಡುವುದಕ್ಕೆ ಉಪಯೋಗವಾಗುವುದಿಲ್ಲವೆಂದರೆ ಅದು wastage. ಆಯಿತು, ನಾವು ಈಗ ಏನನ್ನು ಹೇಳಿದ್ದೇವೆ ಅದಕ್ಕೆ ಒಂದು ಸಮಿತಿ ರಚನೆ ಮಾಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, 2018ರಲ್ಲಿ ಪ್ರಾರಂಭವಾದಾಗ ಇಲ್ಲದೇ ಇದ್ದದ್ದು, ಒಮ್ಮಿಂದೊಮ್ಮೆಗೆ ಏಕೆ ಬಂತು? ಅದಕ್ಕೆ ನೀವು ವಿಚಾರ ಮಾಡಿ. ನಾನು ಹೇಳುತ್ತೇನೆ ನೋಡಿ, ನಾವು ಮತ್ತು ನೀವು unnecessary problem ಮಾಡುವುದು ಬೇಡ. ನಿಮ್ಮದು ಅದೇ stand ಆಗಿದೆಯೆ?

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಈ ವಿಷಯವನ್ನು ಮುಗಿಸಬೇಕಾಗಿದೆಯೋ ಬೆಳಸಬೇಕಾಗಿದೆಯೋ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ ನೋಡಿ, ಯಾವುದೇ ಸ್ಥಾನ ಯಾರಿಗೂ ಖಾಯಂ ಅಲ್ಲ, ಇದು ಒಂದು ಯೋಗ್ಯವಾದಂತಹ ...

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ತಿಪ್ಪೇಸ್ವಾಮಿಯವರು ನಾನು ಹೇಳುವುದನ್ನು ಕೇಳಿಸಿಕೊಳ್ಳಲಿ. ಹೆಚ್ಚುವರಿ ತೆಗೆದಿರುವ ಖನಿಜದ quantity ಹಾಗೂ ದಂಡದ ಮೊತ್ತದಲ್ಲಿ ಆಕ್ಷೇಪವಿದ್ದಲಿ ಅದನ್ನು ಮತ್ತೊಂದು ಸಲ ಪರಿಶೀಲಿಸುವುದಕ್ಕೆ ಸರ್ಕಾರ ಸಿದ್ಧವಿದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಮಗೆ ಇದು ಯಾವುದೂ ಬೇಡ. ಈಗ ಮಾಡಿರುವಂಥದ್ದು ಎಲ್ಲಾ correct ಇದೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಇದೆಲ್ಲಾ ರಾಜಕೀಯ ದ್ವೇಷದಿಂದ ಆಗಿರುವಂಥದ್ದು, correct ಅಲ್ಲವೆ. ನನಗೆ ಈ ಡ್ರೋನ್ ಸರ್ವೇ ಬಗ್ಗೆ knowledge ಇಲ್ಲ. ನಾನು ಬೇರೆಯವರು ಮಾತನಾಡುವುದನ್ನು ಕೇಳಿಸಿಕೊಂಡಿರುವುದು. ಈಗ 10 ಅಡಿ ಅಂತರದಲ್ಲಿ ಇದ್ದಾಗ ಒಂದು statement. ಅದು 15 ಅಡಿ ಅಂತರದಲ್ಲಿ ಇದ್ದಾಗ ಒಂದು ರೀತಿ ಇರುತ್ತದೆ. 20 ಅಡಿ ಅಂತರದಲ್ಲಿ ಕೆಲಸ ಮಾಡುವಾಗ ಒಂದು ರೀತಿ ಇರುತ್ತದೆ. ಈಗ 5 ಅಡಿ ಅಂತರಕ್ಕೆ ಬಂದಾಗ ಒಂದು ರೀತಿ ಇರುತ್ತದೆ. ಅದು ಈ ರೀತಿ ವರದಿ ಕೊಡುವಂಥದ್ದು. ಈ ಜಗತ್ತಿನಲ್ಲಿ ಡ್ರೋನ್ ಸರ್ವೇ authentic, ಮಾನ್ಯ ಸಚಿವರೇ ನಾನು ಹೇಳುವುದನ್ನು ಕೇಳಿ, ಈಗ ನೀವು ಇದನ್ನೆ ಎಲ್ಲವನ್ನು ಹೇಳಿಕೊಂಡು ಬರುತ್ತಿರಲ್ಲ. ಈಗ ಇದರಲ್ಲಿ ಯಾವುದೇ ರಾಜಕಾರಣ ನಡೆದಿಲ್ಲವೆಂದು ಹೇಳುತ್ತಾರಲ್ಲ, ಕೇವಲ ಒಂಬತ್ತು ತಿಂಗಳಿನಲ್ಲಿ, ಅದರಲ್ಲಿ ಎರಡು ತಿಂಗಳನ್ನು ಬಿಟ್ಟುಬಿಡಿ. ಉಳಿದ ಏಳು ತಿಂಗಳಿನಲ್ಲಿ ಆತ ಇಷ್ಟೊಂದು excavation ಮಾಡಿದ್ದಾನೆ. ಈಗ ಹತ್ತು ಕೋಟಿ ರೂಪಾಯಿ ತೆರಿಗೆ ಕಟ್ಟಬೇಕು ಎನ್ನುವುದಾದರೆ, ಈ ರಾಜ್ಯದ ಗಣಿಗಾರಿಕೆಯಲ್ಲಿ ಒಂದು ವರ್ಷಕ್ಕೆ ಎಷ್ಟು revenue ಬರಬೇಕು ಸ್ವಾಮಿ. ಮಾನ್ಯ ಮಂತ್ರಿಗಳು ಅಳತೆ ಮತ್ತು ಲೆಕ್ಕವಿಲ್ಲದಂತೆ ಮಾತನಾಡುತ್ತಾರೆ. ನಿಮ್ಮ ಇಲಾಖೆಯ ಅಧಿಕಾರಿಗಳ ಮತ್ತು ನಿಮ್ಮ ಪ್ರಾಮಾಣಿಕತೆಯನ್ನು ನೋಡೋಣ. ಮಾನ್ಯ ಮಂತ್ರಿಗಳೇ ಇದಕ್ಕೆ ಸದನ ಸಮಿತಿ ರಚನೆ ಮಾಡಿ. ನೀವು ಇದಕ್ಕೆ ಸದನ ಸಮಿತಿ ಏಕೆ ರಚನೆ ಮಾಡುವುದಿಲ್ಲ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸದನ ಸಮಿತಿ ರಚನೆ ಮಾಡಬೇಕು. ಆ ಆದೇಶವನ್ನು... ಮತ್ತು ಆ ಉದ್ಯಮ ನಡೆಯುವುದಕ್ಕೆ ಅನುವು ಮಾಡಿಕೊಡಬೇಕು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ...

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್)ನ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು)**

**ಸಭಾಪತಿಯವರು:–** ಸದನವನ್ನು ಮಾರ್ಚ್ 23, 2020ರ ಸೋಮವಾರ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಾಯಂಕಾಲ 5 ಗಂಟೆ 50 ನಿಮಿಷಕ್ಕೆ ಮುಕ್ತಾಯಗೊಂಡು, ಪುನ: ದಿನಾಂಕ 23ನೇ ಮಾರ್ಚ್ ಮಾಹೆ 2020ರ ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)**

<><><>

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”